ಮಾನವಿಕ ಕರ್ಣಾಟಕ

ಸಂಪುಟ ೩ ಸಂಚಿಕೆ ೨

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೩

ಲೇಖಕರಿಗೆ ಸೂಚನೆಗಳು

೧ ಮಾನವಿಕ ಶಾಸ್ತ್ರ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಆವಶ್ಯವಿದ್ದರೆ ಅವನ್ನೂ ಸೂಚಿಸಬೇಕು


೪ ಸ್ವೀಕೃತವಾಗದ ಲೇಖನಗಳನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆ ಮಾಡುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು–೫೭೦೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.



ಸರ್ ಜಾನ್ ಹಿಕ್ಸ್ (೧೯೦೪–   )



ಕೆನೆತ್ ಆರೊ (೧೯೨೧–   )

ಮಾನವಿಕ ಕರ್ಣಾಟಕ

ಸಂಪುಟ ೩ ಸಂಚಿಕೆ ೨

೧೦

ಫೆಬ್ರುವರಿ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೩

MANAVIKA KARNATAKA, Kannada quarterly of the University of Mysore. Volume 3, Number 2, February 1973. Edited by H. S. Krishnaswamy Iyengar and Dr. A. V. Narasimha Murthy

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್

ಡಾ. ಎ. ವಿ. ನರಸಿಂಹಮೂರ್ತಿ

ಪ್ರಕಾಶಕರು

ಡಾ. ಪ್ರಭುಶಂಕರ

ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಎಚ್. ನರಸಣ್ಣ

ಡೈರೆಕ್ಟರ್, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

ವಿಷಯಸೂಚಿ

ಈ ಸಂಚಿಕೆಯ ಲೇಖಕರು

೧ ಡಾ. ಎಂ. ಮಾದಯ್ಯ .... ಮಾನಸಗಂಗೋತ್ರಿಯ ಅರ್ಥಶಾಸ್ತ್ರ ವಿಭಾಗದಲ್ಲಿ ರೀಡರ್

೨ ಎಚ್. ಎಂ. ನಾಗರಾಜರಾವ್ .... ಶಾಸನ ಸಹಾಯಕರು, ಎಪಿಗ್ರಾಫಿಯ ಕರ್ನಾಟಿಕ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ

೩ ಡಾ. ಎ. ಎಸ್. ಸೀತಾರಾಂ .... ಮಾನಸಗಂಗೋತ್ರಿಯ ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರು

೪ ಕೆ. ಜಿ. ವಸಂತಮಾಧವ .... ಮುಲ್ಕಿಯ ವಿಜಯ ಕಾಲೇಜಿನಲ್ಲಿ ಇತಿಹಾಸ ವಿಭಾಗದ ಅಧ್ಯಾಪಕರು

೫ ಎಚ್. ಎ. ಖಾನ್ .... ಮಾನಸಗಂಗೋತ್ರಿಯ ಗ್ರಂಥಾಲಯಶಾಸ್ತ್ರ ವಿಭಾಗದಲ್ಲಿ ರೀಡರ್

೬ ಡಾ. ಪಿ. ಗುರುರಾಜಭಟ್ .... ಕಲ್ಯಾಣಪುರದಲ್ಲಿ ಮಿಲಾಗ್ರೀಸ್ ಕಾಲೇಜಿನ ಪ್ರಿನ್ಸಿಪಾಲರು

೭ ಕೆ. ಜಿ. ರಾಮಕೃಷ್ಣ .... ಮೈಸೂರು ವಿಶ್ವವಿದ್ಯಾನಿಲಯದ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯ ವಾಣಿಜ್ಯ ವಿಭಾಗದಲ್ಲಿ ಅಧ್ಯಾಪಕರು

೮ ಬಿ. ಎಂ. ಕುಮಾರಸ್ವಾಮಿ .... ಶಿವಮೊಗ್ಗದ ದೇಶೀಯ ವಿದ್ಯಾಶಾಲಾ ಕಾಲೇಜಿನಲ್ಲಿ ಅರ್ಥಶಾಸ್ತ್ರ ಅಧ್ಯಾಪಕರು

೯ ಕೆ. ಎಸ್. ಶಿವಣ್ಣ .... ಮಾನಸಗಂಗೋತ್ರಿಯ ಇತಿಹಾಸ ವಿಭಾಗದಲ್ಲಿ ಅಧ್ಯಾಪಕರು

೧೦ ಸದಾಶಿವಯ್ಯ .... ಮೈಸೂರು ಮಹಾರಾಜ ಕಾಲೇಜಿನಲ್ಲಿ ಅರ್ಥಶಾಸ್ತ್ರ ಅಧ್ಯಾಪಕರು

೧೧ ವಿಲ್ಯಂ ಮಾಡ್ತಾ .... ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಭಾಷಾಶಾಸ್ತ್ರದ ಅಧ್ಯಾಪಕರು

೧೨ ಎಂ. ಪ್ರಭುಸ್ವಾಮಿ .... ಮಾನಸಗಂಗೋತ್ರಿಯ ಅರ್ಥಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರು

೧೩ ಸೇಡಿಯಾಪು ಕೃಷ್ಣಭಟ್ಟ .... ಮಣಿಪಾಲದಲ್ಲಿರುವ ಕನ್ನಡ-ಸಂಸ್ಕೃತ ವಿದ್ವಾಂಸರು ಕವಿಗಳು

೧೪ ಆರ್.ಎಸ್. ಶಿವಗಣೇಶಮೂರ್ತಿ... ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ ಸಂಶೋಧನ ಸಹಾಯಕರು

೧೫ ಎಸ್. ಚನ್ನಪ್ಪ .... ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ವಿಶ್ವಕೋಶದ ಉಪಸಂಪಾದಕರು

೧೬ ಜಿ. ಎಸ್. ಭಟ್ಟ .... ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ವಿಶ್ವಕೋಶದ ಉಪಸಂಪಾದಕರು

೧೭ ಎಚ್. ಎಂ. ಸದಾಶಿವಯ್ಯ .... ಮಾನಸಗಂಗೋತ್ರಿಯ ಸಮಾಜಶಾಸ್ತ್ರ ವಿಭಾಗದಲ್ಲಿ ರೀಡರ್

೧೮ ಬಾ.ರಾ.ಗೋ. ... ಡಾ. ಬಿ. ಆರ್. ಗೋಪಾಲ್, ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಎಪಿಗ್ರಾಫಿಯ ಕರ್ನಾಟಿಕದ ಶಾಸನ ತಜ್ಞರು

೧೯ 'ರಘುಸತು' .... ಕೆ. ಆರ್. ರಂಗಾಚಾರ್, ಮಿರ್ಲೆಯ ಜೂನಿಯರ್ ಕಾಲೇಜಿನಲ್ಲಿ ಭೂಗೋಳಶಾಸ್ತ್ರ ಅಧ್ಯಾಪಕರು

WO 12038—MUPM—copies 1025—11-1-74

ಡಾ. ಎಂ. ಮಾದಯ್ಯ

ಸರ್ ಜಾನ್ ಹಿಕ್ಸ್ ಮತ್ತು ಕೆನೆತ್ ಆರೊ

ಸ್ವೀಡಿಷ್ ವಿಜ್ಞಾನ ಅಕಾಡೆಮಿಯವರು ಅರ್ಥಶಾಸ್ತ್ರದಲ್ಲಿ 1972ರ ನೊಬೆಲ್ ಪ್ರಶಸ್ತಿಯನ್ನು ಆಕ್ಸ್‌ಫರ್ಡ್‌ನ ಆಲ್ ಸೋಲ್ಸ್ ಕಾಲೇಜಿನ ಪ್ರೊಫೆಸರ್ ಸರ್ ಜಾನ್ ಹಿಕ್ಸ್ ಮತ್ತು ಹಾರ್ವರ್ಡ್ ವಿಶ್ವವಿದ್ಯಾಲಯದ ಕೆನೆತ್ ಆರೊ ಅವರಿಗೆ ಸಾರ್ವತ್ರಿಕ ಆರ್ಥಿಕ ಸಮತೋಲ ಸಿದ್ಧಾಂತ ಮತ್ತು ಕ್ಷೇಮ ಸಿದ್ಧಾಂತ ಕ್ಷೇತ್ರಗಳಲ್ಲಿ ಅವರು ನೀಡಿರುವ ಕಾಣಿಕೆಗಾಗಿ ಕೊಟ್ಟಿದ್ದಾರೆ. ಈ ವರ್ಷ ನೊಬೆಲ್ ಪ್ರಶಸ್ತಿಯ ಮೊಬಲಗು ಸುಮಾರು 98.000 ಡಾಲರುಗಳು. ಅರ್ಥಶಾಸ್ತ್ರಕ್ಕೆ ನೊಬೆಲ್ ಪ್ರಶಸ್ತಿ ನೀಡಲು ಪ್ರಾರಂಭಿಸಿದ್ದು 1969ರಲ್ಲಿ. 1969ಕ್ಕೆ ರ್‍ಯಾಗ್ನರ್ ಫ್ರಿಷ್ ಮತ್ತು ಜಾನ್ ಟಿನ್‌ಬರ್ಗನ್ ಅವರೂ 1970ಕ್ಕೆ ಪಾಲ್ ಸ್ಯಾಮುಯಲ್ಸನ್ ಅವರೂ 1971ಕ್ಕೆ ಸೈಮನ್ ಕುಜ್ನೆಟ್ಸ್ ಅವರೂ ಅರ್ಥಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿ ಗಳಿಸಿದರು. ಈ ಲೇಖನದಲ್ಲಿ ಜೆ. ಆರ್. ಹಿಕ್ಸ್ ಮತ್ತು ಕೆನೆತ್ ಜೆ ಆ್ಯರೊ ಅವರು ಅರ್ಥಶಾಸ್ತ್ರದ ಬೆಳವಣಿಗೆಗೆ ನೀಡಿರುವ ಕೊಡುಗೆಯ ವಿಷಯವನ್ನು ವಿವೇಚಿಸಲಾಗಿದೆ.

ಸರ್ ಜಾನ್ ಹಿಕ್ಸ್

ಸರ್ ಜಾನ್ ಹಿಕ್ಸ್ 1904ರಲ್ಲಿ ಇಂಗ್ಲೆಂಡಿನ ವಾರ್‍ವಿಕ್ ಎಂಬ ಊರಿನಲ್ಲಿ ಜನ್ಮತಾಳಿದರು. ಇವರು 1925ರಲ್ಲಿ ಆಕ್ಸ್‌ಫರ್ಡ್‌ನ ಕ್ಲಿಫ್ಟನ್ ಕಾಲೇಜಿನಿಂದ ಬಿ. ಎ. ಪದವಿಯನ್ನೂ 1932ರಲ್ಲಿ ಬಲಿಯೋಲ್ ಕಾಲೇಜಿನಿಂದ ಎಂ. ಎ. ಪದವಿಯನ್ನೂ ಪಡೆದರು.

ಇವರು 1926ರಿಂದ 1935ರ ವರೆಗೆ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಅರ್ಥಶಾಸ್ತ್ರ ಅಧ್ಯಾಪಕರಾಗಿ ಕೆಲಸ ಮಾಡಿದರು. 1935–38ರಲ್ಲಿ ಕೇಂಬ್ರಿಜ್‌ನಲ್ಲಿರುವ ಗಾನ್‌ವಿಲ್ ಮತ್ತು ಕೇಯಸ್ ಕಾಲೇಜಿನಲ್ಲಿ ಫೆಲೊ ಆಗಿದ್ದರು. 1938–46ರಲ್ಲಿ ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ಮತ್ತೆ 1946ರಿಂದ 1952ರ ವರೆಗೆ ಆಕ್ಸ್‌ಫರ್ಡಿನ ನಫೀಲ್ಡ್ ಕಾಲೇಜಿನಲ್ಲಿ ಫೆಲೊ ಆಗಿದ್ದರು. 1946ರಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದವರ ಆಹ್ವಾನದ ಮೇರೆಗೆ ಅವನ್ನು ಸೇರಿ 'ಡ್ರುಮ್ಮಂಡ್ ಪ್ರೊಫೆಸರ್ ಆಫ್ ಪೊಲಿಟಿಕಲ್ ಎಕಾನಮಿ' ಆಗಿ 1965ರ ವರೆಗೆ ಕಾರ್ಯ ನಿರ್ವಹಣೆ ಮಾಡಿದರು. 1966ರಲ್ಲಿ ಇವರು ಆ ಪದವಿಯಿಂದ ನಿವೃತ್ತರಾದರು. ಅಲ್ಲಿಂದ ಆಕ್ಸ್‌ಫರ್ಡಿನ ಆಲ್ ಸೋಲ್ಸ್ ಕಾಲೇಜಿನಲ್ಲಿ ಸಂಶೋಧಕ ಫೆಲೊ ಆಗಿ ಕೆಲಸ ಮಾಡುತ್ತಿದ್ದಾರೆ. ಇಷ್ಟಲ್ಲದೆ ಹಿಕ್ಸ್ ನೈಜೀರಿಯದ ರೆವಿನ್ಯೂ ಅಲೊಕೇಷನ್ ಕಮಿಷನಿನ (1950) ಸದಸ್ಯರಾಗಿಯೂ ರಾಯಲ್ ಕಮಿಷನ್ ಆನ್ ದಿ ಟ್ಯಾಕ್ಸೇಷನ್ ಆಫ್ ಪ್ರಾಫಿಟ್ಸ್ ಅಂಡ್ ಇನ್‌ಕಮ್ (1951) ಸದಸ್ಯರಾಗಿಯೂ ಗಣನೀಯ ಕಾಣಿಕೆ ಸಲ್ಲಿಸಿದ್ದಾರೆ.

ಹಿಕ್ಸ್ ಅವರು ಬರೆದಿರುವ ಪ್ರಮುಖ ಗ್ರಂಥಗಳು ಇವು: ದಿ ತಿಯೊರಿ ಆಫ್ ವೇಜಸ್ (1932 ಮತ್ತು 1963); ವ್ಯಾಲ್ಯು ಅಂಡ್ ಕ್ಯಾಪಿಟಲ್ (1939 ಮತ್ತು 1946); 3 ದಿ ಟ್ಯಾಕ್ಸೇಷನ್ ಆಫ್ ವಾರ್ ವೆಲ್ತ್ (ಯು.ಕೆ. ಹಿಕ್ಸ್ ಮತ್ತು ಎಲ್. ರೊಸ್ಟಾಸ್ ಜೊತೆಗೆ) (1941); 4 ದಿ ಸೋಷಿಯಲ್ ಫ್ರೇಮ್‌ವರ್ಕ್ (1942, 1952, 1960 ಮತ್ತು 1971); 5 ಸ್ಟ್ಯಾಂಡರ್ಡ್ಸ್ ಆಫ್ ಲೋಕಲ್

ಎಕ್ಸ್‌ಪೆಂಡಿಚರ್ (ಯು. ಕೆ. ಹಿಕ್ಸ್ ಜೊತೆಗೆ) (1943); 6 ದಿ ಪ್ರಾಬ್ಲೆಮ್ ಆಫ್ ವ್ಯಾಲ್ಯುಯೇಷನ್ ಫಾರ್ ರೇಟಿಂಗ್ (ಯು.ಕೆ. ಹಿಕ್ಸ್ ಮತ್ತು ಲೀಸರ್ ಜೊತೆಗೆ)(1944); 7 ದಿ ಇನ್ಸಿಡೆನ್ಸ್ ಆಫ್ ಲೋಕಲ್ ರೇಟ್ಸ್ ಇನ್ ಗ್ರೇಟ್ ಬ್ರಿಟನ್ (ಯು. ಕೆ. ಹಿಕ್ಸ್ ಜೊತೆಗೆ) 1945); 8 ದಿ ಪ್ರಾಬ್ಲೆಮ್ ಆಫ್ ಬಜೆಟರಿ ರಿಫಾರಂ (1948); 9 ಎ ಕಾಂಟ್ರಿಬ್ಯೂಷನ್ ಟು ದಿ ಥಿಯೊರಿ ಆಫ್ ಟ್ರೇಡ್ ಸೈಕಲ್ (1950); 10 ರಿಪೋರ್ಟ್ ಆನ್ ಫೈನಾನ್ಸ್ ಅಂಡ್ ಟ್ಯಾಕ್ಸೇಷನ್ ಇನ್ ಜಮೈಕಾ (ಯು.ಕೆ. ಹಿಕ್ಸ್ ಜೊತೆಗೆ) (1955); 11 ಎ ರಿವಿಷನ್ ಆಫ್ ಡಿಮ್ಯಾಂಡ್ ಥಿಯೊರಿ (1956); 12 ಎಸ್ಸೇಸ್ ಇನ್ ವರ್ಲ್ಡ್ ಎಕನಾಮಿಕ್ಸ್ (1960); 13 ಇಂಟರ್‌ನ್ಯಾಷನಲ್ ಟ್ರೇಡ್: ದಿ ಲಾಂಗ್ ವ್ಯೂ (1963); 14 ಕ್ಯಾಪಿಟಲ್ ಅಂಡ್ ಗ್ರೋತ್(1965); 15 ಕ್ರಿಟಿಕಲ್ ಎಸ್ಸೇಸ್ ಇನ್ ಮಾನಿಟರಿ ಥಿಯೊರಿ (1967); 16 ಎ ಥಿಯೊರಿ ಆಫ್ ಎಕನಾಮಿಕ್ ಹಿಸ್ಟರಿ (1969). ಈ ಗ್ರಂಥಗಳಲ್ಲದೆ ಹಿಕ್ಸ್ ಅವರು ಅರ್ಥಶಾಸ್ತ್ರದ ಅನೇಕ ವಿಷಯಗಳನ್ನು ಕುರಿತು ನೂರಾರು ಗ್ರಂಥಲೇಖನಗಳನ್ನೂ ಬರೆದಿದ್ದಾರೆ. 1935ರಲ್ಲಿ ಜಾನ್ ಹಿಕ್ಸ್ ಶ್ರೀಮತಿ ಅರ್ಸುಲ ಅವರನ್ನು ವಿವಾಹವಾದರು. ಶ್ರೀಮತಿ ಹಿಕ್ಸ್ ಕೂಡ ಜಾನ್ ಹಿಕ್ಸರಂತೆ ಅರ್ಥಶಾಸ್ತ್ರ ಕ್ಷೇತ್ರದಲ್ಲಿ ಒಳ್ಳೆಯ ಹೆಸರು ಗಳಿಸಿದ್ದಾರೆ. ಜಾನ್ ಹಿಕ್ಸ್ ಕುಟುಂಬ ಆಕ್ಸ್‌ಫರ್ಡ್‌ನಲ್ಲಿ ನೆಲೆಸಿದೆ. ಸರ್ ಜಾನ್ ಹಿಕ್ಸ್ ಅರ್ಥಶಾಸ್ತ್ರ ಕ್ಷೇತ್ರದಲ್ಲಿ ಮಾಡಿರುವ ಕೆಲಸವನ್ನು ಪರಿಗಣಿಸಿ, 1966ರಲ್ಲಿ ಗ್ಲಾಸ್ಗೋ ವಿಶ್ವವಿದ್ಯಾಲಯವೂ 1967ರಲ್ಲಿ ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯವೂ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿವೆ.

ಅರ್ಥಶಾಸ್ತ್ರದ ಮೌಲ್ಯಮೀಮಾಂಸೆ ಮತ್ತು ಬೇಡಿಕೆಯ ಮೀಮಾಂಸೆ ಕ್ಷೇತ್ರಗಳು ಬಹುಮಟ್ಟಿಗೆ ಹಿಕ್ಸರ ಕೃತಿಗಳಿಂದ ಪ್ರಭಾವಿತವಾಗಿವೆ. ಉದಾಹರಣೆಗೆ, ಹಿಕ್ಸರ 'ವ್ಯಾಲ್ಯೂ ಅಂಡ್ ಕ್ಯಾಪಿಟಲ್' (1939) ಮತ್ತು 'ಎ ರಿವಿಷನ್ ಆಫ್ ಡಿಮ್ಯಾಂಡ್ ಥಿಯೊರಿ' ಕೃತಿಗಳಲ್ಲಿ ಹೆಚ್ಚಿನ ಭಾಗವನ್ನು ಮೇಲ್ಕಂಡ ಕ್ಷೇತ್ರದ ವಿಚಾರವಿಮರ್ಶೆಗಾಗಿ ಮೀಸಲಾಗಿಟ್ಟಿದೆ. ಇವೆರಡು ಕೃತಿಗಳಲ್ಲೂ ಹಿಕ್ಸರ ಇನ್ನೂ ಅನೇಕ ಕೃತಿಗಳು ಮತ್ತು ಲೇಖನಗಳಲ್ಲೂ ಈ ವಿಷಯವನ್ನು ಕುರಿತು ಸಮಾಲೋಚಿಸಿರುವುದನ್ನು ಕಾಣಬಹುದು. ಹಿಕ್ಸರ ವ್ಯಾಲ್ಯೂ ಥಿಯೊರಿಯಲ್ಲಿ ಅನೇಕ ವಿಷಯಗಳ ವಿವರಣೆಯನ್ನು ಕಾಣಬಹುದು. ಅನುಭೋಗಿ ಸಮತೋಲನ, ವ್ಯವಹಾರಸಂಸ್ಥೆಯ ಸಮತೋಲನ, ಬಡ್ಡಿದರದ ಸಿದ್ಧಾಂತ, ಕೂಲಿ ಸಿದ್ಧಾಂತ, ಸಾರ್ವತ್ರಿಕ ಸಮತೋಲನ ಮೀಮಾಂಸೆ ಮುಂತಾದ ಅನೇಕ ವಿಷಯಗಳನ್ನು ಕುರಿತು ಇವರು ಇಲ್ಲಿ ವಿವೇಚನೆ ನಡೆಸಿದ್ದಾರೆ. ಮೌಲ್ಯ ಮೀಮಾಂಸೆಯಲ್ಲಿ ಹಿಕ್ಸರ ವಿಶೇಷ ಗಮನ ಸೆಳೆದಿರುವ ವಿಷಯವೆಂದರೆ ಬೇಡಿಕೆಯ ಮೀಮಾಂಸೆ. ಕ್ರಮಸೂಚಕ ಸಿದ್ಧಾಂತದ (ಆರ್ಡಿನಲಿಸ್ಟ್ ಥಿಯೊರಿ) ಅಥವಾ ಔದಾಸೀನ್ಯ ರೇಖೆಗಳ ಮೂಲಕ ಅನುಭೋಗಿಯ ವರ್ತನೆಯನ್ನು ವಿವರಿಸುವುದೇ ಇದಕ್ಕೆ ಇವರ ಮುಖ್ಯ ಕೊಡುಗೆ.

ಮೌಲ್ಯ ಮೀಮಾಂಸೆ ಮತ್ತು ಬೇಡಿಕೆ ಸಿದ್ಧಾಂತ ಕ್ಷೇತ್ರಗಳಲ್ಲದೆ, ಹಿಕ್ಸರು ಹಣ ಮೀಮಾಂಸೆಯ ಅಭಿವೃದ್ಧಿಗೂ ಕಾಣಿಕೆ ಸಲ್ಲಿಸಿದ್ದಾರೆ. ಹಿಕ್ಸರ 'ದಿ ಥಿಯೊರಿ ಆಫ್ ವೇಜಸ್' ಎಂಬುದು ಹಣವಿಲ್ಲದ ಮತ್ತು ಹಣವನ್ನು ಉಪಯೋಗಿಸದ ಪ್ರಪಂಚದ ವಿಷಯವಾಗಿ ವಿಮರ್ಶೆ ನಡೆಸಿದ್ದರೂ, ಲಾರ್ಡ್ ಕೇನ್ಸ್‌ರವರ 'ಟ್ರೀಟೈಸ್ ಆನ್ ಮನಿ' ಗ್ರಂಥ ಇವರ ಮೇಲೆ ಅಪಾರ ಪ್ರಭಾವ ಬೀರಿತು. ಇದನ್ನು ಹಿಕ್ಸರ 'ಎ ಸಜೆಷನ್ ಫಾರ್ ಸಿಂಪ್ಲಿಫೈಯಿಂಗ್ ದಿ ಥಿಯೊರಿ ಆಫ್ ಮನಿ' ಎಂಬ ಲೇಖನದಲ್ಲಿ ನೋಡಬಹುದು. ಈ ಲೇಖನದಲ್ಲಿ ಕಂಡುಬರುವ ಪ್ರಮುಖ ಅಭಿಪ್ರಾಯವೆಂದರೆ, ಹಣವೂ ಅನೇಕ ಆಸ್ತಿಗಳಂತೆ ಒಂದು ಬಗೆಯ ಆಸ್ತಿ. ಹಿಕ್ಸರ ಈ ಅಭಿಪ್ರಾಯವನ್ನೇ ಮುಂದುವರಿಸಿ ಈಗ ಕೆಲವು ಅರ್ಥಶಾಸ್ತ್ರಜ್ಞರು ಪೋರ್ಟ್‌ಫೋಲಿಯೊ ವಿಶ್ಲೇಷಣೆಯನ್ನು (ಪೋರ್ಟ್‌ಫೋಲಿಯೊ ಅನಾಲಿಸಿಸ್) ನಿರೂಪಿಸಿದ್ದಾರೆ. ಹಣದ ಮೀಮಾಂಸೆ ಕ್ಷೇತ್ರಕ್ಕೆ ಸರ್ ಜಾನ್ ನೀಡಿರುವ ಅಮೋಘ ಕೊಡುಗೆಯನ್ನು ಅವರ ಕೃತಿಯಾದ 'ಕ್ರಿಟಿಕಲ್ ಎಸ್ಸೇಸ್ ಆನ್ ಮಾನಿಟರಿ ಥಿಯೊರಿ'ಯಲ್ಲಿ ಕಾಣಬಹುದು. ಹಿಕ್ಸ್ ಬಡ್ಡಿದರದ ಸಿದ್ಧಾಂತ ಕ್ಷೇತ್ರಕ್ಕೂ ಕಾಲಿಟ್ಟು ಕೇನ್ಸಿಯನ್ ಮತ್ತು ಅಭಿಜಾತ ಪದ್ಧತಿಗಳನ್ನು ರೇಖಾ ಚಿತ್ರದ ಮೂಲಕ ಒಟ್ಟುಗೂಡಿಸಿ ಸಾರ್ವತ್ರಿಕ ಸಮತೋಲನವನ್ನು ತೋರಿಸಿಕೊಟ್ಟಿದ್ದಾರೆ. ಹಿಕ್ಸ್–ಲರ್ಟ್ ಬಡ್ಡಿದರಗಳ ರಚನಾಕ್ರಮ ಮಾದರಿ ಅನೇಕ ಅರ್ಥಶಾಸ್ತ್ರಜ್ಞರ ಕುತೂಹಲವನ್ನು ಕೆರಳಿಸಿದೆ. ಈ ಕ್ಷೇತ್ರದಲ್ಲಿ

ನಡೆದಿರುವ ಸಂಶೋಧನೆಗೆ ಇವರು ಕಾರಣರಾಗಿದ್ದಾರೆ. ಸರ್ ಜಾನರು ಚಲನಾತ್ಮಕ ಮೀಮಾಂಸೆಯ ಬೆಳವಣಿಗೆಯನ್ನು ಕುರಿತೂ ವಿವೇಚನೆ ನಡೆಸಿದ್ದಾರೆ. ಇದನ್ನು ಅವರ ಕೃತಿಗಳಾದ 'ದಿ ತಿಯೊರಿ ಆಫ್ ಟ್ರೇಡ್ ಸೈಕಲ್' ಮತ್ತು 'ಕ್ಯಾಪಿಟಲ್ ಅಂಡ್ ಗ್ರೋತ್'ಗಳಲ್ಲಿ ಕಾಣಬಹುದು. ಇಷ್ಟಲ್ಲದೆ ಹಿಕ್ಸರು ಅಂತರರಾಷ್ಟ್ರೀಯ ವ್ಯಾಪಾರ ಸಿದ್ಧಾಂತ, ಸಾರ್ವತ್ರಿಕ ಹಣಕಾಸಿನ ಮೀಮಾಂಸೆ, ಬಂಡವಾಳ ಹೂಡುವಿಕೆಯ ಸಿದ್ಧಾಂತ, ಏಕಸ್ವಾಮ್ಯ ಸಿದ್ಧಾಂತ ಮುಂತಾದ ಕ್ಷೇತ್ರಗಳಲ್ಲೂ ಲೇಖನಗಳನ್ನು ಬರೆದಿದ್ದಾರೆ.

ಒಟ್ಟಿನಲ್ಲಿ ಹಿಕ್ಸರು ವಿವಿಧ ಆರ್ಥಿಕ ಮೀಮಾಂಸಾ ಕ್ಷೇತ್ರಗಳಲ್ಲಿ ಮಾಡಿರುವ ಕೆಲಸ ಅಸಾಧಾರಣವಾದ್ದು. ಸಾರ್ವತ್ರಿಕ ಸಮತೋಲನ ಕ್ರಮಾನುಸರಣೆಯಲ್ಲಿ ಇವರದು ಅಪೂರ್ವ ಪಾಂಡಿತ್ಯ. ಆರ್ಥಿಕ ಕ್ಷೇತ್ರದ ವರ್ತನೆಯ ಬಗ್ಗೆ ಇವರ ಸಾರ್ವತ್ರಿಕ ಸಮತೋಲನ ಮಾದರಿಗಳು ಸ್ವಾರಸ್ಯವಾದ ಬೆಳಕು ಚೆಲ್ಲಿವೆ.

ಕೆ. ಜೆ. ಆರೊ

ಕೆನೆತ್ ಜೋಸೆಫ್ ಆರೊ 1921ರಲ್ಲಿ ಅಮೆರಿಕದ ನ್ಯೂಯಾರ್ಕಿನಲ್ಲಿ ಜನ್ಮ ತಳೆದರು. ಇವರು ನ್ಯೂಯಾರ್ಕಿನ ಸಿಟಿ ಕಾಲೇಜಿನಲ್ಲಿ 1940ರಲ್ಲಿ ಬಿ. ಎಸ್. ಪದವಿ ಗಳಿಸಿದರು. ಕೊಲಂಬಿಯ ವಿಶ್ವ ವಿದ್ಯಾಲಯದಲ್ಲಿ ವ್ಯಾಸಂಗ ಮಾಡಿ, 1941ರಲ್ಲಿ ಎಂ.ಎ. ಪದವಿಯನ್ನೂ 1951ರಲ್ಲಿ ಡಾಕ್ಟೊರೇಟ್ ಪದವಿಯನ್ನೂ ಪಡೆದರು. ಇವರು 'ಸೋಷಿಯಲ್ ಚಾಯ್ಸ್ ಅಂಡ್ ಇಂಡಿವಿಜುಯಲ್ ವ್ಯಾಲ್ಯೂಸ್' ಎಂಬ ವಿಷಯವನ್ನು ಕುರಿತು ಡಾಕ್ಟೊರೇಟ್ ಪ್ರಬಂಧವನ್ನು ಬರೆದಿದ್ದರು. ಆರೊ ಅವರು ಎರಡನೆಯ ಮಹಾಯುದ್ಧ ಕಾಲದಲ್ಲಿ ಅಮೆರಿಕದ ಭೂಸೇನಾ ದಳದಲ್ಲಿ ನಾಲ್ಕು ವರ್ಷಗಳ ಕಾಲ ಇದ್ದರು.

1948–49ರ ಅವಧಿಯಲ್ಲಿ ಆರೊ ಅವರು ಷಿಕಾಗೊ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರದ ಉಪಪ್ರಾಧ್ಯಾಪಕರಾಗಿದ್ದರು. 1949–50ರ ಅವಧಿಯಲ್ಲಿ ಸ್ಟ್ಯಾನ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರ ಮತ್ತು ಸಂಖ್ಯಾಕಲನಶಾಸ್ತ್ರ ಉಪಪ್ರಾಧ್ಯಾಪಕರಾಗಿಯೂ, 1950–53ರವಧಿಯಲ್ಲಿ ಅಸೋಸಿಯೇಟ್ ಪ್ರೊಫೆಸರ್ ಆಗಿಯೂ 1953ರಿಂದ 1968ರ ವರೆಗೆ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿಯೂ ಕೆಲಸ ಮಾಡಿದರು. 1968ರಿಂದೀಚೆಗೆ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರ ಇಲಾಖೆಯಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ.

1 ಸೋಷಿಯಲ್ ಚಾಯ್ಸ್ ಅಂಡ್ ಇಂಡಿವಿಜುಯಲ್ ವ್ಯಾಲ್ಯೂಸ್ (1951); 2 ಎಗ್ಸಿಸ್ಟೆನ್ಸ್ ಆಫ್ ಈಕ್ವಿಲಿಬ್ರಿಯಂ ಫಾರ್ ಎ ಕಾಂಪಿಟಿಟಿವ್ ಎಕಾನಮಿ (ಜಿ. ದೇಬ್ರ್ಯೂ ಜೊತೆಗೆ) (1954); ಕ್ಯಾಪಿಟಲ್–ಲೇಬರ್ ಸಬ್‌ಸ್ಟಿಟ್ಯೂಷನ್ ಅಂಡ್ ಎಕನಾಮಿಕ್ ಎಫಿಷಿಯೆನ್ಸಿ (ಇತರರೊಂದಿಗೆ) (1961); 4 ಪಬ್ಲಿಕ್ ಇನ್‌ವೆಸ್ಟ್‌ಮೆಂಟ್, ದಿ ರೇಟ್ ಆಫ್ ರಿಟರ್ನ್ ಅಂಡ್ ಆಪ್ಟಿಮಲ್ ಫಿಸಿಕಲ್ ಪಾಲಿಸಿ (ಎಂ. ಕುರ್ಜ್ ಜೊತೆಗೆ) (1970); 5 ಮ್ಯಾಥಮಾಟಿಕಲ್ ಮೆಥಡ್ಸ್ ಇನ್ ದಿ ಸೋಷಿಯಲ್ ಸೈನ್ಸಸ್ (ಇತರರೊಂದಿಗೆ ಸಂಪಾದಿತ) (1960); 6 ಸ್ಟಡೀಸ್ ಇನ್ ದಿ ಮ್ಯಾಥಮ್ಯಾಟಿಕಲ್ ತಿಯೊರಿ ಆಫ್ ಇನ್‌ವೆಂಟೊರಿ ಅಂಡ್ ಪ್ರೊಡಕ್ಷನ್ (ಇತರರ ಜೊತೆ) (1958); 7 ಟೈಮ್ ಸೀರೀಸ್ ಅನಾಲಿಸಿಸ್ ಆಫ್ ಇಂಟರ್ ಇಂಡಸ್ಟ್ರಿ ಡಿಮ್ಯಾಂಡ್ಸ್ (1959); 8 ರೀಡಿಂಗ್ಸ್ ಇನ್ ವೆಲ್‌ಫೇರ್ ಎಕನಾಮಿಕ್ಸ್ (ಸಂಪಾದಿತ, ಸ್ಕಿಟೊಪಿಸ್ಕಿ ಜೊತೆಗೆ) (1969); 9 ಸೆಲೆಕ್ಟೆಡ್ ರೀಡಿಂಗ್ಸ್ ಇನ್ ಎಕನಾಮಿಕ್ ತಿಯೊರಿ (ಸಂಪಾದಕರು) (1971); 10 ಜನರಲ್ ಕಾಂಪಿಟಿಟಿವ್ ಅನಾಲಿಸಿಸ್ (ಎಫ್. ಹೆಚ್. ಹಾನ್ ಜೊತೆ) (1971)—ಈ ಮುಖ್ಯ ಕೃತಿಗಳಲ್ಲದೆ ಆರೊ ಅವರು ಹಲವಾರು ಗಣನೀಯ ಮತ್ತು ಶಾಸ್ತ್ರೀಯ ಲೇಖನಗಳನ್ನೂ ಬರೆದಿದ್ದಾರೆ. ಆರೊ ಅವರ ನಿಜವಾದ ಪ್ರತಿಭೆ ಮತ್ತು ಮೂಲಭೂತ ಕೊಡುಗೆಯನ್ನು ಕಾಣಬೇಕಾದರೆ ಈ ಲೇಖನಗಳನ್ನು ಅಭ್ಯಾಸ ಮಾಡಬೇಕು.

ಕೆನೆತ್ ಆರೊ ಅವರು ತಮ್ಮ ಎಲ್ಲ ಕೃತಿಗಳು ಮತ್ತು ಲೇಖನಗಳಲ್ಲಿ ಅರ್ಥಮೀಮಾಂಸೆಯ ಮೂಲಭೂತ ಸಮಸ್ಯೆಗಳಾದ ಸಾರ್ವತ್ರಿಕ ಸ್ಪರ್ಧಾತ್ಮಕ ಸಮತೋಲನ (ಜನರಲ್ ಕಾಂಪಿಟಿಟಿವ್ ಈಕ್ವಿಲಿಬ್ರಿಯಂ) ಮತ್ತು ಕ್ಷೇಮ ಅರ್ಥಶಾಸ್ತ್ರ ಇವುಗಳ ಕಡೆಗೆ ಹೆಚ್ಚಿನ ಗಮನ ಕೊಟ್ಟಿದ್ದಾರೆ. ಆರೊ

ಅವರು ತಮ್ಮ ಸಂಶೋಧನೆಯ ಮೂಲಕ, ತರಗತಿಯಲ್ಲೂ ಇತರ ಕಡೆಗಳಲ್ಲೂ ಬೋಧನೆಗಳ ಮೂಲಕ, ಮತ್ತು ತಮ್ಮ ಪ್ರತಿಭಾಸ್ಫೂರ್ತ ಪ್ರಭಾವವನ್ನು ಬೀರುವುದರ ಮೂಲಕ ಅರ್ಥಮೀಮಾಂಸೆಯ ಬೆಳವಣಿಗೆಗೆ ಬಹಳ ಮಟ್ಟಿಗೆ ಕಾರಣರಾಗಿದ್ದಾರೆ. ಆರೊ ಅವರು ಅರ್ಥ ಮೀಮಾಂಸೆಗೆ ನೀಡಿರುವ ಕೊಡುಗೆ ಯಾವ ಕಾರಣಕ್ಕಾಗಿ ಇಷ್ಟೊಂದು ಮಹತ್ವದ ಸ್ಥಾನ ಗಳಿಸಿದೆ ಎಂಬುದಕ್ಕೆ ಒಂದೇ ಮಾತಿನಲ್ಲಿ ಉತ್ತರ ಹೇಳಬಹುದು: ಆರೊ ಅವರು ಅರ್ಥಶಾಸ್ತ್ರದಲ್ಲಿ ತಮ್ಮ ಅದ್ಭುತ ಸಂಶೋಧನೆಗಳಿಂದ ಅನೇಕ ನಿರೂಪಣೆಗಳನ್ನು, ಪರಿಕಲ್ಪನೆಗಳನ್ನು ಮತ್ತು ಮಾದರಿಗಳನ್ನು ಓದುಗರಿಗೆ ಚೆನ್ನಾಗಿ ಮನದಟ್ಟಾಗುವಂತೆ ಮತ್ತು ಸ್ಪಷ್ಟವಾದ ರೀತಿಯಲ್ಲಿ ಕೊಟ್ಟಿದ್ದಾರೆ. ಇದಲ್ಲದೆ ಇವರು ತಮ್ಮ ಲೇಖನಗಳಲ್ಲಿ ಗಣಿತಶಾಸ್ತ್ರವನ್ನು ವಿಶೇಷವಾಗಿ ಉಪಯೋಗಿಸಿ ಅರ್ಥ ಮೀಮಾಂಸೆಗೆ ಒಂದು ನಿಷ್ಕೃಷ್ಟತೆಯನ್ನು ತಂದಿದ್ದಾರೆ. ಇವುಗಳಿಗೆ ಉದಾಹರಣೆಗಳೆಂದರೆ ಆರೊ ಅವರ 'ಸೋಷಿಯಲ್ ಚಾಯ್ಸ್ ಅಂಡ್ ಇಂಡಿವಿಜುಯಲ್ ವ್ಯಾಲ್ಯೂಸ್'. 'ಮ್ಯಾಥಮ್ಯಾಟಿಕಲ್ ಸ್ಟ್ಯಾಟಿಸ್ಟಿಕ್ಸ್ ಅಂಡ್ ಪ್ರಾಬಬಿಲಿಟಿ'. 'ಎಕನಾಮಿಕ್ಸ್ ಆಫ್ ಅನ್‌ಸರ್ಟನ್‌ಟಿ ಮತ್ತು 'ಎಕನಾಮಿಕ್ ಇಂಪ್ಲಿಕೇಷನ್ಸ್ ಆಫ್ ಲರ್ನಿಂಗ್ ಬೈ ಡೂಯಿಂಗ್'. ಆರೋ ಅವರು ತಮ್ಮ ಮೂಲಭೂತ ಮಾದರಿಗಳನ್ನು ನಿರ್ದಿಷ್ಟ ರೂಪಕ್ಕೆ ತಂದ ಮೇಲೆಯೇ ಅನೇಕ ಅರ್ಥಶಾಸ್ತ್ರಜ್ಞರು ಇವರ ದಾರಿಯನ್ನೆ ಹಿಡಿದು ತಮ್ಮ ಮಾದರಿಗಳನ್ನು ಸರಿಯಾದ ಮತ್ತು ನಿರ್ದಿಷ್ಟ ರೀತಿಯಲ್ಲಿ ಹೇಳಲು ಸಾಧ್ಯವಾಯಿತು.

ಆರೊ ಅವರು ಅರ್ಥಶಾಸ್ತ್ರ ಬೆಳವಣಿಗೆಗೆ ನೀಡಿರುವ ಕೊಡುಗೆಯನ್ನು ಹೀಗೆ ವಿಂಗಡಿಸ ಬಹುದು: 1 ಸಾರ್ವತ್ರಿಕ ಸಮತೋಲನ ಮತ್ತು ಕಾರ್ಯಸಾಮರ್ಥ್ಯ ಮೀಮಾಂಸೆ (ಜನರಲ್ ಈಕ್ವಿಲಿಬ್ರಿಯಂ ಅಂಡ್ ಎಫಿಷಿಯೆನ್ಸಿ ತಿಯೊರಿ). ಇದರಲ್ಲಿ ಇವರ ಅಸ್ತಿತ್ವ ಪ್ರಮೇಯಗಳ (ಎಕ್ಸಿಸ್ಟೆನ್ಸ್ ತಿಯೊರೆಮ್ಸ್) ಮತ್ತು ಸ್ಥಾಯಿತ್ವ (ಸ್ಟೆಬಿಲಿಟಿ) ಮತ್ತು ಅನುಕೂಲತಮತ್ವ ಹಾಗೂ ವಿಕೇಂದ್ರೀಕರಣ (ಆಪ್ಟಿಮಾಲಿಟಿ ಅಂಡ್ ಡೀಸೆಂಟ್ರಲೈಸೇಷನ್) ವಿಷಯಗಳು ಅತಿ ಗಣನೀಯವಾದವು. (2) ಅನಿಶ್ಚಿತತೆಯ ಅರ್ಥಶಾಸ್ತ್ರ (ಎಕೊನಾಮಿಕ್ಸ್ ಆಫ್ ಅನ್‌ಸರ್ಟನ್‌ಟಿ).3 ಬೆಳವಣಿಗೆ. ಉತ್ಪಾದಕತಾ ಸಿದ್ಧಾಂತ ಮತ್ತು ತಾಂತ್ರಿಕ ಪ್ರಗತಿ (ಗ್ರೋತ್. ಪ್ರೊಡಕ್ಟಿವಿಟಿ ತಿಯೊರಿ ಅಂಡ್ ಟೆಕ್ನಿಕಲ್ ಪ್ರೋಗ್ರೆಸ್).4 ಅಂತರ-ಕಾಲಿಕ ನಿರ್ಣಯ ಸಿದ್ಧಾಂತ ಮತ್ತು ಅನುಕೂಲತಮ ಬೆಳವಣಿಗೆ (ಇಂಟರ್-ಟೆಂಪೊರಲ್ ಡಿಸಿಷನ್ ತಿಯೊರಿ ಅಂಡ್ ಆಪ್ಟಿಮಲ್ ಗ್ರೋತ್. 5 ಗಣಿತೀಯ ಕಾರ್ಯಸರಣೀಕರಣ ಮತ್ತು ಸಂಖ್ಯಾಕಲನೀಯ ನಿರ್ಣಯ ಸಿದ್ಧಾಂತ (ಮ್ಯಾತಮ್ಯಾಟಿಕಲ್ ಪ್ರೊಗ್ರಾಮಿಂಗ್ ಅಂಡ್ ಸ್ಟಾಟಿಸ್ಟಿಕಲ್ ಡಿಸಿಷನ್ ತಿಯೊರಿ), 6 ಸಾಮಾಜಿಕ ಆಯ್ಕೆ ಮತ್ತು ವೈಯಕ್ತಿಕ ಮೌಲ್ಯಗಳು (ಸೋಷಿಯಲ್ ಚಾಯ್ಸ್ ಅಂಡ್ ಇಂಡಿವಿಜುಯಲ್ ವ್ಯಾಲ್ಯೂಸ್). ಇದು ಕ್ಷೇಮ ಅರ್ಥಶಾಸ್ತ್ರದ ಅಡಿಪಾಯವೆಂದು ಹೇಳಬಹುದು.

ಒಟ್ಟಿನಲ್ಲಿ ಸಾರ್ವತ್ರಿಕ ಸಮತೋಲನದ ವಿಷಯವಾಗಿ ಹೇಳುವುದಾದರೆ. ವಾಲ್‌ರಾಸ್ ಅವರು ಈ ವಿಷಯವನ್ನು ಕುರಿತು ತಮ್ಮ ಗ್ರಂಥವನ್ನು ಪ್ರಕಟಿಸಿ ಸುಮಾರು ನೂರು ವರ್ಷವಾಯಿತು. ಆಧುನಿಕ ಸಾರ್ವತ್ರಿಕ ಸಮತೋಲನ ವಿಶ್ಲೇಷಣೆಯನ್ನು ಆರೋ ಮತ್ತು ಡೇಬ್ರೂ ಅವರು ಅಭಿವೃದ್ಧಿಗೊಳಿಸಿ ಕ್ರೋಡೀಕರಿಸಿ ಸುಮಾರು 20 ವರ್ಷಗಳಾದುವು. ಇಂದು ಸಾರ್ವತ್ರಿಕ ಸಮತೋಲನದ ಸ್ಥಾನವೇನು. ನಾವು ಈ ವಿಷಯದಲ್ಲಿ ಯಾವ ಮಟ್ಟದಲ್ಲಿದ್ದೇವೆ ಎಂಬುದನ್ನು ಈಗ ವಿಚಾರ ಮಾಡಬೇಕು. ಈ ವಿಚಾರ ವಿಮರ್ಶೆಗೆ ಆರೊ ಮತ್ತು ಹಾನ್ ಅವರ ಇತ್ತೀಚಿನ ಗ್ರಂಥವಾದ ಸಾರ್ವತ್ರಿಕ ಸ್ಪರ್ಧಾತ್ಮಕ ವಿಶ್ಲೇಷಣೆ (ಜನರಲ್ ಕಾಂಪಿಟಿಟಿವ್ ಅನಾಲಿಸಿಸ್)ಸೂಕ್ತವಾದ ಮತ್ತು ನಿರ್ದಿಷ್ಟವಾದ ಉತ್ತರ ನೀಡುತ್ತದೆ.

ಆರೊ ಅವರು ಕ್ಷೇಮ ಅರ್ಥಶಾಸ್ತ್ರದ ಬೆಳವಣಿಗೆಗೂ ತಮ್ಮ ಕಾಣಿಕೆ ಸಲ್ಲಿಸಿದ್ದಾರೆ. ಈ ವಿಷಯದಲ್ಲಿ ಇವರಿಗೆ ಹೆಚ್ಚಿನ ಹೆಸರನ್ನು ತಂದದ್ದು 'ಸೋಷಿಯಲ್ ಚಾಯ್ಸ್ ಅಂಡ್ ಇಂಡಿವಿಜುಯಲ್ ವ್ಯಾಲ್ಯೂಸ್'. ಈ ಗ್ರಂಥ ಮೊದಲ ಬಾರಿಗೆ 1951ರಲ್ಲಿ ಪ್ರಕಟವಾಯಿತು. ಇದರ ಎರಡನೆಯ ಆವೃತ್ತಿ 1963ರಲ್ಲಿ ಬಂತು. ಮತದಾನ ವಿರೋಧಾಭಾಸ ನಿರೂಪಣೆ (ಪ್ಯಾರಡಾಕ್ಸ್ ಆಫ್ ವೋಟಿಂಗ್ ಸ್ಟೇಟ್‌ಮೆಂಟ್) ಸೂತ್ರದ ವಿಮೋಚನೆಯಿಂದಾಗಿ ಈ ಗ್ರಂಥ ಕ್ಷೇಮ ಅರ್ಥಶಾಸ್ತ್ರಕ್ಕೆ ಅಮೂಲ್ಯ ಕೊಡುಗೆಯೆಂದು ಪ್ರಸಿದ್ಧವಾಗಿದೆ.

ಹಿಕ್ಸ್ ಮತ್ತು ಆರೊ

ಕೊನೆಯದಾಗಿ ಹಿಕ್ಸ್ ಮತ್ತು ಆರೊ ಅವರ ಕೊಡುಗೆಯನ್ನು ಕುರಿತು ಒಟ್ಟಿಗೆ ವಿಮರ್ಶೆ ಮಾಡುವುದು ಸೂಕ್ತವೆನಿಸುತ್ತದೆ. ಆರ್ಥಿಕ ವಿಜ್ಞಾನದ ಪ್ರಗತಿ ಮತ್ತು ಅಭಿವೃದ್ಧಿ ಸಾರ್ವತ್ರಿಕ ಸಮತೋಲನ ವಿಶ್ಲೇಷಣೆಯ ವಿಚಾರದಲ್ಲಿ ಅಗಾಧ ಮಾರ್ಪಾಡನ್ನು ತಂದಿದೆ. ಈ ಮಾರ್ಪಾಡಿಗೆ ಮತ್ತು ಬೆಳವಣಿಗೆಗೆ ಮುಖ್ಯವಾಗಿ ಕಾರಣರಾದವರು–ಹಿಕ್ಸ್ ಮತ್ತು ಆರೊ. ತಮ್ಮ ಸಂಶೋಧನೆಗಳಿಂದ ತಮ್ಮ ಗ್ರಂಥಗಳಲ್ಲಿ ಮತ್ತು ಲೇಖನಗಳಲ್ಲಿ ಈ ಕ್ಷೇತ್ರದಲ್ಲಿ ಹೊಸ ಪಥವನ್ನು ತೋರಿಸಿದ್ದಾರೆ. ಸಾರ್ವತ್ರಿಕ ಸಮತೋಲನ ಮೀಮಾಂಸೆ ಆರ್ಥಿಕ ಬಲಗಳ ನಡುವಣ ಸಮತೋಲನದ ಪರಿಕಲ್ಪನೆಯನ್ನು, ಸಮತೋಲನ ಪುನಃ ಸ್ಥಾಪನೆಯಾಗುವಂಥ ರೀತಿಯಲ್ಲಿ ಬದಲಾವಣೆಗೆ ಪ್ರತಿಕ್ರಿಯೆ ತೋರಿಸುವ ಆರ್ಥಿಕ ವ್ಯವಸ್ಥೆಯ ಪ್ರವೃತ್ತಿಯನ್ನು ಕುರಿತದ್ದಾಗಿದೆ. 1936ರಲ್ಲಿ ಜೆ. ಎಂ. ಕೇನ್ಸ್ ಒಂದು ಪ್ರಮುಖ ಸಮತೋಲನ ಮೀಮಾಂಸೆಯನ್ನು ಸೂತ್ರೀಕರಿಸಿದರು. ಜಾನ್ ಹಿಕ್ಸ್ 1939ರಲ್ಲಿ ಈ ವಿಷಯವಾಗಿ ಸಂಶೋಧನೆ ಪ್ರಾರಂಭಿಸಿ ಕೇನ್ಸರ ಸಮತೋಲನ ಮೀಮಾಂಸೆಯನ್ನು ಪರಿಷ್ಕರಿಸಿ ಮುಂದಿನ ಹೆಜ್ಜೆ ಇಟ್ಟರು. ಈ ಪರಿಷ್ಕೃತ ಸಮತೋಲನ ಮೀಮಾಂಸೆಯನ್ನು ಕೆಲವರು ಕೇನ್ಸ್–ಹಿಕ್ಸ್ ಮೀಮಾಂಸೆ ಎಂದು ಕರೆಯುತ್ತಾರೆ. ಕೆನೆತ್ ಆರೊ ಅವರು ಹಿಕ್ಸರ ಈ ಅಧ್ಯಯನಗಳನ್ನು ಸಂಶೋಧನೆಯ ಮೂಲಕ 1950 ಮತ್ತು 1960ರ ದಶಕಗಳಲ್ಲಿ ಮುಂದುವರಿಸಿ ಸಾರ್ವತ್ರಿಕ ಸಮತೋಲನ ಮೀಮಾಂಸಾ ಕ್ಷೇತ್ರದಲ್ಲಿ ಹಲವಾರು ಉತ್ತಮ ತಿದ್ದುಪಾಡುಗಳನ್ನು ತಂದರು. ಇತರ ವಿಚಾರಗಳ ಜೊತೆಗೆ ಸಮತೋಲನದ ಸ್ಥಾಯಿತ್ವವನ್ನು ನಿಷ್ಕರ್ಷಿಸುವ ಸಮಸ್ಯೆಯನ್ನು ಗಣಿತೀಯವಾಗಿ ಅವರು ಬಗೆಹರಿಸಿದರು. ಹಿಕ್ಸ್ ಮತ್ತು ಆರೊ ಅವರು ಒಂದೇ ಕ್ಷೇತ್ರದಲ್ಲಿ ಸಂಶೋಧನೆ ನಡೆಸುತ್ತಿದ್ದರೂ ಇವರು ಬೇರೆಬೇರೆ ತಲೆಮಾರಿಗೆ ಸೇರಿದ್ದವರಾದ್ದರಿಂದ ಇವರ ವಿಶ್ಲೇಷಣೆಯ ರೀತಿಗಳಲ್ಲೂ ಸಮಸ್ಯೆಗಳನ್ನು ಅಥವಾ ಪ್ರಶ್ನೆಗಳನ್ನು ಆರಿಸುವುದರಲ್ಲಿಯೂ ವ್ಯತ್ಯಾಸಗಳನ್ನು ಕಾಣಬಹುದು.

ಹಿಂದೆ ಸಾರ್ವತ್ರಿಕ ಸಮತೋಲನ ಮೀಮಾಂಸೆ ಇತರ ಎಲ್ಲಾ ಮೀಮಾಂಸೆಗಳಂತೆ ಒಂದು ಸಾಮಾನ್ಯ ವಿಶ್ಲೇಷಣೆಯಾಗಿತ್ತು. ಹಿಕ್ಸ್ 1939ರಲ್ಲಿ ತಮ್ಮ ಅತ್ಯಂತ ಪ್ರಸಿದ್ಧವಾದ, 'ವ್ಯಾಲ್ಯೂ ಅಂಡ್ ಕ್ಯಾಪಿಟಲ್' ಗ್ರಂಥದಲ್ಲಿ ಈ ಕಂದಾಚಾರ ಪದ್ಧತಿಯನ್ನು ಮೂಲೆಗೊತ್ತಿ, ಸಾರ್ವತ್ರಿಕ ಸಮತೋಲನ ಮೀಮಾಂಸೆಗೆ ಅರ್ಥಶಾಸ್ತ್ರದಲ್ಲಿ ಪ್ರಮುಖ ಸ್ಥಾನ ಗಳಿಸಿಕೊಟ್ಟರು. ಪದಾರ್ಥಗಳು, ಉತ್ಪಾದನಾಂಗಗಳು (ಫ್ಯಾಕ್ಟರ್ಸ್ ಆಫ್ ಪ್ರೊಡಕ್ಷನ್), ಹಣ ಮತ್ತು ಉದ್ದರಿಗಳ ಸಮುಚ್ಚಿತ ಮಾರುಕಟ್ಟೆಗಳೊಂದಿಗೆ (ಅಗ್ರಿಗೇಟೆಡ್ ಮಾರ್ಕೆಟ್ಸ್) ಸಂಪೂರ್ಣ ಸಮತೋಲನ ಮಾದರಿಯೊಂದನ್ನು ಅವರು ನೀಡಿದರು. ಈ ಮಾದರಿಯಲ್ಲಿ ನಾವು ಅನೇಕ ನಾವೀನ್ಯಗಳನ್ನೂ ಬದಲಾವಣೆಗಳನ್ನೂ ಕಾಣಬಹುದು. ಈ ಮಾದರಿಯಿಂದಾಗಿ ಅನುಭೋಗ ಮತ್ತು ಉತ್ಪಾದನ ಮೀಮಾಂಸೆಗಳು ಮತ್ತಷ್ಟು ಖಚಿತವಾದುವು. ಹಿಕ್ಸ್ ತಮ್ಮ ಗಣಿತೀಯ ಅಂಗವಾಗಿ ಹಳೆಯ ಪದ್ಧತಿಯ ಭಿನ್ನಕ ವಿಶ್ಲೇಷಣೆಯನ್ನು (ಡಿಫರೆನ್ಷಿಯಲ್ ಅನಾಲಿಸಿಸ್) ಅರ್ಥಶಾಸ್ತ್ರದ ಮೀಮಾಂಸೆಗಳಲ್ಲಿ ಉಪಯೋಗಿಸಿದ್ದಾರೆ. ಕ್ರಮೇಣ ಆರ್ಥಿಕ ವಿಜ್ಞಾನದಲ್ಲಿ ಬಹಳ ನವೀನ ಗಣಿತೀಯ ರೀತಿಗಳನ್ನು ಉಪಯೋಗಿಸುವುದು ಸರ್ವಸಾಮಾನ್ಯವಾಯಿತು. ಆರೊ ಅವರು ತಮ್ಮ ಸಾರ್ವತ್ರಿಕ ಸಮತೋಲನ ಪದ್ಧತಿಯಲ್ಲಿ ಈ ಅತ್ಯಾಧುನಿಕ ಗಣಿತೀಯ ರೀತಿಗಳನ್ನು ಬಳಸಿ ಅದರ ಹೆಚ್ಚಿನ ಮಾರ್ಪಾಡಿಗೆ ಕಾರಣರಾಗಿದ್ದಾರೆ. ಇದನ್ನು ಆರೊ ಮತ್ತು ಡೆಬ್ರ್ಯೂ ಅವರು ಸೇರಿ 1954ರಲ್ಲಿ ಬರೆದಿರುವ ಒಂದು ಲೇಖನದಲ್ಲಿ ಕಾಣಬಹುದು. ಈ ಲೇಖನದಲ್ಲಿ ಕೊಟ್ಟಿರುವ ಸಾರ್ವತ್ರಿಕ ಸಮತೋಲನ ಮಾದರಿ ಈ ಕ್ಷೇತ್ರದಲ್ಲಿ ಸಾಕಷ್ಟು ಸಂಶೋಧನೆ ನಡೆಸಲು ಆಧಾರವಾಯಿತು.

ಹಿಕ್ಸ್ ಮತ್ತು ಆರೊ ಅವರು ಕ್ಷೇಮ ಮೀಮಾಂಸೆಯ ಬೆಳವಣಿಗೆಗೂ ಅನೇಕ ರೀತಿಯಲ್ಲಿ ಕಾರಣರಾಗಿದ್ದಾರೆ. ಕ್ಷೇಮ ಮೀಮಾಂಸೆಗೆ ಜಾನ್ ಹಿಕ್ಸರ ಹೆಸರಾಂತ ಕೊಡುಗೆಯೆಂದರೆ ಅನೇಕ ಆರ್ಥಿಕ ಪರಿಸ್ಥಿತಿಗಳನ್ನು ಹೋಲಿಸಿ ನೋಡುವ ವಿಧಾನದ ವಿಶ್ಲೇಷಣೆ ಮತ್ತು ಅನುಭೋಗಿಯ ಹೆಚ್ಚಳದ ಕಲ್ಪನೆಯಲ್ಲಿ ಬದಲಾವಣೆ ತಂದದ್ದು. ಈ ಹೊಸ ನಿರೂಪಣೆ, ವೆಚ್ಚ–ಪ್ರಯೋಜನ (ಕಾಸ್ಟ್ ಬೆನಿಫಿಟ್) ವಿಶ್ಲೇಷಣೆಯ ಮೇಲೆ ಅಪಾರ ಪ್ರಭಾವ ಬೀರಿದೆ. ಸ್ಪರ್ಧಾತ್ಮಕ ಸಮತೋಲನದ ಪೇರೆಟೊ-

ಅನುಕೂಲತಮತ್ವ ಕುರಿತ ಸುಪ್ರಸಿದ್ಧ ಪ್ರಮೇಯವನ್ನು ಆರೊ ಸಾರ್ವತ್ರೀಕರಿಸಿದ್ದಾರೆ. ಸಂಶೋಧನೆಗೂ ನಿಜಬಂಡವಾಳದಲ್ಲಿ ವಿನಿಯೋಜನೆಗೂ ನಡುವೆ ಸಂಪನ್ಮೂಲಗಳನ್ನು ನಿಯತಗೊಳಿಸುವುದರಲ್ಲಿ ಅನನುಕೂಲತಮತ್ವದ ಕಡೆಗೆ ಸಾಮಾನ್ಯವಾಗಿ ಒಲವುಗಳಿವೆಯೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಕ್ಷೇಮ ಮೀಮಾಂಸೆಗೆ ಆರೊ ಅವರ ಕೊಡುಗೆಗಳಲ್ಲಿ ಅತ್ಯಂತ ಮುಖ್ಯವಾದ್ದೆಂದರೆ ಅವರ ಸಾಧ್ಯತಾ ಪ್ರಮೇಯಗಳು. ವೈಯಕ್ತಿಕ ಅಭಿಮಾನ (ಪ್ರಿಫರೆನ್ಸ್) ಕಾರ್ಯಗಳಿಂದ ಸಾಮಾಜಿಕ ಕ್ಷೇಮಕಾರ್ಯವನ್ನು ರಚಿಸುವುದು ಅಸಾಧ್ಯವೆಂದು ಈ ಪ್ರಮೇಯಗಳು ತೋರಿಸಿಕೊಡುತ್ತವೆ.

ಸರ್ ಜಾನ್ ಹಿಕ್ಸ್ ಮತ್ತು ಕೆನೆತ್ ಜೋಸೆಫ್ ಆರೊ ಅವರು ಮೇಲೆ ಕಂಡ ಕ್ಷೇತ್ರಗಳಲ್ಲಿ ಮಾತ್ರವಲ್ಲದೆ ಅರ್ಥಶಾಸ್ತ್ರದ ಇತರ ಕ್ಷೇತ್ರಗಳಾದ ಹಣ ಮೀಮಾಂಸೆ, ಆರ್ಥಿಕ ಆವರ್ತ ಮೀಮಾಂಸೆ, ನಿರ್ಣಯ ಮೀಮಾಂಸೆ ಮತ್ತು ಆರ್ಥಿಕ ಅಭಿವೃದ್ಧಿ ಮೀಮಾಂಸೆಗಳಲ್ಲೂ ಸಂಶೋಧನೆ ನಡೆಸಿ ಅವುಗಳ ಬೆಳವಣಿಗೆಗೂ ಕಾರಣರಾಗಿದ್ದಾರೆ.

ಎಚ್. ಎಂ. ನಾಗರಾಜರಾವ್

ಕೊಂಗಾಳ್ವರು

ಕರ್ನಾಟಕದ ಇತಿಹಾಸದಲ್ಲಿ ಹಲವಾರು ಸಾಮಂತ ಮನೆತನಗಳ ಅಸ್ತಿತ್ವವನ್ನು ನಾವು ಕಾಣುತ್ತೇವೆ. ಈ ಸಾಮಂತಮನೆತನಗಳ ಅರಸರು ತಮ್ಮ ಸಾರ್ವಭೌಮರಿಗೆ ನಿಷ್ಠರಾಗಿದ್ದು, ಅವರು ದುರ್ಬಲರಾದಲ್ಲಿ ಸ್ವತಂತ್ರರಾಗಿ ಇಲ್ಲವೆ ಪ್ರಭಾವಶಾಲಿಯಾದ ಮತ್ತೊಂದು ರಾಜಮನೆತನಕ್ಕೆ ಅಧೀನರಾಗಿ ಪ್ರದೇಶಗಳನ್ನಾಳುತ್ತಿದ್ದುದು ಸಾಮಾನ್ಯವಾಗಿ ಕಂಡುಬರುವ ಅಂಶ. ಈ ನಾಡಿನ ಇತಿಹಾಸದಲ್ಲಿ ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ಸೇಉಣರು ಮುಂತಾದ ಪ್ರಮುಖ ರಾಜಮನೆತನಗಳೆಲ್ಲ ಮೂಲತಃ ಸಾಮಂತ ಮನೆತನಗಳಾಗಿ ಹುಟ್ಟಿ, ಕ್ರಮೇಣ ಬಲಯುತವಾಗಿ ಸ್ವತಂತ್ರ ಸಾಮ್ರಾಜ್ಯಗಳನ್ನು ಸ್ಥಾಪಿಸಿದುವು. ಮತ್ತೆ ಅನೇಕ ಸಾಮಂತಮನೆತನಗಳು ಒಂದೆರಡು ಶತಮಾನಗಳ ಕಾಲ ರಾಜ್ಯವಾಳಿ ಅವನತಿ ಹೊಂದಿದುವು. ಅಂಥ ಸಾಮಂತ ಮನೆತನಗಳಲ್ಲೊಂದಾದ ಮತ್ತು ಈಗಿನ ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕು ಹಾಗೂ ಕೊಡಗು ಜಿಲ್ಲೆಯ ಉತ್ತರ ಭಾಗಗಳನ್ನೊಳಗೊಂಡ ಪ್ರದೇಶವನ್ನಾಳಿದ ಕೊಂಗಾಳ್ವ ಮನೆತನದ ಇತಿಹಾಸವನ್ನು ರೂಪಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಕೊಂಗಾಳ್ವರು ಆಳುಪಖೇಡದ (ಈಗಿನ ದಕ್ಷಿಣ ಕನ್ನಡ ಜಿಲ್ಲೆ) ಆಳ್ವ ಅಥವಾ ಆಳುಪ ಮನೆತನದ ಒಂದು ಶಾಖೆಗೆ ಸೇರಿದವರಿರಬೇಕೆಂದು ಕೆಲವು ವಿದ್ವಾಂಸರು ಭಾವಿಸುತ್ತಾರೆ[1].

ಕರ್ನಾಟಕ ಮತ್ತು ತಮಿಳುನಾಡಿನ ಅರಸರ ನಡುವಣ ತಿಕ್ಕಾಟ ದಕ್ಷಿಣ ಭಾರತದ ಇತಿಹಾಸದಲ್ಲಿ ಸಾಮಾನ್ಯವಾಗಿ ಕಂಡುಬರುವ ಸಂಗತಿ. ಕ್ರಿ.ಶ. 11ನೆಯ ಶತಮಾನದ ಆರಂಭದಲ್ಲಿ ಚೋಳದೊರೆ ರಾಜರಾಜ ಗಂಗವಾಡಿಯನ್ನು ಗೆದ್ದುಕೊಂಡ. ಇದರಿಂದಾಗಿ ಕೊಡಗು–ಹಾಸನ ಜಿಲ್ಲೆಗಳ ಕೆಲವು ಪ್ರದೇಶಗಳಲ್ಲಿ ಕೊಂಗಾಳ್ವ ಮನೆತನದವರು ಮಾಂಡಲಿಕರಾಗಿ ಆಳ್ವಿಕೆ ನಡೆಸಲು ಅವಕಾಶದೊರೆಯಿತು. ಈ ಮನೆತನದ ಮೊದಲ ಶಾಸನ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಮಾಲಂಬಿ ಎಂಬಲ್ಲಿ ದೊರೆತಿದೆ[2]. ಶಾಸನದ ಕಾಲ ಕ್ರಿ.ಶ. 11ನೆಯ ಶತಮಾನದ ಆರಂಭವೆಂದು ಹೇಳಬಹುದು. ಈ ಶಾಸನದಲ್ಲಿ ಕೊಂಗಾಳ್ವರು ಅಧಿಕಾರಕ್ಕೆ ಬಂದ ಪರಿಸ್ಥಿತಿಯನ್ನು ವಿವರಿಸಿದೆ. 'ಕವೇರ ಕನ್ಯಕಾ ಸಖೀಯಮಾನ' ಮತ್ತು 'ಚೋಳ ಮಹಾಮಹೀಪತಿ' ಎನಿಸಿದ ರಾಜಕೇಸರಿವರ್ಮ ಪೆರ್ಮನಡಿ ಅಂದರೆ ರಾಜರಾಜ ಪನಸೋಗೆಯ ಕಾಳಗದಲ್ಲಿ ಶತ್ರುಗಳ ದಮನವಾಗುವವರೆಗೂ ಹೋರಾಡಿದ ಮನಿಜನೆಂಬವನ ಪರಾಕ್ರಮವನ್ನು ಮೆಚ್ಚಿ, ಅವನಿಗೆ ಪಟ್ಟವನ್ನು ಕಟ್ಟಿ ನಾಡನ್ನು ಕೊಡಲೆಂದು ಪಂಚವನ್ ಮಾರಾಯನಿಗೆ ಆದೇಶ ನೀಡಿದ. ಅದರಂತೆ ಪಂಚವನ್ ಮಾರಾಯ ಮನಿಜನಿಗೆ 'ಕ್ಷತ್ರಿಯ ಶಿಖಾಮಣಿ ಕೊಂಗಾಳ್ವ' ಎಂಬ ಬಿರುದನ್ನಿತ್ತು ಮಾಲಂಬಿಯನ್ನು ನೀಡಿದ[3]. ಗಂಗಮಂಡಲದ ಮುಖ್ಯ ಸೇನಾನಿಯಾಗಿ ಪಂಚವನ್ ಮಾರಾಯ ಈ ಕಾರ್ಯವನ್ನು ನಿರ್ವಹಿಸಿದಂತೆ ತೋರುತ್ತದೆ. ಈ ಪಂಚವನ್ ಮಾರಾಯನೇ

---

[1] *EC, V,* Introduction, P. 7

[2] *EC, I, Cg 65 (46)*—Revised edition

[3] ಅದೇ

ಮಾಲಿಪ್ಪೆಯನ್ನು ಪನಸೋಗೆಯ ಕಾಳಗದಲ್ಲಿಯ ತನ್ನ ಪರಾಕ್ರಮಕ್ಕಾಗಿ ಚೋಳ ದೊರೆ ರಾಜರಾಜನಿಂದ ಪಡೆದನೆಂದೂ, ಅವನೇ ಕೊಂಗಾಳ್ವ ಮನೆತನದ ಮೊದಲ ಮಾಂಡಲಿಕನೆಂದೂ ಕೆಲವರು ಅಭಿಪ್ರಾಯಪಟ್ಟಿದ್ದಾರೆ[4]. ಆದರೆ, ಪಂಚವನ್ ಮಾರಾಯ ಎಂಬುದು ಚೋಳಯುವರಾಜನಾಗಿದ್ದ ರಾಜೇಂದ್ರಚೋಳನ ಬಿರುದಾಗಿತ್ತೆಂದು ಊಹಿಸಲವಕಾಶವಿದೆ[5]. ಅಲ್ಲದೆ ಮನಿಜನ ಹೆಸರು ಶಾಸನದಲ್ಲಿ ಸ್ಪಷ್ಟವಾಗಿದೆ. ಅದ್ದರಿಂದ ಮನಿಜನೇ ಕೊಂಗಾಳ್ವ ಮನೆತನದ ಮೊದಲ ಮಾಂಡಲಿಕನೆಂದು ನಿರ್ಣಯಿಸಬಹುದು. ಪನಸೋಗೆಯ ಕಾಳಗ ಗಂಗರ ಇಲ್ಲವೆ ಚಂಗಾಳ್ವರ ವಿರುದ್ಧ ನಡೆದಿರಬೇಕು. ಇದು ನಡೆದ ಕಾಲ ಕ್ರಿ.ಶ. ಸುಮಾರು 1004-05 ಎಂದು ಹೇಳಬಹುದು. ಅದ್ದರಿಂದ ಕೊಂಗಾಳ್ವಮನೆತನದ ಆಳ್ವಿಕೆಯೂ ಈ ಕಾಲದಿಂದಲೇ ಆರಂಭವಾಯಿತೆನ್ನಬಹುದು. ಏಳು ಸಾವಿರ ಸೀಮೆ ಎಂದು ಕರೆಯಲಾಗುತ್ತಿದ್ದ ಪ್ರದೇಶವನ್ನು ಮನಿಜ ಆಳಿದ. ಈ ಪ್ರದೇಶ ಗಂಗ ರಾಜಕುಮಾರ ಎರೆಯಪ್ಪ ಕ್ರಿ.ಶ. ಸು. 880ರಲ್ಲಿ ಆಳುತ್ತಿದ್ದ ಕೊಂಗಲನಾಡು-8000[6] ಪ್ರದೇಶಕ್ಕೆ ಸರಿಸಮನಾಗಿತ್ತೆಂದು ಕಾಣುತ್ತದೆ.

ಕ್ರಿ.ಶ. ಸು. 1020ಕ್ಕೆ ಸೇರಿಸಬಹುದಾದ ಶಾಸನವೊಂದರಲ್ಲಿ ಬಡಿವ ಕೊಂಗಾಳ್ವನೆಂಬುವನೊಬ್ಬ ಉಲ್ಲೇಖಿತನಾಗಿದ್ದಾನೆ[7]. ಹಾಗೆಯೇ 11ನೆಯ ಶತಮಾನದ ಆರಂಭದ ದಶಕಗಳಿಗೆ ಸೇರಿಸಬಹುದಾದ ಇನ್ನೊಂದು ಶಾಸನ ಕಾದವಕೊಂಗಾಳ್ವ ಎಂಬುವನನ್ನು ಉಲ್ಲೇಖಿಸುತ್ತದೆ[8]. ಈ ಬಡಿವ ಮತ್ತು ಕಾದವ ಕೊಂಗಾಳ್ವ ಒಬ್ಬನೆ ಎಂಬ ಪ್ರಶ್ನೆಗೆ ಉತ್ತರಿಸಲು ಆಧಾರಗಳಿಲ್ಲ. ಅಂತೆಯೇ ಮನಿಜನಿಗೂ ಬಡಿವನಿಗೂ ಇರಬಹುದಾದ ಸಂಬಂಧದ ಬಗ್ಗೆಯೂ ಆಧಾರಗಳು ದೊರೆತಿಲ್ಲವಾದುದರಿಂದ, ಊಹಿಸಲು ಸಾಧ್ಯವಿಲ್ಲವಾಗಿದೆ.

ಬಡಿವ ಅಥವಾ ಕಾದವನ ಅನಂತರ ಅಧಿಕಾರಕ್ಕೆ ಬಂದ ರಾಜೇಂದ್ರ ಚೋಳ ಪೃಥುವೀ ಮಹಾರಾಜ ಅಥವಾ ರಾಜೇಂದ್ರ ಚೋಳ ಕೊಂಗಾಳ್ವ ಒಬ್ಬ ಪ್ರಬಲ ದೊರೆಯಾಗಿದ್ದ. ಇವನ ಬಗ್ಗೆ ನಮಗೆ ದೊರೆಯುವ ಮೊದಲ ಶಾಸನದ ಕಾಲ ಕ್ರಿ. ಶ. 1022. ಮಂಜರಾಬಾದು ತಾಲ್ಲೂಕಿನ ರಾಜೇಂದ್ರಪುರ ಎಂಬಲ್ಲಿ ದೊರೆತ ಈ ವೀರಗಲ್ಲು ಶಾಸನದಲ್ಲಿ ಕೊಂಗಾಳ್ವರಿಗೂ ಹೊಯ್ಸಳರಿಗೂ ನಡೆದ ಹೋರಾಟದ ಉಲ್ಲೇಖವಿದೆ. ಈ ಹೋರಾಟದಲ್ಲಿ ನೃಪಕಾಮ ಹೊಯ್ಸಳನ ಸೇನಾನಿ ಕನ್ನಮ್ಮನೆಂಬುವನನ್ನೂ ಅವನ ಕುದುರೆಯನ್ನೂ ಪಡೆವಳ ಜೋಗಯ್ಯನೆಂಬ ವೀರ ಕೊಂದುಹಾಕಿ ಮರಣಹೊಂದಿದನೆಂದು ತಿಳಿದು ಬರುತ್ತದೆ[9]. ಈ ಶಾಸನವನ್ನು ತಪ್ಪಾಗಿ ಅರ್ಥೈಸಲಾಗಿದೆ. ಜೋಗಯ್ಯ ಹೊಯ್ಸಳ ಪಕ್ಷದ ವೀರನೆಂದೂ ಕೊಂಗಾಳ್ವ ಪಕ್ಷದ ಕನ್ನಮ್ಮ ನೃಪಕಾಮ ಹೊಯ್ಸಳನ ಪ್ರಾಣಕ್ಕೆ ಸಂಚಕಾರ ತರಲು ಜೋಗಯ್ಯ ರಾಜನ ರಕ್ಷಣೆಗೆ ಧಾವಿಸಿ ಕನ್ನಮ್ಮನನ್ನೂ ಅವನ ಕುದುರೆಯನ್ನೂ ಕೊಂದು ಮರಣ ಹೊಂದಿದನೆಂದೂ ಶಾಸನವನ್ನು ಅರ್ಥೈಸಲಾಗಿದೆ. ಆದರೆ ಇದು ಸರಿಯಲ್ಲ. ಈ ವೀರಗಲ್ಲು ಶಾಸನವನ್ನು ಜೋಗಯ್ಯನಿಗಾಗಿ ನಿಲ್ಲಿಸಲಾಗಿದೆ: ಶಾಸನದಲ್ಲಿ ರಾಜೇಂದ್ರ ಚೋಳ ಪೃಥುವೀ ಮಹಾರಾಜನ ಹೆಸರು ಮೊದಲು ಬರುತ್ತದೆ: ನೃಪಕಾಮನ ಹೆಸರಿಗೆ ಮಹಾರಾಜ ಎಂಬ ಶಬ್ದವನ್ನು ಹಚ್ಚಿಲ್ಲ:[10]

---

4 B. L. Rice : *Mysore and Coorg from Inscriptions*, P. 144

5 K. A. Nilakantha Sastry : *The Colas*, P. 172

6 *EC, IV, Hs. 92*

7 *EC, V, Ag. 63*

8 *MAR, 1924, 121*

9 *EC, V, Mj. 43*

10 ಶಾಸನದ ಪಾಠ: ಓಂ ಸ್ವಸ್ತಿ ಸಕವರ್ಷ 944ನೇ ದುಂದುಭಿ ಸಂವತ್ಸರ...ದ ಬಹುಳ ಪಾಡಿವ ಶ್ರೀಮತು ರಾಜೇನ್ದ್ರ ಚೋಳ...ಥುವೀಮಹಾರಾಜಂ ನೃಪಕಾಮಹೊಯ್ಸಳನಲ್ಲಡಿಪಾದ ಕಲ್ಲಲ್. ಹೊಯ್ಸಳನಾರಸಂ. ಹ್ಮ...ಸ್ನಂಮ್ಮನವರಿಬ್ಬರು...ಮಹಾರಾಜನ ಬೆಸದಲ್ ಕನ್ನಮ್ಮನ ಕುದುರೆಯಂ ಪೆಣೆದಿರ್ಚಿದು ಪಡೆವಳ ಜೋಗಯ್ಯಸಗ್ಗಕ್ಕೆ ಸನ್ದ......ಪಡೆವಳತನವುಮನ ಹೆಗಡಿಗಸನೆ......ಕೊಟ್ಟು ಪಡದ ಸತ್ತ......ಡೆಮ ಗಣ್ಣಿಗೆ ಹೆಗ್ಗ...ಸ......(ಮುಂದೆ ಹೋಗಿದೆ).

ಇಷ್ಟಲ್ಲದೆ ಶಾಸನ ದೊರೆತ ಗ್ರಾಮದ ಹೆಸರು ಈಗಲೂ ರಾಜೇಂದ್ರಪುರ ಎಂದಿರುವುದು ಗಮನಾರ್ಹ. ಈ ಹೋರಾಟದಲ್ಲಿ ಕೊಂಗಾಳ್ವರದೆ ಮೇಲುಗೈಯಾದಂತೆ ತೋರುತ್ತದೆ. ಕ್ರಿ.ಶ. 1026ಕ್ಕೆ ಸೇರುವ, ಅರಕಲಗೂಡು ತಾಲೂಕಿನ ಹಂಸೂರು ಎಂಬಲ್ಲಿ ದೊರೆತ ರಾಜೇಂದ್ರಚೋಳನ ಇನ್ನೊಂದು ಶಾಸನದಿಂದ ಮತ್ತೆ ಹೊಯ್ಸಳರಿಗೂ ಕೊಂಗಾಳ್ವರಿಗೂ ಹೋರಾಟ ನಡೆಯಿತೆಂದು ತಿಳಿದುಬರುತ್ತದೆ.[11] ಮಣ್ಣೆ ಎಂಬಲ್ಲಿ ನಡೆದ ಈ ಹೋರಾಟದಲ್ಲಿ ರಾಜೇಂದ್ರಚೋಳ ವಿಜಯಶಾಲಿಯಾದ. ಇದು ರಾಜೇಂದ್ರ ಚೋಳನ ಸಾಮರ್ಥ್ಯವನ್ನು ತೋರುತ್ತದೆ. ಈ ಕಾಳಗದಲ್ಲಿ ಕೊಂಗಾಳ್ವರ ಪರ ಹೋರಾಡಿ ಮಡಿದ ಕೊಂಗಣಾಚಾರಿಯ ಮಗ ಜಾಕವನಿಗೆ ಅವನ ತಾಯಿ ಮಂದಕಬ್ಬೆ ವೀರಗಲ್ಲನ್ನು ನಿಲ್ಲಿಸಿದಳು. ಈ ವೀರಗಲ್ಲು ಶಾಸನದಲ್ಲಿ ಗಮನಿಸಬೇಕಾದ ಅಂಶವೆಂದರೆ ಹೊಯ್ಸಳದೊರೆಯನ್ನು ಹೆಸರಿಸದೆ 'ಮುಣ್ಡ ಪೊಯ್ಸಳ'ನೆಂದು ಕರೆದಿರುವುದು. ರೈಸರು 'ಮುಣ್ಡ' ಎಂಬ ಶಬ್ದಕ್ಕೆ 'base' ಎಂದು ಅರ್ಥವಿಸಿರುವುದನ್ನು ಕೊಪೆಲೊ ಕೂಡ ಸ್ವೀಕರಿಸಿದ್ದಾರೆ[12]. ಡೆರೆಟ್ ಎಂಬ ವಿದ್ವಾಂಸರು ನೃಪಕಾಮನು ಯುದ್ಧದಲ್ಲಿ ಯಾವುದೋ ಅಂಗವನ್ನು ಕಳೆದುಕೊಂಡವನಿರಬೇಕೆಂದು ಊಹಿಸಿ, 'ಮುಣ್ಡ' ಎಂಬ ಶಬ್ದಕ್ಕೆ 'ಅಂಗಹೀನ' (deprived of a limb) ಎಂಬ ಅರ್ಥವಿರಬೇಕೆಂಬ ನಿಲುವನ್ನು ತಳೆದಿದ್ದಾರೆ[13]. ಆದರೆ, ಮುಣ್ಡ ಎಂಬುದು ಒಂದು ತಿರಸ್ಕಾರ ಸೂಚಕ ಶಬ್ದವನ್ನಾಗಿ ಬಳಸಿದಂತೆ ತೋರುತ್ತದೆ. ಈಗಲೂ ಈ ಶಬ್ದದ ಕೆಲವು ರೂಪಾಂತರಗಳನ್ನು ಅವಾಚ್ಯ ಶಬ್ದಗಳನ್ನಾಗಿ ಬಳಸಲಾಗುತ್ತಿದೆ. ಈ 'ಮುಣ್ಡ ಪೊಯ್ಸಳ' ನೃಪಕಾಮನೇ ಎಂಬುದರಲ್ಲಿ ಸಂದೇಹವಿಲ್ಲ. ಒಟ್ಟಿನಲ್ಲಿ ರಾಜೇಂದ್ರ ಚೋಳನ ಶಾಸನಗಳಿಂದ ಹೊಯ್ಸಳರಿಗೂ ಕೊಂಗಾಳ್ವರಿಗೂ ನಡೆದ ತಿಕ್ಕಾಟದಲ್ಲಿ ತಾತ್ಕಾಲಿಕವಾಗಿ ರಾಜೇಂದ್ರ ಚೋಳನದೇ ಮೇಲುಗೈಯಾಗಿತ್ತೆಂದು ತಿಳಿದುಬರುತ್ತದೆ. ಚೋಳರ ಪರವಾಗಿ ಈ ಹೋರಾಟದಲ್ಲಿ ರಾಜೇಂದ್ರ ಭಾಗವಹಿಸಿ ಗೆಲವು ಪಡೆದಿರಬೇಕೆಂದು ರೈಸ್ ಭಾವಿಸುತ್ತಾರೆ[14].

ರಾಜೇಂದ್ರ ಚೋಳನ ಅನಂತರ ಸಮಗೆ ಸುಮಾರು ಮೂರು ದಶಕಗಳ ವರೆಗೆ ಕೊಂಗಾಳ್ವರ ಶಾಸನಗಳ ದೊರೆಯುವುದಿಲ್ಲ. ಕ್ರಿ. ಶ. 1059ರ ಮುಳ್ಳೂರಿನ ಶಾಸನವೊಂದರಿಂದ ರಾಜೇಂದ್ರಚೋಳ ತನ್ನ ತಂದೆ ಕಟ್ಟಿಸಿದ ಬಸದಿಗೆ ಕೊಟ್ಟ ದತ್ತಿಯ ವಿವರಗಳು ತಿಳಿದುಬರುತ್ತವೆ[15]. ಇಲ್ಲಿ ಹೇಳಿರುವ ರಾಜೇಂದ್ರಚೋಳನನ್ನು ನಾವು ಇಮ್ಮಡಿ ರಾಜೇಂದ್ರಚೋಳನೆಂದು ಪರಿಗಣಿಸಬಹುದು. ಇವನ ತಂದೆಯ ಹೆಸರು ಹೇಳಿಲ್ಲ ಆದರೆ ಕೊಂಗಾಳ್ವ ವಂಶಾವಳಿಯ ಸೂಕ್ಷ್ಮ ಅವಲೋಕನದಿಂದ ಈ ದೊರೆಯ ಹೆಸರು ರಾಜಾಧಿರಾಜನೆಂದು ಊಹಿಸಲವಕಾಶವಿದೆ.

ಇಮ್ಮಡಿ ರಾಜೇಂದ್ರ ಚೋಳನ ಅನಂತರದ ಕೊಂಗಾಳ್ವ ವಂಶಾವಳಿಯಲ್ಲಿ ಹೆಚ್ಚು ತೊಡಕಿಲ್ಲ. ಮುಳ್ಳೂರಿನ ಶಾಸನವೊಂದರಲ್ಲಿ ರಾಜಾಧಿರಾಜ ಕೊಂಗಾಳ್ವನ ತಾಯಿ ಪೋಚಬ್ಬರಸಿ ಎಂಬುವಳು ಬಸದಿಯೊಂದನ್ನು ಕಟ್ಟಿಸಿದುದಾಗಿ ತಿಳಿದುಬರುತ್ತದೆ[16]. ಅದೇ ಬಸದಿಯ ತಳಪಾಯಕಲ್ಲಿನ ಮೇಲಿರುವ ಇನ್ನೊಂದು ಶಾಸನದಿಂದ ರಾಜಾಧಿರಾಜ ಕೊಂಗಾಳ್ವ ರಾಜೇಂದ್ರಚೋಳ ಕೊಂಗಾಳ್ವನ ಮಗನೆಂದೂ ಈ 'ವಾಸಸ್ಥಾನ'ವನ್ನು ಗುಣಸೇನ ಪಂಡಿತನೆಂಬೊಬ್ಬ ಜೈನಗುರುವಿಗೆ ನೀಡಿದನೆಂದೂ ತಿಳಿದುಬರುತ್ತದೆ[17]. ಈ ಗುಣಸೇನ ಪಂಡಿತ ಪೋಚಬ್ಬರಸಿಯ ಗುರುವೆಂದು ಇನ್ನೊಂದು ಶಾಸನದಿಂದ ಗೊತ್ತಾಗುತ್ತದೆ[18]. ಆದ್ದರಿಂದ ಇಮ್ಮಡಿ ರಾಜಾಧಿರಾಜ ರಾಜೇಂದ್ರಚೋಳ ಮತ್ತು ಪೋಚಬ್ಬರಸಿಯ ಮಗ

---

11 *EC, V, Ag 76*

12 *EC, V, Introduction*, P. 7 ; *The Hoysalavaṃśa*, P. 27

13 *The Hoysalas*, P. 21

14 *Mysore Inscriptions*, P. 215 ; *M.E.R., 1915*, P. 14

15 EC, I, Cg 72 (35)

16 ಅದೇ Cg 68 37)

17 ಅದೇ Cg 69 (38)

18 ಅದೇ Cg 72(35)

ನೆಂದು ನಿರ್ಣಯಿಸಬಹುದು. 11ನೆಯ ಶತಮಾನದ ಶಾಸನವೊಂದರಲ್ಲಿ ಮುಳ್ಳೂರಿನ ಬಸದಿಯಲ್ಲಿ ರುಗ್ಮಿಣಿದೇವಿ ಬಹುಶಃ ವಿಗ್ರಹವೊಂದನ್ನು ಪ್ರತಿಷ್ಠಾಪಿಸಿದುದರ ಉಲ್ಲೇಖವಿದೆ[19]. ಸುಮಾರು ಮೂರು ಶತಮಾನಗಳ ಅನಂತರದ ಕ್ರಿ.ಶ. 1390ರ ಶಾಸನವೊಂದು ಈ ರುಗ್ಮಿಣಿದೇವಿಯ ಹೆಸರನ್ನು ರಾಜಾಧಿರಾಜ ಕೊಂಗಾಳ್ವನ ಜೊತೆಯಲ್ಲಿ ಪ್ರಸ್ತಾಪಿಸುತ್ತದೆ[20]. ಆದ್ದರಿಂದ ಈ ರುಗ್ಮಿಣಿದೇವಿ ರಾಜಾಧಿರಾಜ ಕೊಂಗಾಳ್ವನ ಪತ್ನಿ ಇರಬೇಕೆಂದು ಊಹಿಸಬಹುದು.

ಇಮ್ಮಡಿ ರಾಜಾಧಿರಾಜನ ತರುವಾಯ ಮುಮ್ಮಡಿ ರಾಜೇಂದ್ರ ಅಧಿಕಾರಕ್ಕೆ ಬಂದ. ಇವನು ರಾಜ್ಯವಾಳುತ್ತಿರುವಾಗ ಬಳ್ಳಹನಾಡ ಪಳವೆಗ್ಗಡೆ ಎಂಬವನು ಇಡಿಗೂರ್ಳೂರಿನ ದೇವಾಲಯವೊಂದನ್ನು ನಿರ್ಮಿಸಿ, ಅದಕ್ಕೆ ಕೆಲವು ಭೂಮಿಗಳನ್ನು ದತ್ತಿ ನೀಡಿದನೆಂದು ಕ್ರಿ.ಶ. 1066ರ ಶಾಸನವೊಂದು ತಿಳಿಸುತ್ತದೆ[21]. ದಾನವನ್ನು ಸ್ವೀಕರಿಸಿದವನು ಮಲೆಯಾಳಜೀಯ ನಲ್ಲೂರ್ವಳ್ಳಿ ನೀಲಕಂಠೀರವ ಭಟಾರ. 1070ಕ್ಕೆ ಸೇರುವ ಎರಡು ಶಾಸನಗಳು ಇವನ ಆಳ್ವಿಕೆಗೆ ಸಂಬಂಧಿಸಿದ್ದವು. ಹೊಸಹಳ್ಳಿ ಎಂಬ ಗ್ರಾಮದಲ್ಲಿ ದೊರೆತಿವೆ. ಮೊದಲನೆಯ ಶಾಸನ ರಾಜೇಂದ್ರ ಪೃಥುವಿ ಕೊಂಗಾಳ್ವ ಹೊಸಹಳ್ಳಿಯ ವೀರಸಿದ್ಧೇಶ್ವರ ದೇವರ ಪೂಜೆ ಪುನಸ್ಕಾರಗಳಿಗಾಗಿ ನೀಡಿದ ದತ್ತಿಯನ್ನು ಕುರಿತಾಗಿದೆ[22]. ಎರಡನೆಯದು ನೀರಗಾವುಣ್ಣನೆಂಬವನಿಂದ ರಾಜೇಂದ್ರ 'ಪೊನ್ನಱಿ ಕೊಟ್ಟು ಮಣ್ಣಱಿ ಕೊಣ್ಡು' ವೀರಸಿದ್ಧೇಶ್ವರ ಮಹಾದೇವರಿಗೆ ದಾನ ನೀಡಿದ ವಿಚಾರವನ್ನು ತಿಳಿಸುತ್ತದೆ.[23] ಈ ದೊರೆಯ ಪಟ್ಟಮಹಿಷಿ ಪದ್ಮಲದೇವಿ. ಈಕೆ ಕ್ರಿ.ಶ. 1077ರಲ್ಲಿ ಮರಣಹೊಂದಿದಳೆಂದು ತಿಳಿದುಬರುತ್ತದೆ[24]. ಕ್ರಿ.ಶ. 1079ರ ರಾಜೇಂದ್ರ ಚೋಳನ ಶಾಸನವೊಂದು ಕೊಂಗಾಳ್ವ ಮನೆತನದ ವಿವರಗಳನ್ನೊದಗಿಸುತ್ತದೆ[25]. ಇದರಲ್ಲಿ ಕೊಂಗಾಳ್ವರಿಗೆ ಸಮಧಿಗತ ಪಂಚಮಹಾಶಬ್ದ, ಮಹಾಮಂಡಳೇಶ್ವರ, ಒರೆಯೂರ್ಪುರವರಾಧೀಶ್ವರ, ಜಟಾಚೋಳಕುಳೋದಯಾಚಳಗಭಸ್ತಿಮಾಳಿ, ಸೂರ್ಯವಂಶಶಿಖಾಮಣಿ, ಶರಣಾಗತ ವಜ್ರಪಂಜರ ಇತ್ಯಾದಿ ಬಿರುದುಗಳಿರುವುದನ್ನು ಕಾಣುತ್ತೇವೆ. ಕೊಂಗಾಳ್ವರು ಚೋಳರನ್ನು ಹೇಗೆ ಹೆಸರಿನಲ್ಲಿ ಮಾತ್ರವಲ್ಲದೆ ಬಿರುದುಗಳಲ್ಲಿಯೂ ಅನುಕರಿಸುತ್ತಿದ್ದರೆಂಬುದು ಈ ಶಾಸನದಿಂದ ಸ್ಪಷ್ಟವಾಗುತ್ತದೆ. ಅದಟರಾದಿತ್ಯ ಕೊಂಗಾಳ್ವ, ಅದಟರಾದಿತ್ಯ ಚೈತ್ಯಾಲಯವನ್ನು ನಿರ್ಮಿಸಿ ಅದಕ್ಕೆ ನೀಡಿದ ದಾನ ವಿವರಗಳನ್ನು ಈ ಶಾಸನ ಒಳಗೊಂಡಿದೆ. ರಾಜೇಂದ್ರ ಚೋಳನೇ ಅದಟರಾದಿತ್ಯನೆಂದು ಹೇಳಬಹುದು. ಇದೇ ಶಾಸನ ಮುಂದೆ ರಾಜೇಂದ್ರ ಚೋಳ ಗಣ್ಡವಿಮುಕ್ತ ಸಿದ್ಧಾಂತದೇವರಿಗೆ ಬಸದಿಯನ್ನು ಮಾಡಿಸಿ ಭೂಮಿಯನ್ನು ಕೊಟ್ಟ ವಿವರಗಳನ್ನು ತಿಳಿಸುತ್ತದೆ. ಈ ಶಾಸನವನ್ನು ಬರೆದವನು ಚತುರ್ಭಾಷಾಲಿಪಿತ್ವಕ ವಿದ್ಯಾಧರ, ಸಪ್ತವಿಗ್ರಹಿ ಶ್ರೀಮನ್ನಕುಳಾರ್ಯನೆಂಬವನು. ಇವನು ಪಾಶುಪಥಪಂಥದ ಸ್ಥಾಪಕನಾದ ಲಕುಳನಾಗಿರಬಹುದೆ ಎಂದು ರೈಸರು ಸಂದೇಹಿಸುತ್ತಾರೆ. ಆದರೆ ಈ ಶಾಸನದ ನಕುಳಾರ್ಯ ಮತ್ತು ಪಾಶುಪತಪಂಥದ ಲಕುಳ ಒಬ್ಬನೆ ಎನ್ನಲು ಆಧಾರಗಳಿಲ್ಲ. 1079ಕ್ಕೆ ಸೇರುವ ರಾಜೇಂದ್ರನ ಇನ್ನೊಂದು ಶಾಸನದಲ್ಲಿ ತ್ರಿಭುವನಮಲ್ಲ ಕೊಂಗಾಳ್ವನಿಗೂ ಚಂಗಾಳ್ವರಿಗೂ ಹೋರಾಟ ನಡೆಯಿತೆಂದು ಗೊತ್ತಾಗುತ್ತದೆ. ಸಾಲಿಗ್ರಾಮ ಎಂಬ ಗ್ರಾಮದ ಮೇಲೆ ಚಂಗಾಳ್ವರು ಮುತ್ತಿಗೆ ಹಾಕಲು ತ್ರೈಲೋಕ್ಯಸೆಟ್ಟಿ ಮತ್ತು ಚೆಳುಕಸೆಟ್ಟಿ ಎಂಬವರು ಹೋರಾಡಿ ಮರಣಹೊಂದಿದರೆಂದು ತಿಳಿಸುತ್ತದೆ[26]. ತ್ರಿಭುವನ

[19] ಅದೇ (g70)

[20] ಅದೇ (g75 (39)

[21] EC, V, Ag 93

[22] EC, I, Cg 48 (49)

[23] ಅದೇ (g49 (50)

[24] ಅದೇ *Cg* 18 (43) ; *also ct*. 73 (36)

[25] *EC, V, Ag* 99

[26] *EC, IV*, yd. 98 ; also *cf. EC, I, Cg* 91 (61)

ಮಲ್ಲ, ಅದಟರಾದಿತ್ಯ ಮುಂತಾದವು ರಾಜೇಂದ್ರಚೋಳ ಕೊಂಗಾಳ್ವನ ಬಿರುದುಗಳಿರಬೇಕೆಂದು ಊಹಿಸಬಹುದು. ತ್ರಿಭುವನಮಲ್ಲ ಎಂಬುದು ಈ ಪ್ರದೇಶದಲ್ಲಿ ಚಾಲುಕ್ಯರ ಪ್ರಭಾವ ಹೆಚ್ಚಾಗಿದ್ದಾಗ ಕೊಂಗಾಳ್ವ ದೊರೆ ಚೋಳ ಚಾಲುಕ್ಯರಿಬ್ಬರೊಡನೆಯೂ ವಿರೋಧ ಕಟ್ಟಿಕೊಳ್ಳಲಿಚ್ಛಿಸದೆ 'ತ್ರಿಭುವನ ಮಲ್ಲ ಚೋಳ' ಎಂಬ ಹೆಸರನ್ನು ಧರಿಸಿರಬೇಕೆಂದು ಡೆರೆಟ್ ಅಭಿಪ್ರಾಯಪಡುತ್ತಾರೆ[27]. ಕ್ರಿ.ಶ. ಸು. 1080ಕ್ಕೆ ಸೇರಿಸಬಹುದಾದ ಶಾಸನವೊಂದರಲ್ಲಿ ಮಹಾಮಂಡಳೇಶ್ವರ ಅದಟರಾದಿತ್ಯ ತ್ರಿಭುವನ ಮಲ್ಲ ಚೋಳ ಕೊಂಗಾಳ್ವದೇವನ ಹೆಸರಿದೆ. ಅದಟರಾದಿತ್ಯನ ಸಾಮಂತನಾದ ಬೂವೆಯನಾಯಕ ಪದ್ಮನಂದಿದೇವ ಎಂಬ ಜೈನಯತಿಗೆ ನೀಡಿದ ಭೂದಾನವಿವರಗಳನ್ನು ಈ ಶಾಸನ ಒಳಗೊಂಡಿದೆ[28]. ರೈಸ್ ಸಹ ತ್ರಿಭುವನಮಲ್ಲ, ಅದಟರಾದಿತ್ಯ ಮುಂತಾದವು ರಾಜೇಂದ್ರನ ಹೆಸರುಗಳೇ ಇರಬೇಕೆಂದು ಅಭಿಪ್ರಾಯಪಡುತ್ತಾರೆ: ಅದಟರಾದಿತ್ಯ ಎಂಬುದನ್ನು ಜೈನಗುರು ಪ್ರಭಾಚಂದ್ರನನ್ನು ಪ್ರಶಂಸಿಸಲು ಬಳಸಿರಬೇಕೆಂದು ಹೇಳುತ್ತಾರೆ[29]. ಕ್ರಿ.ಶ. 1091ಕ್ಕೆ ಸೇರುವ ಇವನ ಕಾಲದ ಶಾಸನವೊಂದರಲ್ಲಿ ಮಾಕಬ್ಬೆ ಎಂಬವಳು ದೊಡ್ಡಬೆಮ್ಮತ್ತಿಯ ಆದಿತ್ಯದೇವರ ಅರ್ಚನೆಗೆ ದತ್ತಿಯನ್ನು ನೀಡಿದ ಉಲ್ಲೇಖ ಕಂಡುಬರುತ್ತದೆ[30]. ಕ್ರಿ.ಶ. 1094 ಮತ್ತು 1100ರ ಎರಡು ಶಾಸನಗಳು ರಾಜೇಂದ್ರ ಪೃಥುವೀ ಕೊಂಗಾಳ್ವದೇವನನ್ನು ಉಲ್ಲೇಖಿಸುತ್ತವೆ[31]. 1105ರ ಶಾಸನವೊಂದರಿಂದ ಚಂಗಾಳ್ವರು ಸಾಲಿ ಗ್ರಾಮದ ಮೇಲೆ ಇನ್ನೊಮ್ಮೆ ಆಕ್ರಮಣ ನಡೆಸಿದರೆಂದು ತಿಳಿದುಬರುತ್ತದೆ. ಈ ಹೋರಾಟದಲ್ಲಿ ತ್ರೈಲೋಕ್ಯ ಸೆಟ್ಟಿಯ ಮಗ ಮಾಸಯ್ಯ ಕಾದಿ ಸತ್ತ[32]. ಹೀಗೆ ಸಾಲಿಗ್ರಾಮದ ಮೇಲೆ ಚಂಗಾಳ್ವರು ಎರಡು ಬಾರಿ ಆಕ್ರಮಣ ಮಾಡಿದರು. ಕೊಂಗಾಳ್ವರ, ಇವರ ದಾಳಿಯನ್ನು ಸಮರ್ಥರೀತಿಯಲ್ಲಿ ಎದುರಿಸಿದರೆಂದು ಹೇಳಬಹುದು. ಈ ಸಾಲಿಗ್ರಾಮದಲ್ಲಿ ದೊರೆತಿರುವ ಎರಡು ಶಾಸನಗಳಲ್ಲೂ ಸೌರಮಾನ ಮಾಸಗಳ ಉಲ್ಲೇಖವಿರುವುದು ಗಮನಾರ್ಹವಾಗಿದೆ.

ಮುಮ್ಮಡಿ ರಾಜೇಂದ್ರನ ತರುವಾಯ ದುದ್ಧಮಲ್ಲನೆಂಬವನು ಅಧಿಕಾರಕ್ಕೆ ಬಂದಿರಬೇಕೆಂದು ಊಹಿಸಬಹುದು. ಹೆಣ್ಣೆಗಡಂಗದಲ್ಲಿ ಇವನು ಬೀಡುಬಿಟ್ಟಿದ್ದಾಗ ಜಿನಾಲಯವೊಂದರ ನಿರ್ಮಾಣ ಮತ್ತು ಜೀರ್ಣೋದ್ಧಾರಕ್ಕಾಗಿ ಪ್ರಭಾಚಂದ್ರದೇವ ಎಂಬ ಜೈನಯತಿಗೆ ಅಯ್ಯುವಳ್ಳಿ ಗ್ರಾಮವನ್ನು ದಾನ ಮಾಡಿದನೆಂದು ಶಾಸನವೊಂದರಿಂದ ತಿಳಿದುಬರುತ್ತದೆ[33]. ಸೋಮವಾರ ಎಂಬಲ್ಲಿ ದೊರೆತ ಇನ್ನೊಂದು ಶಾಸನ ದುದ್ಧಮಲ್ಲನ ಬಾಣಸಿ ಜಕ್ಕಯ್ಯನೆಂಬವನು ಜಿನಾಲಯವೊಂದನ್ನು ಮಾಡಿಸಿದುದನ್ನು ಉಲ್ಲೇಖಿಸುತ್ತದೆ[34]. ಈ ಎರಡೂ ಶಾಸನಗಳಲ್ಲಿ ಮನೆತನ ಹೇಳಿಲ್ಲವಾದರೂ ಇವನು ಕೊಂಗಾಳ್ವ ದೊರೆಯೆಂದು ಊಹಿಸಲಾಗಿದೆ. ಈ ದುದ್ಧಮಲ್ಲನೇ ವೀರಕೊಂಗಾಳ್ವದೇವನಿರಬೇಕು. ಮಹಾ ಮಂಡಲೇಶ್ವರ ವೀರಕೊಂಗಾಳ್ವ ದೇವ ಪ್ರಭಾಚಂದ್ರ ಸಿದ್ಧಾಂತದೇವನ 'ಗುಡ್ಡ'ನಾಗಿದ್ದ. ಇವನು ಸತ್ಯವಾಕ್ಯ ಜಿನಾಲಯವನ್ನು ನಿರ್ಮಿಸಿ ಹೆಣ್ಣೆಗಡಲು ಗ್ರಾಮವನ್ನು ಪ್ರಭಾಚಂದ್ರನಿಗೆ ದಾನವಿತ್ತ[35]. ಹೆಣ್ಣೆಗಡಂಗ ಮತ್ತು ಹೆಣ್ಣೆಗಡಲು ಒಂದೇ ಗ್ರಾಮವನ್ನು ಸೂಚಿಸುತ್ತವೆ. ದಾನವನ್ನು ಸ್ವೀಕರಿಸಿದ ಪ್ರಭಾಚಂದ್ರ ಒಬ್ಬ ವ್ಯಕ್ತಿಯೇ. ಆದ್ದರಿಂದ ದುದ್ಧಮಲ್ಲ ಮತ್ತು ವೀರಕೊಂಗಾಳ್ವ ಒಬ್ಬ ವ್ಯಕ್ತಿಯನ್ನೆ

---

[27] *Thc Hoysalas*, P. 33
[28] *EC, V, HN* 16
[29] ಅದೇ, Intrcduction, P. 7
[30] *EC, V, Ag* 94
[31] ಅದೇ, *Ag* 95 ಮತ್ತು *Mj* 59
[32] *EC, IV, yd* 99
[33] *EC, XV, HN* 61
[34] *EC, V, Ag* 97
[35] *EC, XV, HN* 26, 27

ಸೂಚಿಸುತ್ತವೆಂದು ಹೇಳಬಹುದು. ಶಾಸನದಲ್ಲಿ ಕಾಲ ಹೇಳಿಲ್ಲವಾದರೂ ಶ್ರವಣಬೆಳಗೊಳದ ಶಾಸನವೊಂದರಲ್ಲಿ ಈ ಪ್ರಭಾಚಂದ್ರ ಉಕ್ತವಾಗಿರುವುದರಿಂದ[36], ಅದರ ಆಧಾರದ ಮೇಲೆ ಈ ಶಾಸನದ ಕಾಲ ಕ್ರಿ.ಶ. ಸು. 1120 ಎಂದು ಹೇಳಬಹುದು.

1171 ಮತ್ತು 1177ಕ್ಕೆ ಸೇರುವ. ತ್ರಿಭುವನಮಲ್ಲ ವೀರಮದ್ದ ಕೊಂಗಾಳ್ವದೇವನ ಎರಡು ಶಾಸನಗಳು ನಮಗೆ ಲಭ್ಯವಾಗಿವೆ. ಕೊಂಗಾಳ್ವದೊರೆ ಮೊಳತೆಯ ಬೀಡಿನಿಂದ ರಾಜ್ಯವಾಳುತ್ತಿರುವಾಗ ಹೊಯ್ಸಳರು ಮೊಳತೆಯನ್ನು ಮುತ್ತಿದರೆಂದು ಮೊದಲನೆಯ ಶಾಸನ ತಿಳಿಸುತ್ತದೆ.[37]. ಇಲ್ಲಿ ನಡೆದ ಹೋರಾಟದಲ್ಲಿ ತಮ್ಮಯಿರುದ್ರ ಎಂಬ ವೀರ ಕೊಂಗಾಳ್ವದೊರೆಯ ಆಜ್ಞಾನುಸಾರವಾಗಿ ಶತ್ರುಕುದುರೆಗಳನ್ನು ಕೊಂದು ಸ್ವರ್ಗಸ್ಥನಾದ. ಅವನ ಈ ಕಾರ್ಯಕ್ಕಾಗಿ ಅವನಿಗೆ ಕೋಟೆಹಾಳು ಎಂಬ ಗ್ರಾಮವನ್ನು ನೀಡಲಾಯಿತು. ಎರಡನೆಯ ಶಾಸನದಲ್ಲಿ ವೀರಚೋಳಕೊಂಗಾಳ್ವ ರಾಜ್ಯವಾಳುತ್ತಿರುವಾಗ ಇಪ್ಪೆಯೂರ ಈಶ್ವರದೇವಾಲಯಕ್ಕೆ ಕೊಂಗಳಸೆಟ್ಟಿ ಮತ್ತಿತರರು ನೀಡಿದ ದತ್ತಿಯ ಉಲ್ಲೇಖವಿದೆ[38]. ವೀರಚೋಳಕೊಂಗಾಳ್ವನೇ ನಮಗೆ ತಿಳಿದುಬರುವ ಕೊನೆಯ ಕೊಂಗಾಳ್ವದೊರೆ.

ಕೊಂಗಾಳ್ವ ವಂಶಾವಳಿಯನ್ನು ಹೀಗೆ ರೂಪಿಸಬಹುದು:

ಮನಿಜ (ತಿಳಿದಿರುವ ತೇದಿ 1004–05)

|

ಬಡಿವ(ಕಾಡವ?)(ಕ್ರಿ 1020–21)

|

ರಾಜೇಂದ್ರ ಪೃಥುವೀ ಮಹಾರಾಜ I (1022–26)
(ರಾಜೇಂದ್ರ ಚೋಳ ಕೊಂಗಾಳ್ವ)

|

(ರಾಜಾಧಿರಾಜ I)
ರಾಜೇಂದ್ರ ಚೋಳ ಕೊಂಗಾಳ್ವ (1059) (ಪತ್ನಿ–ಪೋಚಬ್ಬರಸಿ)
ರಾಜಾಧಿರಾಜ II (ಪತ್ನಿ ರುಗ್ಮಿಣಿದೇವಿ)

|

ರಾಜೇಂದ್ರ ಪೃಥುವೀಕೊಂಗಾಳ್ವ (1066–1105)
(ಅದಟರಾದಿತ್ಯ. ತ್ರಿಭುವನಮಲ್ಲ ಚೋಳ) (ಪತ್ನಿ–ಪೊಚ್ಚಲದೇವಿ)

|

ಮದ್ದಮಲ್ಲ ಸುಮಾರು (1120) (ವೀರ ಕೊಂಗಾಳ್ವದೇವ)

|

ವೀರಮದ್ದ ಕೊಂಗಾಳ್ವ (1171–77) (ತ್ರಿಭುವನಮಲ್ಲ: ವೀರಚೋಳ)

ಕೊಂಗಾಳ್ವ ಅರಸರು ತಮ್ಮ ಹೆಸರು ಹಾಗೂ ಬಿರುದಾವಳಿಗಳಲ್ಲಿ ಚೋಳರನ್ನು ಅನುಕರಿಸಿದರಾದರೂ ಧರ್ಮದಲ್ಲಿ ಮಾತ್ರ ಜೈನಮತಾನುಯಾಯಿಗಳಾಗಿದ್ದರೆಂಬುದು ಗಮನಾರ್ಹ ಸಂಗತಿ. 1ನೆಯ ರಾಜಾಧಿರಾಜ ಮುಳ್ಳೂರಿನಲ್ಲಿ ಕಟ್ಟಿಸಿದ ಬಸದಿಗೆ ಅವನ ಮಗ 2ನೆಯ ರಾಜೇಂದ್ರ ಚೋಳ ದತ್ತಿ ನೀಡಿದುದನ್ನು ಈ ಹಿಂದೆಯೇ ಗಮನಿಸಿದ್ದೇವೆ. ಅದಟರಾದಿತ್ಯ ಅದಟರಾದಿತ್ಯಚೈತ್ಯಾಲಯವನ್ನೂ, ಮದ್ದಮಲ್ಲ ಸತ್ಯವಾಕ್ಯ ಜಿನಾಲಯವನ್ನೂ ನಿರ್ಮಿಸಿದರು. ಆದರೆ, ಕೊಂಗಾಳ್ವರು ಇತರ

[36] *EC, II, SB* 162 (132), Revised edition
[37] *EC, XV, HN* 91
[38] ಅದೇ *HN* 90

ಧರ್ಮಗಳಿಗೂ ಆಶ್ರಯ ನೀಡಿದ್ದರೆಂಬುದು 3ನೆಯ ರಾಜೇಂದ್ರ ಪೃಥುವೀ ಕೊಂಗಾಳ್ವ ಹೊಸಪಳ್ಳಿಯ ವೀರಸಿದ್ಧೇಶ್ವರ ದೇವಾಲಯಕ್ಕೆ ನೀಡಿದ ದತ್ತಿಗಳಿಂದ ವಿದಿತವಾಗುತ್ತದೆ.

ಕೊಂಗಾಳ್ವರ ಈ ಧಾರ್ಮಿಕ ಕಾರ್ಯಗಳಿಗೆ ಪ್ರೇರಣೆಯನ್ನುಂಟುಮಾಡಿದವನು ಗುಣಸೇನ ಪಂಡಿತನೆಂಬೊಬ್ಬ ಜೈನಗುರು. ಈತ ದ್ರವಿಳ ಅಥವಾ ತಿವುಳಿಗಣ, ನಂದಿಸಂಘ. ಅರುಂಗಳಾನ್ವಯಕ್ಕೆ ಸೇರಿದವನು[39]. ಪುಷ್ಪಸೇನ ಸಿದ್ಧಾಂತದೇವನ ಶಿಷ್ಯ[40]. ಕ್ರಿ.ಶ. 1061ರ ಹೊತ್ತಿಗೆ ಮುಳ್ಳೂರಿನ ಬಸದಿಗಳೆಲ್ಲ ಇವನ ಸ್ವಾಮಿತ್ವಕ್ಕೊಳಪಟ್ಟುವು. ಹೊಯ್ಸಳ ಅರಸ ವಿನಯಾದಿತ್ಯನಿಗೆ ಗುರುವಾದ ಇವನು ಸೊಸೆವೂರಿನಲ್ಲಿ ಕಟ್ಟಿದ ಬಸದಿಯ ಸಂರಕ್ಷಣೆಗೆಂದು ಪರಿಯಳದೇವಿಯಿಂದ ದತ್ತಿಯೊಂದನ್ನು ಪಡೆದನೆಂದು ನಮಗೆ ತಿಳಿದುಬರುತ್ತದೆ[41]. ಇವನು ಹೊಯ್ಸಳ ಎರೆಯಂಗನ ಪತ್ನಿಯಾದ ಏಚಲ ದೇವಿಗೂ ಗುರುವಾಗಿದ್ದ[42]. ಕ್ರಿ.ಶ. 1064ರಲ್ಲಿ ಮುಳ್ಳೂರಿನಲ್ಲಿ ಇವನು ಸಮಾಧಿಸ್ಥನಾದ. ಮುಳ್ಳೂರಿನ ಶಾಸನವೊಂದು ಈತನನ್ನು "ಪರಮಾರ್ಥನ್ಯಾಯಿದಿರತ್ನತ್ರಯ ಸಕಳಮಹಾಶಬ್ದ ಶಾಸ್ತ್ರಾಗಮಾದಿ ಸ್ಥಿರ ಷಟ್ತರ್ಕ ಪ್ರವೀಣರ್" ಎಂದು ವರ್ಣಿಸುತ್ತದೆ[43]. ಶ್ರವಣಬೆಳಗೊಳದ ಶಾಸನವೊಂದರಲ್ಲಿ ಇವನ ಉಲ್ಲೇಖ ದೊರೆಯುತ್ತದೆ[44].

ಕೊಂಗಾಳ್ವ ಶಾಸನಗಳಲ್ಲಿ ಕಂಡುಬರುವ ಇನ್ನೊಬ್ಬ ಜೈನಗುರು ಪ್ರಭಾಚಂದ್ರ ಸಿದ್ಧಾಂತದೇವ. ಇವನು ಮೇಘಚಂದ್ರ ತ್ರೈವಿದ್ಯ ದೇವನ ಶಿಷ್ಯ. ಹೊಯ್ಸಳ ವಿಷ್ಣುವರ್ಧನನ ಪಟ್ಟಮಹಿಷಿ ಶಾಂತಲ ದೇವಿ ಇವನ ಶಿಷ್ಯಳಾಗಿದ್ದಳೆಂದು ನಮಗೆ ತಿಳಿದುಬರುತ್ತದೆ[45]. ಕೊಂಗಾಳ್ವದೊರೆ ದುದ್ಧಮಲ್ಲ ಅಥವಾ ವೀರಕೊಂಗಾಳ್ವದೇವನೂ ಇವನ ಶಿಷ್ಯನಾಗಿದ್ದ. ಈ ಪ್ರಭಾಚಂದ್ರ ಮೂಲಸಂಘ, ದೇಸಿಗಗಣ ಮತ್ತು ಪುಸ್ತಕಗಚ್ಛಕ್ಕೆ ಸೇರಿದವನು. ಗುಣಸೇನ. ಪ್ರಭಾಚಂದ್ರರಲ್ಲದೆ ಗಣ್ಡವಿಮುಕ್ತ ಸಿದ್ಧಾಂತದೇವ, ಕನಕಸೇನ. ಪದ್ಮನಂದಿ ಹಾಗೂ ಅಮಳಚಂದ್ರ ಮುಂತಾದವರೂ ಕೊಂಗಾಳ್ವ ದೊರೆಗಳೊಡನೆ ಸಂಪರ್ಕ ಹೊಂದಿದ್ದರು.

ಮುಳ್ಳೂರು. ಕೊಂಗಾಳ್ವರು ನಿರ್ಮಿಸಿದ ಬಸದಿಗಳನ್ನೊಳಗೊಂಡ ಒಂದು ಜೈನಕೇಂದ್ರ. ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನಲ್ಲಿದೆ. ಇಲ್ಲಿ ಪಾರ್ಶ್ವನಾಥ, ಚಂದ್ರನಾಥ ಮತ್ತು ಶಾಂತೀಶ್ವರ ಎಂಬ ಹೆಸರಿನ ಮೂರು ಬಸದಿಗಳಿವೆ. ಪಾರ್ಶ್ವನಾಥ ಬಸದಿಯನ್ನು ಇಮ್ಮಡಿ ರಾಜೇಂದ್ರಚೋಳ ಕೊಂಗಾಳ್ವನ ಪತ್ನಿಯಾದ ಪೋಚಬ್ಬರಸಿ ಕಟ್ಟಿಸಿದಳು. ಚಂದ್ರನಾಥ ಬಸದಿಯನ್ನು ಇಮ್ಮಡಿ ರಾಜಾಧಿ ರಾಜ ತನ್ನ ತಾಯಿ ಪೋಚಬ್ಬರಸಿಯ ಪುಣ್ಯಾರ್ಥವಾಗಿ ಕಟ್ಟಿಸಿದ. ಆದ್ದರಿಂದ ಶಾಂತಿನಾಥ ಬಸದಿ ಯನ್ನು ಒಂದನೆಯ ರಾಜಾಧಿರಾಜ ಕಟ್ಟಿಸಿರಬೇಕೆಂದು ಊಹಿಸಬಹುದು. ಈ ಬಸದಿಯಲ್ಲಿರುವ ಶಾಂತೀಶ್ವರ ವಿಗ್ರಹದ ಪೀಠದ ಮೇಲಿನ ಶಾಸನದಿಂದ. ಕ್ರಿ.ಶ. 12ನೆಯ ಶತಮಾನದ ಮಧ್ಯಭಾಗದಲ್ಲಿ ಮಲ್ಲಿಷೇಣದೇವ ಎಂಬ ಜೈನಯತಿ ಈ ಬಸದಿಯನ್ನು ಜೀರ್ಣೋದ್ಧಾರ ಮಾಡಿಸಿದನೆಂದು ತಿಳಿದು ಬರುತ್ತದೆ[46]. ಸೋಮವಾರ ಗ್ರಾಮದಲ್ಲಿರುವ ಆದಟರಾದಿತ್ಯ ಚೈತ್ಯಾಲಯ ಈಗ ಪಾಳು ಬಿದ್ದಿದೆ; ಜಿನವಿಗ್ರಹಗಳು ಬಸದಿಯ ಹೊರಗಡೆ ಬಿದ್ದಿವೆ. ಈಗ ಬಸದಿ ಬಸವಣ್ಣ ದೇವಾಲಯವಾಗಿ ಪರಿವರ್ತಿತ ವಾಗಿದೆ. ಸತ್ಯವಾಕ್ಯ ಜಿನಾಲಯ ನಿರ್ಮಿಸಿದುದರ ಉಲ್ಲೇಖವಿರುವ ಶಾಸನ ಈಗ ಹೊಳೆನರಸೀಪುರದ ಲಕ್ಷ್ಮೀನರಸಿಂಹದೇವಸ್ಥಾನದ ಪ್ರಾಕಾರದಲ್ಲಿರುವ ರಾಮಾನುಜಾಚಾರ್ಯರ ಗುಡಿಯ ಮುಂದಣ

---

[39] EC, I, Cg 71 (34)

[40] ಅದೇ Cg 78 (41)

[41] EC, VI, Mg 13

[42] EC, V, Ag 98

[43] EC, I, Cg 71 (34)

[44] EC, II, (SB) 77 (67)

[45] ಅದೇ (SB), 161, (131), 162, (132), etc.

[46] EC, I, Cg 77

ಕೈಸಾಲೆ ಕಂಬವಾಗಿದೆ. ಅದರೆ, ಮುಳ್ಳೂರಿನಲ್ಲಿರುವ ಜಿನಬಿಂಬಗಳು ಕೊಂಗಾಳ್ವ ಕಾಲದ ಕಲಾನೈಪುಣ್ಯಕ್ಕೆ ಇಂದಿಗೂ ನಿದರ್ಶನಗಳಾಗಿ ಉಳಿದುಬಂದಿವೆ.

ಕೊಂಗಾಳ್ವರು ಮತ್ತು ಹೊಯ್ಸಳರು

ಕೊಂಗಾಳ್ವರಿಗೂ ಹೊಯ್ಸಳರಿಗೂ ಇದ್ದ ರಾಜಕೀಯ ಸಂಬಂಧವನ್ನು ಈ ಹಿಂದೆ ಪರಿಶೀಲಿಸಿದ್ದೇವೆ. ಒಂದನೆಯ ರಾಜೇಂದ್ರ ಹಾಗೂ ಕೊನೆಯ ಕೊಂಗಾಳ್ವ ದೊರೆ ವೀರಚೋಳನ ಕಾಲದಲ್ಲಿ ಹೊಯ್ಸಳರಿಗೂ ಕೊಂಗಾಳ್ವರಿಗೂ ಹೋರಾಟಗಳು ನಡೆದವು. ಹೊಯ್ಸಳರ ಶಾಸನಗಳಲ್ಲೂ ಕೊಂಗಾಳ್ವರ ಉಲ್ಲೇಖ ಕಂಡುಬರುತ್ತದೆ. ಕ್ರಿ.ಶ. 1130ರ ಶಾಸನವೊಂದು ಹೊಯ್ಸಳ ವಿಷ್ಣುವರ್ಧನನನ್ನು 'ಕೊಂಗಾಳ್ವ ನೃಪಾಳವನದಹನದಾವಾನಳನುಂ' ಎಂದು ವರ್ಣಿಸುತ್ತದೆ[47]. ಇಮ್ಮಡಿ ಬಲ್ಲಾಳನ ಒಂದು ಶಾಸನವಲ್ಲಿ 'ಕೊಂಗಾಳ್ವ ಚಂಗಾಳ್ವನಾದಿಯಾದ ಮಣೆಯ ಮಂಡಳಿಕರುಂ' ಎಂದು ಹೇಳಿದೆ[40]. ಕೊಂಗಾಳ್ವರು ಹೊಯ್ಸಳರ ಸಾಮಂತರಾಗಿ ರಾಜ್ಯವಾಳಿದರೆಂಬುದನ್ನು ಇದು ಸೂಚಿಸುತ್ತದೆ. ಹೊಯ್ಸಳಶಾಸನವೊಂದು ಭೂದಾನದ ಸೀಮೆಯನ್ನು ವಿವರಿಸುತ್ತ ಕೊಂಗಾಳ್ವನ ಕೆಱೆ ಎಂಬ ಕೆರೆಯನ್ನು ಉಲ್ಲೇಖಿಸುತ್ತದೆ.

ದೆರೆಟ್ ಎಂಬ ವಿದ್ವಾಂಸರು ವಿಷ್ಣುವರ್ಧನನ ಪತ್ನಿ ಚಂದಲಾದೇವಿ ಕೊಂಗಾಳ್ವ ರಾಜಪುತ್ರಿ ಇರಬೇಕೆಂದು, ತನ್ಮೂಲಕ. ಕ್ರಿ.ಶ. 1115-16ರಲ್ಲಿ ವಿಷ್ಣುವರ್ಧನ ಕೊಂಗಾಳ್ವರೊಂದಿಗೆ ಮೈತ್ರಿಯನ್ನೇರ್ಪಡಿಸಿಕೊಂಡನೆಂದು ಅಭಿಪ್ರಾಯಪಡುತ್ತಾರೆ.[50] ಆದರೆ ಅವರ ಈ ಅಭಿಪ್ರಾಯವನ್ನು ಸಮರ್ಥಿಸಲು ಆಧಾರಗಳು ದೊರೆಯುವುದಿಲ್ಲ. ಕ್ರಿ.ಶ. 1175ರ ವೀರಚೋಳ ಕೊಂಗಾಳ್ವನ ಶಾಸನವೊಂದರಲ್ಲಿ ಅವನ ತಾಯಿ ಪದುಮಲದೇವಿ. ಸೋಮಲದೇವಿ ಮುತ್ತಿತರರ ಎದುರಿನಲ್ಲಿ ದಾನ ನೀಡಿದುದರ ಉಲ್ಲೇಖವಿದೆ[51]. ಈ ವೇಳೆಗೆ ಕೊಂಗಾಳ್ವರು ಹೊಯ್ಸಳರ ಸಾಮಂತರಾಗಿದ್ದರೆಂದು ಹೇಳಬಹುದು. ಹೊಯ್ಸಳ ಇಮ್ಮಡಿ ಬಲ್ಲಾಳನ ಪತ್ನಿ ಮತ್ತು ಪುತ್ರಿಯರ ಹೆಸರೂ ಕ್ರಮವಾಗಿ ಪದುಮಲದೇವಿ ಮತ್ತು ಸೋಮಲದೇವಿ ಎಂದಿದೆ. ಕ್ರಿ.ಶ. 1171ರಲ್ಲಿ ದೋಳತೆಯ ಬೀಡಿನ ಮೇಲೆ ನಡೆಸಿದ ಆಕ್ರಮಣದಲ್ಲಿ ಬಲ್ಲಾಳ ವಿಜಯಶಾಲಿಯಾದ. ಅಲ್ಲಿಂದ ಮುಂದೆ ವೀರಚೋಳ ಹೊಯ್ಸಳರ ಸಾಮಂತನಾಗಿದ್ದು, ಬಲ್ಲಾಳನ ಪತ್ನಿ ಮತ್ತು ಪುತ್ರಿಯರ ಸಮ್ಮುಖದಲ್ಲಿ ಈ ದಾನವನ್ನು ನೀಡಿರಬೇಕೆಂದು ಕೊಪೆಲೊ ಅಭಿಪ್ರಾಯಪಡುತ್ತಾರೆ.[52] ಅವರ ಈ ಅಭಿಪ್ರಾಯ ಈ ಮೇಲಿನ ಶಾಸನದಲ್ಲಿ ಉಕ್ತರಾದವರು ಬಲ್ಲಾಳನ ಪತ್ನಿ ಪುತ್ರಿಯರೆ ಎಂದು ಹೇಳುವ ರೈಸ್‌ರವರ ಅಭಿಪ್ರಾಯದ ಆಧಾರದ ಮೇಲೆ ನಿಂತಿದೆ. ಆದರೆ. ಈ ಅಭಿಪ್ರಾಯಕ್ಕೆ ಆಧಾರವಿಲ್ಲವೆಂಬ ವಾದವಿದೆ. ಕೊಂಗಾಳ್ವರ ಗುರುವಾದ ಗುಣಸೇನ ಪಂಡಿತ ಹೊಯ್ಸಳರಿಗೂ ಗುರುವಾಗಿದ್ದ ಎಂಬುದನ್ನು ಗಮನಿಸಿದ್ದೇವೆ. ಹಾಗೆಯೇ ಪ್ರಭಾಚಂದ್ರ ಹೊಯ್ಸಳ ವಿಷ್ಣುವರ್ಧನನ ಪತ್ನಿ ಶಾಂತಲದೇವಿ ಮತ್ತು ದುದ್ದಮಲ್ಲ ಅಥವಾ ವೀರಕೊಂಗಾಳ್ವ

---

[47] *EC, V, Bl* 86

[48] *EC, VI, Cm* 137

[49] *EC, V, Bl* 140

[50] *The Hoysalas*, P. 48

[51] *EC, I, Cg* 87 (33)

[52] *The Hoysala Vamśa*, P. 119 ಮತ್ತು 137

[53] *EC, I, Cg* 81 (43)

ಕೊಂಗಾಳ್ವ ಶಾಸನಗಳಲ್ಲಿ ಅಡವಲ, ಅಡವಲಗದ್ಯಾಣ ಎಂಬ ಶಬ್ದಗಳು ಕಂಡುಬರುತ್ತವೆ. (EC, I, cg 48(49). 49(50). ಇವಕ್ಕೆ ಅರ್ಥವೇನೆಂದು ತಿಳಿಯದು. ಚೋಳರ ಸುಧಾರಿತ ಚಿನ್ನದ ನಾಣ್ಯವನ್ನು ಇದು ಸೂಚಿಸಬಹುದೆಂದು ಪ್ರೊ. ನೀಲಕಂಠಶಾಸ್ತ್ರಿಗಳು ತಿಳಿಸುತ್ತಾರೆ. The colas, p. 68

ದೇವರಿಷ್ಟರಿಗೂ ಗುರುವಾಗಿದ್ದ. ಹೊಯ್ಸಳರ ಗರುಡ ಸಂಪ್ರದಾಯ ಕೊಂಗಾಳ್ವರಲ್ಲೂ ಪ್ರಚಲಿತವಿದ್ದುದನ್ನು ಕಾಣುತ್ತೇವೆ.[53]. ಆದ್ದರಿಂದ ಈ ಎರಡೂ ಮನೆತನಗಳ ನಡುವೆ ಹಿಂದಿನಿಂದಲೇ ಸಂಬಂಧವಿದ್ದಿರಬಹುದು. ಆಗಾಗ್ಗೆ ಎರಡೂ ಮನೆತನಗಳ ನಡುವೆ ವೈಮನಸ್ಸಿನಿಂದಾಗಿ ತಿಕ್ಕಾಟಗಳು ನಡೆದಿರಬಹುದು. ಈಗ ದೊರೆಯುವ ಆಧಾರಗಳ ಮೇಲೆ ಈ ಊಹೆ ಮಾಡಬಹುದೇ ಹೊರತು, ಪ್ರಮಾಣೀಭೂತವಾಗಿ ತೋರಿಸಲು ಸಾಧ್ಯವಿಲ್ಲವೆನ್ನಬಹುದು.

ಕರ್ಣಾಟಕದ ಇತಿಹಾಸವನ್ನು ಸೂಕ್ಷ್ಮವಾಗಿ ಪರಿಶೀಲಿಸಿ ನೋಡಿದಾಗ ಒಂದಂಶವು ಸ್ಪಷ್ಟವಾಗಿ ಮನಸ್ಸಿಗೆ ಗೋಚರವಾಗುತ್ತದೆ. ಕದಂಬರು, ರಾಷ್ಟ್ರಕೂಟರು, ಚಾಳುಕ್ಯರು, ಗಂಗರು, ಹೊಯ್ಸಳರು ಇವರೆಲ್ಲ ಗೋದಾವರಿಯಿಂದ ಉತ್ತರಕ್ಕಿರುವ ಪ್ರದೇಶಗಳ ರಾಜಮಹಾರಾಜರೊಂದಿಗೂ, ಕಾವೇರಿಯಿಂದ ದಕ್ಷಿಣಕ್ಕಿರುವ ಪ್ರದೇಶಗಳ ಪಲ್ಲವ, ಚೋಳ, ಪಾಂಡ್ಯ, ಚೇರ ರಾಜಮಹಾರಾಜರೊಂದಿಗೂ ಹೋರಾಡಬೇಕಾಗಿತ್ತು. ಉತ್ತರ ಭಾರತದ ಮೇಲೆ ತಮ್ಮ ಪ್ರಭಾವ ತೋರಿಸಬೇಕೆಂಬ ಆಶೆ ಕರ್ಣಾಟಕದ ರಾಜಮನೆತನಗಳವರಿಗಿರಲಿಲ್ಲವಾದರೂ 'ದಕ್ಷಿಣಾಪಥೇಶ್ವರ'ರಾಗಬೇಕೆಂಬ ಆಶೆಯು ಅವರಿಗೆ ಪ್ರಬಲವಾಗಿತ್ತೆಂಬುದರಲ್ಲಿ ಸಂಶಯವೇ ಇಲ್ಲ. ಈ ಆಶೆಯನ್ನು ನೆರವೇರಿಸಿಕೊಳ್ಳುವುದರಲ್ಲಿ ತಕ್ಕಮಟ್ಟಿಗೆ ಅವರು ಕೃತಾರ್ಥರೂ ಆದರೆಂಬುದನ್ನು ದಕ್ಷಿಣ ಭಾರತದ ಇತಿಹಾಸವು ಸಾರುತ್ತಿದೆ. ವಿಜಯನಗರ ಸಾಮ್ರಾಜ್ಯ ಇದಕ್ಕೆ ಸಾಕ್ಷಿಯಾಗಿದೆ. ದಕ್ಷಿಣ ಭಾರತದಲ್ಲಿ ಮೊಟ್ಟಮೊದಲು ಮುಸಲ್ಮಾನರನ್ನೆದುರಿಸಿದ ಹೊಯ್ಸಳ ಸಾಮ್ರಾಜ್ಯ ಇದಕೆ ಸಾಕ್ಷಿಯಾಗಿದೆ. ದಕ್ಷಿಣ ಭಾರತದ ರಾಜ್ಯಸಾಮ್ರಾಜ್ಯಗಳ ಅವತಾರ, ವರ್ಧನ, ರಾಜಮನೆತನಗಳ ಉದ್ಧಾರ, ಪತನ, ಪುನರುಜ್ಜೀವನ ಇವೆಲ್ಲ ಸ್ವಲ್ಪ ಹೆಚ್ಚು ಕಡಿಮೆ ಕರ್ಣಾಟಕದ ರಣಕ್ಷೇತ್ರಗಳಲ್ಲೇ ನಿರ್ಣಯವಾಗಿದೆ. ರಾಜಕೀಯ ವಿಪ್ಲವಗಳಿಗೇನೂ ಕೊರತೆ ಇಲ್ಲ. ಆದರೆ ಈ ವಿಪ್ಲವಗಳಿಂದ ಜನಜೀವನ ರಚನೆಗೆ ಹೆಚ್ಚಾಗಿ ತೊಂದರೆಯುಂಟಾಗಲಿಲ್ಲವೆಂದು ಹೇಳಬಹುದು. ಜನಜೀವನ ಭದ್ರತೆಗಾಗಲಿ, ಜನರ ಜ್ಞಾನ ಸಾಧನೋದ್ಯಮಕ್ಕಾಗಲಿ, ರಸಯೋಗಾಭ್ಯಾಸಕ್ಕಾಗಲಿ, ರಕ್ತವಿಪ್ಲವ ರಾಜಕಾರಣವು ಅಡ್ಡಿಯನ್ನುಂಟುಮಾಡಲಿಲ್ಲ. ಕ್ರಿಸ್ತಶಕದಾರಂಭ ದಿನಗಳಿಂದ ಮೊದಲು ಮಾಡಿ ಕೃಷ್ಣದೇವರಾಯನ ಕಾಲದ ವರೆಗಿನ ದಕ್ಷಿಣ ಭಾರತದ ಸಾಂಸ್ಕೃತಿಕ ಇತಿಹಾಸವು, ಪ್ರೌಢಜೀವನದ ಇತಿಹಾಸವು, ಸುವರ್ಣಾಕ್ಷರಗಳಿಂದ ಬರೆಯತಕ್ಕದ್ದು; ಅಭಿಮಾನಾಸ್ಪದವಾದದ್ದು; ಸ್ಫೂರ್ತಿದಾಯಕವಾದದ್ದು. ಧರ್ಮವೆ, ದರ್ಶನವೆ, ವಾಸ್ತುಶಿಲ್ಪವೆ, ನಾಟ್ಯಗಾಯನವಾದನವೆ, ಸಾಹಿತ್ಯವೆ, ನಾಟಕವೆ, ಶಾಸ್ತ್ರವೆ—ಯಾವುದೇ ಕ್ಷೇತ್ರ ಪ್ರವೇಶ ಮಾಡಿ ನೋಡಿದಾಗ ಎಂತಹ ಮೇಧಾಶಕ್ತಿ, ಏನು ಪ್ರತಿಭೆ, ಎಂತಹ ಪೂರ್ಣ ಜೀವನ, ಅನ್ನಿಸುತ್ತದೆ. ದಕ್ಷಿಣ ಭಾರತದ ಸಾವಿರಾರು ಶಿಲಾಶಾಸನಗಳು ಈ ಮಹಾಜೀವನದ ದರ್ಪಣಗಳಂತಿವೆ! ಕಣ್ಣುಗಳನ್ನು ಬಿಟ್ಟು ಆ ದರ್ಪಣಗಳನ್ನು ನೋಡಿದಾಗ ಶ್ರೀಯನ್ನೂ ಅಮೃತತ್ವವನ್ನೂ ಸೇವಿಸಿದ ನಮ್ಮ ಹಿರಿಯರ, ಧೀರರ ಪರಿಚಯವಾಗುತ್ತದೆ[1].

—ತಿರುಮಲ ತಾತಾಚಾರ್ಯ ಶರ್ಮ

---

1 ಕನ್ನಡ ಜನಪದ ರಾಜಕೀಯ ಹೃದಯ, 'ಮೈಸೂರು ರಾಜ್ಯ'(1956), ಪು. 86–87

ಡಾ. ಎ. ಎಸ್. ಸೀತಾರಾಂ

ಕಾರ್ಯಾನುಭವದ ತಾತ್ತ್ವಿಕ ಸಮರ್ಥನೆಗಳು

ಭಗವದ್ಗೀತೆಯ ಮೂರನೆಯ ಅಧ್ಯಾಯದ ಆರನೆಯ ಶ್ಲೋಕ ಹೀಗಿದೆ:

ಕರ್ಮೇಂದ್ರಿಯಾಣಿ ಸಂಯಮ್ಯ ಯ ಆಸ್ತೇ ಮನಸಾ ಸ್ಮರನ್
ಇಂದ್ರಿಯಾರ್ಥಾನ್ ವಿಮೂಢಾತ್ಮಾ ಮಿಥ್ಯಾಚಾರಃ ಸ ಉಚ್ಯತೇ

"ಕರ್ಮೇಂದ್ರಿಯಗಳನ್ನು ನಿಗ್ರಹಿಸಿ, ಇಂದ್ರಿಯ ವಿಷಯಗಳನ್ನು ಸ್ಮರಿಸುವ ಮರುಳು ವ್ಯಕ್ತಿಯನ್ನು ಕಪಟಿ ಎಂದು ಕರೆಯುಬಹುದು."

ಗೀತೆಯ ಈ ಶ್ಲೋಕ ವ್ಯಕ್ತಿಜೀವನದಲ್ಲಿ ಬಾಹ್ಯಶಕ್ತಿಗಳ ಕಾರ್ಯದ ಮೌಲ್ಯವನ್ನು ಸೂಚಿಸುತ್ತದೆ. ಸ್ಪಷ್ಟವಾಗಿ ತೋರುವ ಹಾಗೆ ಗೀತೆ ತನ್ನ ಮೊದಲ ಆರು ಅಧ್ಯಾಯಗಳಲ್ಲಿ ಜೀವನದ ಎರಡು ಮಾರ್ಗಗಳನ್ನು ಸೂಚಿಸುತ್ತದೆ: ಸಾಂಖ್ಯಯೋಗ* ಮತ್ತು ಕರ್ಮಯೋಗ ಅಥವಾ ಜ್ಞಾನಮಾರ್ಗ ಮತ್ತು ಕರ್ಮಮಾರ್ಗ; ಕಡೆಯಲ್ಲಿ. ಒಬ್ಬ ವಿವೇಕಿ ಈ ಎರಡೂ ಮಾರ್ಗಗಳಲ್ಲಿರುವ ಮೌಲ್ಯಗಳನ್ನು ತನ್ನ ಜೀವನರೀತಿಯಲ್ಲಿ ಸಮನ್ವಯಗೊಳಿಸಿಕೊಳ್ಳುತ್ತಾನೆ ಎಂದು ಉಪಸಂಹಾರ ಮಾಡುತ್ತದೆ. ಈ ಶ್ಲೋಕ ಕಾರ್ಯಾನುಭವದ ಮೇಲೆ ಬರೆದ ಲೇಖನಕ್ಕೆ ಎಷ್ಟು ಸಮಂಜಸವಾಗಿದೆ ಮತು ಅರ್ಥಪೂರ್ಣವಾಗಿದೆ ಎಂಬುವನ್ನು ಮುಂದೆ ಚರ್ಚಿಸಲಾಗುತ್ತದೆ.

ಪೀಠಿಕೆ

ಕಾರ್ಯಾನುಭವ (ವರ್ಕ್ ಎಕ್ಸ್‌ಪೀರಿಯೆನ್ಸ್) ಪ್ರಸ್ತುತ ಪ್ರೌಢಶಾಲಾ ಪಠ್ಯವಸ್ತುವಿನ ಒಂದು ಸಮಗ್ರೀಕೃತ ಅಂಗ; ಅಂತ್ಯದಲ್ಲಿ ನಮ್ಮ ಜೀವನದ ಧ್ಯೇಯಗಳಿಂದ ನಿರ್ಧರಿಸಲ್ಪಡುವ, ನಮ್ಮ ಶೈಕ್ಷಣಿಕ ಗುರಿಗಳನ್ನು ಸಾಧಿಸಬೇಕಾದರೆ ಉಪಯೋಗಿಸುವ ಪಠ್ಯವಸ್ತುವಿನ ಒಂದು ಕ್ಷೇತ್ರ. ಪಠ್ಯವಸ್ತುವಿನ ಪ್ರತಿಯೊಂದ ಪಠ್ಯವಿಷಯವನ್ನೂ ಪ್ರತಿಯೊಂದು ಸಹಪಠ್ಯ ಚಟುವಟಿಕೆಯನ್ನೂ ಇದೇ ರೀತಿಯ ಇತರ ಪಠ್ಯವಸ್ತುವಿನ ಕಾರ್ಯಕ್ರಮಗಳನ್ನೂ ಜೀವನದ ಕೆಲವು ಮೂಲಭೂತ ಮೌಲ್ಯಗಳನ್ನು ಅನುಪೂರಕವಾಗಿ ಸಾಧಿಸುವುದಕ್ಕಾಗಿ ಸಂಕಲ್ಪಿಸಲಾಗಿರುತ್ತದೆ. ಇದೇ ರೀತಿಯಲ್ಲಿ ಕಾರ್ಯಾನುಭವ ಶಿಕ್ಷಣವೂ ಜೀವನದ ಕೆಲವು ನಿರ್ದಿಷ್ಟ ಹಿತಾಸಕ್ತಿಗಳನ್ನು ಪೂರೈಸಬೇಕಾಗುತ್ತದೆ. ಈ ಅರ್ಥದಲ್ಲಿ 'ಕಾರ್ಯಾನುಭವದ ತಾತ್ತ್ವಿಕ ಸಮರ್ಥನೆಗಳು' ಎಂಬ ಶೀರ್ಷಿಕೆಯನ್ನು ಉಪಯೋಗಿಸಲಾಗಿದೆ. ಹೀಗೆಂದರೆ: 'ಕಾರ್ಯಾನುಭವವನ್ನು ಪಠ್ಯವಸ್ತುವಿನ ಅಂಗವಾಗಿ ಸೇರಿಸುವುದಕ್ಕೆ ಇರುವ ತಾತ್ತ್ವಿಕ ಸಮರ್ಥನೆಗಳೇನು? ಎಂದರೆ, ಈ ಕಾರ್ಯದ ಹಿಂದೆ ನಡೆದಿರುವ ಶಿಕ್ಷಣ ತಜ್ಞರ ಚಿಂತನ–ಮಂಥನ ಸ್ವರೂಪ ಮತ್ತು ಗುಣವೇನು? ನಮ್ಮ ಜನಜೀವನದ ಆವಶ್ಯಕತೆಗಳು, ಧ್ಯೇಯಗಳು ಹಾಗೂ ಮೌಲ್ಯಗಳನ್ನು ಸಾಧಿಸುವಲ್ಲಿ ಕಾರ್ಯಾನುಭವ ಪಾತ್ರವೇನು? ಎಂಬ ವಿಚಾರದ ಬಗ್ಗೆ ದಾರ್ಶನಿಕರು, ಮನೋವಿಜ್ಞಾನಿಗಳು, ಮಾನವಶಾಸ್ತ್ರಜ್ಞರು ಮತ್ತು ಅರ್ಥಶಾಸ್ತ್ರಜ್ಞರ ದೃಷ್ಟಿಕೋನವೇನು? ಕೊಠಾರಿ

---

* ಯೋಗ ಎಂದರೆ ಒಂದು ಜೀವ ವಿಕಾಸವಾಗುವ ವಿಧಾನ.

ಆಯೋಗದ ವರದಿ ಹೇಳುವಂತೆ, "ಶಿಕ್ಷಣವನ್ನು ನಮ್ಮ ಧ್ಯೇಯಗಳ ಸಾಧನೆಗೆ ಅವಶ್ಯಕವಾಗಿರುವ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ರೂಪಾಂತರಗಳ ಶಕ್ತಿಯುತ ಸಾಧನವನ್ನಾಗಿ ಮಾಡುವುದಕ್ಕಾಗಿ ಅದನ್ನು ನಮ್ಮ ಜನತೆಯ ಅವಶ್ಯಕತೆಗಳು, ಆಕಾಂಕ್ಷೆಗಳು ಹಾಗೂ ಜೀವನಕ್ಕೆ ಸಂಬಂಧ ಹೊಂದುವಂತೆ ರೂಪಾಂತರ ಮಾಡುವ ಪ್ರಯತ್ನಗಳಿಗಿಂತ ಬೇರೆ ಯಾವ ಸುಧಾರಣೆಗಳ ಅವಶ್ಯಕತೆಯಾಗಲೀ ಅವಸರವಾಗಲೀ ಇಲ್ಲ[1]. ಮೇಲಿನ ಹೇಳಿಕೆಯ ಹಿನ್ನೆಲೆಯಲ್ಲಿ, ದೇಶದ ಉತ್ಪಾದನೆಯ ಮೇಲೆ ಪರೋಕ್ಷವಾಗಿ ಪ್ರಭಾವ ಬೀರುವ ಸಾಧನವಾಗಿ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಭಾವನಾತ್ಮಕ ಸಮಗ್ರತೆಯನ್ನು ತರುವುದಕ್ಕಾಗಿ, ಹಾಗೂ ಪ್ರತಿಯೊಬ್ಬ ವ್ಯಕ್ತಿಯ ಶೀಲಸಂವರ್ಧನೆಗಾಗಿ ಕೊಠಾರಿ ಆಯೋಗ ಕಾರ್ಯಾನುಭವವನ್ನು ಶಾಲೆಯ ಪಠ್ಯವಸ್ತುವಿನಲ್ಲಿ ಸೇರಿಸಿದೆ. ಆಯೋಗದ ಈ ಪ್ರತಿಪಾದನೆ ಮಹಾತ್ಮ ಗಾಂಧಿ ಹಾಗೂ ಅವರ ಉತ್ಸುಕ ಬೆಂಬಲಿಗರಲ್ಲಿ ಒಬ್ಬರಾದ ಡಾ. ಜಾಕೀರ್ ಹುಸೇನ್ ಅವರು ಶಿಕ್ಷಣದಲ್ಲಿ ಕಾರ್ಯದ ಮೌಲ್ಯಗಳ ಬಗ್ಗೆ ಹೊಂದಿದ್ದ ವಿಶ್ವಾಸದ ಪುನರ್ವ್ಯಾಖ್ಯೆಯಾಗಿದೆ. 1937ಕ್ಕೂ ಮುಂಚೆಯೇ ಗಾಂಧಿಯವರ ನಿರ್ದೇಶನ ಹಾಗೂ ಡಾ. ಜಾಕೀರ್ ಹುಸೇನರ ಮುಂದಾಳುತನವಿದ್ದ ಒಂದು ಆಯೋಗದ ವರದಿಯಾದ 'ಶೈಕ್ಷಣಿಕ ಪುನರ್ರಚನೆ'ಯ ಪ್ರಕಾರ, "ಆಧುನಿಕ ಶೈಕ್ಷಣಿಕ ವಿಚಾರಧಾರೆ ಮಕ್ಕಳಿಗೆ ಸೂಕ್ತವಾದ ಉತ್ಪಾದನ ಚಟುವಟಿಕೆಯ ಮೂಲಕ ಶಿಕ್ಷಣವನ್ನು ಕೊಡಬೇಕು ಎನ್ನುವ ವಿಚಾರವನ್ನು ಒಕ್ಕೊರಲಿನಿಂದ ಶಿಫಾರಸು ಮಾಡುತ್ತದೆ. ಸಮಗ್ರೀಕೃತ ಶಿಕ್ಷಣವನ್ನು ಒದಗಿಸುವ ಸಮಸ್ಯೆಗೆ ಈ ವಿಧಾನ ಅತ್ಯಂತ ಪರಿಣಾಮಕಾರಿಯಾದ ಮಾರ್ಗ ಎಂದು ಪರಿಗಣಿಸಲಾಗಿದೆ"[2]. ನಮ್ಮ ಜನತೆಯ ಆಶೋತ್ತರಗಳು, ಅವಶ್ಯಕತೆಗಳು ಹಾಗೂ ಮೌಲ್ಯಗಳನ್ನು ಸಾಧಿಸುವ ಸಾಧನವೇ ಕಾರ್ಯಾನುಭವ ಎನ್ನುವ ನಮ್ಮ ಅಚಲವಿಶ್ವಾಸಕ್ಕೆ ಇರುವ ವೈಚಾರಿಕ ಸಮರ್ಥನೆಗಳೇನು ಎಂಬುದನ್ನು ಈಗ ನಾವು ನೋಡಬೇಕಾಗಿದೆ. ಈ ದೃಷ್ಟಿಯಿಂದ ಕಾರ್ಯಾನುಭವಕ್ಕೆ ಇರುವ ವೈಚಾರಿಕ ಸಮರ್ಥನೆಗಳೇನು ಎಂಬುದನ್ನು ವಿಶ್ಲೇಷಿಸಿ, ವರ್ಗೀಕರಿಸುವುದು ಈ ಲೇಖನದ ಉದ್ದೇಶ.

ಕಾರ್ಯಾನುಭವದ ಪರಿಕಲ್ಪನೆ

ಉಪಾಧ್ಯಾಯರಿಂದ ಹಿಡಿದು ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರ ವರೆಗೆ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುತ್ತಿರುವ ಎಲ್ಲರಲ್ಲೂ ಕಾರ್ಯಾನುಭವದ ಅರ್ಥವಿಶ್ಲೇಷಣೆ ಹಾಗೂ ಅರ್ಥವ್ಯಾಪ್ತಿಯ ಬಗ್ಗೆ ಒಮ್ಮತವಿಲ್ಲ. ಕೆಲವರ ಅಭಿಪ್ರಾಯದ ಪ್ರಕಾರ ಶಾಲೆಯಲ್ಲಿ ಓದುವ ಮಗುವಿನ ಯಾವುದೇ ಚಟುವಟಿಕೆಯನ್ನು ಕಾರ್ಯಾನುಭವವೆಂದು ಕರೆಯಬಹುದು. ಇತರರು ವಾದಿಸುವಂತೆ, ಕಾರ್ಯನಿರ್ವಹಣೆಯ ಕೌಶಲಗಳನ್ನು ಒಳಗೊಂಡ, ಜೀವನಕ್ಕೆ ಉಪಯುಕ್ತವಾದ, ಕಸುಬುಗಳನ್ನು ಮಾತ್ರ ಕಾರ್ಯಾನುಭವವೆಂದು ಕರೆಯಬಹುದು. ಆದ್ದರಿಂದ ಕಾರ್ಯಾನುಭವದ ಪರಿಕಲ್ಪನೆಯ ಬಗ್ಗೆ ವಿಶಿಷ್ಟ ಶಿಕ್ಷಣತಜ್ಞರ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳುವುದು ಒಳಿತು ಎನ್ನಿಸುತ್ತದೆ.

ಕಾರ್ಯಾನುಭವದ ಬಗ್ಗೆ ತಮ್ಮ ಅಭಿಪ್ರಾಯವನ್ನು ಸೂಚಿಸಿರುವ ಶಿಕ್ಷಣತಜ್ಞರಲ್ಲಿ ಪ್ಲೇಟೋ[3] ಮೊದಲಿಗ. ಕಲಿಕೆಯ ಶ್ರೇಷ್ಠ ಮಾರ್ಗವೇ ಕಾರ್ಯ ಎಂದು ಅವನು ನಂಬಿದ್ದ. ಅವನು ಜ್ಞಾನಶಾಸ್ತ್ರದ (ಎಪಿಸ್ಟೀಮಾಲೊಜಿ) ತನ್ನ ಅಧ್ಯಯನದಲ್ಲಿ ಚಮ್ಮಾರ, ಬಡಗಿ, ಮುಂತಾದವರ ಕಾರ್ಯವಿಶ್ಲೇಷಣೆಯನ್ನೇ ಆಧಾರವಾಗಿಟ್ಟುಕೊಂಡಿದ್ದ. ಇದರಿಂದ ತಿಳಿಯುವುದೇನೆಂದರೆ, ಅವನು ಕಾರ್ಯಾನುಭವದಲ್ಲಿ ಜೀವನದ ಉಪಯುಕ್ತ ಉದ್ಯೋಗಗಳನ್ನೆಲ್ಲ ಸೇರಿಸಿದ್ದ.

ಫ್ರಾನ್ಸ್ ದೇಶದ ಶ್ರೇಷ್ಠ ಶಿಕ್ಷಣತಜ್ಞ ರೂಸೋ ಹೇಗೆ ಆಧುನಿಕ ಶಿಕ್ಷಣದ ವಿವಿಧ ಕ್ಷೇತ್ರಗಳ

---

[1] ಕೊಠಾರಿ ಆಯೋಗದ ವರದಿ (1966), ಪು. 6

[2] *Educational Reconstruction*, Publications Division, Delhi, (1959), p.92

[3] *Dewey, John*: *Democracy and Education*, Free Press, New York (1966), p.195

ಮೇಲೆ ಅಗಾಧವಾದ ಪ್ರಭಾವ ಬೀರಿದ್ದಾನೊ ಹಾಗೆಯೇ ಕಾರ್ಯಾನುಭವದ ಕ್ಷೇತ್ರದ ಮೇಲೂ ಬೆಳಕು ಚೆಲ್ಲಿದ್ದಾನೆ. ಅವನ ನಿಸರ್ಗವಾದ (ನ್ಯಾಚುರಲಿಸಂ) ಪಠ್ಯವಸ್ತುವಿನ ಔದ್ಯೋಗಿಕ ಪ್ರವೃತ್ತಿಯನ್ನು ಪುಷ್ಟೀಕರಿಸಿತು. ಅವನು ತನ್ನ 'ಎಮಿಲಿ' ಎಂಬ ಪುಸ್ತಕದಲ್ಲಿ ಈ ರೀತಿ ಹೇಳಿದ್ದಾನೆ: "ನನ್ನ ಎಮಿಲಿಯನ್ನು ಪುಸ್ತಕದ ಹುಳುವನ್ನಾಗಿ ಮಾಡುವುದಕ್ಕಿಂತ ಒಂದು ಕಾರ್ಯಾಗಾರದಲ್ಲಿ ತೊಡಗಿಸಿದರೆ ಅವನ ಕೈಗಳು ಅವನ ಮನಸ್ಸನ್ನು ಬೆಳಸುತ್ತವೆ"[4].ಅವನ ಪ್ರಕಾರ ಕಾರ್ಯಾನುಭವ ಕೈಕಸಬುಗಳಿಗೆ ಸಂಬಂಧ ಹೊಂದಿದೆ. ಅವನೇ ಅದರ ವಿಶಿಷ್ಟತೆಯನ್ನು ಒತ್ತಿ ಹೇಳಿದ್ದಾನೆ. "ಮಾನವ ತನ್ನ ಜೀವನ ಸಂಪಾದಿಸಲು ಹುಡುಕುವ ಮಾರ್ಗಗಳಲ್ಲಿ ನಿಸರ್ಗಕ್ಕೆ ಅತಿ ಹತ್ತಿರವಾದ್ದು ಕೈ ಕಸಬು[5]".ಅವನೇ ಇನ್ನೊಂದು ಕಡೆ ಹೀಗೆ ಹೇಳಿದ್ದಾನೆ: 'ಎಮಿಲಿಯು ಒಂದು ಇಡೀ ದಿನದ ಶಾಬ್ದಿಕ ಶಿಕ್ಷಣದಲ್ಲಿ ಕಲಿಯುವುದಕ್ಕಿಂತ ಹೆಚ್ಚಾಗಿ ಒಂದು ಘಂಟೆಯ ಕೈ ಕಸಬಿನಿಂದ ಕಲಿಯುತ್ತಾನೆ[6]".

ರೂಸೋ ನಿರೂಪಿಸಿದ ಕಾರ್ಯಾನುಭವ ಶಿಕ್ಷಣದ ಕಾರ್ಯಕ್ರಮವನ್ನು ಮಕ್ಕಳ ನೈಜ ಪ್ರವೃತ್ತಿಗಳಿಗೆ ಸರಿಹೊಂದಿಸುವಲ್ಲಿ ಸ್ವಿಟ್‌ಜರ್ಲೆಂಡಿನ ಫೆಲೆಸ್‌ಬರ್ಗ್ ಎಂಬ ಮನೋವಿಜ್ಞಾನಿ ಅತ್ಯಂತ ಯಶಸ್ವಿಯಾದ. ಅವನು ತನ್ನ ನಿವೇಶನದಲ್ಲಿ ಉದ್ಯಮಗಳು ಹಾಗೂ ವ್ಯವಸಾಯವನ್ನು ಕಲಿಸುವ ಒಂದು ಶಾಲೆಯನ್ನು ಪ್ರಾರಂಭಿಸಿದ್ದ. ಫೆಲೆನ್‌ಬರ್ಗನ ಯಶಸ್ಸಿನಿಂದ ಅಮೇರಿಕನ್ ಶಿಕ್ಷಣಪಟುಗಳು ಪ್ರಭಾವಿತಗೊಂಡು 'ಕೈ ಕಸಬಿನ ಕಾಲೇಜುಗಳನ್ನು' ತೆಗೆದು ಅವನ ಯೋಜನೆಯನ್ನು ಅಲ್ಲಿ ಜಾರಿಗೆ ತಂದರು. ಈ ಕಾಲೇಜುಗಳಲ್ಲಿ ಕಾರ್ಯಾನುಭವಕ್ಕೆ ಆದ್ಯತೆಯನ್ನು ಕೊಡಲಾಗಿತ್ತು. ಶಿಕ್ಷಣ ಕ್ಷೇತ್ರದಲ್ಲಿ ಇಷ್ಟೆಲ್ಲ ಬೆಳವಣಿಗೆಗಳಾದರೂ ಪುನರುಜ್ಜೀವನ ಕಾಲದ ಸಾಂಪ್ರದಾಯಿಕ ಪಠ್ಯವಸ್ತು ಶುಷ್ಕ ತಾರ್ಕಿಕವಾಗಿಯೇ ಉಳಿದಿತ್ತು. ಅಸಾಧಾರಣ ಸಾಮಾಜಿಕ ಬಲಗಳಾದ ರಾಷ್ಟ್ರೀಯತೆ ಹಾಗೂ ಪ್ರಜಾಪ್ರಭುತ್ವಗಳ ಬೆಳವಣಿಗೆ ಮತ್ತು ಪ್ರಮುಖವಾಗಿ ಕೈಗಾರಿಕಾ ಕ್ರಾಂತಿಯಿಂದಾಗಿ ಸಾಂಪ್ರದಾಯಿಕ ಪಠ್ಯವಸ್ತುವಿನಲ್ಲಿ ಕೈ ಕಸುಬಿಗೆ ಒಂದು ಸ್ಥಾನ ದೊರಕಿತು. ಬ್ರೂಬಾಷರ್ ಹೇಳುವ ಹಾಗೆ "ಕೈಗಾರಿಕಾಕ್ರಾಂತಿ ಉತ್ಪಾದನೆಯನ್ನು ಮನೆಯಿಂದ ಕಾರ್ಖಾನೆಗೂ ಕೆಲಸದಿಂದ ಶಕ್ತಿಚಾಲಿತ ಯಂತ್ರಗಳಿಗೂ ವರ್ಗಾಯಿಸಿತು. ಉತ್ಪಾದನೆಯಲ್ಲಿ ಈ ತರಹದ ಒಂದು ಆಮೂಲ ವರ್ಗಾವಣೆ ಔದ್ಯೋಗಿಕ ಶಿಕ್ಷಣದಲ್ಲೂ ಆಮೂಲಾಗ್ರವಾದ ಮಾರ್ಪಾಟುಗಳಿಗೆ ಕಾರಣವಾಯಿತು[7]."

ಕೈಗಾರಿಕಾಕ್ರಾಂತಿ ಶಿಕ್ಷಣದಲ್ಲಿ ಕಾರ್ಯಕ್ಕೆ ಒಂದು ಸ್ಥಾನವನ್ನು ದೊರಕಿಸಿಕೊಟ್ಟರೂ (ಅಮೆರಿಕ, ಇಂಗ್ಲೆಂಡ್ ಮತ್ತು ಬ್ರಿಟಿಷರ ಕಾಲದ ಭಾರತದ) ಸಾಮಾನ್ಯವಾಗಿ ಮಧ್ಯಮ ಮತ್ತು ಉನ್ನತವರ್ಗದವರಿಂದಲೇ ನಡೆಸಲ್ಪಡುತ್ತಿದ್ದ ಶಾಲೆಗಳು ದುಡಿಮೆಯ ಘನತೆಗೆ ಔಪಚಾರಿಕ ಗೌರವ ತೋರಿಸಿ ಆಡಳಿತ, ಮೇಲ್ವಿಚಾರಣೆ, ವೃತ್ತಿಗಳು ಹಾಗೂ ಗುಮಾಸ್ತರ ಕೆಲಸಗಳಿಗೆ ಸಂಬಂಧಪಟ್ಟ ಶಿಕ್ಷಣಕ್ಕೆ ಮಾತ್ರ ಪ್ರಾಧಾನ್ಯ ನೀಡಿದ್ದುವು. ಕೈಗಾರಿಕೆ ಮತ್ತು ವ್ಯವಸಾಯಗಳಿಗೆ ಸಂಬಂಧಿಸಿದ ಕೆಲಸಗಳು ಪಠ್ಯವಸ್ತುವಿನಲ್ಲಿ ಪ್ರಮುಖ ಸ್ಥಾನ ಪಡೆದಿರಲಿಲ್ಲ. ಈ ನ್ಯೂನತೆಯನ್ನು ನಿವಾರಿಸಲು ಇಂಗ್ಲೆಂಡ್ ಮತ್ತು ಅಮೆರಿಕಗಳಲ್ಲಿ ಕೆಲಸಗಾರರ ಶಾಲೆಗಳನ್ನು ಸ್ಥಾಪಿಸಲಾಯಿತು. ಆದರೆ ಬ್ರೂಬಾಷರ್ ಹೇಳುವ ಪ್ರಕಾರ ಈ ದಿಸೆಯಲ್ಲಿ "ಇಂಗ್ಲಿಷ್ ಮತ್ತು ಅಮೆರಿಕನ್ ಚಳವಳಿಗಳು ಒಟ್ಟುಗೂಡಿದರೂ ಗಾಳಿಯಲ್ಲಿಯ ಒಂದು ತೃಣದಂತಿದ್ದುವು[8].

ಶಿಕ್ಷಣದ ಇತಿಹಾಸದಲ್ಲಿ ಮೊದಲ ಬಾರಿಗೆ 1917ರ ರಷ್ಯನ್ ಕ್ರಾಂತಿಯೊಂದಿಗೆ ಕಾರ್ಮಿಕ

---

[4] Rousseau, J.J.: *Emile*, J. M. Dent & Sons, London (1911), p.140

[5] Rousseau, J. J.: *Ibid.*, p. 158

[6] Ronsseau, J. J.: *Emilius and Sophia*, Vol. 2, Becket & Hondt, London (1763), p. 64

[7] *History of the Problems of Education* Mc-Graw Hill Book co. Inc., N.Y., 1947, p. 279

[8] Ibid., p. 94

ಜನಾಂಗದ ಸಾಂಸ್ಕೃತಿಕ ಹಿತಾಸಕ್ತಿಗಳಿಂದ ಪ್ರಭಾವಿತಗೊಂಡ ಒಂದು ರಾಷ್ಟ್ರೀಯ ಶಿಕ್ಷಣ ಪದ್ಧತಿ ಆ ದೇಶದಲ್ಲಿ ಜಾರಿಗೆ ಬಂತು. ಮೊದಲನೆಯ ಜಾರಿಗೆ ಕಾರ್ಮಿಕರಿಗಾಗಿ ಕಾರ್ಮಿಕರಿಂದ ಒಂದು ಸರ್ಕಾರ ಸ್ಥಾಪಿತವಾಯಿತು. ಕೆಲಸಗಾರರ ಘನತೆಯನ್ನು ಹೆಚ್ಚಿಸುವುದರ ಮೂಲಕ ಕೆಲಸದ ಘನತೆಯನ್ನು ಹೆಚ್ಚಿಸಲಾಯಿತು.

ಕೆಲಸದ ಘನತೆಯನ್ನು ಹೆಚ್ಚಿಸುವುದು ಮತ್ತು ಅದಕ್ಕೆ ಪಠ್ಯವಸ್ತುವಿನಲ್ಲಿ ಚಿರಸ್ಥಾಯಿ ಸ್ಥಾನ ದೊರಕಿಸಿಕೊಡುವುದು—ಈ ಅದ್ಭುತ ಸಾಧನೆಗೆ ರಹಸ್ಯ ಕಾರಣ. ಆದರೆ ಇದೇ ಸಮಯದಲ್ಲಿ (1916) ಕೆಲಸ ಮತ್ತು ವಿರಾಮಗಳ ನಡುವಣ ದ್ವಂದ್ವವನ್ನು ಪ್ರಬಲವಾಗಿ ವಿರೋಧಿಸಿ, ಸತತವಾಗಿ ಎದುರಿಸಿದ ಒಬ್ಬ ಮಹಾಪ್ರಜಾಪ್ರಭುತ್ವವಾದಿ ಹಾಗೂ ಶೈಕ್ಷಣಿಕ ದರ್ಶನಶಾಸ್ತ್ರಜ್ಞ ಎಂದರೆ ಜಾನ್ ಡ್ಯೂಯಿ. ಅವನು ಪ್ರಜಾಪ್ರಭುತ್ವವಾದಿ ಸಮಾಜದಲ್ಲಿ ಕಾರ್ಯಾನುಭವದ ಮಹತ್ವದ ಬಗ್ಗೆ ಚಿಂತನೆ ನಡೆಸಿದ್ದ. ಕೆಲಸ ಮತ್ತು ವಿರಾಮಕ್ಕೆ ಇರುವ ದ್ವಂದ್ವ, ಗುಲಾಮವರ್ಗ ಹಾಗೂ ಸ್ವತಂತ್ರರ ವರ್ಗ ಇರುವಂಥ ಸಮಾಜದಲ್ಲಿ ಅವಮಾನಕರ ಎಂದು ವಾದಿಸಿದ. ಅಂದು ಡ್ಯೂಯಿ ಮಾಡಿದ ಈ ವಾದ ನಮ್ಮ ಇಂದಿನ ಭಾರತಕ್ಕೂ ಅನ್ವಯಿಸುತ್ತದೆ. ಇಂದಿನ ಭಾರತವೂ ಡ್ಯೂಯಿಯವರ ಅಂದಿನ ಚಿಂತನೆಯ ದೃಷ್ಟಿಕೋನಕ್ಕೆ ಹೊರತಾಗಿಲ್ಲ. ಒಂದಾನೊಂದು ಕಾಲದಲ್ಲಿ ಒಂದೇ ವರ್ಗದ ಹಕ್ಕಾಗಿ ಉಳಿದಿದ್ದ ವಿರಾಮದ ಪರಿಕಲ್ಪನೆಯನ್ನು ಇಂದಿನ ಪ್ರಜಾಪ್ರಭುತ್ವ-ಕಾರ್ಮಿಕ ಸಮಾಜದಲ್ಲಿ ಪುನರ್ರಚಿಸುವುದು ಅವಶ್ಯವಾಗಿದೆ. ಕಾರ್ಖಾನೆಯ ಮೂಲಕ ಉತ್ಪಾದನೆಯು ಆರ್ಥಿಕ ಜೀವನಾವಶ್ಯಕತೆಗಳನ್ನು ಹೆಚ್ಚಿಸಿ ಜನಾಂಗದ ಸಮಸ್ತರಿಗೂ ವಿರಾಮಕಾಲ ಹೆಚ್ಚು ಹೆಚ್ಚಾಗಿ ದೊರಕುವಂತೆ ಮಾಡುತ್ತದೆ. ಹಿಂದಿನ ಸಮಾಜದಲ್ಲಿ ಒಂದು ವರ್ಗಕ್ಕೆ ಚಿಂತಿಸುವುದಕ್ಕಾಗಿಯೇ ವಿರಾಮವೂ ಇನ್ನೊಂದು ಜನಾಂಗಕ್ಕೆ ದುಡಿಯುವುದಕ್ಕಾಗಿಯೇ ಕಾಲವೂ ಇರುತ್ತಿತ್ತು. ಆದರೆ ಈಗ ಪ್ರತಿಯೊಬ್ಬರಿಗೂ ಮಾಡುವುದಕ್ಕೆ ಸಾಕಷ್ಟು ಕೆಲಸ ಮತ್ತು ಪುನಃ ಚೈತನ್ಯಪೂರ್ಣರಾಗುವುದಕ್ಕೆ ಸಾಕಷ್ಟು ವಿರಾಮ ದೊರಕುವಂತಾಯಿತು. ವಿರಾಮದ ಸದ್ವಿನಿಯೋಗ ಶಿಕ್ಷಣದ ಮೂಲತತ್ತ್ವಗಳಲ್ಲೊಂದು. ಕೊಠಾರಿ ಆಯೋಗದ ವರದಿಯೂ ಕಾರ್ಯಾನುಭವದ ಈ ಅಂಶವನ್ನು ಕುರಿತಾದ ಡ್ಯೂಯಿಯವರ ವಿಚಾರವನ್ನು ತನ್ನದೇ ಆದ ರೀತಿಯಲ್ಲಿ ಪುನರ್ವ್ಯಾಖ್ಯೆ ಮಾಡಿದೆ: "ಕೆಲಸವನ್ನು ಹೀನಾಯವಾಗಿ ಕಾಣುವ ಪರಂಪರೆ ಹಾಗೂ ವಿದ್ಯಾರ್ಥಿಗಳನ್ನು, ಅದರಲ್ಲೂ ಒಂದು ಜನಾಂಗದ ಮೊದಲನೆಯ ವಿದ್ಯಾರ್ಥಿಗಳ ಗುಂಪನ್ನು ಅವರವರ ಮನೆಗಳಿಂದ, ಜನಾಂಗಗಳಿಂದ ದೂರೀಕರಿಸುವ ಈ (ವಿರಾಮ-ಕೆಲಸ ದ್ವಂದ್ವ) ನ್ಯೂನತೆ ನಮ್ಮ ಶಿಕ್ಷಣ ಪದ್ಧತಿಯಲ್ಲಿ ವ್ಯಕ್ತವಾಗಿದೆ. ಆದ್ದರಿಂದ ಸಾಧ್ಯವಾದಷ್ಟೂ ಈ ನ್ಯೂನತೆಯನ್ನು ಹೋಗಲಾಡಿಸುವ ಹಾಗೂ ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ಶಿಕ್ಷಣಪದ್ಧತಿಗಳಲ್ಲಿರುವ ಗುಣಗಳನ್ನು ಒಂದುಗೂಡಿಸುವ ಉದ್ದೇಶದಿಂದ ಕಾರ್ಯಾನುಭವವನ್ನು ಪಠ್ಯವಸ್ತುವಿನಲ್ಲಿ ಸೇರಿಸಲಾಗಿದೆ.

ಆದ್ದರಿಂದ ಕೆಲಸವನ್ನು ಶಿಕ್ಷಣದೊಂದಿಗೆ ಸಮಗ್ರೀಕೃತ ಮಾಡುವ ಒಂದು ವಿಧಾನವೇ ಕಾರ್ಯಾನುಭವವೆನ್ನಬಹುದು. ಈ ರೀತಿಯಾದ ಸಮಗ್ರೀಕರಣ, ವಿಜ್ಞಾನದ ಉಪಯೋಗವನ್ನು ಆಧಾರವಾಗಿ ಹೊಂದಿರುವ ಆಧುನಿಕ ಸಮಾಜಗಳಲ್ಲಿ ಸಾಧ್ಯ ಮಾತ್ರವೇ ಅಲ್ಲ, ಅವಶ್ಯಕ. ಸಾಂಪ್ರದಾಯಿಕ ಸಮಾಜಗಳಲ್ಲಾದರೆ ಸಾಮಾನ್ಯವಾಗಿ ಶಿಕ್ಷಣದ ಕಕ್ಷೆಯಿಂದ ಕಾರ್ಯ ದೂರವೆಂಬ ನಂಬಿಕೆ ಇದೆ. ಇದಕ್ಕೆ ಕಾರಣವೇನೆಂದರೆ ಇಲ್ಲಿಯ ಉತ್ಪಾದನ ವಿಧಾನಗಳು ಪ್ರಾಚೀನವಾಗಿಯೇ ಉಳಿದು ಕಟ್ಟುನಿಟ್ಟಾದ ಶಿಕ್ಷಣ ಮತ್ತು ವಿಶೇಷ ಕೌಶಲಗಳು ಅಥವಾ ಉನ್ನತ ಮಟ್ಟದ ಬೌದ್ಧಿಕ ಸಾಮರ್ಥ್ಯದ ಅವಶ್ಯಕತೆಯನ್ನು ನಿರೀಕ್ಷಿಸುವುದಿಲ್ಲ ಮತ್ತು ಇಲ್ಲಿಯ ಕಾರ್ಯಗಳು ಸಾಮಾನ್ಯವಾಗಿ ಕೈಕೆಲಸಗಳಾಗಿಯೂ, ಕಡಿಮೆ ಸಂಭಾವನೆಯಿಂದ ಕೂಡಿದ್ದೂ, ಗುಲಾಮಚಾಕರಿಗೆ ಸಮನಾಗಿಯೂ ಅವಿದ್ಯಾವಂತ ಕೆಳದರ್ಜೆಯ ಜನರಿಂದ ಕೂಡಿದ್ದೂ ಆಗಿರುತ್ತದೆ. ಇದಕ್ಕೆ ವಿರುದ್ಧವಾಗಿ ಶಿಕ್ಷಣವು ಜೀವನಕ್ಕಾಗಿ ದುಡಿಯದಿರುವ, ಜೀವನವನ್ನು ಸವಿಯಲು ಬೇಕಾಗುವ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಆಸಕ್ತಿ ಹೊಂದಿರುವ ಉನ್ನತ ವರ್ಗದ ವಿಶೇಷ ಹಕ್ಕಾಗಿರುತ್ತದೆ. ಹೀಗಾಗಿ ವಿದ್ಯಾವಂತ ಗಣ್ಯರು ಪರೋಪಜೀವಿಗಳಾಗಿ, ಸಮಾಜದ ಏಳ್ಗಿಗಾಗಿ ನಿಜವಾಗಿ ದುಡಿಯುವವರು ನಿರಕ್ಷರ ಕುಕ್ಷಿಗಳಾದ ರೈತರು ಹಾಗೂ ಕೆಲಸಗಾರರಾಗಿರುತ್ತಾರೆ"[9].

---

[9] ಕೊಠಾರಿ ಆಯೋಗದ ವರದಿ (1966), ಪು. 7-8

ಈ ಹಿನ್ನೆಲೆಯಲ್ಲಿ ನೋಡಿದಾಗ ಡ್ಯೂಯಿ ತನ್ನ ಪ್ರಾಯೋಗಿಕ ಶಾಲೆಯ ಪಠ್ಯವಸ್ತುವಿನಲ್ಲಿ ಗೃಹ ಮತ್ತು ಕೈಗಾರಿಕೆಗಳ ಪ್ರತಿರೂಪದ ಕೆಲಸಗಳಾದ ಅಡುಗೆ ಮಾಡುವುದು, ಹೊಲಿಯುವುದು, ನೇಯುವುದು, ಮರಗೆಲಸ ಮಾಡುವುದು ಇತ್ಯಾದಿಗಳಿಗೆ ಸ್ಥಾನ ಕೊಟ್ಟಿರುವುದು ಅರ್ಥಪೂರ್ಣವಾಗಿ ಕಾಣುತ್ತದೆ. ಅವನು ಈ ಕೆಲಸಗಳನ್ನೇ ತನ್ನ ಪಠ್ಯವಸ್ತುವಿನ ಕೇಂದ್ರಬಿಂದುಗಳಾಗಿ ಮಾಡಿಕೊಂಡಿದ್ದ. ಸಮುದಾಯದ ಅನೇಕ ಉಪಯುಕ್ತ ಉದ್ಯಮಗಳನ್ನು ಗುರುತಿಸಿ ಅವನು ಅವನ್ನು ತನ್ನ ಪಠ್ಯವಸ್ತುವಿನಲ್ಲಿ ಸೇರಿಸಿದ್ದ. ಒಂದು ಉದ್ಯಮವನ್ನು ಹೇಗೆ ಕಾರ್ಯಾನುಭವದ ಚಟುವಟಿಕೆ ಎಂದು ಪರಿಗಣಿಸಬಹುದು ಎನ್ನುವುದಕ್ಕೆ ಅವನು ಒಂದು ಅಳತೆಗೋಲನ್ನು[10] ಕೊಟ್ಟಿದ್ದಾನೆ. ಕಾರ್ಯಾನುಭವದ ಚಟುವಟಿಕೆ ಎಂದು ಯಾವುದೇ ಚಟುವಟಿಕೆಯನ್ನು ಕರೆಯಬೇಕಾದರೆ ಅದಕ್ಕೆ ಮೂರು ಹಂತಗಳಿರಬೇಕು. ಕೆಲವು ವಸ್ತುಗಳ ಉಪಯೋಗಮಾಡುವ ಚಟುವಟಿಕೆಯಾಗಿರಬೇಕು. ಎರಡನೆಯದಾಗಿ ಕೌಶಲವನ್ನೊಳಗೊಂಡ ಒಂದು ಪ್ರಕ್ರಿಯೆಯಿಂದ ಕೂಡಿರಬೇಕು. ಕೆಲವು ಉಪಕರಣಗಳ ಬಳಕೆಯಿಂದ ಕೂಡಿರಬೇಕು.

ಉದಾಹರಣೆಗಳು:

ವಸ್ತುಗಳು	ಪ್ರಕ್ರಿಯೆಗಳು	ಉಪಕರಣಗಳು
ಕಾಗದ, ರಟ್ಟು, ಮರ, ಚರ್ಮ, ಬಟ್ಟೆ, ನೂಲು, ಮಣ್ಣು, ಲೋಹಗಳು, ಇತ್ಯಾದಿ	ಮಡಿಸುವುದು, ಕತ್ತರಿಸುವುದು, ಹೊಲಿಯುವುದು, ಅಳೆಯುವುದು, ವಿನ್ಯಾಸಮಾಡುವುದು, ಎರಕ ಹುಯ್ಯುವುದು, ಇತ್ಯಾದಿ	ಸುತ್ತಿಗೆ, ಗರಗಸ, ಅರ, ಹೊಲಿಗೆ ಯಂತ್ರ, ಇತ್ಯಾದಿ

ಕೊಠಾರಿ ಆಯೋಗದ ವರದಿಯಲ್ಲಿ ನೀಡಿರುವ, "ಕಾರ್ಯಾನುಭವವೆಂದರೆ ಶಾಲೆಯಲ್ಲಿ, ಮನೆಯಲ್ಲಿ, ಕಾರ್ಯಾಗಾರದಲ್ಲಿ, ಗದ್ದೆಯಲ್ಲಿ ಅಥವಾ ಇನ್ಯಾವುದೇ ಉತ್ಪಾದನ ಸನ್ನಿವೇಶದ ಉತ್ಪಾದನ ಕಾರ್ಯದಲ್ಲಿ ಭಾಗವಹಿಸುವುದು" ಎಂಬ ವ್ಯಾಖ್ಯೆ ಡ್ಯೂಯಿ ಸೂಚಿಸಿರುವ ಚಟುವಟಿಕೆಗಳಿಗೆ ಸಮಾನವಾಗಿದೆ. ಕೊಠಾರಿ ಆಯೋಗದ ವರದಿ ತನ್ನ ಒಂದು ಪುರವಣಿ ಟಿಪ್ಪಣಿಯಲ್ಲಿ[11] ಕೊಟ್ಟಿರುವ, ಶಾಲೆಗಳು ಉಪಯೋಗಿಸಬಹುದಾದ ಕಾರ್ಯಾನುಭವ ಚಟುವಟಿಕೆಗಳ ಒಂದು ಪಟ್ಟಿ ಡ್ಯೂಯಿ ನೀಡಿದ ಚೌಕಟ್ಟಿಗೆ ಒಳಪಟ್ಟಿದೆ. ಆದ್ದರಿಂದ ಡ್ಯೂಯಿ ಸೂಚಿಸಿರುವ ಮೂರು ಹಂತಗಳನ್ನೂ ಒಳಗೊಂಡ ಯಾವುದೇ ಉತ್ಪಾದನ ಚಟುವಟಿಕೆಯನ್ನು ಕಾರ್ಯಾನುಭವದ ಚಟುವಟಿಕೆ ಎಂದು ಕರೆಯಬಹುದು.

ಕಾರ್ಯಾನುಭವವನ್ನು ಪಠ್ಯವಸ್ತುವಿನಲ್ಲಿ ಸೇರಿಸಿರುವುದಕ್ಕೆ ತಾತ್ತ್ವಿಕ ಸಮರ್ಥನೆಗಳು

ಮಾನವನ ಸ್ವರೂಪದ ಬಗ್ಗೆ ತಾತ್ತ್ವಿಕ ಪರ್ಯಾಲೋಚನೆಯಲ್ಲಿ ಅತಿಪ್ರಾಚೀನ ಕಾಲದಿಂದ ಹಿಡಿದು ಪ್ರತಿ ಯುಗದಲ್ಲಿ ಒಂದು ಮೂಲಭೂತ ಪ್ರಶ್ನೆ ಸತತವಾಗಿ ಕೇಳಿ ಬರುತ್ತಿದೆ: "ಮನುಷ್ಯ–ಮನಸ್ಸೇ ಅಥವಾ ದೇಹವೇ? ಈ ಪ್ರಶ್ನೆಗೆ ನೀಡಲಾಗುವ ಉತ್ತರಗಳ ನಡುವೆ ಯಾವಾಗಲೂ ತಿಕ್ಕಾಟವಿದೆ. ಈ ಉತ್ತರಗಳಲ್ಲಿ ಯಾವುದನ್ನು ಒಪ್ಪಿದರೂ ಆ ಉತ್ತರ ಆ ಕಾಲದ ಶಿಕ್ಷಣ ಪದ್ಧತಿ ಹಾಗೂ ವಿಶೇಷವಾಗಿ ಪಠ್ಯವಸ್ತುವಿನ ಮೇಲೆ ಅಗಾಧವಾದ ಪ್ರಭಾವವನ್ನು ಬೀರುತ್ತ ಬಂದಿದೆ. ಅರಿಸ್ಟಾಟಲನಂಥ ಮಹಾ ತತ್ತ್ವಜ್ಞಾನಿಯೂ ಮನಸ್ಸು ಮತ್ತು ದೇಹಗಳ ದ್ವಂದ್ವವನ್ನು ಸಮರ್ಥಿಸಿದ್ದ ಮತ್ತು ಇದಕ್ಕೆ ಅನುರೂಪವಾಗಿದ್ದ ವಿರಾಮಪೂರ್ಣ ಉನ್ನತವರ್ಗದ ಶಿಕ್ಷಣಕ್ಕೂ ಕಾರ್ಯಶೀಲ ಕೀಳು ವರ್ಗದ ಶಿಕ್ಷಣಕ್ಕೂ ಇದ್ದ ದ್ವಂದ್ವವನ್ನು ಸಮರ್ಥಿಸಿದ್ದ. ಹೀಗಾಗಿ ಮನಸ್ಸಿಗೂ ದೇಹಕ್ಕೂ ಇದ್ದ

---

[10] Dewey, John: *Democracy and Education,* Free Press, New York, ಪು. 196

[11] ಕೊಠಾರಿ ಆಯೋಗದ ವರದಿ : *Supplementary Note 1* (1966), ಪು. 210

ದ್ವಂದ್ವ ಪಠ್ಯವಸ್ತುವಿನಲ್ಲಿ ವಿರಾಮಕ್ಕೂ ಕಾರ್ಯಕ್ಕೂ ಕೊಡಬೇಕಾದ ಸ್ಥಾನವನ್ನು ನಿರ್ಧರಿಸಿತ್ತು. ಮನಸ್ಸು ಮತ್ತು ದೇಹಗಳಿಗಿದ್ದ ಸಾಂಪ್ರದಾಯಿಕ ಘರ್ಷಣೆ ಹಾಗೂ ಇದರಿಂದ ಉಂಟಾದ, ದೇಹಕ್ಕಿಂತ ಮನಸ್ಸು ಶ್ರೇಷ್ಠವಾದದ್ದು ಎನ್ನುವ ತಪ್ಪು ಭಾವನೆ ಎರಡು ರೀತಿಯ ಶಿಕ್ಷಣಗಳಿಗೆ ದಾರಿಕೊಟ್ಟಿತ್ತು. ಕುಲಜರ ಶಿಕ್ಷಣ ಮತ್ತು ಜನಜಂಗುಳಿಯ ಶಿಕ್ಷಣ (ಎಜ್ಯುಕೇಷನ್ ಆಫ್ ಕ್ಲಾಸಸ್ ವರ್ಸಸ್ ಮಾಸಸ್); ಅಥವಾ ಗಣ್ಯರ ಮತ್ತು ಗುಲಾಮರ ಶಿಕ್ಷಣ (ಎಜ್ಯುಕೇಷನ್ ಆಫ್ ನೋಬಲ್‌ಮೆನ್ ವರ್ಸಸ್ ಸ್ಲೇವ್ಸ್); ಅಥವಾ ಸಾಂಸ್ಕೃತಿಕ ಮತ್ತು ಔದ್ಯಮಿಕ ಶಿಕ್ಷಣ (ಕಲ್ಚರಲ್–ಲಿಬರಲ್ ವರ್ಸಸ್ ಪ್ರೊಫೆಷನಲ್ ಎಜುಕೇಷನ್). ಹೀಗಾಗಿ ಸಾಂಪ್ರದಾಯಿಕ ಪಠ್ಯವಸ್ತು ಕೈಕೆಲಸಕ್ಕೆ ಒಂದು ಸ್ಥಾನವನ್ನು ಕೊಡಲೇ ಇಲ್ಲ. ಈ ಪರಿಸ್ಥಿತಿ ಕಾರ್ಮಿಕ ಕ್ರಾಂತಿ ಮತ್ತು ಅದರಿಂದಾದ ಸಾಮಾಜಿಕ ಉತ್ಥಾನದ ವರೆಗೆ ನಡೆದುಕೊಂಡು ಬಂತು. ಆದರೆ 17ನೆಯ ಶತಮಾನದಲ್ಲಿ ಇಂಗ್ಲಂಡಿನ ಜಾನ್ ಲಾಕ್‌ನ ಮುಂದಾಳತ್ವದಲ್ಲಿ ಯೂರೋಪಿನಲ್ಲಿ ವಾಸ್ತವವಾದ (ರಿಯಲಿಸಂ) ಎನ್ನುವ ನೂತನ ತಾತ್ವಿಕ ಪಂಥ ಪ್ರಾರಂಭವಾಯಿತು. ಇಂಗ್ಲಂಡಿನ ತತ್ವಶಾಸ್ತ್ರಜ್ಞನಾದ ಜಾನ್ ಲಾಕ್ ಶಿಕ್ಷಣದ ಮೇಲಿನ ತನ್ನ ಲೇಖನಗಳಲ್ಲಿ ಎಲ್ಲ ರೀತಿಯ ಇಂದ್ರಿಯ ಜ್ಞಾನಗಳನ್ನು ಮತ್ತು ಇದರಿಂದಾಗಿ ಕೈಕೆಲಸದ ಮಹತ್ವವನ್ನು ಎತ್ತಿ ತೋರಿಸಿದ. ನಿಸರ್ಗವಾದ ಮತ್ತು ವಾಸ್ತವವಾದದ ತತ್ವಗಳು ಕೈಕೆಲಸಕ್ಕೆ ಪಠ್ಯವಸ್ತುವಿನಲ್ಲಿ ಹೊಸ ಪಾತ್ರವನ್ನು ನಿರೂಪಿಸಿದುವು. ಪ್ರಪಂಚದ ವಸ್ತುಗಳ ಜೊತೆ ಕೆಲಸ ಮಾಡುವುದರ ಮೂಲಕ ಅವುಗಳ ಅಧ್ಯಯನದ ಮಹತ್ವದ ಮೇಲೆ ಹೆಚ್ಚು ಬಲ ಹೇರಿ 17ನೆಯ ಶತಮಾನದ ಶಾಬ್ದಿಕ ಶಿಕ್ಷಣದ ಪಠ್ಯವಸ್ತುವನ್ನು ಪುನಶ್ಚೇತನಗೊಳಿಸುವುದಕ್ಕೆ ಈ ಪಂಥಗಳು ಪ್ರಯತ್ನಪಟ್ಟುವು. ತಾನೇ ಗಣ್ಯ ವ್ಯಕ್ತಿಯಾಗಿದ್ದ ಲಾಕ್ ಗಣ್ಯವ್ಯಕ್ತಿಗಳ ಮಕ್ಕಳೆಲ್ಲರೂ ಯಾವುದಾದರೊಂದು ಉದ್ಯಮವನ್ನು ಕಲಿಯಬೇಕೆಂದು ಪ್ರಬಲವಾಗಿ ಶಿಫಾರಸ್ಸು ಮಾಡಿದ. ಈ ತತ್ವಶಾಸ್ತ್ರದ ಪ್ರಭಾವವನ್ನು ಶ್ರೇಷ್ಠ ಶಿಕ್ಷಣತಜ್ಞರಾದ ಪೆಸ್ಟಾಲಜಿ (object lessons) ಫ್ರೋಬೆಲ್ (education through gifts) ಮತ್ತು ಮೇರಿಯಾ ಮಾಂಟೆಸ್ಸೋರಿ (didactic apparatus). ಇವರ ಶೈಕ್ಷಣಿಕ ವಿಚಾರಧಾರೆಯಲ್ಲಿ ಸುಲಭವಾಗಿ ಗುರುತಿಸಬಹುದು.

ಮನಸ್ಸು ಮತ್ತು ದೇಹಕ್ಕೆ ಇದ್ದ ಸಾಂಪ್ರದಾಯಿಕ ದ್ವಂದ್ವವನ್ನು ಸಂಪೂರ್ಣವಾಗಿ ತಿರಸ್ಕರಿಸುವ ಕಾರ್ಯ ಕಟ್ಟಕಡೆಗೆ ಡ್ಯೂಯಿಯ ಪಾಲಿಗಿತ್ತು. ಬ್ರೂಬೇಕರ್ ಹೇಳುವ ಹಾಗೆ: "ಈ ದ್ವಂದ್ವ ಮನಸ್ಸು ಮತ್ತು ದೇಹವನ್ನು ಒಂದೇ ಧಾರೆಯ ಭಾಗಗಳಾಗಿ ವೀಕ್ಷಿಸಿದ ಅವನ ಕಾಲದ ಜೀವ ಮತ್ತು ಮನೋವಿಜ್ಞಾನಗಳಿಗೆ ವಿರುದ್ಧವಾಗಿದೆಯೆಂದು ಅದನ್ನು ಡ್ಯೂಯಿ ತಿರಸ್ಕರಿಸಿದ. ಮನಸ್ಸು ಮತ್ತು ದೇಹಗಳು ಮೂಲಭೂತವಾಗಿ ಸಾಮ್ಯ ಹೊಂದಿವೆ ಎನ್ನುವ ಈ ನಂಬಿಕೆಯ ಪ್ರಭಾವವನ್ನು ಶಿಕ್ಷಣದಲ್ಲಿ ಸ್ಪಷ್ಟವಾಗಿ ಕಾಣಬಹುದಿತ್ತು. ವಿರಾಮ ಮತ್ತು ಕೆಲಸ ಹಾಗೂ ಚಿಂತನೆ ಮತ್ತು ಚಟುವಟಿಕೆಗಳು ಒಂದೇ ಶಿಕ್ಷಣಪ್ರಕ್ರಿಯೆಯ ಸಮಗ್ರೀಕೃತ ಭಾಗಗಳಾದುವು. ಚಟುವಟಿಕೆಗೆ ಚಿಂತನ ನಿರ್ದೇಶನ ಕೊಡುತ್ತಿತ್ತು ಹಾಗೂ ಭೌತಿಕ ಮತ್ತು ಸಾಮಾಜಿಕ ಸನ್ನಿವೇಶಗಳಲ್ಲಿ ಕೈಕೊಂಡ ಚಟುವಟಿಕೆಗಳ ಪರಿಣಾಮ ಚಿಂತನೆಯ ಸಮಂಜಸತೆಯನ್ನು ಪರಿಶೋಧಿಸುತ್ತಿತ್ತು. ಆದ್ದರಿಂದ ಚಟುವಟಿಕೆಗಾಗಿ ಶಿಕ್ಷಣವೂ ಚಿಂತನಕ್ಕಾಗಿ ಶಿಕ್ಷಣದ ಜೊತೆ ಒಂದು ಗೌರವ ಸ್ಥಾನವನ್ನು ಪಡೆದಿತ್ತು"[12]. ಈ ಸಂದರ್ಭದಲ್ಲಿ, ಲೇಖನದ ಆರಂಭದಲ್ಲಿ ಉದ್ಧರಿಸಿರುವ ಗೀತೆಯ ಶ್ಲೋಕ ಅತ್ಯಂತ ಅರ್ಥಪೂರ್ಣವಾಗಿದೆ. ಕಾರ್ಯದ ಮೂಲಕ ಪಡೆದ ಜ್ಞಾನಕ್ಕೂ ಬೌದ್ಧಿಕ ಜ್ಞಾನಕ್ಕೂ ಇರುವ ದ್ವಂದ್ವದಲ್ಲಿ ಅರ್ಥವಿಲ್ಲ ಹಾಗೂ ಯಾವ ವ್ಯಕ್ತಿ ಬೌದ್ಧಿಕ ಕಾರ್ಯ ಕೈಕೆಲಸಕ್ಕಿಂತ ಶ್ರೇಷ್ಠವಾದದ್ದು ಎಂದು ಯೋಚಿಸುತ್ತಾನೊ ಅವನು ಕಪಟಾಚಾರಿ ಎಂದು ಈ ಶ್ಲೋಕದಿಂದ ಗ್ರಹಿಸಬಹುದು. ಆದ್ದರಿಂದ ಕಾರ್ಯಾನುಭವವನ್ನು 'ಶಿಕ್ಷಣದ ಸಮಗ್ರೀಕೃತ ಭಾಗವನ್ನಾಗಿ' ಪಠ್ಯವಸ್ತುವಿನಲ್ಲಿ ಸೇರಿಸಿರುವ ಕೊಠಾರಿ ಆಯೋಗದ ಕಾರ್ಯ ತಾತ್ವಿಕವಾಗಿ ಸಮರ್ಥನೀಯವಾಗಿದೆ.

---

[12] *History of the Problems of Education*, Mc Graw–Hill Book Co., N.Y. (1947), ಪು. 94

ಕಾರ್ಯಾನುಭವವನ್ನು ಪಠ್ಯವಸ್ತುವಿನಲ್ಲಿ ಸೇರಿಸುವುದಕ್ಕೆ ಮನೋವೈಜ್ಞಾನಿಕ ಸಮರ್ಥನೆಗಳು

ಕಾರ್ಯಾನುಭವವನ್ನು ಪಠ್ಯವಸ್ತುವಿನಲ್ಲಿ ಸೇರಿಸುವುದಕ್ಕೆ ಇರುವ ಆಧುನಿಕ ಮನೋವೈಜ್ಞಾನಿಕ ವಿಚಾರಧಾರೆಯ ಅಭಿಪ್ರಾಯಗಳನ್ನು ತಿಳಿಯೋಣ. ಪ್ರತಿಯೊಂದು ಮಗುವಿನ ಚಟುವಟಿಕೆಗೆ ಪ್ರಬಲವಾದ ಪ್ರವೃತ್ತಿ ಇರುತ್ತದೆ ಎಂಬುದು ಮಕ್ಕಳ ಮನೋವಿಜ್ಞಾನದ ಒಂದು ಮೂಲ ಸತ್ಯ. ಬೇರೆ ರೀತಿಯಲ್ಲಿ ಹೇಳುವುದಾದರೆ, ಪ್ರತಿಯೊಂದು ಮಗುವಿಗೂ ರಚನಾತ್ಮಕ ಕಾರ್ಯಗಳಲ್ಲಿ ತೊಡಗುವ ಆಸೆ ಇರುತ್ತದೆ. ಆಟದ ಶೈಕ್ಷಣಿಕ ಮೌಲ್ಯಗಳನ್ನು ಪ್ರಥಮವಾಗಿ ನಿರೂಪಿಸಿದ ಫ್ರೋಬೆಲನಿಗೇ ಕಾರ್ಯದ (ಚಟುವಟಿಕೆಯ) ಶೈಕ್ಷಣಿಕ ಮೌಲ್ಯಗಳನ್ನು ಕೂಡ ತಿಳಿಯಪಡಿಸಿದ ಗೌರವ ಸಲ್ಲಬೇಕು. ಸ್ವಯಂ ಚಟುವಟಿಕೆಗಳಲ್ಲಿ ತೊಡಗುವುದು ಮಗುವಿನ ಆದ್ಯ ಸ್ವಭಾವ ಎಂಬ ರೂಸೋವಿನ ಸಿದ್ಧಾಂತವನ್ನು ಫ್ರೋಬೆಲ್ ಒಪ್ಪಿದ. ಫ್ರೋಬೆಲ್ ಇನ್ನೂ ಮುಂದೆ ಹೋಗಿ, ಹೇಗೆ ಆಟಗಳು ಮಕ್ಕಳ ಸ್ವಯಂಪ್ರೇರಿತ ಚಟುವಟಿಕೆಗಳ ಪ್ರತಿರೂಪವೋ ಹಾಗೆಯೇ ಮಕ್ಕಳು ಪ್ರೌಢರಾಗುವ ಹೊತ್ತಿಗೆ ಕಾರ್ಯಗಳೂ ಮಕ್ಕಳ ಸ್ವಯಂಪ್ರೇರಿತ ಚಟುವಟಿಕೆಗಳ ಪ್ರತಿರೂಪ ಎಂದು ನಂಬಿದ್ದ. ಅವನು ಶಿಕ್ಷಣ ಕುರಿತು ತನ್ನ ಪುಸ್ತಕದಲ್ಲಿ ಹೀಗೆ ಬರೆದಿದ್ದಾನೆ: "ಮನುಷ್ಯ ತನ್ನ ದೇಹದ ರಕ್ಷಣೆಗಾಗಿ ಆಹಾರ, ವಸ್ತ್ರ, ವಸತಿಗಳನ್ನು ಗಳಿಸುವುದಕ್ಕಾಗಿ ಮಾತ್ರ ದುಡಿಯುತ್ತಾನೆ, ಉತ್ಪಾದಿಸುತ್ತಾನೆ ಹಾಗೂ ರಚಿಸುತ್ತಾನೆ ಎಂಬ ಅವಮಾನಕರವಾದ ಭ್ರಾಂತಿಯನ್ನು ಸಹಿಸಬಹುದೇ ಹೊರತು ಪ್ರಚಾರ ಮಾಡಬಾರದು. ಪ್ರಮುಖವಾಗಿ ಮತ್ತು ಸತ್ಯವಾಗಿಯೂ ಮಾನವ ತನ್ನ ಆಧ್ಯಾತ್ಮಿಕ ಹಾಗೂ ದೈವಿಕ ಶಕ್ತಿಗಳು ವ್ಯಕ್ತವಾಗಲೆಂದು ಕಾರ್ಯೋನ್ಮುಖನಾಗುತ್ತಾನೆ......ಆದ್ದರಿಂದ, ಬೆಳೆಯುತ್ತಿರುವ ಯುವಕರನ್ನು ಸೃಜನಾತ್ಮಕ ಹಾಗೂ ಉತ್ಪಾದಕ ಚಟುವಟಿಕೆಗಳಲ್ಲಿ ಬೇಗ ತೊಡಗಿಸಬೇಕು...... ಕಾರ್ಯದ ಮೂಲಕ, ಜೀವನದ ಮೂಲಕ, ನೀಡುವ ಪಾಠಗಳು ಅತ್ಯಂತ ಪರಿಣಾಮಕಾರಿಯಾಗಿರುತ್ತವೆ"[13]. ಇಂದಿಗೂ ಮಗು ಒಂದು ಉಪಯುಕ್ತ ಸ್ವಯಂಪ್ರೇರಿತ ಚಟುವಟಿಕೆಯಲ್ಲಿ ತೊಡಗುವುದಕ್ಕೆ ಇಷ್ಟಪಡುತ್ತದೆ ಎಂಬುದು ಸರ್ವಸಾಧಾರಣವಾದ ನಂಬಿಕೆ. ಹೀಗಾಗಿ ಕಾರ್ಯಾನುಭವ ಚಟುವಟಿಕೆಗಳು ಈ ನಂಬಿಕೆಗೆ ಕಲಶಪ್ರಾಯವಾಗಿವೆ.

ಮಗುವಿಗೆ ಸಾಧನೆಯ ಅವಶ್ಯಕತೆ ಇದೆ ಎಂಬುದು ಮನೋವಿಜ್ಞಾನದ ಇನ್ನೊಂದು ಮೂಲ ತತ್ವ. ಆದರೆ ನಮ್ಮ ಪಠ್ಯವಸ್ತುವಿನಲ್ಲಿರುವ ಹಲವಾರು ವಿಷಯಗಳು, ಮಗುವಿಗೆ ತತ್‌ಕ್ಷಣದ ಹಾಗೂ ಪ್ರತ್ಯಕ್ಷವಾದ ಫಲಗಳನ್ನು ತರದೆ ಇರುವುದರಿಂದ, ಮಗುವಿನ ಈ ಅವಶ್ಯಕತೆಯನ್ನು ಪೂರೈಸುವುದಿಲ್ಲ. ಆದ್ದರಿಂದ ಮಗುವಿಗೆ ಈ ವಿಷಯಗಳ ಬಗ್ಗೆ ಆಸಕ್ತಿ ಕೆರಳದಿರುವುದೂ ಸಾಧ್ಯ. ಆದರೆ ಕಾರ್ಯಾನುಭವ ಚಟುವಟಿಕೆಗಳು ಶಿಕ್ಷಣಕ್ರಮದ ಈ ನ್ಯೂನತೆಯನ್ನು ಹೋಗಲಾಡಿಸುತ್ತವೆ. ಡ್ಯೂಯಿಯೂ ನಂಬಿರುವಂತೆ, "ಮಗುವಿನ ಬುದ್ಧಿ ವಿಕಾಸವಾಗುತ್ತ ಇದ್ದ ಹಾಗೆ, ನಿಷ್ಕೃಷ್ಟ ಹಾಗೂ ಪ್ರತ್ಯಕ್ಷ ಸಾಧನೆಯ ಫಲಗಳನ್ನು ಕೊಡದ ಚಟುವಟಿಕೆಗಳು ಆಸಕ್ತಿಯನ್ನು ಉಂಟುಮಾಡುವುದಿಲ್ಲ. ......ವ್ಯಕ್ತಿಗಳು ತಮ್ಮ ಸಾಧನೆಯ ಶಕ್ತಿಯ ಅರಿವು ಪಡೆಯಲು ಪ್ರತ್ಯಕ್ಷ ಫಲಗಳು ಆವಶ್ಯಕ[14]. ಸಾಧನೆಯ ಆವಶ್ಯಕತೆಯನ್ನು ಪೂರೈಸಿ ಮಕ್ಕಳ ಸಾಧನಾಭಿಪ್ರೇರಣೆಯನ್ನು (ಅಚಿವ್‌ಮೆಂಟ್ ಮೊಟಿವ್) ಬೆಳೆಸುವುದು ಯಾವಾಗಲೂ ಹಿತಕಾರಿಯಾದ್ದು. ರಾಷ್ಟ್ರೀಯ ಉತ್ಪಾದನೆಯನ್ನು ಹೆಚ್ಚಿಸುವುದಕ್ಕಾಗಿ ಪ್ರತಿಯೊಂದು ಮಗುವಿನಲ್ಲೂ ಸಾಧನಾಭಿಪ್ರೇರಣೆಯ ಬೆಳವಣಿಗೆಯ ಕಾರ್ಯ ಅತಿಮಹತ್ವವುಳ್ಳದ್ದು ಮತ್ತು ಕಾರ್ಯಾನುಭವ ಚಟುವಟಿಕೆಗಳನ್ನು, ಉತ್ಪಾದನೆಯನ್ನು ಹೆಚ್ಚಿಸುವುದಕ್ಕಾಗಿಯೇ ಕೊಠಾರಿ ಆಯೋಗದ ವರದಿ ಶಿಫಾರಸು ಮಾಡಿದೆ. ಕೆಲವು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಅಧಿಕ ಉತ್ಪಾದನೆಗೆ ಕಾರಣಗಳನ್ನು ಅಭಿವೃದ್ಧಿಶೀಲ ಭಾರತದಂಥ ರಾಷ್ಟ್ರಗಳಲ್ಲಿಯ ಕಡಿಮೆಮಟ್ಟದ ಉತ್ಪಾ

---

[13] Froebel: *Education of Man*, Sidney Appleton, London (1905), pp. 33–34

[14] Dewey, John: *Democracy and Education*, Free Press, New York (1966), p. 203

ದನೆಯ ಕಾರಣಗಳ ಜೊತೆ ಹೋಲಿಸಿ ನೋಡಿದ ಇತ್ತೀಚಿನ ಮ್ಯಾಕ್ ಕ್ಲೆಲಾಂಡರ ಸಂಶೋಧನೆಯ[15] ಪ್ರಕಾರ ಕಡಿಮೆ ಉತ್ಪಾದನೆಯ ಮುಖ್ಯ ಕಾರಣ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿಯ ಜನರಲ್ಲಿ ಅತಿನಿಕೃಷ್ಟವಾದ ಸಾಧನಾಭಿಪ್ರೇರಣೆ. ಅದ್ದರಿಂದ ಮಕ್ಕಳ ಸಾಧನಾಭಿಪ್ರೇರಣೆಯನ್ನು ಬೆಳೆಸುವ ಅವಶ್ಯಕತೆಯಿದೆ. ಈ ಅವಶ್ಯಕತೆಯನ್ನು ಪೂರೈಸುವಲ್ಲಿ ಒಂದು ಸುವ್ಯವಸ್ಥಿತವಾದ ಕಾರ್ಯಾನುಭವ ಕಾರ್ಯಕ್ರಮ ಯಶಸ್ವಿಯಾದೀತು.

ಒಬ್ಬ ವ್ಯಕ್ತಿಯ ಮನಸ್ವಾಸ್ಥ್ಯ ಸ್ವಲ್ಪವಾಗಿಯಾದರೂ ಅವನ ಸ್ವಪ್ರಜ್ಞೆಯನ್ನು ಹೊಂದಿಕೊಂಡಿರುತ್ತದೆ. ಅವನ ಸ್ವ-ಪ್ರಜ್ಞೆ ಉತ್ತಮ ಮಟ್ಟದ್ದಾಗಿದ್ದಷ್ಟೂ, ಅಂದರೆ ಒಬ್ಬ ವ್ಯಕ್ತಿಗೆ ತನ್ನ ಸಾಮರ್ಥ್ಯಗಳ ಅರಿವು ಯಥಾರ್ಥವಾಗಿದ್ದಷ್ಟೂ, ಅವನ ಮನಸ್ವಾಸ್ಥ್ಯದ ಮಟ್ಟ ಉತ್ತಮವಾಗಿರುತ್ತದೆ. ಆದರೆ ನಮ್ಮಲ್ಲಿ ಹಲವರಿಗೆ, ವಿಶೇಷವಾಗಿ ಮಕ್ಕಳಿಗೆ, ತಮ್ಮ ಸಾಮರ್ಥ್ಯಗಳ ಬಗ್ಗೆ ತಾವೇ ಹೆಚ್ಚು ಬೆಲೆ ಕಟ್ಟಿಕೊಳ್ಳುವ ಪ್ರವೃತ್ತಿ ಇರುತ್ತದೆ. ವ್ಯಕ್ತಿ ತನ್ನ ಬಗ್ಗೆ ತಾನೇ ಸ್ಪಷ್ಟ ಚಿತ್ರಮೂಡಿಸಿಕೊಳ್ಳುವುದಕ್ಕೆ ಕಾರ್ಯಾನುಭವ ಕಾರ್ಯಕ್ರಮ ಸಹಾಯವಾಗುತ್ತದೆ. ಡ್ಯೂಯಿ ಹೇಳುವ ಹಾಗೆ. "ಮಕ್ಕಳಿಗೆ ತಮ್ಮ ಸಾಮರ್ಥ್ಯಕ್ಕೆ ಮೀರಿದ ಚಟುವಟಿಕೆಗಳಲ್ಲಿ ತೊಡಗುವ ಪ್ರವೃತ್ತಿ ಇದೆ. ಎನ್ನುವ ಮಾತು ಸತ್ಯ. ಆದರೆ ತಮ್ಮ ಸಾಮರ್ಥ್ಯಗಳ ಮಿತಿಯ ಅರಿವನ್ನು ಕಲಿಯಬೇಕಾದ್ದು ಮುಖ್ಯ; ಇದನ್ನು ಕಾರ್ಯಫಲಗಳ ಅನುಭವದ ಮೂಲಕ ಕಲಿಯಬಹುದು".[16]

ಜಾಕೀರ್ ಹುಸೇನ್ ಕಮಿಟಿಯವರು ಕೈಕೆಲಸವನ್ನು ಶಿಕ್ಷಣದ ಆಧಾರವಾಗಿ ಇಟ್ಟುಕೊಳ್ಳುವುದಕ್ಕೆ ಒಪ್ಪಿದ ಇನ್ನೊಂದು ಕಾರಣವೂ ಕಾರ್ಯಾನುಭವವನ್ನು ಪಠ್ಯವಸ್ತುವಿನಲ್ಲಿ ಸೇರಿಸುವುದಕ್ಕೆ ಸಮರ್ಥಕವಾಗಿದೆ: "ಮನೋವೈಜ್ಞಾನಿಕವಾಗಿ ಇದು ಹಿತಕರವಾಗಿದೆ. ಏಕೆಂದರೆ. ಮಕ್ಕಳ ಕ್ರಿಯಾಶೀಲ ಸ್ವಭಾವ ಹಿತಕರವಾಗಿ ಪ್ರತಿಭಟಿಸುವ ಸಂಪೂರ್ಣ ಪ್ರೌಢ ಹಾಗೂ ಸೈದ್ಧಾಂತಿಕವಾದ ಪಾಠಗಳ ಪೀಡನೆಯಿಂದ ಮಕ್ಕಳಿಗೆ ಪರಿಹಾರ ರೂಪವಾಗುತ್ತದೆ."[17] ಈ ಹೇಳಿಕೆ ಗಾಂಧೀಜಿಯ ಫಲಪ್ರಮಾಣವಾದಿ ಶಿಕ್ಷಣ ಸಿದ್ಧಾಂತಕ್ಕೆ ಅನುರೂಪವಾಗಿದೆ. ಡಾ. ಆರ್. ಎಸ್. ಮಣಿ ಬರೆಯುವಂತೆ. "ಫಲಪ್ರಮಾಣವಾದಿಯ ಹಾಗೆ ಗಾಂಧಿಯೂ ಚಟುವಟಿಕೆಯ ಮೂಲಕ ಕಲಿಕೆಯನ್ನು ಪ್ರತಿಪಾದಿಸುತ್ತಾರೆ: ಪುಸ್ತಕಜ್ಞಾನದಲ್ಲಿ ಅಭ್ಯಾಸ ಹೊಂದಿ ಮಗು ತನ್ನ ಚಟುವಟಿಕೆಗಳಿಂದಲೇ ಹೆಚ್ಚು ಕಲಿಯುತ್ತದೆ ಎಂದು ನಂಬಿದ್ದಾರೆ."[18] ಕಾರ್ಯಾನುಭವವು ಚಟುವಟಿಕೆಯನ್ನು ಜ್ಞಾನದೊಂದಿಗೂ ಶಿಕ್ಷಣವನ್ನು ಜೀವನದೊಂದಿಗೂ ಸಮಗ್ರೀಕರಿಸುವ ಒಂದು ವಿಧಾನವಾಗಿದೆ. ಈ ರೀತಿಯ ಸಮಗ್ರೀಕರಣ ಮನೋವೈಜ್ಞಾನಿಕವಾಗಿ ಹಿತಕಾರಿಯಾಗಿದೆ. ಕೊಠಾರಿ ಆಯೋಗದ ವರದಿ ಹೇಳುವ ಹಾಗೆ: "ಸಾಂಪ್ರದಾಯಿಕ ಶಿಕ್ಷಣದ ಅತಿ ಪ್ರೌಢ ಸ್ವಭಾವಕ್ಕೆ ಈ ರೀತಿಯ (ಕಾರ್ಯಾನುಭವ) ತಿದ್ದುಪಡಿಯ ಅವಶ್ಯಕತೆ ಇದೆ ಎಂಬುದನ್ನು ಎಲ್ಲ ಕಡೆಯಲ್ಲೂ ಗುರುತಿಸಲಾಗಿದೆ. ಈಗಿನ ಕಾಲದ ಹೆಚ್ಚು ದೇಶಗಳ ಶಾಲಾ ವ್ಯವಸ್ಥೆಯ ಪಠ್ಯವಸ್ತುಗಳಲ್ಲಿ, ವಿಶೇಷವಾಗಿ ಯೂರೋಪಿನ ಸಮಾಜವಾದಿ ವ್ಯವಸ್ಥೆಗಳಲ್ಲಿ, 'ಕಾರ್ಯಾನುಭವ' ಅಥವಾ 'ಕೈಕೆಲಸ' ಎನ್ನುವ ಒಂದು ಪಠ್ಯವಿಷಯಕ್ಕೆ ಸ್ಥಾನವಿದೆ"[19].

ಮನೋವೈಜ್ಞಾನಿಕವಾಗಿ ಸಮರ್ಥಿಸಬಹುದಾದ ಕಾರ್ಯಾನುಭವದ ಇನ್ನೊಂದು ಪ್ರಯೋಜನ

---

[15] MC Celland : *The Achiening sosicty*. 1963

[16] Dewey, John : *Democracy and Education*, Free Press, New York (1966), p. 197

[17] *Educational Reconstruction*, Publications Division, Delhi (1959), p. 93

[18] *Educational Ideas and Ideals of Gandhi & Tagore*, New Book society of India, New Delhi (1964), p. 158

[19] ಕೊಠಾರಿ ಆಯೋಗದ ವರದಿ (1966), ಪು. 8

ಎಂದರೆ ಮಕ್ಕಳಿಗೆ ತಮ್ಮ ಶಾಲಾನಂತರದ ಕಾರ್ಯಪ್ರಪಂಚದ ಸಮಸ್ಯೆಗಳನ್ನು ಬಗೆಹರಿಸಲು ಸಹಾಯ ಮಾಡಿ ಅಲ್ಲಿ ಅವರ ಸಮಾಯೋಜನೆಗೆ ಉಪಕಾರಿಯಾಗಿರುತ್ತದೆ.

ಕಾರ್ಯಾನುಭವವನ್ನು ಪಠ್ಯವಸ್ತುವಿನಲ್ಲಿ ಸೇರಿಸುವುದಕ್ಕೆ ಸಮಾಜಶಾಸ್ತ್ರದ ಸಮರ್ಥನೆಗಳು

ಕಾರ್ಯಾನುಭವಕಾರ್ಯಕ್ರಮದಲ್ಲಿ ಅದು ಉತ್ತಮವಾಗಿ ನಿರ್ದೇಶಿತವಾದ ಶಿಕ್ಷಣವ್ಯವಸ್ಥೆಯ ಗುರಿಯಾಗಲು ಯೋಗ್ಯವಾದ ಹಲವು ಆಂತರಿಕ ಮೌಲ್ಯಗಳಿವೆ. ಈ ಚಟುವಟಿಕೆಗಳನ್ನು ಸಂಪೂರ್ಣವಾಗಿ ಆರ್ಥಿಕ ಆಸಕ್ತಿಗಳಿಗಾಗಿ ಶಾಲೆಗಳಲ್ಲಿ ವ್ಯವಸ್ಥೆ ಮಾಡಬೇಕು ಎನ್ನುವ ಹೇಳಿಕೆ ಅವರ ಇತರ ಮೌಲ್ಯಗಳನ್ನು ನಿಕೃಷ್ಟವಾಗಿ ಕಾಣುವಂತಾಗುತ್ತದೆ. ಡ್ಯೂಯಿ ಹೇಳುವ ಹಾಗೆ, "ಶಾಲೆಯ ಪ್ರಯೋಜನಕ್ಕೆ ಬರುವ ಮಾನವರ ಮೂಲಕಾರ್ಯಗಳಾದ ತೋಟಗಾರಿಕೆ, ನೇಯುವುದು, ಮರಗೆಲಸ, ಅಡಿಗೆ ಮಾಡುವುದು, ಲೋಹಗಳ ಕೆಲಸ, ಇತ್ಯಾದಿಗಳಿಗೆ ಕೇವಲ ಜೀವನಾಧಾರದ ಮೌಲ್ಯವಿದೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ"[20]. ಡ್ಯೂಯಿಯ ಪ್ರಕಾರ ಈ ಚಟುವಟಿಕೆಗಳಿಗೆ ಪಠ್ಯವಸ್ತುವಿನಲ್ಲಿ ನಿರ್ದಿಷ್ಟ ಸ್ಥಾನ ಕೊಡಲು ಇರುವ ಮುಖ್ಯ ಆಧಾರಗಳು ಬೌದ್ಧಿಕ ಹಾಗೂ ಸಾಮಾಜಿಕ. ಈ ಸಂಬಂಧವಾಗಿ ಡ್ಯೂಯಿ ಕಾರ್ಯಾನುಭವ ಚಟುವಟಿಕೆಗಳಲ್ಲಿ ಶಿಕ್ಷಕರ ಪಾತ್ರವನ್ನು ವ್ಯಾಖ್ಯಾನ ಮಾಡಿರುವಂತೆ "ಈ ಕಾರ್ಯಾನುಭವ ಚಟುವಟಿಕೆಗಳಲ್ಲಿ ಮಕ್ಕಳು ಹಸ್ತ ಕೌಶಲಗಳನ್ನೂ ತಾಂತ್ರಿಕ ಸಾಮರ್ಥ್ಯವನ್ನೂ ಪಡೆದು, ತಮ್ಮ ಕೆಲಸಗಳಲ್ಲಿ ಪ್ರಾಸಂಗಿಕ ತೃಪ್ತಿಯನ್ನು ಕೂಡ ಹೊಂದಿ, ಭವಿಷ್ಯದಲ್ಲೂ ಅವನ್ನು ಉಪಯೋಗಕ್ಕೆ ತರುವ ಹಾಗೆ ಮಾಡಿಕೊಡುವುದರ ಜೊತೆಗೆ ಈ ಚಟುವಟಿಕೆಗಳನ್ನು ಶಿಕ್ಷಣಕ್ಕೆ–ಎಂದರೆ ಬೌದ್ಧಿಕ ಫಲಗಳು ಹಾಗೂ ಸಾಮಾಜಿಕ ಮನೋಧರ್ಮಗಳಿಗೆ–ಅಧೀನ ಮಾಡುವುದೇ ಶಿಕ್ಷಕನ ಸಮಸ್ಯೆ"[21]. ಕಾರ್ಯಾನುಭವ ಚಟುವಟಿಕೆಗಳಿಗೆ ಅವಕಾಶ ನೀಡುವ ಉತ್ತಮ ಸಾಮಾಜಿಕ ಮನೋಧರ್ಮಗಳನ್ನು ಬೆಳೆಸುವ ಕಾರ್ಯ ಅವಶ್ಯಕವೂ ಹಿತಕರವೂ ಹೌದು. ಆದರೆ ಇಂದಿನ ಪ್ರೌಢ ಶಿಕ್ಷಣ ಮಕ್ಕಳನ್ನು ಅವರ ಸಮುದಾಯ ಜೀವನದಿಂದ ದೂರೀಕರಿಸಿ ತನ್ಮೂಲಕ ಕೆಲಸಗಾರರ ಜೀವನದ ಬಗ್ಗೆ ಅವರಲ್ಲಿ ನಿರ್ಲಕ್ಷ್ಯವನ್ನು ಬೆಳೆಸುತ್ತದೆ. ಇಂದಿನ ಆಧುನಿಕ ಸುಶಿಕ್ಷಿತ ವ್ಯಕ್ತಿಗೆ ಕೈಕೆಲಸದ ಬಗ್ಗೆ ತಾತ್ಸಾರವಿದೆ ಹಾಗೂ ಕೆಲಸಗಾರನಿಗೆ ಸುಶಿಕ್ಷಿತ ವ್ಯಕ್ತಿಯ ಸದುದ್ದೇಶಗಳ ಬಗ್ಗೆ ಅಪನಂಬಿಕೆ ಇದೆ. ಸಮಾಜದ (ಸುಶಿಕ್ಷಿತರ) ಗಣ್ಯರ ಹಾಗೂ ಕೆಲಸಗಾರರ ನಡುವೆ ಇರುವ ಈ ರೀತಿಯ ವೈಮನಸ್ಯವನ್ನು ತೊಡೆದುಹಾಕುವುದು ಆವಶ್ಯಕ ಮತ್ತು ಈ ಕಾರ್ಯವನ್ನು ಪೂರೈಸುವಲ್ಲಿ ಕಾರ್ಯಾನುಭವ ಚಟುವಟಿಕೆಗಳು ಯಶಸ್ವಿಯಾದಾವು. ರೂಸೋವಿನ ಶಿಕ್ಷಣ ಪದ್ಧತಿಯ ವೃತ್ತಾಂತವನ್ನು ಹೇಳುವಾಗ ಆರ್ಚರ್ ಈ ರೀತಿ ಉಲ್ಲೇಖಿಸಿದ್ದಾನೆ: "ಒಂದು ಉದ್ಯಮವನ್ನು ಅದರ ಬಗ್ಗೆ ತಿಳಿದುಕೊಳ್ಳುವುದಕ್ಕಿಂತ ಹೆಚ್ಚಾಗಿ ಅದನ್ನು ಉಪೇಕ್ಷಿಸುವ ಅವಿಚಾರಾಭಿಪ್ರಾಯಗಳನ್ನು ಹೋಗಲಾಡಿಸಿಕೊಳ್ಳುವ ದೃಷ್ಟಿಯಿಂದ ಕಲಿಯಬೇಕು."[22] ಮೇಲಿನ ಹೇಳಿಕೆಯಲ್ಲಿ ಸಾಮಾಜಿಕ ಔದಾಸೀನ್ಯಗಳನ್ನು ನಿರ್ಮೂಲ ಮಾಡುವುದಕ್ಕೆ ಪ್ರಾಮುಖ್ಯವಿದೆ. ಕಾರ್ಯಾನುಭವದ ಇದೇ ಮೌಲ್ಯವನ್ನು ಮೂಲ ಶಿಕ್ಷಣ ಕುರಿತ ಜಾಕೀರ್ ಹುಸೇನ್ ಸಮಿತಿಯೂ ಗುರುತಿಸಿದೆ: "ಸಾಮಾಜಿಕವಾಗಿ ಪರಿಗಣಿಸುವುದಾದರೆ, ದೇಶದ ಎಲ್ಲ ಮಕ್ಕಳೂ ಭಾಗವಹಿಸುವ ಈ ರೀತಿಯ ಕಾರ್ಯಶೀಲ ಉತ್ಪಾದನ ಚಟುವಟಿಕೆಗಳನ್ನು ಶಿಕ್ಷಣವ್ಯವಸ್ಥೆಯಲ್ಲಿ ಸೇರಿಸುವುದರಿಂದ, ಇಬ್ಬರಿಗೂ ಹಾನಿಕಾರಕವಾದ, ಕೈಕೆಲಸಗಾರರು

[20] *Democracy and Education*, Free Press, New York (1966), P. 200

[21] *Democracy and Education*, Free Press, New York (1966), p. 196

[22] Archer, R. L. : *Rousseau on Education*, Edward Arnold, London (1912), p. 169

ಹಾಗೂ ಬುದ್ಧಿಜೀವಿಗಳ ನಡುವೆ ಇರುವ ವೈಮನಸ್ಯಗಳನ್ನು ತೊಡೆದುಹಾಕುತ್ತದೆ".[23] ಆದ್ದರಿಂದ ಕಾರ್ಯಾನುಭವ ಕಾರ್ಯಕ್ರಮ ಬುದ್ಧಿಜೀವಿಗಳು ಹಾಗೂ ಕೈಕೆಲಸಗಾರರ ನಡುವೆ ಇರುವ ಭಿನ್ನತೆಗಳನ್ನು ಬಹಿರಂಗವಾಗಿ ವ್ಯಕ್ತವಾಗದಂತೆ ಮಾಡುವುದರಲ್ಲಿ ಸಹಾಯಕವಾಗಿರುತ್ತದೆ; ಹಾಗೂ ಈ ಭಿನ್ನತೆಗಳ ಆಧಾರದ ಮೇಲೆ ನಿಂತಿರುವ ಸಾಮಾಜಿಕ ಸ್ತರಗಳನ್ನು ವ್ಯಕ್ತಿ ಹಾಗೂ ಸಮುದಾಯದ ನಡುವೆ ಇರುವ ಸಂಬಂಧಗಳನ್ನು ಪುಷ್ಟೀಕರಿಸುವುದರ ಮೂಲಕ ಹಾಗೂ ಅನಕ್ಷರಸ್ಥ ಜನಸಮುದಾಯಗಳು ಮತ್ತು ಸುಶಿಕ್ಷಿತ ವ್ಯಕ್ತಿಗಳ ನಡುವೆ ಹೆಚ್ಚು ಸಂಪರ್ಕಗಳನ್ನು ಬೆಳೆಸುವುದರ ಮೂಲಕ, ಹೆಚ್ಚು ಪ್ರಾಮುಖ್ಯ ಹೊಂದದಿರುವಂತೆ ಮಾಡುತ್ತದೆ. ಕಾರ್ಯಾನುಭವಕಾರ್ಯಕ್ರಮದ ಈ ಕಾರ್ಯ ಕೊಠಾರಿ ಆಯೋಗದ ವರದಿ ತನ್ನ ರಾಷ್ಟ್ರೀಯ ಅಭಿವೃದ್ಧಿ ಸಮಸ್ಯೆಗಳಲ್ಲಿ ನಿರೂಪಿಸಿರುವ ರಾಷ್ಟ್ರದ ಜನತೆಯ ಸಾಮಾಜಿಕ ಹಾಗೂ ಭಾವೈಕ್ಯಕ್ಕೆ ಸಹಾಯ ಮಾಡುತ್ತದೆ.[24]. ಸುಶಿಕ್ಷಿತ ವರ್ಗಗಳು ಹಾಗೂ ಅಶಿಕ್ಷಿತ ಜನಸಮುದಾಯಗಳ ನಡುವೆ ಇರುವ ವೈಮನಸ್ಯಗಳನ್ನು ರಾಷ್ಟ್ರೀಯ ಅಭಿವೃದ್ಧಿ ದೃಷ್ಟಿಯಿಂದ ತೊಡೆದು ಹಾಕುವ ಈ ಕಾರ್ಯ ಡ್ಯೂಯಿ ಪಾಶ್ಚಾತ್ಯ ನಾಗರಿಕತೆಯ ಅಂಧಯುಗಗಳ ಬಗ್ಗೆ ಮಾಡಿದ ಒಂದು ಅರ್ಥಗರ್ಭಿತ ಅವಲೋಕನದ ಬೆಳಕಿನಲ್ಲಿ ನೋಡಿದಾಗ ಅತ್ಯಂತ ಉಪಯುಕ್ತವಾಗಿ ಹಾಗೂ ಮಹತ್ತ್ವಪೂರ್ಣವಾಗಿ ತೋರುತ್ತದೆ. ಆ ಅವಲೋಕನವೆಂದರೆ: "ವೈಜ್ಞಾನಿಕ ಅಭಿವೃದ್ಧಿ ಬಹಳ ನಿಧಾನಕ್ರಿಯೆಯಾಗಿದ್ದ ಯುಗಗಳು ಯಾವುವೆಂದರೆ, ಸುಶಿಕ್ಷಿತ ವ್ಯಕ್ತಿಗಳು ದಿನಬಳಕೆಯ ವಸ್ತುಗಳು ಹಾಗೂ ವ್ಯಾಪಾರಗಳ ಬಗ್ಗೆ, ವಿಶೇಷವಾಗಿ ಕೈಕೆಲಸಕ್ಕೆ ಸಂಬಂಧಪಟ್ಟ ವ್ಯಾಪಾರಗಳ ಬಗ್ಗೆ, ತಿರಸ್ಕಾರ ಮನೋಭಾವವನ್ನು ತಳೆದಿದ್ದ ಯುಗಗಳು."[25] ನಾಗರಿಕತೆಯ ಇತಿಹಾಸದಲ್ಲಿ ವಿಜ್ಞಾನಗಳು ಉಪಯುಕ್ತ ಸಾಮಾಜಿಕ ಉದ್ಯಮಗಳಿಂದ ಬೆಳೆದುವು ಎನ್ನುವ ವಿಷಯವನ್ನು ಇಲ್ಲಿ ಗಮನಿಸುವುದು ಉತ್ತಮ.

ಕಾರ್ಯಾನುಭವವನ್ನು ಪಠ್ಯವಸ್ತುವಿನಲ್ಲಿ ಸೇರಿಸುವುದಕ್ಕೆ ಅರ್ಥಶಾಸ್ತ್ರದ ಸಮರ್ಥನೆಗಳು

ಒಬ್ಬ ಅರ್ಥಶಾಸ್ತ್ರಜ್ಞನ ದೃಷ್ಟಿಯಲ್ಲಿ ವೀಕ್ಷಿಸುವುದಾದರೆ ಕಾರ್ಯಾನುಭವ ಕಾರ್ಯಕ್ರಮ ಸದ್ಯದ ಮತ್ತು ಭವಿಷ್ಯದ ಕೆಲವು ಆರ್ಥಿಕ ಮೌಲ್ಯಗಳನ್ನು ಸಾಧಿಸುವಲ್ಲಿ ಸಹಕಾರಿಯಾಗಿದೆ. ಅದು ವಿದ್ಯಾರ್ಥಿಗಳಲ್ಲಿ ಉತ್ಪಾದನ ಕಾರ್ಯ ಹಾಗೂ ಕೈಕೆಲಸಗಳ ಮಹತ್ತ್ವವನ್ನು ಮೆಚ್ಚುವುದು, ಶ್ರಮ ಜೀವನಕ್ಕೆ ಮತ್ತು ಉಳಿಸುವುದಕ್ಕೆ ಬೇಕಾದ ಮನೋಭಾವ ಹೊಂದಿರುವುದು ಮುಂತಾದ ದೇಶದ ಆರ್ಥಿಕಾಭಿವೃದ್ಧಿಯನ್ನು ಹೆಚ್ಚಿಸುವ ಮೌಲ್ಯಗಳನ್ನು ಬೆಳೆಸುತ್ತದೆ. ಈ ಮೌಲ್ಯಗಳ ಸಿದ್ಧಿಯು ವಿದ್ಯಾರ್ಥಿಗಳಲ್ಲಿ ಉತ್ಪಾದನ ಪ್ರಕ್ರಿಯೆಗಳ ಬಗ್ಗೆ ಸೂಕ್ಷ್ಮ ಪರಿಜ್ಞಾನವನ್ನು ಬೆಳೆಸಿ, ಶ್ರಮದ, ಜವಾಬ್ದಾರಿಯುತವಾದ ಕೆಲಸಗಳಲ್ಲಿ ತೊಡಗುವ ಹವ್ಯಾಸವನ್ನು ಬೆಳೆಸುವುದರ ಮೂಲಕ ರಾಷ್ಟ್ರೀಯ ಉತ್ಪಾದನೆಯನ್ನು ಅಧಿಕಗೊಳಿಸುವಲ್ಲಿ ನೆರವಾಗುತ್ತದೆ. ರಾಷ್ಟ್ರೀಯ ಉತ್ಪಾದನೆಯನ್ನು ಹೆಚ್ಚಿಸುವುದೇ ಕೊಠಾರಿ ಆಯೋಗ ಕಾರ್ಯಾನುಭವವನ್ನು ಪಠ್ಯವಸ್ತುವಿನಲ್ಲಿ ಸೇರಿಸಿರುವುದರ ಪ್ರಮುಖ ಗುರಿ. ಈ ಗುರಿಯೂ ಜಾಕೀರ್ ಹುಸೇನ್ ಸಮಿತಿ ಕಾರ್ಯಾನುಭವದ ಬಗ್ಗೆ ಹೊಂದಿದ್ದ ನಂಬಿಕೆಯ ಪುನರ್ವ್ಯಾಖ್ಯೆಯಾಗಿದೆ: "ಆರ್ಥಿಕ ದೃಷ್ಟಿಕೋನದಿಂದ ಪರಿಗಣಿಸಿದಲ್ಲಿ, ಈ ವ್ಯವಸ್ಥೆಯನ್ನು ಬುದ್ಧಿವಂತಿಕೆಯಿಂದ ಹಾಗೂ ಸಮರ್ಥವಾಗಿ ನಡೆಸಿದಲ್ಲಿ ಅದು ನಮ್ಮ ಕೆಲಸಗಾರರ ಉತ್ಪಾದನ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ ಮತ್ತು ಅವರು

[23] *Educational Reconstruction*, Publications Division, Delhi (1959), p. 93

[24] ಬಸವಣ್ಣನವರು ಅನುಭವಮಂಟಪದಲ್ಲಿ 'ಕಾಯಕಕ್ಕೆ' ಹೆಚ್ಚು ಪ್ರಾಧಾನ್ಯ ಕೊಟ್ಟು ಈ ರೀತಿಯ ಸಾಮಾಜಿಕ ಹಾಗೂ ಭಾವೈಕ್ಯವನ್ನು ತರಲು ಶ್ರಮಿಸಿದರು.

[25] *Democracy & Education*, Free Press, New York 166, p. 202

ತಮ್ಮ ವಿರಾಮಕಾಲವನ್ನು ಉಪಯುಕ್ತವಾಗಿ ಕಳೆಯುವಲ್ಲಿ ಸಹಾಯಕವಾಗುತ್ತದೆ".[26] ಗಾಂಧೀಜಿಯವರ ಹಾಗೆ, ರವೀಂದ್ರನಾಥ್ ಠಾಕೂರರೂ ಒಂದು ದೇಶದ ಶಿಕ್ಷಣ ಹಾಗೂ ಆರ್ಥಿಕ ಜೀವನದ ಮಧ್ಯೆ ನಿಕಟ ಸಂಪರ್ಕವಿರಬೇಕೆಂಬ ವಿಚಾರವನ್ನು ಒತ್ತಿ ಹೇಳಿದ್ದಾರೆ. ಠಾಕೂರರೇ ಹೇಳುವ ಹಾಗೆ, "ನಿಜವಾದ ಶಿಕ್ಷಣ ನಮ್ಮ ಜ್ಞಾನ ಹಾಗೂ ತರಬೇತಿ ಹೇಗೆ ನಮ್ಮ ಸುತ್ತಮುತ್ತಲಿನ ಜಗತ್ತಿನೊಡನೆ ಜೈವಿಕ ಸಂಬಂಧ ಹೊಂದಿದೆ ಎಂಬುದನ್ನು ಪ್ರತಿ ಹಂತದಲ್ಲಿ ಗುರುತಿಸುತ್ತಿರಬೇಕು."[27] ಠಾಕೂರರು ಶಿಕ್ಷಣ ಜನರ ಆರ್ಥಿಕ ಜೀವನದೊಂದಿಗೆ ನಿಕಟ ಸಂಪರ್ಕ ಹೊಂದಿರಬೇಕು ಎಂಬ ವಿಚಾರವನ್ನು ಯಾವಾಗಲೂ ಗಮನದಲ್ಲಿಟ್ಟಿದ್ದರು ಮತ್ತು ಈ ಅರಿವಿಗೆ ಸಾಕ್ಷಿಯಾಗಿರುವಂತೆ ಅವರು ತಮ್ಮ ಶಿಕ್ಷಣ ಪದ್ಧತಿಯನ್ನು ಯಾವ ರೀತಿ ವ್ಯವಸ್ಥೆಗೊಳಿಸಿದರೆಂದರೆ, ಅವರ ಸಾಂಸ್ಕೃತಿಕ ಕೇಂದ್ರ (ಶಾಲೆ) ಯಾವಾಗಲೂ ವ್ಯವಸಾಯ, ನೇಯ್ಗೆ ಮುಂತಾದ, ಜೀವನಾವಶ್ಯಕತೆಗಳನ್ನು ಪೂರೈಸುವ, ಕಾರ್ಯಗಳಿಗೆ ಒಂದು ಸ್ಥಾನ ಕೊಟ್ಟಿತ್ತು. ಠಾಕೂರರು ಶಾಂತಿನಿಕೇತನದ ಬಳಿ ಒಂದು ವ್ಯವಸಾಯಶಾಲೆಯನ್ನೇ ಸ್ಥಾಪಿಸಿದ್ದರು. ಏಕೆಂದರೆ ಭಾರತದ ಜನತೆಯ ಮುಖ್ಯಸಮಸ್ಯೆ ಕೃಷಿಗೆ ಸಂಬಂಧಪಟ್ಟಿದ್ದು ಎಂದು ಅವರಿಗೆ ಗೊತ್ತಿತ್ತು.

ಮೇಲಿನ ಚರ್ಚೆಗಳಿಂದ, ಇಂದಿನ ಪಠ್ಯವಸ್ತುವಿನಲ್ಲಿ ಕಾರ್ಯಾನುಭವದ ಸೇರ್ಪಡೆ ಒಂದಕ್ಕಿಂತ ಹೆಚ್ಚಾದ ಆಧಾರಗಳ ಮೇಲೆ ಸಮರ್ಥನೆ ಹೊಂದಿದೆ ಎಂಬ ಅಂಶ ಸ್ಪಷ್ಟವಾಗಿರಬಹುದು. ಆದಕ್ಕೆ ಶಿಕ್ಷಣ ತತ್ತ್ವಜ್ಞಾನಿ, ಮನೋವಿಜ್ಞಾನಿ, ಸಮಾಜ ವಿಜ್ಞಾನಿ ಹಾಗೂ ಅರ್ಥಶಾಸ್ತ್ರಜ್ಞ, ಪ್ರತಿಯೊಬ್ಬರೂ ತಮ್ಮದೇ ಆದ ನಿರ್ದಿಷ್ಟ ಕಾರಣಗಳಿಗಾಗಿ ಒಪ್ಪಿಗೆ ನೀಡಿದ್ದಾರೆ ಎಂಬುದು ವಿಶದವಾಗಿದೆ. ಆದರೆ ಈ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವುದಕ್ಕೆ ಶಿಫಾರಸ್ಸು ಮಾಡುವುದಕ್ಕೆ ಮುಂಚೆ ಇದರ ಅನುಷ್ಠಾನದ ಬಗ್ಗೆ ಡ್ಯೂಯಿಯ ಒಂದು ಮುನ್ನೆಚ್ಚರಿಕೆಯನ್ನು ಉದ್ಧರಿಸಿ ಈ ಲೇಖನವನ್ನು ಮುಗಿಸುತ್ತೇನೆ: "ವಿದ್ಯಾರ್ಥಿಗಳ ಚಟುವಟಿಕೆಗಳನ್ನು ತೀರ ಸೂಕ್ಷ್ಮವಾದ ಹಾಗೂ ತುಂಬ ನಿಯಮಬದ್ಧವಾದ ಕಾರ್ಯಗಳಲ್ಲಿ ತೊಡಗಿಸಿ, ಅವರು ಅದರಲ್ಲಿ ಪರಿಪೂರ್ಣತೆಯನ್ನು ಪಡೆಯುವುದಕ್ಕಿಂತ ಹೆಚ್ಚಾಗಿ ಅವರಲ್ಲಿ ಒಂದು ರಚನಾತ್ಮಕ ಹಾಗೂ ಸೃಜನಾತ್ಮಕ ಮನೋಭಾವವನ್ನು ಬೆಳೆಸುವುದು ಅತಿಮುಖ್ಯವಾದ್ದು".[28]

---

[26] *Educational Reconstruction*, Publications Division. Delhi (1959), p. 93

[27] *The Centre of Indian Culture*, (1951), p. 2

[28] *Democacy and Education*, Free Press, New York (1966) p. 197

ಬೋಧನೆ ಅತ್ಯಂತ ಜಟಿಲ ಪ್ರಕ್ರಿಯೆಗಳಲ್ಲೊಂದು. ಆದುದರಿಂದ ಇದರಲ್ಲಿ ವಿಭಿನ್ನತೆ ಇರುವುದು ಸಹಜ. ಇಂದು ಹಲವಾರು ಬೋಧನಕ್ರಮಗಳು ರೂಢಿಯಲ್ಲಿವೆ. ಇವುಗಳಲ್ಲಿ ಯಾವುದು ಉತ್ತಮ, ಯಾವುದು ಅಲ್ಲ ಎನ್ನುವ ಬಗ್ಗೆ ಬಹಳ ಕಾಲದಿಂದಲೂ ಜಿಜ್ಞಾಸೆ ನಡೆಯುತ್ತಿದೆ. ಆದರೆ ಇಂಥದೇ ಸರ್ವೋತ್ಕೃಷ್ಟ ವಿಧಾನವೆಂದು ಹೇಳಲಾಗುವುದಿಲ್ಲ. ಯಾವುದೇ ಒಂದು ಗೊತ್ತಾದ ತರಗತಿಯಲ್ಲಿ, ನಿರ್ದಿಷ್ಟ ಸಂದರ್ಭದಲ್ಲಿ, ಶಿಕ್ಷಕ ಇಂಥದೇ ವಿಧಾನವನ್ನು ಅವಲಂಬಿಸುವುದು ಉತ್ತಮವೆಂದು ಒಂದು ವೈಜ್ಞಾನಿಕ ಸಮೀಕರಣದ ಮೂಲಕ ನಿರ್ಧರಿಸುವುದು ಸಾಧ್ಯವಿಲ್ಲ. ಸಮಯ ಸಂದರ್ಭೋಚಿತವಾದ ಬೋಧನ ಕ್ರಮವನ್ನು ಶಿಕ್ಷಕನೇ ರೂಪಿಸಿಕೊಳ್ಳಬೇಕಾಗುತ್ತದೆ. ಹೀಗೆ ಮಾಡುವಾಗ ಅವನ ಪೂರ್ವಾನುಭವ, ಮಕ್ಕಳು ಹೇಗೆ ಕಲಿಯುತ್ತಾರೆ ಎನ್ನುವುದರ ಬಗ್ಗೆ ಅವನಿಗಿರುವ ತಿಳಿವಳಿಕೆ, ಅವನೀಗಾಗಲೇ ಏನು ಕಲಿತಿದ್ದಾರೆ ಎನ್ನುವುದರ ಅರಿವು, ಇಂಥದೇ ಸಂದರ್ಭದಲ್ಲಿ ಬೇರೆ ಮಕ್ಕಳು ಹೇಗೆ ಕಲಿತರು ಎನ್ನುವುದರ ಪ್ರಜ್ಞೆ-ಇವೆಲ್ಲಾ ಅವನು ಅನುಸರಿಸುವ ಬೋಧನಾಕ್ರಮವನ್ನು ನಿರ್ಧರಿಸುತ್ತವೆ. ಯಶಸ್ವಿ ಅಧ್ಯಾಪಕ ಉತ್ತಮ ಕಲೆಗಾರನಂತೆ ತನ್ನದೇ ಆದ ಕಾರ್ಯವಿಧಾನವನ್ನು ರೂಪಿಸಿಕೊಳ್ಳುತ್ತಾನೆ. ಶಿಕ್ಷಣ ಕ್ರಮದಲ್ಲಿ ವೈವಿಧ್ಯ ಇದ್ದರೂ ಅದರ ಉದ್ದೇಶ ಮಾತ್ರ ಒಂದೇ: ಪರಿಣಾಮಕಾರಿ ಕಲಿಕೆ. ಹೀಗೆಂದ ಮಾತ್ರಕ್ಕೆ ಅಧ್ಯಾಪನ ಕಲೆ ಸಂಪೂರ್ಣವಾಗಿ ಒಂದು ವೈಯಕ್ತಿಕ ವ್ಯಾಪಾರವೆಂದು ಅರ್ಥವಲ್ಲ. ಶಿಕ್ಷಣ ಸಾಮಾಜಿಕಶಾಸ್ತ್ರಕ್ಕೆ ಅತ್ಯಾವಶ್ಯಕ ಪ್ರಕ್ರಿಯೆಯಾದುದರಿಂದ ಹಲವಾರು ಸಮಾಜ ತಜ್ಞರು ಶಿಕ್ಷಣ ವಿಧಾನದಲ್ಲಿ ಅಪರಿಮಿತ ಸಂಶೋಧನೆಗಳನ್ನು ನಡೆಸಿ, ಅದಕ್ಕೆ ಪ್ರಭಾವಯುತವಾದ ವೈಜ್ಞಾನಿಕ ದಿಕ್ಕಿನಲ್ಲಿ ಬೆಳೆಯಲು ಸಹಾಯ ಮಾಡಿದ್ದಾರೆ. ಈ ದಾರಿಯಲ್ಲಿ ಮನೋವಿಜ್ಞಾನಿಗಳು ಮಾಡಿರುವ ಸೇವೆ ಅಪಾರವಾದುದು. ಇವೆಲ್ಲದರ ಪರಿಣಾಮವಾಗಿ ಉಪಯುಕ್ತ ಬೋಧನ ಸೂತ್ರಗಳು ಹಲವಾರು ಬೆಳೆದು ಬಂದಿವೆ. ಬೋಧನಾಕ್ರಮಗಳಲ್ಲಿ ಎಷ್ಟೇ ವೈಯಕ್ತಿಕತೆ ಮತ್ತು ವೈವಿಧ್ಯ ಇರುವುದಾದರೂ ಹಲವಾರು ಶತಮಾನಗಳಿಂದಲೂ ಶಿಕ್ಷಣ ನಡೆದು ಬಂದ ದಾರಿ ಒಂದು ಇದ್ದೇ ಇದೆ. ಅದು ಎಲ್ಲಾ ಬೋಧನ ವಿಧಾನಗಳ ರೂಪರೇಖೆಗಳನ್ನು ಸ್ಥೂಲವಾಗಿ ನಿರ್ಧರಿಸುತ್ತದೆ. ಅದುದರಿಂದ ಯಾವ ಶಿಕ್ಷಕನಾದರೂ ಇದರ ಪರಿಚಯವಿರಲೇಬೇಕು. ಪ್ರತಿಯೊಬ್ಬ ಶಿಕ್ಷಕನೂ ತನ್ನ ಕಾರ್ಯವಿಧಾನವನ್ನು ಈ ಒಂದು ಸಾಮಾನ್ಯ ಚೌಕಟ್ಟಿನೊಳಗೇ ರೂಪಿಸಿಕೊಳ್ಳಬೇಕಾಗುತ್ತದೆ[1].

—ಎಂ. ಬಸವಣ್ಣ

1 ಶೈಕ್ಷಣಿಕ ಮನೋವಿಜ್ಞಾನ, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು (1970), ಪು. 285–6

ಕೆ. ಜಿ. ವಸಂತಮಾಧವ

ಕನ್ನಡ ಕರಾವಳಿಯಲ್ಲಿ ಕೆಳದಿ ಸದಾಶಿವನಾಯಕ

ಹದಿನಾರನೆಯ ಶತಮಾನದ ಮಧ್ಯ ಭಾಗದಲ್ಲಿ ಕನ್ನಡ ಕರಾವಳಿಯಲ್ಲಿದ್ದ ವಿಜಯನಗರ ಅರಸರ ಸಾಮಂತರಾಗಿದ್ದ ತುಳುವರಸರು ತಮ್ಮತಮ್ಮೊಳಗೆ ವೈಷಮ್ಯವನ್ನು ಬೆಳೆಸಿಕೊಂಡು ಕಚ್ಚಾಡಿಕೊಳ್ಳುತ್ತಿದ್ದಾಗ ಹೊಸದೊಂದು ರಾಜಕೀಯ ಶಕ್ತಿಯನ್ನು ಅವರು ಎದುರಿಸಬೇಕಾಗಿ ಬಂತು. ಆ ಶಕ್ತಿಯೇ ಪಶ್ಚಿಮಘಟ್ಟದ ಮೇಲೆ ಸ್ಥಾಪಿತವಾಗಿದ್ದ ಕೆಳದಿ ರಾಜ್ಯ. ಈ ರಾಜ್ಯ ಕನ್ನಡ ಕರಾವಳಿಯಲ್ಲಿ ಯಾವ ರೀತಿಯ ರಾಜಕೀಯ ಬದಲಾವಣೆಯನ್ನುಂಟುಮಾಡಿತೆಂದು ಶಾಸನಗಳ ಆಧಾರದಿಂದ ಪ್ರಸ್ತುತ ಲೇಖನದಲ್ಲಿ ತಿಳಿಸಲಾಗಿದೆ.

ಕನ್ನಡ ಕರಾವಳಿಗೆ ಕೆಳದಿ ನಾಯಕರ ಆಗಮನ

ಕೆಳದಿ ನಾಯಕರು ಕನ್ನಡ ಕರಾವಳಿಗೆ ಹೇಗೆ ಬಂದರೆಂಬುದನ್ನು ತಿಳಿಯಲು ಶಾಸನಗಳು ಮತ್ತು ಕಾವ್ಯಗಳು ಸಹಾಯಕವಾಗಿವೆ. ಡಾ. ಕೆ. ಡಿ. ಸ್ವಾಮಿನಾಥನ್ ಅವರು ಉಪ್ಪೂರಿನಲ್ಲಿ ಸಿಕ್ಕಿದ ಶಾಸನದ ಆಧಾರದಂತೆ ಅವರ ಆಳ್ವಿಕೆ ಕ್ರಿ.ಶ. 1534ರಲ್ಲಿ ಆರಂಭವಾಯಿತೆಂದು ತಮ್ಮ ಗ್ರಂಥದಲ್ಲಿ ಬರೆದಿದ್ದರು. ಈ ಶಾಸನದಲ್ಲಿ ತಿಳಿಸಿದ ಸಂಕಣ್ಣ ನಾಯಕ ಕೆಳದಿ ಸದಾಶಿವ ನಾಯಕನ ತಂದೆ ಆಗಿರಲೂಬಹುದೆಂದು ತಿಳಿಸಿದ್ದಾರೆ.[1] ಆದರೆ ಈ ವಾದವನ್ನು ಒಪ್ಪಿಕೊಳ್ಳುವ ಪೂರ್ವದಲ್ಲಿ ಕೆಳಗಿನ ವಿಷಯಗಳನ್ನು ವಿಮರ್ಶಿಸಬೇಕಾಗಿದೆ. ಕೆಳದಿ ಅರಸರ ಶಾಸನಗಳೂ ಚೌಡಗೌಡನ ಶಾಸನವೂ[2] ಅವರ 'ಯಿಡುವ ಮುರಾರಿ' ಮತ್ತು ಇತರ ಬಿರುದುಗಳನ್ನು ತಿಳಿಸುತ್ತವೆ. ಆದರೆ ಉಪ್ಪೂರಿ[3]ನಲ್ಲಿ ಸಿಕ್ಕಿದ ಈ ಶಾಸನ ಸಂಕಣ್ಣನಾಯಕನನ್ನು ಕೆಳದಿ ಸಂಕಣ್ಣನೆಂದು ಕರೆಯದೆ,ಕೆಳದಿ ಅರಸರ ಬಿರುದುಗಳನ್ನು ಉಲ್ಲೇಖಿಸದೆ ಕೇವಲ ಸಂಕಣ್ಣ ನಾಯಕನೆಂದು ತಿಳಿಸಿದ ಕಾರಣ ಇವನು ಕೆಳದಿ ವಂಶದವನಲ್ಲವೆಂದು ಅಭಿಪ್ರಾಯಪಡಬಹುದು. ಇಲ್ಲಿ ತಿಳಿಸಿದ ಸಂಕಣ್ಣ ನಾಯಕ ಕೆಳದಿ ಸದಾಶಿವ ನಾಯಕನ ತಂದೆ ಎಂಬ ಸ್ವಾಮಿನಾಥರ ವಾದವನ್ನು ಒಪ್ಪಿಕೊಂಡರೆ ಇವನ ತಂದೆ ಮೇಲೆ ಹೇಳಿದ ವರ್ಷದ ವರೆಗೆ ಆಳಿಕೊಂಡಿದ್ದನೆಂದು ಒಪ್ಪಬೇಕಾಗುತ್ತದೆ. ಆದರೆ ಕ್ರಿ.ಶ. 1509 ಮತ್ತು 1524ರ ಶಾಸನಗಳಲ್ಲಿ[4] "ಕೆಳದಿ ಸದಾಶಿವ ನಾಯಕ ಗುತ್ತಿವೆಂಟೆಯ ಅರಗ, ಕಂದಾನ, ಬನವಾಸೆಗೆ ಸಲುವ ಕೆಳದಿಯನ್ನು ಆಳಿಕೊಂಡಿರುವ" ವಿಚಾರ ತಿಳಿದು ಬರುತ್ತದೆ.

---

[1] K. D. Swaminathan : *Nayakas of Ikkeri*, p. 18–19

[2] *Mysore Archaeological Report* (*M.A.R.*) (1930), *Ins.* 65, p. 219

[3] *Annual Report of South Indian Epigraphy* (*AR.S.I.E*) (1929) No. 487

[4] *M.A.R.* (1928), *Ins.* No. 65. Copper Plate Inscription. p. 24 *Epigraphia Carnatica* (*E.C.*) *Viii. Sorab. 35. C.P.I.*, page 17

ಇನ್ನು ಕ್ರಿ.ಶ. 1534ರ ಶಾಸನದಲ್ಲಿ ಹೇಳಿದ ಸಂಕಣ್ಣ ಕೆಳದಿವಂಶದವನೆಂಬ ಸ್ವಾಮಿನಾಥನರ ವಾದವನ್ನು ಒಪ್ಪಿಕೊಂಡರೆ. ಕೆಳದಿ ವಂಶದವರು ಬಾರಕೂರು ರಾಜ್ಯವನ್ನು ಆಳಿದ ವಿಚಾರ ಕ್ರಿ.ಶ. 1545ರ ಸದಾಶಿವನಾಯಕನ[5] ಶಾಸನದಲ್ಲೂ ಕೋಟೇಶ್ವರದಲ್ಲಿ ಸಿಕ್ಕಿದ 1546ರ ಶಾಸನದಲ್ಲೂ ತಿಳಿಸಿರ[5A] ಬೇಕಿತ್ತು. ಆದರೆ ಎರಡು ಶಾಸನಗಳು ಈ ವಿಷಯ ತಿಳಿಸದೆ ಇರುವುದನ್ನು ನೋಡಿದಾಗ ಡಾ. ಸ್ವಾಮಿನಾಥನರ ಹೇಳಿಕೆ ಸರಿಯಲ್ಲವೆಂದು ಸ್ಪಷ್ಟವಾಗಿ ತಿಳಿದುಬರುತ್ತದೆ.[6] ಈ ಎಲ್ಲ ಕಾರಣಗಳಿಂದ ಕ್ರಿ.ಶ. 1534ರ ಉಪ್ಪೂರು ಶಾಸನದಲ್ಲಿ ಹೇಳಿದ ಸಂಕಣ್ಣ ನಾಯಕ ಕೆಳದಿ ವಂಶದವನಲ್ಲವೆಂದು ಅಭಿಪ್ರಾಯಪಟ್ಟರೆ ತಪ್ಪಾಗಲಾರದು.

ಕನ್ನಡ ಕರಾವಳಿಯಲ್ಲಿ ಕೆಳದಿ ನಾಯಕರ ಕುರಿತಾಗಿ ತಿಳಿಸುವ ಶಾಸನಗಳಲ್ಲಿ ಉಳುವಾರಿಯಲ್ಲಿ ಸಿಕ್ಕಿದ ಶಾಸನವೇ ಮೊದಲನೆಯದು. ಇದರ ಕಾಲ 1550. ಈ ಶಾಸನ "ಗೆರಸೊಪ್ಪೆ ರಾಜಧಾನಿಯಾಗಿ ಮಾಡಿಕೊಂಡು. ಹೈವ. ತುಳು. ಕೊಂಕಣವನ್ನು ಆಳಿಕೊಂಡಿದ್ದ ಮಹಾಮಂಡಲೇಶ್ವರ ಸಾಳ್ವ ಕೃಷ್ಣದೇವರಸ ಒಡೆಯನು ಕೆಳದಿ ಸದಾಶಿವ ನಾಯಕನಿಂದ ಗೋಕರ್ಣ ಮಹಾಬಲೇಶ್ವರ ದೇವರ ಪೂಜೆ ನಡೆಸಲು ಬೇಕಾಗುವ ಹಣವನ್ನು ಉಳುವರೆ ಗ್ರಾಮದ ಆದಾಯದಿಂದ ತೆಗೆದುಕೊಂಡು ಆ ಗ್ರಾಮವನ್ನು ಸದಾಶಿವನಾಯಕನಿಗೆ ಕೊಟ್ಟ[7]ನೆಂದು ತಿಳಿಸಿದೆ. ಈ ಶಾಸನ ಅಳಿಸಿ ಹೋಗಿದ್ದರೂ ಕೆಳದಿ ಸದಾಶಿವ ನಾಯಕನ ರಾಜಕೀಯ ಸಂಬಂಧ ಕನ್ನಡ ಕರಾವಳಿಯಲ್ಲಿ ಈ ಕಾಲದಲ್ಲಿ ನಡೆಯಿತೆಂದೂ, ಇದು ಇವನು ಬಾರಕೂರು, ಮಂಗಳೂರು ರಾಜ್ಯವನ್ನು ವಿಜಯನಗರ ಅರಸರಿಂದ ಅಮರ ಮಾಗಣೆಯಾಗಿ ಪಡೆಯುವ ಪೂರ್ವದಲ್ಲೇ ನಡೆಯಿತೆಂದೂ ತಿಳಿಯಲು ಸಹಾಯಕವಾಗಿದೆ.

ವಿಜಯನಗರ ಸಮ್ರಾಟ ಕೆಳದಿ ಸದಾಶಿವನಾಯಕನ ರಾಜ್ಯಸೇವೆಗೆ ಮೆಚ್ಚಿ ಅವನನ್ನು ಬಾರಕೂರು. ಮಂಗಳೂರು ರಾಜ್ಯಗಳ ರಾಜ್ಯಪಾಲನನ್ನಾಗಿ ಮಾಡಿದನೆಂದು ಕೆಳದಿ ಬಸವರಾಜನಿಂದ ರಚಿಸಲ್ಪಟ್ಟ 'ಶಿವತತ್ತ್ವ ರತ್ನಾಕರ' ತಿಳಿಸುತ್ತದೆ.[8] ಆದರೆ ಇನ್ನೊಂದು ಕಡೆಯಲ್ಲಿ ಇದೇ ಕಾವ್ಯ ಸದಾಶಿವರಾಯನ ಆಜ್ಞೆಯಂತೆ ಕುಹಕ ಕಾರ್ಯಗಳನ್ನೆಸಗುತ್ತಿದ್ದ ತುಳು. ಕೇರಳ ಸಾಮಂತರನ್ನು ಬಗ್ಗು ಬಡಿಯಲು ಸದಾಶಿವ ನಾಯಕ ಕನ್ನಡ ಕರಾವಳಿಗೆ ದಂಡೆತ್ತಿ ಬಂದು ಇಲ್ಲಿಯ ಅರಸರನ್ನು 'ಬಗ್ಗು ಬಡಿದು' ಅವರ ರಾಜ್ಯವನ್ನು ವಿಜಯನಗರಕ್ಕೆ ಸೇರಿಸಿದ್ದಲ್ಲದೆ ಇವರನ್ನು ಕೈಸೆರೆ ಹಿಡಿದು ವಿಜಯನಗರಕ್ಕೆ ಕೊಂಡುಹೋದನೆಂದು ತಿಳಿಸಿದೆ.[9] ಕೆಳದಿನೃಪವಿಜಯ ಕೆಳದಿ ಸದಾಶಿವನಾಯಕ

5 *M.A.R. of 1943· Ins· No. 30*, p. 100—ಈ ಶಾಸನದಲ್ಲಿ ಕಾಲ ತಿಳಿಸಿಲ್ಲ. ಆದರೆ ಇದರ ಕಾಲ 1545 ಎಂದು ಡಾ. ಎಂ. ಎಚ್. ಕೃಷ್ಣರು ಅಭಿಪ್ರಾಯಪಟ್ಟಿದ್ದಾರೆ. ಈ ಶಾಸನದಲ್ಲಿ ಸದಾಶಿವ ನಾಯಕ ಘಟ್ಟದ ಮೇಲೆ 9 ಮಾಗಣೆಗಳನ್ನು ಆಳಿಕೊಂಡಿದ್ದನೆಂದು ತಿಳಿಸಿದೆ.

5A K. V. Rangacharya—*Topographical Lists of Inscriptions of Madras Presidency*, Vol. II, Ins. No. 62, p. 852 (Top List)

6 ಡಾ. ಸ್ವಾಮಿನಾಥನ್ ಹೇಳಿಕೆ ಸರಿಯಲ್ಲವೆಂದು ಡಾ. ಜಿ. ಎಸ್. ಗಾಯಿ ಮತ್ತು ಡಾ. ಕೆ. ವಿ. ರಮೇಶರು ಸಮರ್ಪಕವಾಗಿ ವಾದಿಸಿದ್ದನ್ನು ಇಲ್ಲಿ ಗಮನಿಸಬೇಕು. ವಿವರ ಡಾ. ಜಿ. ಎಸ್. ಗಾಯಿ– 'ಕೆಳದಿ ಅರಸರ ಶಾಸನಗಳು". ಮಾನವಿಕ ಕರ್ನಾಟಕ (1970), Vol. I, p. 99–102 Dr. K. V. Ramesh : *A History of South Kanara*—p. 224. ಈ ವಿದ್ವಾಂಸರು ತಿಳಿಸಿದ ವಾದವನ್ನು ಇಲ್ಲಿ ತಿಳಿಸದೆ ಇವರು ತಿಳಿಸದ ವಿಷಯವನ್ನು ಇಲ್ಲಿ ಹೇಳಲಾಗಿದೆ.

7 *Annual Report of Indian Epigraphy* of 1957–58 Ins. No. 339 *Summaries of Insciption* by K. R. I No. 11 of 1946–47

8 ಶಿವತತ್ತ್ವ ರತ್ನಾಕರ, ಕಲ್ಲೋಲ 5. ತರಂಗ 5 Verse, 20. Dr. B. A. Saletore : *Social & Political life In the Vijayanagara Empire*, Vol I,p.470–71

9 ಶಿವತತ್ತ್ವರತ್ನಾಕರ–ಕಲ್ಲೋಲ 5. S. K. Aiyangar : *Source of Vijayanagar History*, p. 195. ಡಾ. ಕೆ. ವಿ. ರಮೇಶ : ತುಳುನಾಡಿನ ಇತಿಹಾಸ. p. 114. Dr. K. V. Ramesh : *History of South Kanara*, p. 227

ಕೃಷ್ಣದೇವರಾಯನ ಆಜ್ಞೆಯಂತೆ ಕನ್ನಡ ಜಿಲ್ಲೆಯ ಮೇಲೆ ದಂಡೆತ್ತಿ ತನ್ನ ದಿಗ್ವಿಜಯವನ್ನು ಕಾಸರಗೋಡಿನ ವರೆಗೆ ನಡೆಸಿ. ಅಲ್ಲಿ ತೋಲಗದ ಕಂಬವ ರಚಿಸಿ "ತುಳುವಮನ್ನೆಯರ ಮದಮಂ ಮುರಿದು ಸ್ವಾಧೀನಂಗೈಯ್ದು ಕರಮಂ ಕೊಂಡು ಪಣಿಮಣಿಪಮಂತೆತ್ತು ನಡೆವಂತು ಕಟ್ಟಳೆಯಂ ರಚಿಸಿದ" ನೆಂದು ತಿಳಿಸಿದೆ.[10]

ಶಾಸನಗಳಲ್ಲಿ ಕೆಳದಿ ಸದಾಶಿವ ನಾಯಕ ಕನ್ನಡ ಜಿಲ್ಲೆಯಲ್ಲಿ ತುಂಡರಸರನ್ನು ಸದೆಬಡೆಯುವ ಸಲುವಾಗಿ ಸೈನ್ಯದೊಂದಿಗೆ ಇಲ್ಲಿ ಪ್ರವೇಶಿಸಿದ ವಿಚಾರ ತಿಳಿಸದಿದ್ದರೂ ಬಸ್ರೂರಿನಲ್ಲಿ ಸಿಕ್ಕಿದ ಶಾಸನ, ಕಾಲ 1554, ತಿಳಿಸುವುದನ್ನು ಗಮನಿಸಬೇಕು. ಈ ಶಾಸನದಂತೆ "ಸದಾಶಿವ ಮಹಾರಾಯರ ನಿರೂಪದಿಂದ ಕೆಳದಿ ಸದಾಶಿವ ನಾಯಕರು ತುಳು ರಾಜ್ಯವನ್ನು ಮಾಡಿಕೊಂಡು ಇವರ ನಿರೂಪದಿಂದ ಮಲ್ಲಪ್ಪ ಒಡೆಯರು ಬಾರಕೂರು ಸಿಂಹಾಸನವನ್ನು ಆಳುವಕಾಲ".[11]

ಈ ಶಾಸನದಿಂದ ಕೆಳಗಿನ ಅಭಿಪ್ರಾಯಪಡಬಹುದು. 1 'ತುಳು ರಾಜ್ಯವನ್ನು ಮಾಡಿಕೊಂಡು' ಎಂದು ಶಾಸನದಲ್ಲಿ ಉಲ್ಲೇಖಿಸಿರುವುದರಿಂದ ಸದಾಶಿವ ನಾಯಕ ತುಳು ರಾಜ್ಯದಲ್ಲಿ ತನ್ನ ಶಕ್ತಿ ಪ್ರದರ್ಶಿಸಿ ಇದನ್ನು ವಶಪಡಿಸಿಕೊಂಡಿರಬೇಕು.[12] 2 ಈ ಶಾಸನ 'ಇವರ ನಿರೂಪದಿಂದ ಮಲ್ಲಪ್ಪವೊಡೆಯರು ಬಾರಕೂರು ಸಿಂಹಾಸನ ಆಳುವ ಕಾಲ' ಎಂದು ತಿಳಿಸಿರುವುದರಿಂದ ಕೆಳದಿ ಸದಾಶಿವ ನಾಯಕ ಈ ಕಾಲದಲ್ಲಿ ಬಾರಕೂರು ರಾಜ್ಯದ ಮೇಲೆ ಸಂಪೂರ್ಣ ಹತೋಟಿ ಹೊಂದಿರಬೇಕು. ಕೆಳದಿ ಸದಾಶಿವ ನಾಯಕನನ್ನು ತುಳುರಾಜ್ಯದ ರಾಜ್ಯಪಾಲನನ್ನಾಗಿ ಕ್ರಿ.ಶ. 1551ರ ಅನಂತರವೇ ಮಾಡಿದ್ದಿರಬೇಕು. ಆ ವರ್ಷದ ಕೋಟೇಶ್ವರ ದೇವಾಲಯದ ಶಾಸನ ಬಾರಕೂರು ರಾಜ್ಯವನ್ನು ಏಕದಳ ಖಾನನು ವಿಜಯನಗರ ಅರಸರ ಅನುಜ್ಞೆಯಿಂದ ಆಳಿಕೊಂಡಿದ್ದ ವಿಚಾರವನ್ನು ತಿಳಿಸುತ್ತದೆ.[13]

ಕೆಳದಿ ಆಡಳಿತದ ಕನ್ನಡ ಕರಾವಳಿಯ ಪಾಳೆಯಗಾರರ ಪ್ರತಿಕ್ರಿಯೆ ಏನೆಂಬುದನ್ನು ಸಮಕಾಲೀನ ಶಾಸನಗಳೂ ಕಾವ್ಯಗಳೂ ತಿಳಿಸದಿದ್ದರೂ ಕೆಲವು ಇತಿಹಾಸ ಸಂಶೋಧಕರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದನ್ನು ಇಲ್ಲಿ ಗಮನಿಸಬೇಕಾಗಿದೆ. ದ. ಕನ್ನಡ ಜಿಲ್ಲೆಗೆ ಕೆಳದಿ ಅರಸರ ಆಗಮನದ ಕುರಿತು ತಿಳಿಸುತ್ತಾ ಡಾ. ಕೆ.ವಿ. ರಮೇಶರು. "ಕೆಳದಿ ನಾಯಕರು ವೀರಶೈವ ಮತದ ಅನುಯಾಯಿಗಳೆಂಬುದು ದಿಟ. ದ.ಕ. ಅವರ ಆಡಳಿತಕ್ಕೆ ಬಂದಾಗ ಇಲ್ಲಿಯ ಜೈನ ಪಾಳೆಯಗಾರರು ತಮ್ಮ ಮತ ಸ್ವಾತಂತ್ರ್ಯಕ್ಕೆ ಧಕ್ಕೆ ಬರುವುದೆಂದು ಹೆದರಿ ದಂಗೆ ಎದ್ದರೆಂಬುದು ಸಹಜ"[14] ಎಂದು ಹೇಳಿದ್ದಾರೆ. ಈ ವಾದವನ್ನು ಡಾ. ಸೂರ್ಯನಾಥ ಕಾಮತರೂ ತಮ್ಮ ಅಪ್ರಕಟಿತ ಪ್ರಬಂಧದಲ್ಲಿ ತಿಳಿಸಿದ್ದಾರೆ.[15] ಈ ವ್ಯಾಖ್ಯಾನದಲ್ಲಿ ಗಮನಿಸಬೇಕಾದ ವಿಷಯಗಳು ಎರಡಿವೆ: 1 ಕೆಳದಿ ಅರಸರು ಮತ್ತು ಕನ್ನಡ ಪಾಳೆಯಗಾರರ ಮತಭೇದಗಳು, ಪರಿಣಾಮವಾಗಿ ಇಲ್ಲಿಯ ಪಾಳೆಯಗಾರರು ದಂಗೆ ಎದ್ದದ್ದು. 2 ಕೆಳದಿ ಅರಸರಿಗೆ ತುಳುವ ಪಾಳೆಯಗಾರರ ಪ್ರತಿಭಟನೆ.

---

10 ಲಿಂಗಣ್ಣಕವಿ: 'ಕೆಳದಿನೃಪವಿಜಯ. Sandhi II, Verse, 60.1.62
ಆದರೆ ಕೆಳದಿ ಸದಾಶಿವನಾಯಕ ಕೃಷ್ಣದೇವರಾಯರಿಂ ಬೆಸಂಬಡೆದನೆಂಬುದನ್ನು ಇಲ್ಲಿ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಈ ಘಟನೆ ನಡೆದ ಕಾಲದಲ್ಲಿ ಕೃಷ್ಣದೇವರಾಯ ವಿಜಯನಗರದ ರಾಜನಾಗಿರಲಿಲ್ಲ.

11 *S. I. I.* Vol. IX Part II, No. 655

12 ಈ ಅಭಿಪ್ರಾಯವನ್ನು ಡಾ. ಕೆ.ವಿ. ರಮೇಶರು ತಮ್ಮ ಅಪ್ರಕಟಿತ ಲೇಖನ "*Territorial Division of Keladi Kingdom* ನಲ್ಲಿ ತಿಳಿಸಿದ್ದಾರೆ. ಇದನ್ನು ಶಿವಮೊಗ್ಗದಲ್ಲಿ ನಡೆದ ಕೆಳದಿ ಸೆಮಿನಾರ್‌ನಲ್ಲಿ ಓದಿದ್ದರು. ಈ ಲೇಖನವನ್ನು ಕೊಟ್ಟ ಕೆ.ವಿ. ರಮೇಶರಿಗೆ ಕೃತಜ್ಞತೆಗಳು.

13 *Sii, IX*, Part II, 621

14 Dr. K. V. Ramesh : *A History of South Kanara*, p. 312

15 Dr. S. V. Kamath : *Tuluvas under Vijayanagara Times*, p. 109

ಕೆಳದಿ ಅರಸರು ವೀರಶೈವ(ಲಿಂಗಾಯತ)ರಾದುದರಿಂದಲೇ ಕನ್ನಡ ಜಿಲ್ಲೆಯ ಪಾಳೆಯಗಾರರು ಕೆಳದಿ ಅರಸರ ವಿರುದ್ಧ ದಂಗೆ ಎದ್ದರೆಂಬುದನ್ನು ಸಮರ್ಥಿಸಲು ಯಾವ ಐತಿಹಾಸಿಕ ದಾಖಲೆಗಳೂ ಇಷ್ಟರ ವರೆಗೆ ದೊರಕಿಲ್ಲ. ಇದೇ ಸಂದರ್ಭದಲ್ಲಿ ಕನ್ನಡ ಕರಾವಳಿಯ ಪಾಳೆಯಗಾರರು ಜೈನರಾಗಿದ್ದರೂ ಶಿವ ದೇವಾಲಯಕ್ಕೂ ದತ್ತಿ ಬಿಟ್ಟಿದ್ದ ವಿಚಾರವನ್ನು ಶಾಸನಗಳು ಉಲ್ಲೇಖಿಸುವುದರಿಂದ ಈ ವಿಚಾರವನ್ನು ಶಾಸನಗಳ ಬೆಳಕಿನಲ್ಲಿ ವಿಚಾರಿಸಬೇಕು. ಕಳಸ ಕಾರ್ಕಳ ಭೈರರಸ ಒಡೆಯರು ಕ್ರಿ.ಶ. 1542. 1547 ಮತ್ತು 1552ರಲ್ಲಿ ಕಳಸದ ಕಳಸೇಶ್ವರ ಶಿವಾಲಯಕ್ಕೆ ದತ್ತಿ ಬಿಟ್ಟಿದ್ದನ್ನು ಗಮನಿಸಬೇಕು[16]. ಅದೇ ರೀತಿಯಲ್ಲಿ ಬಂಗರೆಂಬ ಇನ್ನೊಂದು ಪಾಳೆಯಗಾರರು 1431ರಲ್ಲಿ ಪ್ರತಿಷ್ಠಾಪಿಸಿ ಮಹಾಲಿಂಗೇಶ್ವರ ಮತ್ತು 1484ರಲ್ಲಿ[17] ಚಿಕ್ಕಂಗಡಿಯ ನಂದಿಕೇಶ್ವರ ಶಿವಾಲಯಕ್ಕೆ ದತ್ತಿ ಬಿಟ್ಟಿದ್ದನ್ನು ತಿಳಿಸುವುದರಿಂದ ಪುತ್ತಿಗೆಯ ಚೌಟ ಮನೆತನದ ಕುಲದೇವತೆ ಪುತ್ತಿಗೆ ಸೋಮನಾಥನಿದ್ದು ಈ ದೇವರ ಸಮ್ಮುಖದಲ್ಲೇ ಇವರು ಕುಂದಹೆಗ್ಗ ಮನೆತನದ ದೇವರೊಡೆಯ ಮತ್ತು ರೆಸ್ಕಕ್ಕ ಹೆಗ್ಗ ಮನೆತನದ ತಿರುಮಲರೊಡನೆ ಭೈರರಸರ ವಿರುದ್ಧ ಒಪ್ಪಂದಮಾಡಿಕೊಂಡರು. ಇದಕ್ಕೆ ಸಾಕ್ಷಿ ಪುತ್ತಿಗೆ ಸೋಮನಾಥನೆಂದು ಉಲ್ಲೇಖಿಸಿದೆ.[18] ಹಾಗೆಯೇ ಜೈನ ಪಾಳೆಯಗಾರರಾದ ಸುರಾಲಿನ ತೋಳಹಾರರು ಸುರಾಲಿನ ಮಹಲಿಂಗ ದೇವಾಲಯಕ್ಕೆ ಕೊಟ್ಟ ದಾನವನ್ನು ಬಿಟ್ಟಿವೆ[19] ಮತ್ತು ಅವರ ಕುಲದೇವತೆ ಹೆಗ್ಗಾಡಿನ ಮಹಾಲಿಂಗೇಶ್ವರನೆಂದು ತಿಳಿದು ಬರುವುದರಿಂದ ಈ ಜೈನ ಪಾಳೆಯಗಾರರು ವೀರಶೈವರಾದ ಕೆಳದಿ ಅರಸರ ಮೇಲಿನ ಮತಭೇದದಿಂದಲೇ ದಂಗೆ ಎದ್ದರೆಂಬುದನ್ನು ನಂಬುವುದು ಕಷ್ಟವಾಗುತ್ತದೆ.

ಇನ್ನು ಇಲ್ಲಿಯ ಜೈನ ಪಾಳೆಯಗಾರರು ಕೆಳದಿ ಸದಾಶಿವ ನಾಯಕನ ಆಗಮನದಿಂದ ಜೈನ ಧರ್ಮ ನಶಿಸಿ ವೀರಶೈವ ಮತ ಪ್ರಬಲವಾಗುವುದೆಂದು ತಿಳಿದು ದಂಗೆ ಏಳಬೇಕಾದರೆ ಕೆಳದಿ ಸದಾಶಿವ ನಾಯಕ ತನ್ನ ಆಡಳಿತ ವಿಭಾಗದಲ್ಲಿ ಜೈನಮತವನ್ನು ಕಡಿಮೆ ಮಾಡಿದ್ದು ಇವರಿಗೆ ತಿಳಿದಿರಬೇಕು. ಆದರೆ ಇದನ್ನು ಸಮರ್ಥಿಸುವ ಯಾವ ಸಮಕಾಲೀನ ದಾಖಲೆಗಳೂ ದೊರಕಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಕ್ರಿ.ಶ. 1556 ರಲ್ಲಿ [20] ಸಿದ್ಧಾಂತ ಭೈರನೆಂದು ಹೇಳಿಕೊಂಡಿದ್ದ ಕಾಪು ಮುದ್ದ ಹೆಗ್ಗ ಕಾಪಿನ ಧರ್ಮನಾಥ ಬಸದಿಗೆ ದಾನ ಬಿಟ್ಟ ಶಾಸನದಲ್ಲಿ ಕೆಳದಿ ಸದಾಶಿವನಾಯಕನ ಹೆಸರನ್ನು ಉಲ್ಲೇಖಿಸಿರುವುದರಿಂದ. ಕೆಳದಿ ಮತ್ತು ಕನ್ನಡ ಕರಾವಳಿಯ ಪಾಳೆಯಗಾರರ ಘರ್ಷಣೆಗೆ ಇವರಿಬ್ಬರ ಮತಭೇದವೇ ಕಾರಣವೆಂದು ತಿಳಿಯಲು ಆಸ್ಪದವಿಲ್ಲ. ಇಷ್ಟಲ್ಲದೆ ಕ್ರೋಧಿ ಸಂವತ್ಸರದಲ್ಲಿ (1560) ಕೆಳದಿ ಸದಾಶಿವ ನಾಯಕ ಪಾರ್ಶ್ವನಾಥಸ್ವಾಮಿ ಬಸದಿಯ ನೇಮಿನಾಥನಿಗೆ 4 ವರಹ ಭೂಮಿಯನ್ನು ದತ್ತಿಬಿಟ್ಟನೆಂದು[21] ಒಂದು ಶಾಸನ ತಿಳಿಸಿರುವುದರಿಂದ ಕೆಳದಿ ಸದಾಶಿವ ನಾಯಕನಿಗೆ ಜೈನಮತದ ಮೇಲೆ ದ್ವೇಷವಿದ್ದಿಲ್ಲವೆಂದು ತಿಳಿಯಬಹುದು. ಒಟ್ಟಿನಲ್ಲಿ ಕೆಳದಿ ಮತ್ತು ಕನ್ನಡ ಕರಾವಳಿಯ ಪಾಳೆಯಗಾರರ ಮತಭೇದವೇ

---

[16] *E.C. VI Mudigeri, 61 dated* 1542 *M.A.R.* 1934, Ins. No. 15 dated 1547, *E.C.* VI *Mudigeri*. 40. *dated* 1552. ಕಳಸೇಶ್ವರ ದೇವಾಲಯಕ್ಕೆ ಕಳಸಕಾರ್ಕಳ ಭೈರವ ಒಡೆಯರ ದಾನ ಶಾಸನಗಳನ್ನು ನೋಡಿ ಡಾ. ಬಿ.ಎ. ಸಾಲೆತ್ತೂರ್‌ರವರು ಕಳಸ ಕಾರ್ಕಳದವರು ಕ್ರಮೇಣ ಲಿಂಗಾಯತ ಪಂಥದ ವರ್ಚಸ್ಸಿಗೆ ಒಳಪಟ್ಟರೆಂದು ಹಾಡಿಸಿದ್ದನ್ನು ಇಲ್ಲಿ ನಾವು ಸ್ಮರಿಸಬಹುದು. Dr. B. A. Saletore-*Medieval Jainism*, p. 361. ಆದರೆ ಈ ವಾದ ಸರಿಯಲ್ಲವೆಂದು ಉಳಿದ ಶಾಸನ ಮತ್ತು ಸಮಕಾಲೀನ ಕಾವ್ಯಗಳಿಂದ ತಿಳಿದುಬರುತ್ತದೆ.

[17] *A.R.S.I.E.* No. 344 of 1930–31 ಈ ಶಾಸನದ ಕಾಲ 1431. *A.R.S.I.E.* of 1929–No. 483. ಈ ಶಾಸನದ ಕಾಲ 1484. ಇದು ಚಿಕ್ಕಂಗಡಿ ನಂದಿಕೇಶ್ವರ ದೇವಾಲಯಕ್ಕೆ ಬಿಟ್ಟ ತಸ್ತಿಕು

[18] *S.I.I.* Vol. VII No. 228

[19] *A R.S.I E.* of 1931–32. No. 329 ; 324 ; 332–333

[20] *Epigraphia Indica* XX, 95–97

[21] *M.A.R.* 1923 No. 120

ಜೈನ ಪಾಳೆಯಗಾರರ ದಂಗೆಗೆ ಕಾರಣವಲ್ಲವೆಂದು ತಿಳಿದರೆ ತಪ್ಪಾಗಲಾರದು. ಇನ್ನು ತುಳು ರಾಜರು ದಂಗೆ ಎದ್ದ ವಿಚಾರವನ್ನು ವೀಕ್ಷಿಸುವಾಗ ಕಳಸ ಕಾರ್ಕಳದ ಭೈರರಸ ಒಡೆಯರ 1542–1547ರ ವರೆಗಿನ ಶಾಸನಗಳಲ್ಲಿ ವಿಜಯನಗರಕ್ಕೆ ಮನ್ನಣೆ ಕೊಡದಿದ್ದ ವಿಚಾರ ತಿಳಿಯಬರುವುದಲ್ಲದೆ ಇಲ್ಲಿಯ ಒಂದು ಶಾಸನ[22] ತಾವು ಸ್ಥಿರ ಸಿಂಹಾಸನದಲ್ಲಿ ಕುಳಿತು ಸುಕಥಾ ವಿನೋದದಿಂದ ರಾಜ ವಾಳುತಿದ್ದ ರೆಂದು ತಿಳಿಸಿರುವುದರಿಂದ ಕಳಸ ಕಾರಕಳದವರು ಬಂಡೆದ್ದವರಲ್ಲಿ ಒಬ್ಬರಾಗಿರಬೇಕೆಂದು ತಿಳಿಯಬಹುದು. ಆದರೆ ಈ ಬಂಡೆದ್ದದ್ದಕ್ಕೆ ಕಾರಣ ರಾಜಕೀಯ. ಏಕೆಂದರೆ ಈ ಹಿಂದೆ ತುಳುನಾಡಿನ ತುಂಡರಸರು ತಮ್ಮ ಮೇಲಿನ ಸಾಮ್ರಾಜ್ಯದ (ವಿಜಯನಗರ) ಮೇಲಧಿಕಾರವನ್ನು ರಾಜಕೀಯ ಕಾರಣಗಳಿಂದ ಕಡೆಗಣಿಸುತ್ತಿದ್ದ ವಿಚಾರ ಶಾಸನಗಳಿಂದ ತಿಳಿಯುತ್ತದೆ.[23]

ಕ್ರಿ.ಶ. 1547ರ[24] ಶಾಸನದಲ್ಲಿ ಕಳಸ ಕಾರಕಳ ಅರಸ 4ನೆಯ ಪಾಂಡ್ಯಪ್ಪ ಒಡೆಯನು ವಿಜಯನಗರ ರಾಜ ಸದಾಶಿವರಾಯನನ್ನು ತನ್ನ ಅಧಿರಾಜನೆಂದು ತಿಳಿಸಿರುವುದರಿಂದ ಇದು ಕೆಳದಿ ಸದಾಶಿವನಾಯಕನು ಕನ್ನಡ ಕರಾವಳಿಯಲ್ಲಿ ಮಾಡಿದ ದಂಡಯಾತ್ರೆಯ ಪರಿಣಾಮವೇ ಆಗಿರಬಹುದೆಂದು ಇಲ್ಲಿ ಅಭಿಪ್ರಾಯಪಟ್ಟರೆ ತಪ್ಪಾಗಲಿಕ್ಕಿಲ್ಲ. ಇದೇ ಆಧಾರದಿಂದ, ಕೆಳದಿ ಸದಾಶಿವ ನಾಯಕನ ಕನ್ನಡ ಕರಾವಳಿಯ ದಾಳಿ ಮತ್ತು ತುಳು ಪಾಳೆಯಗಾರರ ಪ್ರತಿಭಟನೆ ಕ್ರಿ.ಶ. 1546ರಲ್ಲಿ ಆರಂಭವಾಗಿರಬೇಕೆಂದು ಅಭಿಪ್ರಾಯ ಪಡಬಹುದು[25]. ಆಗಿಂದಾಗ್ಗೆ ದಂಗೆ ಏಳುತ್ತಿದ್ದ ತುಳು ಪಾಳೆಯಗಾರರನ್ನು ಒಂದು ಹಿಡಿತಕ್ಕೆ ತರಲು ಸದಾಶಿವ ಮಹಾರಾಜರು ಕೆಳದಿ ಸದಾಶಿವ ನಾಯಕನನ್ನು ತುಳು ರಾಜ್ಯದ ರಾಜ್ಯಪಾಲನನ್ನಾಗಿ ನೇಮಿಸಿರಬೇಕೆಂಬ ಲಕ್ಷ್ಮೀನಾರಾಯಣರ ವಾದ[26] ಸಮರ್ಥನೀಯವಾಗಿದೆ. ತುಳು ರಾಜ್ಯವನ್ನು ಗೆದ್ದ ಸದಾಶಿವ ನಾಯಕ ಬೇಕಲ, ಮತ್ತು ಚಂದ್ರಗಿರಿಯಲ್ಲಿ ಕೋಟೆ ಕಟ್ಟಿಸಿದನೆಂದು[27] ಹೆರಾಸರು ಬುಕಾನನ ವರದಿಯನ್ನೆ ಆಧಾರವಾಗಿಟ್ಟುಕೊಂಡು ತಿಳಿಸಿದ್ದಾರೆ. ಆದರೆ ಈ ಕೋಟೆಗಳನ್ನು ಕಟ್ಟಿಸಿದ ವಿಷಯವನ್ನು ಯಾವ ಐತಿಹಾಸಿಕ ದಾಖಲೆಗಳೂ ತಿಳಿಸದ ಕಾರಣ ಇದನ್ನು ಒಪ್ಪಿಕೊಳ್ಳುವುದು ಸದ್ಯದ ಪರಿಸ್ಥಿತಿಯಲ್ಲಿ ಕಷ್ಟಕರವಾಗಿದೆ. ಕಾಪುವಿನಲ್ಲಿ ಸಿಕ್ಕಿದ ತಾಮ್ರಶಾಸನ (ಕಾಲ 1556).[28] ಕೆಳದಿ ಸದಾಶಿವನಾಯಕನ ವಿಜಯನಗರ ಅರಸರ ಅಧೀನನಾಗಿ ಬಾರಕೂರು ಮತ್ತು ಮಂಗಳೂರು ರಾಜ್ಯವನ್ನು 'ಆಳುತಿಹ'ನೆಂದು ತಿಳಿಸಿದ ಕಾರಣ ಇವನ ಆಳ್ವಿಕೆ ಮಂಗಳೂರು ರಾಜ್ಯದ ವರೆಗೂ ಹಬ್ಬಿತ್ತೆಂದು ತಿಳಿದರೆ ತಪ್ಪಾಗಲಾರದು.

ಶಂಕರನಾರಾಯಣದಲ್ಲಿ (ಕುಂದಾಪುರ ತಾಲ್ಲೂಕು) ಸಿಕ್ಕಿದ 1562ನೆಯ[29] ಶಾಸನ ಕೆಳದಿ ಸದಾಶಿವ ನಾಯಕನಿಗೆ ತುಳು ರಾಜ್ಯ ಅಮರಮಾಗಣೆಯಾಗಿ ವಿಜಯನಗರ ಅರಸರಿಂದ ಬಂದಿತ್ತೆಂದು ತಿಳಿಸಿದ್ದಲ್ಲದೆ ಇವನ ಬಿರುದುಗಳಾದ "ಕೋಟೆ ಕೋಲಾಹಳ, ಯೆಡವ ಮುರಾರಿ, ಪಡುವಣ ಸಮುದ್ರಾಧೀಶ್ವರ. ...ಶ್ರೀಮತ್ ಸಕಲ ಗುಣ ಸಂಪನ್ನರಾದ ದುಷ್ಟ ನಿಗ್ರಹ ಶಿಷ್ಟ ಪರಿಪಾಲಕ"

---

22 *S.I I.* Vol. VII, No. 380

23 ಇದನ್ನು ಕೆ.ವಿ. ರಮೇಶರು ತಮ್ಮ 'ತುಳುನಾಡಿನ ಇತಿಹಾಸ'ದಲ್ಲಿ ವಿವರವಾಗಿ ತಿಳಿಸಿದ್ದಾರೆ: p. 114 ಕೆ. ವಿ. ರಮೇಶ್ . *Histoty of South Kanara*, p. 227

24 *M.A.R.* 1934–Ins. 15

25 ಡಾ. ಕೆ. ವಿ. ರಮೇಶರು ಈ ರೀತಿ ಹೇಳಿದ್ದಾರೆ: ಈ ದಾಳಿ ಮೊದಲಾಯಿತೋ, ಅಮರ ಮಾಗಣೆಯಾಗಿ ಸದಾಶಿವ ನಾಯಕನಿಗೆ ತುಳುರಾಜ್ಯ ಮೊದಲು ಬಂದಿತೋ ಎಂದು ತಿಳಿಯಲು ಸಮಕಾಲೀನ ದಾಖಲೆಗಳು ಸಹಾಯಕವಾಗಿಲ್ಲ. ಆದರೂ ಈ ದಾಳಿಯೇ ಮೊದಲಾಗಿರಬಹುದು. K.V. Ramesh : *A History of South Kanara*, p. 312

26 *Vijayanagara Sex-Centenary Volume*, p. 258 *v.s.e.v.*

27 Heras : *Aravidu Dynasty*, Vol. I, p. 179

28 ನೋಡಿ: ಅಡಿಟಿಪ್ಪಣಿ ಪು. 89

29 *S.I.I* IX, Part II, Ins. No. 674

ಬಿರುದುಗಳನ್ನು ಉಲ್ಲೇಖಿಸಿದೆ. ಈ ಶಾಸನದಲ್ಲಿ ತಿಳಿಸಿದ ಕೊನೆಯ ಬಿರುದು ಮತ್ತು ಪ್ರಶಸ್ತಿಯಿಂದ ಸದಾಶಿವ ನಾಯಕ ಕನ್ನಡ ಕರಾವಳಿಯಲ್ಲಿ ಆ ಕಾಲದಲ್ಲಿ ಪ್ರಬಲ ಶಕ್ತಿಯಾಗಿದ್ದನೆಂದು ತಿಳಿಯಲು ಆಸ್ಪದವಿದೆ. ಇನ್ನು ಇವನ ಕನ್ನಡ ಕರಾವಳಿಯಲ್ಲಿನ ಚಟುವಟಿಕೆಯನ್ನು ಇದೇ ಇಸವಿಯ ಕೋಟೇಶ್ವರದಲ್ಲಿ ಸಿಕ್ಕಿದ ಶಾಸನ "ವಿಜಯನಗರ ಅರಸರ ನಿರೂಪದಿಂದ ಸದಾಶಿವನಾಯಕರು ತುಳುರಾಜ್ಯವನು ಮಾಡಿಕೊಂಡು. ಬಾರಕೂರು ಸಿಂಹಾಸನದಲ್ಲಿ ಕಲ್ಲೆಯೆಲ್ಲಪ್ಪ ಒಡೆಯರು ಆ ರಾಜ್ಯವನ್ನು ಪ್ರತಿಪಾಲಿಸುತ್ತಿದ್ದರೆಂದು"30 ತಿಳಿಸಿದ್ದನ್ನು ನಾವು ಗಮನಿಸಬೇಕು.

ಅದೇ ವರ್ಷ ಕುಂಭಾಶಿಯಲ್ಲಿ ಸಿಕ್ಕಿದ ಶಾಸನ ವಿಜಯನಗರ, ಕೆಳದಿ ನಾಯಕ ಮತ್ತು ಬಾರಕೂರು ಗವರ್ನರ ರಾಜಕೀಯ ಬಾಂಧವ್ಯದ ಕುರಿತಾಗಿ ಹೊಸ ಬೆಳಕನ್ನು ಚೆಲ್ಲುತ್ತದೆ. "ಸದಾಶಿವ ರಾಯರು ವಿಜಯನಗರದಲ್ಲಿ ಸುಖಸ[ಂ]ಕಥಾ ವಿನೋದದಿಂದ ದುಷ್ಟನಿಗ್ರಹ... ಸಕಲವ[ಂ]ರ್ಣದ [ಂ]ವರ್ಣಾಶ್ರಮಗಳನು ಪ್ರತಿಪಾಲಿಸುವ ಕಾಲದಲ್ಲೂ ರಾಮರಾಜ ವೆಂಕಟಾದ್ರಿ ಮಹಾ ಅರಸುಗಳು ಕೆಳದಿ ಸದಾಶಿವ ನಾಯಕರಿಗೆ ತುಳುರಾಜ್ಯವನು ಪಾಲಿಸಿ. ಆ ಸದಾಶಿವ ನಾಯಕರು ಬಾರಕೂರು ರಾಜ್ಯವನ್ನು ಕಲ್ಲೆಯೆಲ್ಲಪ್ಪ ವೊಡೆಯರಿಗೆ ಪಾಲಿಸಿ. ಆ ಕಲ್ಲೆಯೆಲ್ಲಪ್ಪವೊಡೆಯರು ಬಾರಕೂರು ಸಿಂಹಾಸನದಲಿ ಕುಳಿತು ರಾಜ್ಯವಾಳುತಿಹ ಕಾಲದಲ್ಲಿ ಶ್ರೀ ಸದಾಶಿವ ಮಹಾರಾಯರಿಗೆ ಶತ್ರುಕ್ಷಯ ಮಿತ್ರೋರ್ಜಿತ ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಯಾಗಬೇಕೆಂದು ಕೆಳದಿ ಸದಾಶಿವ ನಾಯಕ ಅಯ್ಯನವರ ನಿರೂಪದಿಂದ ಕಲ್ಲೆಯೆಲ್ಲಪ್ಪ ಒಡೆಯರು ಸದಾಶಿವ ನಾಯಕರಿಗೆ ಅನೇಕಾಭ್ಯುದಯವಾಗಬೇಕೆಂದು ಚೋಳಕೆರೆಯ ಮಹಾ...ಬ ಲಿಂಗ ಸೇನ ಭೋವಗೆ ಕೊಟ್ಟ ದಾನ ಶಾಸನ"31 ಎಂಬ ಹೇಳಿಕೆ ಗಮನಾರ್ಹ. ಈ ಶಾಸನದ ಆಧಾರದ ಮೇಲೆ ಈ ರೀತಿ ಅಭಿಪ್ರಾಯಪಡಬಹುದು: ಕೆಳದಿ ಸದಾಶಿವ ನಾಯಕ ವಿಜಯನಗರ ಅರಸರ ಅನುಗ್ರಹ ಸಂಪಾದಿಸಿದ್ದಲ್ಲದೆ ಬಾರಕೂರು ರಾಜ್ಯದ ರಾಜ್ಯಪಾಲ ಕಲ್ಲೆಯೆಲ್ಲಪ್ಪ ಒಡೆಯನ ಸ್ವಾಮಿನಿಷ್ಠೆಯನ್ನು ಗಳಿಸಿಕೊಂಡ. ಈ ದಾನಶಾಸನ ಕೆಳದಿ ಸದಾಶಿವ ನಾಯಕನ ಆಜ್ಞೆಯಂತೆ ಕಲ್ಲೆಯೆಲ್ಲಪ್ಪ ಒಡೆಯರು ಇತ್ತರೆಂದು ತಿಳಿಸಿರುವುದರಿಂದ. ಕೆಳದಿ ಸದಾಶಿವನಾಯಕನಿಗೆ ಈ ಪ್ರದೇಶಗಳ ಮೇಲೆ ಇನ್ನೂ ಹೆಚ್ಚಿನ ಹತೋಟಿ ಬಂತು.

ಸುರಾಲಿನ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಸಿಕ್ಕಿದ ಶಾಸನ (1563ರಲ್ಲಿ) ಕೆಳದಿ ಸದಾಶಿವ ನಾಯಕ ವಿಜಯನಗರ ಅರಸರ ಅನುಮತಿಯಂತೆ ಸಮಸ್ತ ತುಳುರಾಜ್ಯವನ್ನು ಆಳುತಿದ್ದನೆಂದು, ಸುರಾಲಿನ ಚೆನ್ನಯರಸ ಈ ದೇವಸ್ಥಾನದ ನಂದಾದೀಪಕ್ಕೆ ದಾನಬಿಟ್ಟ ಕಾಲದಲ್ಲಿ ತಿಳಿಸಿರುವುದರಿಂದ32 ಸುರಾಲಿನ ಚೆನ್ನಯರಸನು ಇವನ ಅಧಿಪತ್ಯಕ್ಕೆ ಒಪ್ಪಿಕೊಂಡಿರಬೇಕೆಂದು ಇಲ್ಲಿ ತಿಳಿಯಬಹುದು. ಇದೇ ಕಾಲದಲ್ಲಿ ಸದಾಶಿವ ನಾಯಕನ ಆಳ್ವಿಕೆ ಮಂಗಳೂರು ರಾಜ್ಯದಲ್ಲಿದ್ದಿತೆಂದು ಅರಿಗುಡಿ (ಬಳಪದ ಹತ್ತಿರ. ಪುತ್ತೂರು ತಾಲ್ಲೂಕು)ಯಲ್ಲಿ ಸಿಕ್ಕಿದ ಶಾಸನ ತಿಳಿಸುತ್ತದೆ.33

ಕಾಪದಿ ಮತ್ತು ಪಡಕಾಡಿಯಲ್ಲಿ ಸಿಕ್ಕಿದ ಶಾಸನ (ಕ್ರಿ.ಶ. 1564 ಮತ್ತು 1565) (1486 ಫಾಲ್ಗುಣ–1487 ಫಾಲ್ಗುಣ)34 ಕೆಳದಿ ಸದಾಶಿವ ನಾಯಕ ಬಾರಕೂರು ರಾಜ್ಯವನ್ನು ಆಳಿಕೊಂಡಿದ್ದನೆಂದೂ ಮರುವರ್ಷದ ಸಂಟಿಗೆ ಕೋಟೆಯಲ್ಲಿ ಸಿಕ್ಕಿದ ಶಾಸನ35 ಇಮ್ಮಡಿ ಸದಾಶಿವನಾಯಕನ

[30] *S.I.I.* Vol. IX, Part II, No. 673

[31] *S.I.I.* Vol. IX, Part II., 675

[32] *Arsie* of 1932, No. 331, p. 35

[33] *Ibid* –1931–348 page 30.ಈ ಶಾಸನದ ಕಾಲ 1484 Saka

[34] *Ibid.* of 1931–32, Ins. 301, 292. ಎಸ್. ಲಕ್ಷ್ಮೀನಾರಾಯಣರಾಯರ ಅಭಿಪ್ರಾಯದಂತೆ ಸದಾಶಿವನಾಯಕನ ಆಳ್ವಿಕೆ 1563ರ ವರೆಗೆ ಎಂದು ಇದ್ದರೂ ಇನ್ನೊಂದು ಸಂದರ್ಭದಲ್ಲಿ 1565ರ ವರೆಗೂ ಆಳಿರಬಹುದೆಂದು ಒಪ್ಪಿಕೊಂಡಿದ್ದಾರೆ. ಎಸ್. ಲಕ್ಷ್ಮೀನಾರಾಯಣರಾವ್: '*Keladi Nayakas*; *v.s.e.v.* p. 250

[35] *E.C.* VIII, Nagar 2, p. 341

ಆಳ್ವಿಕೆಯನ್ನು ತಿಳಿಸಿರುವುದರಿಂದ ಕೆಳದಿ ಸದಾಶಿವ ನಾಯಕ 1565ರ ವರೆಗೆ ಆಳಿದ್ದನೆಂದೂ ತಿಳಿದರೆ ತಪ್ಪಾಗಲಾರದು.

ಉಪಸಂಹಾರ

ಕೆಳದಿ ಸದಾಶಿವ ನಾಯಕನ ಕಾಲದ ಕನ್ನಡ ಕರಾವಳಿಯ ಶಾಸನಗಳು ಮತ್ತು ಐತಿಹಾಸಿಕ ಕಾವ್ಯಗಳನ್ನು ಅಧ್ಯಯಿಸಿದಾಗ, ಇವನ ರಾಜಕೀಯ ಚಟುವಟಿಕೆಯ ಕುರಿತಾಗಿ ಈ ರೀತಿ ಅಭಿಪ್ರಾಯ ಪಡಬಹುದು:

1 ಕೆಳದಿ ಸದಾಶಿವನ ಕನ್ನಡ ಕರಾವಳಿಯ ದಾಳಿ 1546ರ ಪೂರ್ವದಲ್ಲಿ ಜರುಗಿರಬೇಕು. ಆದರೆ ಕನ್ನಡ ಜಿಲ್ಲೆಯ ಪಾಳೆಯಗಾರರೊಡನೆ ನೇರ ಸಂಪರ್ಕ ಬಂದದ್ದು ಕ್ರಿ.ಶ. 1550 ರಲ್ಲಿ. ಕ್ರಿ.ಶ. 1554ರ ಬಳಿಕ ಇವಕ್ಕೆ ಸ್ವಲ್ಪ ಹಿಂದೆ ಇವನನ್ನು ತುಳು ರಾಜ್ಯದ ರಾಜ್ಯಪಾಲ ನನ್ನಾಗಿ ವಿಜಯನಗರದ ಸದಾಶಿವರಾಯ ನೇಮಿಸಿದ. ಈ ಪ್ರದೇಶ ಆಯಕಟ್ಟಿನ ಪ್ರದೇಶವಾಗಿದ್ದು ಇಲ್ಲಿಯ ಪಾಳೆಯಗಾರರನ್ನು ಹಿಡಿತಕ್ಕೆ ತರಲು ಕೆಳದಿ ಸದಾಶಿವ ನಾಯಕನೇ ಸಮರ್ಥನೆಂದು ವಿಜಯನಗರದ ಆಡಳಿತವರ್ಗದವರು ಭಾವಿಸಿದರು.

2 ಕೆಳದಿ ಸದಾಶಿವನ ದಾಳಿ ಮೊದಲು ನಡೆದು ಅನಂತರ ಇವನಿಗೆ ಈ ಪ್ರದೇಶ ಅಮರ ಮಾಗಣಿಯಾಗಿ ಸಿಕ್ಕಿತು. ಇದರ ಪರಿಣಾಮವಾಗಿ ಕೆಳದಿ ಅರಸರ ಆಳ್ವಿಕೆ ಕನ್ನಡ ಜಿಲ್ಲೆಯಲ್ಲಿ ಆರಂಭವಾಯಿತು. ಇವನು ಶೀಘ್ರದಲ್ಲೇ ಎಷ್ಟು ಪ್ರಬಲನಾದನೆಂದರೆ, ಬಾರಕೂರು ರಾಜ್ಯದ ರಾಜ್ಯಪಾಲರನ್ನು ಈ ಮೊದಲು ವಿಜಯನಗರ ಅರಸರು ನೇಮಿಸುತ್ತಿದ್ದರೆ, ಇವನ ಕಾಲದಲ್ಲಿ ಸದಾಶಿವ ನಾಯಕನೇ ನೇಮಿಸಿದ. ಇದರಿಂದಾಗಿ ತುಳು ರಾಜ್ಯ ಮತ್ತು ವಿಜಯನಗರದ ರಾಜಕೀಯಗಳ ನೇರ ಸಂಬಂಧ ಅಂತ್ಯವಾಯಿತು.

3 ಈ ಪ್ರದೇಶವನ್ನು ಸ್ವತಃ ಆಳದೆ ಬಹುಶಃ ಲಿಂಗಾಯತರಲ್ಲದ ಮಲ್ಲಪ್ಪ ಯೆಲ್ಲಪ್ಪ ಒಡೆಯರು ಎಂಬ ರಾಜ್ಯಪಾಲರ ಮೂಲಕವಾಗಿ ಆಳ್ವಿಕೆ ನಡೆಸಿ ತನ್ನ ರಾಜಕೀಯ ಮುತ್ಸದ್ದಿ ತನವನ್ನು ತೋರಿಸಿದ.

4 ಈ ಪ್ರದೇಶವನ್ನು ತನ್ನ ವಶಕ್ಕೆ ತಂದುಕೊಂಡ ಕೆಳದಿ ಸದಾಶಿವನಾಯಕ, ಇಲ್ಲಿಯ ಪ್ರಸಿದ್ಧ ಶೈವವೈಷ್ಣವ ಮತ್ತು ಇತರ ದೇವಾಲಯಗಳಿಗೆ ದತ್ತಿಬಿಟ್ಟ ಶಾಸನಗಳಲ್ಲಿ[36] ಇವನ್ನು ಹೆಸರಿರುವುದರಿಂದ ಇದು ಇಲ್ಲಿಯ ಜನರ ವಿಶ್ವಾಸ ಗಳಿಸಲು ಮಾಡಿದ ಯತ್ನವೆಂದು ತಿಳಿದರೆ ತಪ್ಪಾಗಲಾರದು.

5 ಕೆಳದಿ ಸದಾಶಿವನ ಶಾಸನಗಳು ಹೆಚ್ಚಾಗಿ ಬಾರಕೂರು ರಾಜ್ಯದಲ್ಲಿ ಸಿಕ್ಕಿರುವುದರಿಂದಲೂ ಮಂಗಳೂರು ರಾಜ್ಯದಲ್ಲಿ ಕೆಲವೇ ಶಾಸನಗಳು ಸಿಕ್ಕಿ, ಅದರಲ್ಲಿ ಕೆಳದಿ ಸದಾಶಿವನಾಯಕ ಅಲ್ಲಿ ರಾಜ್ಯಪಾಲರನ್ನು ನೇಮಿಸಿದ ವಿಚಾರ ಮತ್ತು ಇತರ ವಿಷಯ ತಿಳಿಸದೇ ಇರುವುದರಿಂದ ಕೆಳದಿ ಸದಾಶಿವನ ಆಳ್ವಿಕೆ ಮಂಗಳೂರು ರಾಜ್ಯದಲ್ಲಿ ಬಾರಕೂರಿನಷ್ಟು ಪ್ರಬಲವಾಗಿರಲಿಕ್ಕಿಲ್ಲ ಎಂದು ತಿಳಿಯಬಹುದು.[37]

---

36 *ARSIE of* 1901. Ins. No. 348. *ARSIE* of 1932 of Ins. No. 292, 294; 30.SI vol. IX Part II. No. 675. K. N. Rangacharya: *Topographical Lists Inscriptions of Madras Prerid hncy*. vol. II. Ins. No. 21, p. 850

37 ಈ ಲೇಖನವನ್ನು ಬರೆಯಲು ಹಲವಾರು ಸೂಚನೆ ಮತ್ತು ಸಲಹೆಗಳನ್ನು ನೀಡಿದ ಡಾ. ಓ.ಬಿ.ದೇಸಾಯಿ ಮತ್ತು ಡಾ. ಕೆ. ವಿ. ರಮೇಶರಿಗೆ ಕೃತಜ್ಞತೆಗಳು.

ಸದಾಶಿವನಾಯಕ ಸಮರ್ಥ ಸೇನಾಧಿಪತಿಯಾಗಿದ್ದ. ಚಂದ್ರಗುತ್ತಿ ಮತ್ತು ಬಂಕಾಪುರಗಳ ಮನ್ನೆಯರು ಈತನ ಸಾರ್ವಭೌಮತ್ವಕ್ಕೊಳಪಟ್ಟು ಕಪ್ಪ ಕಾಣಿಕೆಯೀಯುತ್ತಿದ್ದರು. ವಿಜಯನಗರದ ರಾಯನ ಅನುಜ್ಞಾನುಸಾರವಾಗಿ ಬಂಕಾಪುರದ ಮಾದಣ್ಣ ಒಡೆಯರ ಮುಖಾಂತರ ಈ ನಾಯಕ ಮದಗದಕೆರೆಯನ್ನು ಪೂರೈಸಿದ. ಇಲ್ಲಿಯೇ ಶೃಂಗೇರಿ ಗುರುಗಳನ್ನು ಕರೆಸಿಕೊಂಡು ತಟಾಕಾಪ್ರತಿಷ್ಠೆಯನ್ನು ಮಾಡಿಸಿದನೆಂದು ಇತಿಹಾಸದಿಂದ ಕಂಡು ಬರುತ್ತದೆ.

ಚಿತ್ರದುರ್ಗದ ಮತ್ತಿ ತಿಮ್ಮಣ್ಣ ನಾಯಕ ಬಲಿಷ್ಠನಾಗಿ ನಾಯಕನಿಗೆ ಯಾವ ರೀತಿಯಿಂದಲೂ ವಿಧೇಯತೆಯನ್ನು ತೋರಿಸದಿದ್ದುದು ಇಕ್ಕೇರಿ ದೊರೆಗೆ ಖೇದವುಂಟುಮಾಡಿದ್ದರಿಂದ ಆತನ ಮದೋದ್ರೇಕವನ್ನು ತಗ್ಗಿಸಿ ಕಪ್ಪ ಕಾಣಿಕೆ ಸಲ್ಲಿಸುವಂತೆ ಏರ್ಪಡಿಸಿದನು. ತುಳುವ ಸೀಮೆಯೂ ಈತನ ಆಧಿಪತ್ಯಕ್ಕೆ ಒಳಪಟ್ಟಿತ್ತು.

ಈತನ ರಾಜ್ಯದ ಮೇರೆ ಶಿವಮೊಗ್ಗ. ಉತ್ತರ ಕನ್ನಡ. ತುಳುವ ರಾಜ್ಯ ಮತ್ತು ಕಾಸರಗೋಡನ್ನು ಒಳಗೊಂಡಿರುವುದು ಕಂಡುಬರುತ್ತದೆ.

ಈ ನಾಯಕನಿಗೆ ವೀರಮಾಂಬೆ ಮತ್ತು ಭದ್ರಮಾಂಬೆ ಎಂಬಿಬ್ಬರು ರಾಣಿಯರಿದ್ದರು. ಹಿರಿಯವಳಲ್ಲಿ ದೊಡ್ಡ ಸಂಕಣ್ಣನಾಯಕನೂ ಕಿರಿಯವಳಲ್ಲಿ ಚಿಕ್ಕ ಸಂಕಣ್ಣನಾಯಕನೂ ಜನಿಸಿದ್ದರು.

ಈತನ ಕಾಲದಲ್ಲಿ ರಾಜ್ಯದಲ್ಲಿ ಟಂಕಸಾಲೆ ನಿರ್ಮಿಸಲ್ಪಟ್ಟು ನಾಣ್ಯ ಚಲಾವಣೆ ಜಾರಿಯಲ್ಲಿದ್ದುದು ಕಂಡುಬರುತ್ತದೆ. ಚಿನ್ನದ ನಾಣ್ಯದ ಒಂದು ಪಾರ್ಶ್ವದಲ್ಲಿ 'ಶ್ರೀ ಸದಾಶಿವ' ಎಂಬ ಉಲ್ಲೇಖವೂ ಮತ್ತೊಂದು ಪಾರ್ಶ್ವದಲ್ಲಿ ಪಾರ್ವತೀಪರಮೇಶ್ವರ ಲಾಂಛನವೂ ಇರುವುದು ವ್ಯಕ್ತಪಟ್ಟಿದೆ[1].

—ಕೆಳದಿ ಗುಂಡಾಜೋಯಿಸ್

---

1 ಇಕ್ಕೇರಿ ಅರಸರು. ಕರ್ನಾಟಕ ವಿಶ್ವವಿದ್ಯಾನಿಲಯ. ಧಾರವಾಡ (1972), ಪು. 17-18

ಎಚ್. ಎ. ಖಾನ್

ಭಾರತೀಯ ಗ್ರಂಥಾಲಯುಗಳು ಮತ್ತು ಪುಸ್ತಕ ಮಾರುಕಟ್ಟೆ

ಸಾಮಾನ್ಯ ಟಿಪ್ಪಣಿಗಳು

ಭಾರತದಲ್ಲಿ ಕಳೆದ 25 ವರ್ಷಗಳಲ್ಲಿ ಶೈಕ್ಷಣಿಕ ಬೆಳವಣಿಗೆ ತೀವ್ರಗತಿಯಿಂದ ಸಾಗಿದೆ ಎಂಬುದು ಎಲ್ಲರಿಗೂ ಮನವರಿಕೆಯಾದ ಮಾತು. ಈ ಶೈಕ್ಷಣಿಕ ಬೆಳವಣಿಗೆಯಿಂದಲೂ, ಅಕ್ಷರಜ್ಞಾನಪ್ರಸಾರದ ಪ್ರಯತ್ನದಿಂದಲೂ ಅಕ್ಷರಸ್ಥರ ಸಂಖ್ಯೆ 30%ರಷ್ಟು ಆಗಿದೆ. ಇದರಿಂದಾಗಿ ವಿದ್ಯಾವಂತರು ಹಾಗೂ ಅಕ್ಷರಸ್ಥರು ತಮ್ಮ ಬೇರೆಬೇರೆ ಜೀವನಕಾರ್ಯಗಳಲ್ಲಿ ಮುದ್ರಿತ ಅಕ್ಷರದ ಮೇಲೆ ಹೆಚ್ಚುಹೆಚ್ಚಾಗಿ ಅವಲಂಬಿತರಾದರು. ಇದೇ ಸಮಯದಲ್ಲಿ ಪುಸ್ತಕ ಪ್ರಪಂಚದಲ್ಲಿ ಸಮಾಂತರವಾಗಿ ಒಂದು ವಿಶಿಷ್ಟ ಮತ್ತು ಮಹತ್ತ್ವಪೂರ್ಣ ವಿಕಾಸವಾಯಿತು. ಗ್ರಂಥಗಳ ಸಂಖ್ಯೆ ದಿನದಿನವೂ ಏರುತ್ತಿರುವುದಲ್ಲದೆ ಅವುಗಳ ಬೆಲೆಯೂ ಈಗ ಸಾಮಾನ್ಯ ಜನರ ಕೈ ಮೀರಿ ಹೋಗಿದೆ. ಪುಸ್ತಕ ಬಹುತೇಕ ಅಭಿವೃದ್ಧಿಹೊಂದುತ್ತಿರುವ ರಾಷ್ಟ್ರಗಳ ಶ್ರೀಸಾಮಾನ್ಯನಿಗೆ ಒಂದು ಭೋಗದ ವಸ್ತುವಾಗಿದೆ. ಈ ಎಲ್ಲ ವಿಕಸನಗಳ ಪರಿಣಾಮವಾಗಿ ಓದುಗರು ಹೆಚ್ಚಾಗಿ ಸಾರ್ವಜನಿಕ, ಶೈಕ್ಷಣಿಕ ಹಾಗೂ ಖಾಸಗಿ ಗ್ರಂಥಾಲಯಗಳನ್ನು ಅವಲಂಬಿಸಿರಬೇಕಾದ್ದು ಕಂಡುಬರುತ್ತದೆ.

ಭಾರತದ ಗ್ರಂಥಾಲಯುಗಳ ಬಗ್ಗೆ ಕೆಳಕಾಣಿಸಿದ ಅಭಿಪ್ರಾಯಗಳನ್ನು ಗಮನದಲ್ಲಿಡಬೇಕು :

1 ಸ್ವಾತಂತ್ರ್ಯೋತ್ತರ ಶೈಕ್ಷಣಿಕ ಮತ್ತು ವಿಶಿಷ್ಟ ಗ್ರಂಥಗಳಲ್ಲಷ್ಟೇ ನಾವು ಒಂದು ರೀತಿಯ ಪ್ರಗತಿ ಹಾಗೂ ವಿಕಾಸ ಕಾಣುತ್ತೇವೆ.

2 ಸಾರ್ವಜನಿಕ ಹಾಗೂ ಶಾಲಾ ಗ್ರಂಥಾಲಯುಗಳು ಪುಸ್ತಕ ಮಾರುಕಟ್ಟೆಗೆ ಕಾರ್ಯಕಾರಿ ರೀತಿಯಲ್ಲಿ ಪ್ರೋತ್ಸಾಹ ನೀಡಬಹುದಾಗಿತ್ತು. ಆದರೆ ಇಂಥ ಗ್ರಂಥಾಲಯುಗಳು ಪ್ರಮುಖವಾಗಿ ಬೆಳೆದು ಬಂದಿಲ್ಲದ್ದರಿಂದ ಪುಸ್ತಕಪ್ರಪಂಚ ಕುಂಠಿತವಾಗಿದೆ.

3 ಹೀಗಾಗಿ ಭಾರತದಲ್ಲಿ ಪುಸ್ತಕ ಮಾರುಕಟ್ಟೆ ಕಾಲೇಜು, ವಿಶ್ವವಿದ್ಯಾನಿಲಯ, ವೈಜ್ಞಾನಿಕ ಹಾಗೂ ಔದ್ಯಮಿಕ ಗ್ರಂಥಾಲಯಗಳನ್ನೆ ಅವಲಂಬಿಸಿದೆ.

4 ಬಹುತೇಕ ಪ್ರೌಢ ಶಿಕ್ಷಣ ಸಂಸ್ಥೆಗಳಲ್ಲಿ ಇನ್ನೂ ಪಾಠಕ್ರಮ ಇಂಗ್ಲಿಷ್ ಭಾಷೆಯಲ್ಲೇ ಸಾಗಿದೆ.

5 ಭಾರತದಲ್ಲಿ ಬೇರೆಬೇರೆ ವಿಷಯಗಳಲ್ಲಿ ಇಂಗ್ಲಿಷ್ ಭಾಷೆಯಲ್ಲಿಯ ಬರೆಹ ಸಂಖ್ಯಾತ್ಮಕವಾಗಿ ಕಡಿಮೆಯೂ, ಗುಣಾತ್ಮಕವಾಗಿ ಬೇರೆ ರಾಷ್ಟ್ರಗಳಲ್ಲಿ ಹೊರಬರುವ ಸಾಹಿತ್ಯವನ್ನು ಹೋಲಿಸಿದರೆ ಮೇಲ್ಪಾಡು ಮಾಡುವ ರೀತಿಯುಳ್ಳದ್ದೂ ಇರುವದು.

6 ಈ ಎಲ್ಲಾ ಅಂಶಗಳ ಪರಿಣಾಮವೆಂದರೆ, ಭಾರತೀಯ ಗ್ರಂಥಾಲಯುಗಳು ಮತ್ತು ಮಾರುಕಟ್ಟೆ ವಿದೇಶಗಳಿಂದ ಪುಸ್ತಕಗಳನ್ನು ಆಮದುಮಾಡಬೇಕಾಗಿದೆ.

ಈ ಕುಂದುಕೊರತೆಗಳು ಸಾಕಾಗಿಲ್ಲವೋ ಎಂಬ ಹಾಗೆ, ಭಾರತೀಯ ಗ್ರಂಥಪಾಲಕ ಎರಡು ವಿಚಿತ್ರ ಪರಿಸ್ಥಿತಿಗಳನ್ನು ಎದುರಿಸಬೇಕಾಗಿದೆ. ಮೊದಲನೆಯದು ಮಾರುಕಟ್ಟೆಗೆ ಸಂಬಂಧಿಸಿದ್ದಾದರೆ ಎರಡನೆಯದು ಗ್ರಂಥಾಲಯುಗಳಿಗೆ ಅನ್ವಯಿಸಿದ್ದು.

ಭಾರತೀಯ ಗ್ರಂಥಪೇಟೆಯತ್ತ ಒಂದು ದೂರದೃಷ್ಟಿ ಬೀರಿದರೆ ಪುಸ್ತಕ ಉದ್ಯಮ ಸಂಖ್ಯಾತ್ಮಕವಾಗಿ ಬೆಳೆದರೂ ಅದು ಸುವ್ಯವಸ್ಥೆ ಮತ್ತು ದಕ್ಷತೆಗೆ ಹೊರತಾಗಿದೆ. ಇದರ ಪರಿಣಾಮವಾಗಿ, ಬಹುತರವಾಗಿ, ಭಾರತೀಯ ಗ್ರಂಥಪಾಲಕ ಓದುಗರ ಬೇಡಿಕೆಗಳನ್ನು ಪೂರೈಸದಿರುವ ಮತ್ತು ಅದೇ ಸಮಯ ಮಂಜೂರಾದ ಹೊಬಲಗನ್ನು ನಿರ್ದಿಷ್ಟ ವೇಳೆಯಲ್ಲಿ ಉಪಯೋಗಿಸದೆ ಇರುವ ವಿಫಲ ಪ್ರಸಂಗ ಎದುರಿಸಬೇಕಾಗುತ್ತದೆ.

ಗ್ರಂಥಾಲಯದ ಬೆನ್ನೆಲುಬು ಆಗಿರುವ ಹಣಕಾಸು ಭಾರತೀಯ ಗ್ರಂಥಾಲಯಗಳಲ್ಲಿ ತನ್ನದೇ ಆದ ಕೆಲವು ವೈಶಿಷ್ಟ್ಯಗಳನ್ನುಳ್ಳದ್ದಾಗಿದೆ:

ಅ ಸಕಾಲದಲ್ಲಿ ಸಾಕಷ್ಟು ಮತ್ತು ಕ್ರಮಬದ್ಧ ಹಣ ಮಂಜೂರು ಮಾಡದಿರುವುದು,

ಆ ಸಕಾಲದಲ್ಲಿ ಹಣವನ್ನು ಮಂಜೂರುಮಾಡಿದ್ದಾದರೆ, ಅಂಥ ಮೊತ್ತಗಳನ್ನು ಸಮಾನವಾದ ಪ್ರಮಾಣಗಳಲ್ಲಿ ವಿನಿಯೋಗಿಸದಿರುವುದು; ಸಾಮಾನ್ಯವಾಗಿ ಸಾರ್ವಜನಿಕ ಮತ್ತು ಶೈಕ್ಷಣಿಕ ಗ್ರಂಥಾಲಯಗಳು ಹಣಕಾಸಿನ ವರ್ಷದ ಕೊನೆಯಲ್ಲಿ ಗ್ರಂಥಧನವನ್ನು ಪಡೆಯುತ್ತವೆ. ಇದರಿಂದಾಗಿ ಈ ಗ್ರಂಥಾಲಯಗಳು ಆ ವೇಳೆಯಲ್ಲಿ ಸಿಗುವ ಯಾವುದೇ ಗ್ರಂಥಗಳನ್ನು–ಅವುಗಳ ಉಪಯುಕ್ತತೆಯನ್ನು ನಿರ್ಲಕ್ಷಿಸಿ–ಕೊಂಡುಕೊಳ್ಳುತ್ತವೆ. ಇದರಿಂದಾಗಿ ಹಣದ ದುರುಪಯೋಗವಾಗುತ್ತದೆ.

ಇ ಮೇಲ್ಕಾಣಿಸಿದ 'ಅ' ಮತ್ತು 'ಆ' ಕಾರಣಗಳಿಂದ, ಪುಸ್ತಕವ್ಯಾಪಾರಿಗಳ ಬಿಲ್ಲುಗಳನ್ನು ನಿರ್ದಿಷ್ಟ ಅವಧಿಯಲ್ಲಿ ಕೊಡಲಾಗುವುದಿಲ್ಲ. ಇದರಿಂದಾಗಿ ವ್ಯಾಪಾರಿಗಳು ಗ್ರಂಥಾಲಯಗಳಿಗೆ ಉದ್ಧರಿಯ ಸೌಕರ್ಯಗಳನ್ನು ಮಿತಿಗೊಳಿಸುತ್ತಾರೆ.

ಇನ್ನು ಖರೀದಿ ಮಾಡುವ ಪುಸ್ತಕಗಳತ್ತ ನೋಟ ಬೀರಿದರೆ, ಸಾರ್ವಜನಿಕ ಗ್ರಂಥಾಲಯಗಳ ಹೊರತಾಗಿ ಎಲ್ಲ ತರದ ಗ್ರಂಥಾಲಯಗಳು (ಶೈಕ್ಷಣಿಕ, ವೈಜ್ಞಾನಿಕ, ಔದ್ಯೋಗಿಕ) ಇಂಗ್ಲಿಷ್ ಭಾಷೆಯ ಗ್ರಂಥಗಳನ್ನೇ ಹೆಚ್ಚಾಗಿ ಸಂಗ್ರಹಿಸುತ್ತವೆ. ಆಮದು ಮಾಡುವ ಇನ್ನಿತರ ಭಾಷೆಗಳ ಗ್ರಂಥಗಳೆಂದರೆ ಫ್ರೆಂಚ್, ಜರ್ಮನ್, ರಷ್ಯನ್ ಮತ್ತು ಜಪಾನಿ. ಈ ಪ್ರಕಟಣೆಗಳು ಪುಸ್ತಕ, ನಿಯತಕಾಲಿಕೆ, ಅಧಿಕೃತ ವರದಿ, ಶಿಕ್ಷಣ ಸಂಸ್ಥೆಗಳ ಅಥವಾ ಅವು ಏರ್ಪಡಿಸಿದ ಸಮ್ಮೇಳನಗಳ ವರದಿ, ಇತ್ಯಾದಿಗಳ ರೂಪದಲ್ಲಿರಬಹುದು. ಒಂದು ವರದಿಯ ಪ್ರಕಾರ ಆಮದು ಮಾಡುವ 80% ಗ್ರಂಥಗಳು ಇಂಗ್ಲೆಂಡ್ ಮತ್ತು ಅಮೆರಿಕೆಗಳಿಂದ ಬರುವದುಂಟು; ಜಪಾನಿನಿಂದ ಸೇಕಡ 10ರಷ್ಟು ಗ್ರಂಥಗಳು ಬರುತ್ತವೆ. ಮಿಕ್ಕ 10% ಫ್ರಾನ್ಸ್ ಮತ್ತು ರಷ್ಯಾಗಳಿಂದ ಬರುತ್ತದೆ.*

ಭಾರತದಲ್ಲಿ ಪುಸ್ತಕ ಆಯ್ಕೆಯ ಕೆಲವು ಸಮಸ್ಯೆಗಳು

ಗ್ರಂಥ ಸಂಗ್ರಹಣ ಕಾರ್ಯದಲ್ಲಿ ಪುಸ್ತಕ ಆರಿಕೆ ಒಂದು ಮಹತ್ತ್ವದ ಕಾರ್ಯವಿಧಾನ. ಪುಸ್ತಕ ಆರಿಸುವ ಕಾರ್ಯ ಮೂರು ಮೂಲ ಅಂಶಗಳನ್ನು ಅವಲಂಬಿಸಿರುತ್ತದೆ: 1 ಗ್ರಂಥಗಳು, 2 ಓದುಗರು ಮತ್ತು 3 ಸಾಧನ ಸಂಪತ್ತು. ಗ್ರಂಥಪಾಲಕನಿಗೆ ಇವುಗಳಲ್ಲಿಯ ಪ್ರತಿಯೊಂದು ಅಂಶವೂ ವಿವಿಧ ಸಮಸ್ಯೆಗಳನ್ನು ಒಡ್ಡುತ್ತದೆ. ಈಗ ಈ ಸಮಸ್ಯೆಗಳನ್ನು ಕುರಿತು ವಿಚಾರಿಸೋಣ:

1 ಗ್ರಂಥಗಳು

i ಗ್ರಂಥಸೂಚಿ ನಿಯಂತ್ರಣ ಸಮಸ್ಯೆಗಳು

ಪುಸ್ತಕ ಆರಿಸುವವನು (ಗ್ರಂಥಪಾಲಕ) ಎದುರಿಸಬೇಕಾದ ಮೂಲ ಮತ್ತು ಜಟಿಲ ಸಮಸ್ಯೆಯೆಂದರೆ, ಸಾಮಾನ್ಯವಾಗಿ ಗ್ರಂಥಪಾಲಕನಿಗೆ ಯಾವ ಗ್ರಂಥ ಎಲ್ಲಿ, ಯಾವಾಗ ಮತ್ತು ಯಾರಿಂದ ಪ್ರಕಟಿತವಾಯಿತು ಎಂಬುದರ ಜ್ಞಾನವಿರುವುದಿಲ್ಲ. ಅವನಿಗೆ ಈ ಬಗೆಯ ಗ್ರಂಥಸೂಚಿ (ಬಿಬ್ಲಿಯಾಗ್ರಫಿ) ಅರಿವಾದಲ್ಲಿ ಅವನು ಗ್ರಂಥ ಆಯ್ಕೆಯ ಕಾರ್ಯದಲ್ಲಿ ಮುಂದುವರಿಯಬಹುದು.

---

* *Monthly Statistics of Foreign Trade of India*, Vol 2 (1971)

ಪ್ರಗತಿಪರ ರಾಷ್ಟ್ರಗಳಲ್ಲಿ ಈ ಕಾರ್ಯವನ್ನು ರಾಷ್ಟ್ರೀಯ ಗ್ರಂಥಾಲಯಗಳು ಅಥವಾ ಗ್ರಂಥ ಸೂಚಿ ಕೇಂದ್ರಗಳು ಮಾಡುತ್ತವೆ. ನಮ್ಮ ದೇಶದಲ್ಲಿ ಭಾರತ ರಾಷ್ಟ್ರೀಯ ಗ್ರಂಥಾಲಯ ಈ ಕಾರ್ಯವನ್ನು ಕೈಗೊಂಡಿದೆ. ಅದು ಭಾರತ ರಾಷ್ಟ್ರೀಯ ಗ್ರಂಥಸೂಚಿಯನ್ನು ಪ್ರಕಟಿಸುತ್ತದೆ. ದುರ್ದೈವದಿಂದ ಈ ಸೂಚಿ ಕಾಲಕ್ಕೆ ಸರಿಯಾಗಿ ಪ್ರಕಟವಾಗುತ್ತಿಲ್ಲ. ಇದು ವ್ಯಾಪಕವಾಗಿಯೂ ಇಲ್ಲ. ಇನ್ನು ಕೆಲವೇ ವರ್ಷಗಳಲ್ಲಿ ಪ್ರಾಂತೀಯ ಭಾಷೆಗಳ ಒತ್ತಡ ಹೆಚ್ಚಾಗಲಿದ್ದು, ಮತ್ತು ಭೌಗೋಲಿಕ ದೃಷ್ಟಿಯಿಂದ ಭಾರತಖಂಡ ಸವಿಸ್ತಾರವಾದ ಪ್ರದೇಶವಾದ್ದರಿಂದ, ಈ ಮಹತ್ತರವಾದ ಕಾರ್ಯವನ್ನು ಜಿಲ್ಲಾ ಮತ್ತು ಪ್ರಾಂತೀಯ ಮಟ್ಟಗಳಲ್ಲಿ ನೆರವೇರಿಸುವುದು ಉಚಿತ. ಈ ಮಟ್ಟಗಳಲ್ಲಿ ರೂಪಗೊಂಡ ಸೂಚಿಗಳನ್ನು ರಾಷ್ಟ್ರೀಯ ಸೂಚಿ ಕೇಂದ್ರ (ನ್ಯಾಷನಲ್ ಬಿಬ್ಲಿಯಾಗ್ರಫಿಕಲ್ ಸೆಂಟರ್) ಕ್ರೋಢೀಕರಿಸಿ ಪ್ರಕಟಿಸಬಹುದು.

ಈ ಕಾರ್ಯವನ್ನು ಕೆಳಗಿನ ಮಟ್ಟದಲ್ಲಿ ಕಾರ್ಯಗತಗೊಳಿಸಲು ಈಗಿರುವ ಗ್ರಂಥಾಲಯ ಸಂಘಗಳು ಆಸಕ್ತಿವಹಿಸಿ ಸಹಾಯ ನೀಡಬೇಕು. ಗ್ರಂಥಾಲಯಸಂಘಗಳಿಲ್ಲದ ಪ್ರದೇಶಗಳಲ್ಲಿ, ಯಾವುದಾದರೊಂದು ಮುಖ್ಯ ಗ್ರಂಥಾಲಯ ಈ ಕಾರ್ಯದ ಹೊಣೆ ಹೊರಬೇಕು. ಮತ್ತೆ, ಹೀಗೆ ಮುಂದೆ ಬಂದು ಕೆಲಸ ಮಾಡುವ ಸಂಘ–ಸಂಸ್ಥೆಗಳಿಗೆ ಸಮಾಚಾರ ನೀಡಲಿಕ್ಕೆ ಬರಹಗಾರರ, ಮುದ್ರಕರ, ಪ್ರಕಾಶಕರ ಹಾಗು ಪುಸ್ತಕ ವ್ಯಾಪಾರಿಗಳ ಸಹಕಾರ ಅತ್ಯವಶ್ಯ.

ii ಗ್ರಂಥ ಆಯುವಿಕೆ, ನೆರವುಗಳಿಗೆ ಸಂಬಂಧಿಸಿದ ಸಮಸ್ಯೆಗಳು

ಮುದ್ರಿತ ಗ್ರಂಥಗಳು ಅಪರಿಮಿತ ಸಂಖ್ಯೆಯಲ್ಲಿ ಪ್ರಕಟವಾಗುತ್ತಿರುವದರಿಂದ, ಒಬ್ಬ ಗ್ರಂಥಪಾಲಕ ತನಗೆ ಬೇಕಾದ ಗ್ರಂಥಗಳನ್ನು ಆಯ್ದುಕೊಳ್ಳಬೇಕೆಂದರೆ, ಗ್ರಂಥ–ಆಯುವಿಕೆ ನೆರವುಗಳ ಸಹಾಯ ಪಡೆಯಬೇಕಾಗುತ್ತದೆ. ಸುದೈವದಿಂದ ಬಹುತರ ಪ್ರಗತಿಪರ ರಾಷ್ಟ್ರಗಳಲ್ಲಿ ಇಂಥ ಗ್ರಂಥ–ಆಯುವಿಕೆಯ ನೆರವಿನ ಪುಸ್ತಕಗಳು ವ್ಯಾಪಕವಾಗಿವೆ; ನಿತ್ಯವೂ ಅಚ್ಚಾಗುತ್ತವೆ. ಆದಾಗ್ಯೂ ಒಂದು ಪುಸ್ತಕ ಪರದೇಶದಲ್ಲಿ ಪ್ರಕಟವಾದಂದಿನಿಂದ ಅದರ ಮಾಹಿತಿ ಒಬ್ಬ ಭಾರತೀಯ ಗ್ರಂಥಪಾಲಕನಿಗಾಗಲಿ ಪುಸ್ತಕವ್ಯಾಪಾರಿಗಾಗಲಿ ಗಮನಕ್ಕೆ ಬರಬೇಕಾದರೆ ಬಹಳ ಸಮಯ ಹಿಡಿಸುತ್ತದೆ. ಈ ಮಾತು ವಿಶ್ವವಿದ್ಯಾನಿಲಯ ಹಾಗೂ ಉಚ್ಚ ಶಿಕ್ಷಣ ಸಂಸ್ಥೆ–ಸಂಘಗಳಿಂದ ಅಚ್ಚಾಗುವ ಪ್ರಕಟಣೆಗಳಿಗೆ ಹೆಚ್ಚಾಗಿ ಅನ್ವಯಿಸುತ್ತದೆ.

ಭಾರತದಲ್ಲಿ ಭಾರತೀಯ ಪ್ರಕಟಣೆಗಳ ಕುರಿತು ಮಾಹಿತಿ ನೀಡುವ ಗ್ರಂಥ ಆಯುವಿಕೆಯ ನೆರವು ಪುಸ್ತಕಗಳು ಬಹಳ ಕಡಿಮೆ. ಆದುದರಿಂದ ಈ ಬಗೆಯ ಪುಸ್ತಕಗಳನ್ನು ಹೆಚ್ಚಾಗಿ ಮತ್ತು ಉತ್ತಮ ರೀತಿಯಲ್ಲಿ ಪ್ರಕಟಿಸುವದು ಅವಶ್ಯ.

ಪ್ರಾಂತೀಯ ಭಾಷೆಗಳ ಸಾಹಿತ್ಯ ಈ ಸಮಸ್ಯೆಯನ್ನು ಮತ್ತಿಷ್ಟು ಜಟಿಲವಾಗಿಸುತ್ತದೆ. ಇವೆಲ್ಲ ಕಾರಣಗಳಿಂದಾಗಿ ಭಾರತದಲ್ಲಿ ಪ್ರಾಂತೀಯ, ಪ್ರಾದೇಶಿಕ ಹಾಗೂ ರಾಷ್ಟ್ರೀಯ ಗ್ರಂಥಸೂಚಿಯ ಕೇಂದ್ರಗಳನ್ನು ಸ್ಥಾಪಿಸುವುದು ಅನಿವಾರ್ಯವಾಗಿದೆ. ಇಂಥ ಕೇಂದ್ರಗಳು ಸ್ಥಾಪನೆಯಾದಲ್ಲಿ ಗ್ರಂಥಸೂಚಿಗಳಿಗೆ ಬೇಕಾದ ಸಮಾಚಾರವನ್ನು ಸಂಗ್ರಹಿಸುವ, ದಾಖಲೆಮಾಡುವ ಮತ್ತು ಪ್ರಸಾರ ಮಾಡುವ ಕಾರ್ಯಗಳನ್ನು ಶೀಘ್ರವಾಗಿ ಮತ್ತು ಸುಸಜ್ಜಿತವಾಗಿ ಮಾಡಬಹುದು.

iii ಪುಸ್ತಕ ಆಯುವಿಕೆಯ ಪದ್ಧತಿ ಕುರಿತ ಸಮಸ್ಯೆಗಳು

ಪ್ರಕಟಿತವಾದ ಗ್ರಂಥಗಳ ಪರಿಚಯವಾದ ಮೇಲೆ ಮತ್ತು ಯಾವ ಗ್ರಂಥಗಳು ಬೇಕಾಗಿವೆಯೆಂಬುದು ಮನವರಿಕೆಯಾದ ತರುವಾಯ, ಒಬ್ಬ ಗ್ರಂಥಪಾಲಕ ತನ್ನ ಗ್ರಂಥಾಲಯದ ಓದುಗರ ಬೇಡಿಕೆಗಳನ್ನು ಪೂರೈಸುವಂಥ ಗ್ರಂಥಗಳನ್ನು ಆಯ್ಕೆಮಾಡಬೇಕು. ಹಣಕಾಸಿನ ಸಾಧನಗಳು ಮಿತಿಯಾಗಿರುವದರಿಂದ (ನಮ್ಮಂಥ ಪ್ರಗತಿಹೊಂದುತ್ತಿರುವ ರಾಷ್ಟ್ರಗಳಲ್ಲಿ ಇದು ಹೆಚ್ಚು ನಿಜ) ಗ್ರಂಥಪಾಲಕನಿಗೆ ಪುಸ್ತಕಗಳ ಬೆಲೆ ಕಂಡುಹಿಡಿಯುವ ಸಾಮರ್ಥ್ಯ ಬೇಕೇಬೇಕು. ಇಲ್ಲಿ, ನಾವು ಗಮನಿಸಬೇಕಾದ ಮಾತೆಂದರೆ ಪ್ರಗತಿ ಹೊಂದಿದ ರಾಷ್ಟ್ರಗಳಲ್ಲಿ ಗ್ರಂಥಪಾಲಕ ಮಾಡುವ ಗ್ರಂಥಾಲಯ ವಿಜ್ಞಾನದ ಕಸಬು ಎಂದರೆ ಪುಸ್ತಕದ ಬೆಲೆ ಕಂಡು ಹಿಡಿದು ಪುಸ್ತಕ ಆಯ್ಕೆಮಾಡುವದು. ಭಾರತೀಯ ಗ್ರಂಥಪಾಲಕ ಈ ಕಾರ್ಯವನ್ನು

‘ತಜ್ಞರಿಗೆ’ ಅಥವಾ ವಿಷಯ ಪರಿಣತರಿಗೆ ಸಹಜವಾಗಿ ಬಿಟ್ಟುಕೊಟ್ಟಿದ್ದಾನೆ. ಸ್ಪಷ್ಟವಾಗಿ ಈ ಪದ್ಧತಿಯಲ್ಲಿ ಯಾವ ಕೊರತೆಯೂ ಇಲ್ಲ. ಆದರೆ, ಭಾರತೀಯ ವಿಶ್ವವಿದ್ಯಾನಿಲಯ ಗ್ರಂಥಾಲಯಗಳು ಅನುಸರಿಸಿರುವ ವಿಧಾನಗಳನ್ನು ಸ್ಥೂಲವಾಗಿ ವಿಚಾರಿಸಿದಲ್ಲಿ, ಪುಸ್ತಕಗಳನ್ನು ಆಯ್ಕೆಮಾಡುವ ‘ತಜ್ಞ’ನೆಂದು ಎನಿಸಿಕೊಳ್ಳುವವನು ಈ ಕಾರ್ಯಕ್ಕೆ ತನ್ನ ಯಾವದೇ ಸಮಯವನ್ನು ವಿನಿಯೋಗಿಸುವುದಿಲ್ಲ. ಅವನು ಬೆಲೆಬಾಳುವ ಗ್ರಂಥಗಳನ್ನು ಮತ್ತು ಮರುಪ್ರತಿಗಳನ್ನು ಸೂಚಿಸುವ ಜಂಭ ತಳೆಯುತ್ತಾನೆ. ತಮಗೆ ಜ್ಞಾನವಿಲ್ಲದ ಭಾಷೆಗಳಲ್ಲಿ ಇಂಥ ‘ತಜ್ಞರು’ ಸೂಚಿಸಿರುವ ಪುಸ್ತಕಗಳ ಉದಾಹರಣೆಗಳು ಕಡಿಮೆಯೇನಿಲ್ಲ!

ಪುಸ್ತಕ ಆಯ್ಕೆಯ ಪ್ರಕ್ರಿಯ ಬಗ್ಗೆ ಹೇಳುವುದಾದರೆ, ಗ್ರಂಥಪಾಲಕ ಗ್ರಂಥಾಲಯ ವಿಜ್ಞಾನದಲ್ಲಿ ಪರಿಣತನಾಗಿರುವುದರ ಜೊತೆಗೆ ವಿಷಯತಜ್ಞನಾಗಿರಬೇಕು ಅಥವಾ ವಿಷಯತಜ್ಞನಿಗೆ ಸಮನಾದ ಅರ್ಹತೆ ಪಡೆದಿರಬೇಕು.

2 ಓದುಗರು

ಪುಸ್ತಕ ಆಯ್ಕೆಯ ಕಾರ್ಯದಲ್ಲಿ ಪ್ರಭಾವ ಬೀರುವ ಎರಡನೆಯ ಮಹತ್ತ್ವದ ಅಂಶವೆಂದರೆ ಓದುವ ಜನಸಮೂಹ ಅಥವಾ ಗ್ರಂಥಾಲಯಕ್ಕೆ ಬರುವ ಓದುಗರು. ಓದುಗರ ಬೇಡಿಕೆಗಳು ಪುಸ್ತಕ ಆಯ್ಕೆಯ ಮೂಲ. ಆದ್ದರಿಂದ ಈ ಕಾರ್ಯಕ್ಕೆ ಸಂಬಂಧಪಟ್ಟವರೆಲ್ಲರೂ (ಉದಾ. ಬರೆಹಗಾರ, ಪ್ರಕಾಶಕ, ಪುಸ್ತಕವ್ಯಾಪಾರಿ ಮತ್ತು ಗ್ರಂಥಪಾಲಕ) ವೈಯಕ್ತಿಕವಾಗಿ ಹಾಗೂ ಸಾಮೂಹಿಕವಾಗಿ ಓದುಗರಿಗೆ ಏನು ಬೇಕೆಂಬುದನ್ನು ಚೆನ್ನಾಗಿ ಅರಿತಿರಬೇಕು. ಪಾಶ್ಚಾತ್ಯ ದೇಶಗಳಲ್ಲಿ ಈ ಮೇರೆಗಿರುವ ಸಾಮಾನ್ಯ ರೂಢಿಯೆಂದರೆ ವಾಚಕ ಸರ್ವೇಕ್ಷಣೆಗಳನ್ನು ಕೈಗೊಳ್ಳುವುದು. ಇಂಥ ಸರ್ವೇಕ್ಷಣೆಗಳಲ್ಲಿ ಓದುಗರ ಬೇಡಿಕೆಗಳ ಮೌಲ್ಯ, ಗಾತ್ರ ಮತ್ತು ವೈವಿಧ್ಯಗಳನ್ನು ಅಳೆದು ಬೇರೆ ಬೇರೆಯಾಗಿ ತಿಳಿದುಕೊಳ್ಳಲು ಪ್ರಯತ್ನಿಸುತ್ತಾರೆ. ನಮ್ಮಲ್ಲಿ ಇಂಥ ಸರ್ವೇಕ್ಷಣೆಗಳು ರೂಢಿಯಲ್ಲಿ ಬರಬೇಕು.

ಭಾರತದಲ್ಲಿರುವ ಗ್ರಂಥಪಾಲಕರು ಹಾಗೂ ಗ್ರಂಥಾಲಯ ಸಂಘಗಳು ಈ ದೃಷ್ಟಿಯಲ್ಲಿ ವಿಚಾರ ಮಾಡಬೇಕು ಮತ್ತು ಓದುಗರ ಬೇಡಿಕೆಗಳನ್ನು ಅರಿಯಲು, ಸುರುವಾತ ಪ್ರಾದೇಶಿಕ ಮಟ್ಟದಲ್ಲಿ ಎಲ್ಲರ ಸಹಕಾರದಿಂದ ಕಾರ್ಯಗತರಾಗಬೇಕು. ಹೀಗೆಯೇ ಪುಸ್ತಕ ಪ್ರಕಟಣ ಕೈಗಾರಿಕೆ ಪ್ರಾದೇಶಿಕ ಮತ್ತು ರಾಷ್ಟ್ರೀಯ ಮಟ್ಟಗಳಲ್ಲಿ ತನ್ನ ಉದ್ಯಮವನ್ನು ಸುಸಜ್ಜಿತಗೊಳಿಸಿ, ಈ ಸಮೀಕ್ಷೆಗಳ ಆಧಾರದ ಮೇಲೆ ಉತ್ತಮವಾದ ಸಾಹಿತ್ಯವನ್ನು ಹೊರತರಬೇಕು. ಇಂಥ ಸಮೀಕ್ಷೆಗಳಿಗೆ ಹೆಚ್ಚಿನ ಬಂಡವಾಳ ಬೇಕಾಗುವುದೆಂದು ಬೇರೆ ಹೇಳಬೇಕಾಗಿಲ್ಲ; ಆದ್ದರಿಂದ ಇವುಗಳಿಗೆ ಪ್ರಕಾಶಕರ, ಸರಕಾರಗಳ ಮತ್ತು ಲೋಕಪ್ರೇಮಿಗಳ ಪ್ರೋತ್ಸಾಹ ಬೇಕು.

ಮತ್ತೆ, ಗ್ರಂಥಪಾಲಕರು ಮತ್ತು ಪ್ರಕಾಶಕರು ಓದುಗರ ವಿವಿಧ ಗುಪ್ತ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಔದ್ಯೋಗಿಕ ಅಥವಾ ವೈಜ್ಞಾನಿಕ ಬೇಡಿಕೆಗಳನ್ನು ಕಾರ್ಯಗತಗೊಳಿಸಲು ಹೊಣೆಗಾರಬೇಕು. ಇದಲ್ಲದೆ ಅವರು ಸದ್ಯದ ನಿಜಸ್ಥಿತಿಯನ್ನು ಅರಿತುಕೊಳ್ಳಬೇಕು : ಬಡ ಆರ್ಥಿಕ ಪರಿಸ್ಥಿತಿಗಳಿಂದ, ಓದುವ ಅಭಿರುಚಿಯ ಕಡಿಮೆತನದಿಂದ, ಒಳ್ಳೆಯ ಪುಸ್ತಕಗಳು ಅಗ್ಗದರಗಳಲ್ಲಿ ಸಿಗದಿರುವದರಿಂದ ಮತ್ತು ದಿನೇ ದಿನೇ ಹೆಚ್ಚುತ್ತಿರುವ ಪುಸ್ತಕ ಬೆಲೆಗಳಿಂದ ವೈಯಕ್ತಿಕವಾಗಿ ನಮ್ಮ ದೇಶದಲ್ಲಿ ಪುಸ್ತಕಗಳನ್ನು ಕೊಂಡುಕೊಳ್ಳುವುದು ಬಹಳ ವಿರಳ. ಈ ಗಂಭೀರ ಪರಿಸ್ಥಿತಿಯಿಂದ ಹೊರಬೀಳುವ ದಾರಿಯನ್ನು ಹುಡುಕುವುದು ಅವಶ್ಯವಿದೆ.

ಓದುಗರನ್ನು ಕುರಿತ ಈ ಚರ್ಚೆಯಲ್ಲಿ, ಇಲ್ಲಿಯವರೆಗೆ ನಾವು ಆ ವ್ಯಕ್ತಿ ಅಕ್ಷರಸ್ಥನಿದ್ದಾನೆಂದು ಮತ್ತು ಅವನಿಗೆ ಕೆಲವು ನಿರ್ದಿಷ್ಟ ಓದುವ ಬೇಡಿಕೆಗಳಿವೆಯೆಂದು ನಂಬಿಕೊಂಡಿದ್ದೇವೆ. ಆದರೆ, ನಮ್ಮಲ್ಲಿ 1971ರ ಜನಗಣತಿಯ ವರದಿಯ ಪ್ರಕಾರ ಸೇಕಡ ಕೇವಲ 30ರಷ್ಟು ಜನ ಅಕ್ಷರಸ್ಥರಿದ್ದಾರೆ. ಹೀಗಾಗಿ, ನಮ್ಮ ಜನಸಂಖ್ಯೆಯ ಬಹುಭಾಗ ನಿರಕ್ಷರರಿಂದ ತುಂಬಿದೆ. ನಾವು ಈ ಬಹುಸಂಖ್ಯಾತ ಜನಸಮೂಹವನ್ನು ಕಡೆಗಣಿಸುವದು ಸಾಧ್ಯವೆ? ಸ್ಪಷ್ಟವಾಗಿ ಇಲ್ಲ. ಇವರ ಬೇಡಿಕೆಗಳನ್ನು ಪೂರೈಸಬೇಕಾದ ಉತ್ತಮ ಮಾರ್ಗವೆಂದರೆ ನಾವು ಇವರಿಗೆ ಗ್ರಂಥೇತರಸಾಮಗ್ರಿಗಳನ್ನು (ನಾನ್-ಬುಕ್ ಮಟೀರಿಯಲ್ಸ್) ಅಥವಾ ದೃಕ್‌ಶ್ರವಣ ಸಾಮಗ್ರಿಗಳನ್ನು (ಆಡಿಯೊ–ವಿಷುಯಲ್ ಮಟೀರಿಯಲ್ಸ್) ಒದಗಿಸಿಕೊಡುವುದು.

ಇವುಗಳಲ್ಲಿ ದೃಷ್ಟಾಂತ ಪಟಗಳು, ಚಿತ್ರಗಳು, ರೇಖಾಪಟಗಳು, ನಕಾಶೆಗಳು, ಧ್ವನಿಮುದ್ರಿಕೆಗಳು, ಚಲನ ಚಿತ್ರಗಳು, ರೇಡಿಯೋ, ಟೆಲಿವಿಜನ್ ಮುಂತಾದವು ಸೇರುತ್ತವೆ. ಈ ಸಾಮಗ್ರಿಗಳನ್ನು ನಿರಕ್ಷರರು ಅಥವಾ ಅರೆ ಸಾಕ್ಷರರು ತಿಳಿಯುವ ರೀತಿಯಲ್ಲಿ ಸಾಕಷ್ಟಾಗಿ ತಯಾರಿಸಬೇಕಾವಲ್ಲಿ ಅಗಾಧ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ರಾಜ್ಯ ಸರ್ಕಾರಗಳಾಗಲಿ ಕೇಂದ್ರ ಸರ್ಕಾರವಾಗಲಿ ಈ ಸಮಸ್ಯೆಗಳ ಬಗ್ಗೆ ವಿಚಾರಿಸಿ ಇವನ್ನು ಪರಿಹರಿಸುವುದು ಅವುಗಳ ಕರ್ತವ್ಯ. ಇದೇ ಸಮಯದಲ್ಲಿ, ಜೊತೆಜೊತೆಗೇ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವ ಕ್ರಿಯೆಯನ್ನು ಪರಿಣಾಮಕಾರಿಯಾಗಿಯೂ ಸಾಮರ್ಥ್ಯದಿಂದಲೂ ಜಾರಿಗೆ ತರಬೇಕು. ಇದೆಂದರೆ ಹೆಚ್ಚಿನ ಪ್ರಮಾಣದಲ್ಲಿ ಉತ್ತಮದರ್ಜೆಯ ಸಾಹಿತ್ಯವನ್ನು ಈ ಜನಸಮೂಹದ ಬೇಡಿಕೆಗಳನ್ನು ಪೂರೈಸುವ ರೀತಿಯಲ್ಲಿ ನಿರ್ವಹಿಸುವುದು. ಇಲ್ಲಿ ಸರ್ಕಾರಗಳ, ಬರೆಹಗಾರರ, ಪ್ರಕಾಶಕರ, ಮುದ್ರಕರ ಮತ್ತು ಗ್ರಂಥಪಾಲಕರ ಸಾಮೂಹಿಕ ಪ್ರಯತ್ನ ಅತ್ಯಗತ್ಯ.

3 ಸಾಧನ ಸಂಪತ್ತು

ಪುಸ್ತಕ ಆಯ್ಕೆಯ ಕಾರ್ಯದ ಮೇಲೆ ಮಹತ್ತರ ಪರಿಣಾಮವನ್ನುಂಟುಮಾಡುವ ಕೊನೆಯ ಅಂಶವೆಂದರೆ ಸಾಧನ ಸಂಪತ್ತು. ಇಲ್ಲಿ ನಮಗೆ ಸಂಬಂಧಪಟ್ಟ ಸಾಧನ ಸಂಪತ್ತೆಂದರೆ ಸಿಬ್ಬಂದಿ ಮತ್ತು ಹಣಕಾಸು. ಭಾರತದಲ್ಲಿ ಇವೆರಡರದೂ ಕೊರತೆ ಇದೆ. ನಮ್ಮಲ್ಲಿ ಶಿಕ್ಷಣ ಪಡೆದ ಅರ್ಹ ಮತ್ತು ಯೋಗ್ಯ ಗ್ರಂಥಾಲಯ ಸಿಬ್ಬಂದಿಯ ಜನ ಸಾಕಷ್ಟು ಸಂಖ್ಯೆಯಲ್ಲಿ ಇಲ್ಲ; ಅದರಂತೆಯೇ ಹಣಕಾಸಿನ ಸಂಪತ್ತೂ ಕಡಿಮೆ.

ಅರ್ಹ ಹಾಗೂ ಯೋಗ್ಯ ಜನರ ಬಗ್ಗೆ ಹೇಳುವುದಾದರೆ, ಕಳೆದ 25 ವರ್ಷಗಳ ಅವಧಿಯಲ್ಲಿ ಗ್ರಂಥಾಲಯ ತರಬೇತು ಕೇಂದ್ರಗಳು ತೀವ್ರವಾಗಿ ಬೆಳೆದದ್ದು ಒಂದು ಸಂತೋಷದ ವಿಷಯವೇ. ಆದರೆ ನಮಗೆ ಬೇಕಾದ, ಶಿಕ್ಷಣಹೊಂದಿದ ಜನರನ್ನು ತರಬೇತು ಮಾಡುವ ಹವ್ಯಾಸದಲ್ಲಿ, ನಾವು ತರಬೇತು ಪಡೆದ ಜನರ ಗುಣದ ವಿಚಾರವನ್ನು ಮರೆತುಬಿಟ್ಟಿದ್ದೇವೆ. ನಮ್ಮ ಬಹುತೇಕ ವಿಶ್ವವಿದ್ಯಾನಿಲಯ, ವೈಜ್ಞಾನಿಕ ಮತ್ತು ತಾಂತ್ರಿಕ ಗ್ರಂಥಾಲಯಗಳು ಮತ್ತು ರಾಷ್ಟ್ರೀಯ ಗ್ರಂಥಾಲಯ ಯೋಗ್ಯ ಗ್ರಂಥಪಾಲಕರಿಲ್ಲದೆ ಕಾರ್ಯಸಾಗಿಸುತ್ತಿರುವುದು ಬಹಳ ಶೋಚನೀಯ ಸಂಗತಿ. ಈ ಪರಿಸ್ಥಿತಿಯನ್ನು ಬೇಗನೆ ತಡೆಗಟ್ಟುವುದು ನಮ್ಮ ರಾಷ್ಟ್ರಕ್ಕೆ ಒಳಿತು.

ಕೊರತೆಯ ಹಣಕಾಸಿನ ಸ್ಥಿತಿ ನಮ್ಮೊಂದಿಗೆ ಬಹುಕಾಲದ ವರೆಗೆ ಇರಲಿಕ್ಕೆ ಸಾಕು. ಆದ್ದರಿಂದ ಈ ನಿಜಸ್ಥಿತಿಯನ್ನು ಅರಿತು, ಅದರ ಪರಿಣಾಮಗಳ ವಿಶಾಲದೃಷ್ಟಿಯಿಂದ ಚೆನ್ನಾಗಿ ಅಧ್ಯಯನ ಮಾಡುವುದು ಸೂಕ್ತ. ಉತ್ತಮವಾದ ಪರಿಹಾರವೆಂದರೆ ವಿವಿಧ ರೀತಿಯ ಸಹಕಾರಿ ಪದ್ಧತಿಗಳನ್ನು ಬಳಕೆಯಲ್ಲಿ ತರುವುದು.

ಮೊದಲಾಗಿ ಉಚ್ಚ ಶಿಕ್ಷಣ ಸಂಸ್ಥೆಗಳಾದ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ, ವೈಜ್ಞಾನಿಕ ಹಾಗೂ ತಾಂತ್ರಿಕ ಸಂಸ್ಥೆಗಳಲ್ಲಿ, ಉಚ್ಚ ಅಧ್ಯಯನ ಕೇಂದ್ರಗಳಲ್ಲಿ ವಿಭಿನ್ನವಾದ ಪುಸ್ತಕ–ಆಯ್ಕೆಯ ಮತ್ತು ಕೊಳ್ಳಿಕೆಯ (ಸಂಗ್ರಹಣೆಯ) ಕಾರ್ಯನೀತಿಯನ್ನು ನಿರ್ಧರಿಸಬೇಕು. ಪುಸ್ತಕ ಆಯ್ಕೆಯ ಅಂತಿಮ ಗುರಿ, ರಾಷ್ಟ್ರೀಯ ಮತ್ತು ಪ್ರಾದೇಶಿಕ ಮಟ್ಟಗಳಲ್ಲಿ, ಅಮೆರಿಕ ಗ್ರಂಥಾಲಯ ಸಂಘದ ಧ್ಯೇಯವಾಕ್ಯದಂತೆ ಇರಬೇಕು: "ಕನಿಷ್ಠ ವೆಚ್ಚದಲ್ಲಿ ಗರಿಷ್ಠ ಸಂಖ್ಯೆಯ ಜನರಿಗೆ ಅತ್ಯುತ್ತಮವಾದ ಓದು" ಎಂಬುದು ಆ ಧ್ಯೇಯವಾಕ್ಯ.

ಪುಸ್ತಕ ಸಂಗ್ರಹಣದ ಸಮಸ್ಯೆಗಳು

ಭಾರತೀಯ ಗ್ರಂಥಪಾಲಕ ಪುಸ್ತಕ ಆಯ್ಕೆ ವಿಷಯದಲ್ಲಿ ಎದುರಿಸಬೇಕಾದ ಕೆಲವು ಸಮಸ್ಯೆಗಳನ್ನು ಸಂಕ್ಷೇಪವಾಗಿ ಈವರೆಗೆ ವಿವೇಚಿಸಿದ್ದಾಯಿತು. ಈಗ ಪುಸ್ತಕ ಸಂಗ್ರಹಣದ ಮಟ್ಟದಲ್ಲಿ ಕಂಡು ಬರುವ ಕೆಲವು ಸಮಸ್ಯೆಗಳನ್ನು ಪರಿಶೀಲಿಸಬೇಕು.

ಪುಸ್ತಕ ಸಂಗ್ರಹಣ ಕಾರ್ಯದ ಯೋಗ್ಯತೆಯನ್ನು ಹಲವಾರು ಮಾನಕಗಳಿಂದ ನಿರ್ಧರಿಸಬಹುದು. ಆದರೆ ಇವುಗಳಲ್ಲಿ ಎರಡು ಮುಖ್ಯವಾದವು: ಬೇಕಾದ ಗ್ರಂಥಗಳ ಸಂಗ್ರಹಣ ಸಂಖ್ಯೆ ಮತ್ತು ಇಂಥ ಗ್ರಂಥಗಳನ್ನು ಸಂಗ್ರಹಣ ಮಾಡಲು ಉಪಯೋಗಿಸಿದ ವೇಳೆ.

ಸಾಮಾನ್ಯವಾಗಿ, ಭಾರತೀಯ ಗ್ರಂಥಪಾಲಕ ಹಾಗೂ ಗ್ರಂಥವ್ಯಾಪಾರಿ ಈ ಮುಂದೆ ಕಾಣಿಸಿದ ಪ್ರಕಟಣೆಗಳನ್ನು ಕುರಿತ ಮಾಹಿತಿ ಪಡೆಯಲಿಕ್ಕೆ ಬಹಳ ಸಮಯ ವ್ಯಯಮಾಡುತ್ತಾರೆ: ಅಧಿಕೃತ ವರದಿಗಳು, ವೈಜ್ಞಾನಿಕ ಮತ್ತು ತಾಂತ್ರಿಕ ವಿಷಯಗಳಿಗೆ ಅನುಗುಣವಾಗಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಓದಿದ ಪೇಪರುಗಳು, ಸರಕಾರಿ ಪ್ರಕಟಣೆಗಳು, ಸಂಘ–ಸಂಸ್ಥೆಗಳ ಪ್ರಕಟಣೆಗಳು. ಇವಕ್ಕೆ ಒಂದನ್ನು ಸೇರಿಸಬೇಕು–ಇವೆಲ್ಲ ಪ್ರಕಟಣೆಗಳನ್ನು ಪುಸ್ತಕವ್ಯಾಪಾರಿಗಳು ಕಡಿಮೆ ಸೋಡಿಯುಳ್ಳ ಅಥವಾ ಸೋಡಿಯಿಲ್ಲದ ಪ್ರಕಟಣೆಗಳೆಂದು ವಿಭಾಗಿಸುತ್ತಾರೆ. ಹೀಗಾಗಿ ಭಾರತೀಯ ಪುಸ್ತಕ ವ್ಯಾಪಾರಿ ಇಂಥ ಲಾಭದಾಯಕ ವಲ್ಲದ ಗ್ರಂಥಗಳ ವ್ಯಾಪಾರ ಮಾಡಲು ಹಿಂಜರಿಯುತ್ತಾನೆ. ವಿದೇಶಗಳಿಂದ ಆಮದು ಮಾಡಲು ಅಥವಾ ನಮ್ಮ ದೇಶದ ಬೇರೆ ಬೇರೆ ಪ್ರಾಂತಗಳಿಂದ ಒದಗಿಸಿಕೊಡಲು ಜವಾಬ್ದಾರಿ ಹೊರಲು ಮುಂಬರುವದಿಲ್ಲ. ಇನ್ನು ಸಹಜವಾದ ಲಾಭದೊರಕಿಸುವ ಗ್ರಂಥಗಳ ಬಗ್ಗೆ ಹೇಳುವುದಾದರೆ, ಅವುಗಳ ವ್ಯಾಪಾರವೂ ಅಷ್ಟು ತೃಪ್ತಿಕರವಿಲ್ಲ. ನಮ್ಮಲ್ಲಿ ಸುಮಾರು 10–12 ದೊಡ್ಡ ವ್ಯಾಪಾರಸ್ಥರು ಹೆಚ್ಚಾಗಿ ಆಮದು ಮಾಡುವ ಲೈಸೆನ್ಸ್ ಪಡೆದು ವಿದೇಶಿ ಪುಸ್ತಕ ವ್ಯಾಪಾರವನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಂಡಿದ್ದಾರೆ. ಈ ವ್ಯಾಪಾರಸ್ಥರು ತಮ್ಮ ಪುಸ್ತಕ ವ್ಯಾಪಾರವನ್ನು ಕೆಲವು ಮುಖ್ಯ ಮತ್ತು ಹೆಸರುವಾಸಿಯಾದ ಪ್ರಕಾಶಕರ ಪ್ರಕಟಣೆಗಳಿಗೆ ಸೀಮಿತಗೊಳಿಸುತ್ತಾರೆ. ಇದರಿಂದಾಗಿ ಪುಸ್ತಕ ಆಯ್ಕೆಯ ಜೀವಾಳದ ಮೌಲ್ಯ, ಗಾತ್ರ ಮತ್ತು ವೈವಿಧ್ಯಗಳನ್ನು ತೀವ್ರವಾಗಿ ಕಡೆಗಣಿಸಿದಂತಾಗುತ್ತದೆ. ಈ ಪ್ರವೃತ್ತಿಯ ಕಾರಣದಿಂದಾಗಿ ಭಾರತೀಯ ಗ್ರಂಥಭಂಡಾರಿಗೆ ಮತ್ತು ಸಾಮಾನ್ಯ ಓದುಗನಿಗೆ ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ಪ್ರಕಟವಾಗುವ ಅಸಂಖ್ಯಾತ ಪ್ರಕಟಣೆಗಳಲ್ಲಿ ಉತ್ತಮದರ್ಜೆಯ ಪುಸ್ತಕಗಳು ಯಾವುವೆಂದು ನಿರ್ಧರಿಸಲು ಅವಕಾಶವೇ ಕೊಡುವುದಿಲ್ಲ. ಇದರಿಂದಾಗಿ ಅವನು ಪುಸ್ತಕ ಆಯ್ಕೆ ಅಥವಾ ಸಂಗ್ರಹಣ ಕಾರ್ಯವನ್ನು ಸಮಯಕ್ಕೆ ಪುಸ್ತಕದ ಅಂಗಡಿಗಳಲ್ಲಿ ತತ್ಕಾಲದ ದಾಸ್ತಾನಿನಿಂದ ಸಿಗುವ ಗ್ರಂಥಗಳಷ್ಟಕ್ಕೇ ಸೀಮಿತಗೊಳಿಸಬೇಕಾಗುತ್ತದೆ.

ಗ್ರಂಥಾಲಯಗಳಿಗೆ ನಿರ್ದಿಷ್ಟವಾಗಿ ಬೇಕಾಗಿರುವ ಗ್ರಂಥಗಳನ್ನು ಪಡೆಯುವಲ್ಲಿ ಈ ಕೆಳಗಿನ ಕ್ಲಿಷ್ಟ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ:

ಗರಿಷ್ಠ ಸೋಡಿ ಸಮಸ್ಯೆ

ಕೆಲವು ಪುಸ್ತಕ ವ್ಯಾಪಾರಿಗಳು ಗ್ರಂಥಾಲಯಗಳಿಗೆ ಒದಗಿಸಲು ಹೆಚ್ಚಿನ ಸೋಡಿ ಬಿಡುವ ಭರವಸೆ ಕೊಟ್ಟು ಸಗಟಾಗಿ ಪುಸ್ತಕಗಳ ಆರ್ಡರ್ ಪಡೆಯುತ್ತಾರೆ. ಆದರೆ ಅವನ್ನು ಅರ್ಧಮರ್ಧವಾಗಿ ಪೂರೈಸುತ್ತಾರೆ. ಈ ಹೀನ ಪ್ರವೃತ್ತಿ ಅಲ್ಲಲ್ಲಿ ಇನ್ನೂ ಕಂಡು ಬರುತ್ತದೆ. ಈ ವಿಲಕ್ಷಣವಾದ ವ್ಯಾಪಾರದಲ್ಲಿ ಗ್ರಂಥಪಾಲಕ ಒಳ್ಳೆಯ ಪೇಚಿನಲ್ಲಿ ಸಿಗುತ್ತಾನೆ. ಅವನು ಮೊದಲು ಕೊಟ್ಟ ಆರ್ಡರ್‌ಗಳನ್ನು ರದ್ದು ಮಾಡಿ ಬೇರೆಯವರಿಂದ ಪಡೆದುಕೊಳ್ಳಲಾರ; ಅಲ್ಲದೆ ಇಂಥ ಮೋಸ ಪ್ರವೃತ್ತಿಯ ಪುಸ್ತಕವ್ಯಾಪಾರಿಗಳ ವಿರುದ್ಧ ಯಾವದೇ ಬಿಗಿಯಾದ ಕ್ರಮವನ್ನು ತೆಗೆದುಕೊಳ್ಳಲಾರ. ಇದರಿಂದಾಗಿ ಓದುಗರಿಗೆ ಅತ್ಯಾವಶ್ಯಕವಾಗಿ ಬೇಕಾಗಿರುವ ಗ್ರಂಥಗಳನ್ನು ತಕ್ಕ ಸಮಯದಲ್ಲಿ ಸಂಗ್ರಹಿಸಲಾಗದೆ ಅವರನ್ನು ತೊಡಕಿನಲ್ಲಿರಿಸಬೇಕಾಗುತ್ತದೆ. ಇವೆಲ್ಲ ಕ್ಲಿಷ್ಟ ಸಮಸ್ಯೆಗಳಿದ್ದಾಗ್ಯೂ ಶಿಕ್ಷಣ ಸಂಸ್ಥೆಗಳ (ಮುಖ್ಯತಃ ಕಾಲೇಜುಗಳ) ಅಧಿಕಾರಿಗಳು ಗ್ರಂಥಪಾಲಕ ಹೆಚ್ಚಿನ ಸೋಡಿ ದೊರಕಿಸಲೇಬೇಕೆಂದು ವಿಧಿಸುತ್ತಾರೆ. ಇದು ಅತ್ಯಂತ ಶೋಚನೀಯ ಸಂಗತಿ.

ವಿದೇಶಿ ವಿನಿಮಯ ಸಮಸ್ಯೆ

ಪುಸ್ತಕ ವ್ಯಾಪಾರಿಗಳು ಡಾಲರ್ ಮತ್ತು ಸ್ಟರ್ಲಿಂಗ್ ವಲಯಗಳಿಂದ ಪುಸ್ತಕಗಳನ್ನು ಆಮದಿಸಲು ಸಿದ್ಧವಾಗಿರುತ್ತಾರೆ. ಆದರೆ ಬೇರೆ ವಿದೇಶಿ ವಿನಿಮಯ ವಲಯಗಳಿಂದ ಪುಸ್ತಕ ತರಿಸಲು ಹಿಂದೆಮುಂದೆ ನೋಡುತ್ತಾರೆ. ಈ ಅಹಿತ ಪದ್ಧತಿಯನ್ನು ನಾವು ವಿಶ್ವವಿದ್ಯಾನಿಲಯ ಮತ್ತು ವೈಜ್ಞಾನಿಕ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಬಹುತರವಾಗಿ ಕಾಣುತ್ತೇವೆ. ಭಾರತ ಸರ್ಕಾರ ಇತ್ತೀಚೆಗೆ ಈ ದುಸ್ಥಿತಿಯನ್ನು ಹೋಗಲಾಡಿಸಲು ಗ್ರಂಥಾಲಯಗಳಿಗೆ ಇಂಥ ಪ್ರಕಟಣೆಗಳನ್ನು ನೇರವಾಗಿ ಆಮದುಮಾಡಲು ಅನುಮತಿ ನೀಡಿ

ಪ್ರಥಮ ಹೆಜ್ಜೆ ಇಟ್ಟಿದೆ. ಆದಾಗ್ಯೂ ಪುಸ್ತಕ ವ್ಯಾಪಾರಿಗಳು ತಮ್ಮ ವ್ಯಾಪಾರ ಧೋರಣೆಯನ್ನು ಬದಲಾಯಿಸಿ ವಿಶಾಲದೃಷ್ಟಿಕೋನ ತಳೆಯಬೇಕು.

ಕಡಿಮೆ ಸೋಡಿಯ ಗ್ರಂಥಗಳ ಸಮಸ್ಯೆ

ಪುಸ್ತಕವ್ಯಾಪಾರಿಗಳು ಕಡಿಮೆ ಸೋಡಿಯ ಅಥವಾ ಸೋಡಿಯಿಲ್ಲದ ಗ್ರಂಥಗಳನ್ನು ಲಾಭದಾಯಕವಲ್ಲವೆಂಬ ಕಾರಣದಿಂದ ಆಯಾತಮಾಡಲು ಹಿಂಜರಿಯುತ್ತಾರೆಂದು ಕಂಡಿದ್ದೇವೆ. ಇದರ ಫಲವಾಗಿ ವಿಶ್ವವಿದ್ಯಾನಿಲಯ, ವೈಜ್ಞಾನಿಕ ಹಾಗೂ ತಾಂತ್ರಿಕ ಸಂಸ್ಥೆಗಳಲ್ಲಿ ಇಂಥ ಪ್ರಕಟಣೆಗಳ ಬೇಡಿಕೆ, ಅಧ್ಯಯನ ಮತ್ತು ಸಂಶೋಧನೆಯ ಸಲುವಾಗಿ, ಇತ್ತೀಚೆಗೆ ಹೆಚ್ಚುತ್ತ ಇದೆ. ಈ ಬೇಡಿಕೆಯನ್ನು ಕಡೆಗಣಿಸುವುದು ಸಾಧ್ಯವಿಲ್ಲ. ಈ ಸೂಕ್ಷ್ಮ ಸಮಸ್ಯೆಗೆ ಕೆಲವು ಸ್ಪಷ್ಟವಾದ ಉಪಾಯಗಳೆಂದರೆ:

(i) ಗ್ರಂಥಾಲಯದ ಅಧಿಕಾರಿಗಳು ವಿಶಾಲ ಮನೋಭಾವ ತಳೆಯಬೇಕು. ಗ್ರಂಥಪಾಲಕ ಪ್ರಾಸಾಮಾನ್ಯವಾದ ಸೋಡಿಯನ್ನು ದೊರಕಿಸಲೇಬೇಕೆಂದು ಕಟ್ಟಳೆ ಹಾಕಬಾರದು

(ii) ಪುಸ್ತಕ ವ್ಯಾಪಾರಿಗಳು "ಯಾವಾಗಲೂ ಲಾಭದಾಯಕ ವ್ಯಾಪಾರ" ಎಂಬ ಮನೋವೃತ್ತಿಯನ್ನು ತೊರೆಯಬೇಕು. ಇಂಥ ಗ್ರಂಥಗಳನ್ನು ಸಂಶೋಧನೆಗಳಿಗಾಗಿ ತುರ್ತಾಗಿ ಬೇಡಿದಾಗ, ಸಿಗುವ ಲಾಭವನ್ನು ತ್ಯಜಿಸಿ, ಬೇಡಿಕೆಗಳನ್ನು ಆದಷ್ಟು ಪೂರ್ತಿಯಗಿ, ತ್ವರಿತವಾಗಿ ಪೂರೈಸುವ ಹೊಣೆಹೊರಬೇಕು.

(iii) ಭಾರತ ಸರ್ಕಾರ ರಾಷ್ಟ್ರದ ಬೆಳವಣಿಗೆಯ ದೃಷ್ಟಿಯಿಂದ ಪುಸ್ತಕ ಆಯಾತ ನಿಯಮಗಳನ್ನು ಇನ್ನೂ ಸಡಲಿಸಬೇಕು. ಗ್ರಂಥಾಲಯಗಳು ನೇರವಾಗಿ ಆಯಾತ ಮಾಡುವ ಗ್ರಂಥಗಳಿಗೆ ಈ ಮಾತು ಬಹಳ ಮಟ್ಟಿಗೆ ಅನ್ವಯಿಸುತ್ತದೆ.

ಈ ಎಲ್ಲ ಉಪಾಯಗಳ ಅಂತಿಮ ಗುರಿಯೆಂದರೆ ಒಬ್ಬ ವಿದ್ವಾಂಸನಿಗೆ ಜಗತ್ತಿನ ಪ್ರಮುಖ ಹಾಗೂ ಉತ್ತಮವೆನಿಸಿದ ಸಾಹಿತ್ಯವನ್ನು ದೊರಕಿಸಿಕೊಂಡಲು ಸ್ವಲ್ಪ ಹಣದ ನಷ್ಟವಾದರೂ ಆವನ ಬೇಡಿಕೆಯನ್ನು ಪೂರ್ತಿಯಾಗಿ ಪೂರೈಸುವುದು. ಈ ಧೋರಣೆ ಗ್ರಂಥಾಲಯದ ಸಾರ್ಥಕತೆಯನ್ನು ಎತ್ತಿ ತೋರಿಸುತ್ತದೆ.

ಗ್ರಂಥ ಸಂಗ್ರಹಣ ಪದ್ಧತಿಗಳಿಂದ ಉದ್ಭವಿಸುವ ಸಮಸ್ಯೆಗಳು

ಭಾರತೀಯ ಗ್ರಂಥಾಲಯಗಳು ಗ್ರಂಥ ಸಂಗ್ರಹಣ ಕಾರ್ಯವನ್ನು ನೆರವೇರಿಸಲು ಹಲವಾರು ಪದ್ಧತಿಗಳನ್ನು ಅನುಸರಿತ್ತ ಬಂದಿವೆ. ಇವು ಯಾವವೆಂದರೆ: ನಮೂದನೆ ಪದ್ಧತಿ(ಕ್ವೊಟೇಷನ್ ಸಿಸ್ಟಂ), ಒಟ್ಟುಗಟ್ಟಲೆ ಆದೇಶ ಪದ್ಧತಿ(ಬಲ್ಕ್ ಆರ್ಡರ್ ಸಿಸ್ಟಂ), ಸ್ಥಿರ ವಿಕ್ರಯದಾರಿ ಪದ್ಧತಿ (ಫಿಕ್ಸೆಡ್ ವೆಂಡಾರ್ ಸಿಸ್ಟಂ), ತೆರೆದ ಮಾರುಕಟ್ಟೆ ಪದ್ಧತಿ (ಓಪನ್ ಮಾರ್ಕೆಟ್ ಸಿಸ್ಟಂ), 'ಅನುಮೋದನೆಯ ಮೇಲೆ' ವಿಕ್ರಯ ಪದ್ಧತಿ(ಸೇಲ್ ಆನ್ ಅಪ್ರೂವಲ್ ಬೇಸಿಸ್), ವ್ಯಾಪಾರಿ ಗ್ರಂಥಾಲಯ ಯೋಜನೆ(ಡೀಲರ್ ಲೈಬ್ರರಿ ಪ್ಲಾನ್) ಮುಂತಾದವು. ಈ ಪದ್ಧತಿಗಳಲ್ಲಿ ಒಂದೊಂದಕ್ಕೂ ಅದರದರ ಅನುಕೂಲ, ಪ್ರತಿಕೂಲಗಳಿವೆ. ಮೊದಲಿನ ಮೂರು ಪದ್ಧತಿಗಳನ್ನು ಅನುಸರಿಸಿರುವಲ್ಲೆಲ್ಲ ಪುಸ್ತಕ ವ್ಯಾಪಾರದ ಅನಾರೋಗ್ಯಕರವಾದ ರೂಢಿಗಳಿಗೆ ಎಡೆ ಅಥವಾ ಪ್ರೋತ್ಸಾಹ ದೊರಕಿದೆ. ಗ್ರಂಥಾಲಯ ಅಧಿಕಾರಿಗಳು ಹಾಗೂ ಗ್ರಂಥಪಾಲಕರು ಈ ದುಃಸ್ಥಿತಿಗೆ ಕಾರಣರು.

ತೆರೆದ ಮಾರುಕಟ್ಟೆ ಪದ್ಧತಿಯನ್ನು ಅನುಸರಿಸಿದ ಪಕ್ಷದಲ್ಲಿ, ಗ್ರಂಥಪಾಲಕ ಯಾವ ಪುಸ್ತಕ ವ್ಯಾಪಾರಿಯಿಂದ ಪುಸ್ತಕಗಳು ತುರ್ತಾಗಿ ಸಿಗುವವೂ ಅಲ್ಲಿಂದ ದೊರಕಿಸಲು ಬೇಕಾಗುವ ವೇಳೆ, ಮತ್ತು ಗ್ರಂಥಾಲಯ ಸೋಡಿಗಳನ್ನು ಅವಲಂಬಿಸಿ ಖರೀದಿ ಮಾಡಲು ಶಕ್ತನಾಗಿರುತ್ತಾನೆ. ಈ ಪದ್ಧತಿಯನ್ನು ದೊಡ್ಡ ನಗರಗಳಾದ ದಿಲ್ಲಿ, ಮುಂಬೈ, ಕಲ್ಕತ್ತ, ಮದ್ರಾಸ್‌ಗಳಲ್ಲಿ ಅನುಸರಿಸುವುದು ಸುಲಭ. ಈ ನಗರಗಳಲ್ಲಿ ಮುಖ್ಯ ಪ್ರಕಾಶಕರು ಅಥವಾ ಅವರ ಏಜೆಂಟರು ಹಾಗೂ ವ್ಯಾಪಾರಿಗಳು ವಿವಿಧ ವಿಷಯಗಳ ಮೇಲೆ ಹಲವಾರು ಪುಸ್ತಕಗಳನ್ನು ನಿತ್ಯವೂ ಶೇಖರಿಸಿ ಇಡುತ್ತಾರೆ. ಗ್ರಾಮ ಪ್ರದೇಶಗಳಲ್ಲಿರುವ ಗ್ರಂಥಾಲಯಗಳಿಗೆ ಈ ಅನುಕೂಲತೆ ಇಲ್ಲದಿರುವ ಕಾರಣ, ಅವು ಒಂದೇ ವೇಳೆಗೆ 8–10 ಪ್ರಮುಖ

ವ್ಯಾಪಾರಿಗಳಿಗೆ ದೊರೆಯುವ ಪುಸ್ತಕಗಳ ಬಗ್ಗೆ ತಿಳಿಸಬೇಕೆಂದು ಪರಿಪತ್ರ ಕಳಿಸಿ, ಅವುಗಳಲ್ಲಿ ಕಾಣಿಸಿದ ಪುಸ್ತಕಗಳಲ್ಲಿ ಯಾವ ಪುಸ್ತಕಗಳು ತುರ್ತಾಗಿ ಲಭ್ಯವಾಗುತ್ತವೆಂಬುದನ್ನು ವಿಚಾರಿಸಿ, ಅಂಥ ಪುಸ್ತಕಗಳಿಗೆ ನಿರ್ದಿಷ್ಟ ಆದೇಶ ಕಳಿಸುತ್ತಾರೆ. ಈ ಪದ್ಧತಿಯಿಂದ ಪುಸ್ತಕ ಸಂಗ್ರಹಣ ಕಾರ್ಯ ತಕ್ಕಮಟ್ಟಿಗೆ ತಡವಾಗುತ್ತದೆ. ಆದರೆ ಭಾರತದಲ್ಲಿರುವ ಈಗಿನ ಪರಿಸ್ಥಿತಿಯಲ್ಲಿ ಇದು ಸೂಕ್ತವಾದ ಮಾರ್ಗವೆಂದು ಹೇಳಬಹುದು.

ಅನುಮೋದನೆಯ ಮೇಲೆ ಪುಸ್ತಕ ಕೊಳ್ಳುವ ಪದ್ಧತಿಯಲ್ಲಾಗಲಿ ವ್ಯಾಪಾರಿ ಗ್ರಂಥಾಲಯ ಪದ್ಧತಿಯಲ್ಲಾಗಲಿ ಕೆಲವು ದೋಷ ಪ್ರತಿಕೂಲಗಳಿವೆಯೆಂದು ಅವನ್ನು ಅನೇಕ ಗ್ರಂಥಪಾಲಕರು ಕಡೆಗಣಿಸುತ್ತಾರೆ. ಅವು ಯಾವವೆಂದರೆ:

i ಗ್ರಂಥಾಲಯಗಳಿಗೆ ಕಳಿಸಿದ ಪುಸ್ತಕಗಳನ್ನು ವಿಷಯ ಪರಿಣತರು ಸೂಕ್ಷ್ಮವಾಗಿ ಪರೀಕ್ಷಿಸುವುದಿಲ್ಲ. ಅವನ್ನು ನೋಡದೆ ಅವು ಕೊಂಡುಕೊಳ್ಳಲು ಸೂಕ್ತವಿರುವುವೆಂದು ಅಭಿಪ್ರಾಯ ನೀಡಿದ ಉದಾಹರಣೆಗಳು ಹೇರಳವಾಗಿವೆ. ಕೆಲವು ಸಲ ಗ್ರಂಥಾಲಯಗಳು ಅಥವಾ ಪುಸ್ತಕ ವ್ಯಾಪಾರಿಗಳು ಕಳಿಸಿದ ಪುಸ್ತಕ ಪಟ್ಟಿಗಳ ಆಧಾರದ ಮೇಲೆ ಗ್ರಂಥಗಳನ್ನು ಕೊಂಡುಕೊಳ್ಳಲು ಸೂಚಿಸುವುದೂ ಉಂಟು. ಆದ್ದರಿಂದ ಈ ಪದ್ಧತಿಗಳು ನಿಷ್ಪ್ರಯೋಜಕವಾಗುತ್ತವೆ.

ii ವ್ಯಾಪಾರಿ ಗ್ರಂಥಾಲಯ ಪದ್ಧತಿಯಲ್ಲಿ ಪ್ರಕಾಶಕರು ಕಳಿಸಿಕೊಡುವ ಗ್ರಂಥಗಳು ಹಲವಾರು ಸಲ ಗ್ರಂಥಾಲಯಗಳು ಮುಂಚಿತವಾಗಿ ನಮೂದಿಸಿದ ವಿಷಯಗಳಿಗೆ ಅಥವಾ ಮಟ್ಟಗಳಿಗೆ ಅನುಗುಣವಾಗಿರುವುದಿಲ್ಲ. ಇದು ಈ ಪದ್ಧತಿಯ ಇನ್ನೊಂದು ಕೊರತೆ.

ವ್ಯಾಪಾರಿ ಗ್ರಂಥಾಲಯ ಪದ್ಧತಿಯಾಗಲಿ, ಅನುಮೋದನೆಯ ಮೇಲೆ ಕ್ರಯಿಸುವ ಪದ್ಧತಿಯಾಗಲಿ ಅವರ ಯಶಸ್ಸು ಗ್ರಂಥಾಲಯ ಸಿಬ್ಬಂದಿಯ ಮತ್ತು ಪುಸ್ತಕ ವ್ಯಾಪಾರಿಗಳ ಯೋಗ್ಯತೆಯನ್ನೇ ಅವಲಂಬಿಸಿದೆ. ಗ್ರಂಥಾಲಯ ಸಿಬ್ಬಂದಿ ಈ ಪದ್ಧತಿಗಳ ಪ್ರಕಾರ ಬಂದ ಪುಸ್ತಕಗಳನ್ನು 2–3 ದಿನಗಳಲ್ಲಿ ಖರೀದಿ ಮಾಡುವ ನಿಶ್ಚಯ ಮಾಡುವಂತಾಗಬೇಕು ಮತ್ತು ಪುಸ್ತಕ ವ್ಯಾಪಾರಿಗಳು ಆಯ್ಕೆ ಮಾಡಿದ ಗ್ರಂಥಗಳಿಗೆ ಬಿಲ್ಲುಗಳನ್ನು ಕಳಿಸಿಕೊಡುವಂತಾಗಬೇಕು ಅಥವಾ ಆಯ್ಕೆಯಾಗದ ಗ್ರಂಥಗಳನ್ನು ಮರಳಿ ಪಡೆಯುವಂತಾಗಬೇಕು. ಹೀಗಾದ ಪಕ್ಷದಲ್ಲಿ ಪುಸ್ತಕ ಸಂಗ್ರಹಣ ತೀವ್ರವಾಗಿ ಆಗುತ್ತದೆ ಮತ್ತು ಇವರಿಬ್ಬರಲ್ಲಿ ಅನಾವಶ್ಯಕ ಪತ್ರವ್ಯವಹಾರ ಇಲ್ಲದಂತಾಗುತ್ತದೆ.

ಹಣಪಾವತಿ ಸಮಸ್ಯೆಗಳು

ಪುಸ್ತಕ ಸಂಗ್ರಹಣ ಕಾರ್ಯಕ್ಕೆ ಸಂಬಂಧಿಸಿದ ಇನ್ನೊಂದು ಆತಂಕವೆಂದರೆ, ಬಿಲ್ಲುಗಳ ಮೊಬಲಗನ್ನು ಸಲ್ಲಿಸುವಲ್ಲಿ ಆಗುವ ಅಸಾಮಾನ್ಯವಾದ ವಿಳಂಬ. ಇದು ಪುಸ್ತಕವ್ಯಾಪಾರಿಯ ಉತ್ಸಾಹವನ್ನು ತೊಡೆದು ಹಾಕುತ್ತದೆ. ಇದು ಗ್ರಂಥಾಲಯ ಸಿಬ್ಬಂದಿಯ ಯೋಗ್ಯತೆಯನ್ನು ಮತ್ತು ಗ್ರಂಥಪಾಲಕನ ಮತ್ತು ಪುಸ್ತಕವ್ಯಾಪಾರಿಗಳ ನಡುವಣ ಮೈತ್ರಿ, ಸದ್ಭಾವನೆ ಮತ್ತು ಸಹಕಾರಗಳನ್ನು ಅವಲಂಬಿಸಿರುತ್ತದೆ.

ಮೇಲ್ಕಾಣಿಸಿದ ಪುಸ್ತಕ ಆಯ್ಕೆಯ ಮತ್ತು ಪುಸ್ತಕ ಸಂಗ್ರಹಣದ ಸಮಸ್ಯೆಗಳನ್ನು ಕಡಿಮೆ ಮಾಡುವ ಮತ್ತು ಪೂರ್ತಿಯಾಗಿ ತೊಡೆದು ಹಾಕುವ ಉಪಾಯವೆಂದರೆ, ಗ್ರಂಥಾಲಯದ ಅಧಿಕಾರಿಗಳು, ಗ್ರಂಥಪಾಲಕರು ಮತ್ತು ಪುಸ್ತಕ ವ್ಯಾಪಾರದ ಮುಖ್ಯ ಪ್ರತಿನಿಧಿಗಳು ಕಲೆತು ಪುಸ್ತಕಗಳ ಮತ್ತು ಪುಸ್ತಕ ಸಂಗ್ರಹಣದ ಮೂಲ ಉದ್ದೇಶಗಳನ್ನು ಪರಸ್ಪರವಾಗಿ ತಿಳಿದುಕೊಳ್ಳಬೇಕು : ಇದಾದ ಮೇಲೆ ಸಂಗ್ರಹಣ ಮಾಡಿದ ಗ್ರಂಥಗಳ ಉಪಯೋಗವನ್ನು ಹೇಗೆ ಪ್ರೋತ್ಸಾಹಿಸಬೇಕು ಮತ್ತು ಗ್ರಂಥಾಲಯಗಳಿಗೆ, ಪುಸ್ತಕ ಮಾರುಕಟ್ಟೆಗೆ ಮತ್ತು ಇಡೀ ಸಮಾಜಕ್ಕೆ ಇವನ್ನು ಹೇಗೆ ಲಾಭದಾಯಕವಾಗಿ ಮಾಡಬೇಕೆಂಬುದನ್ನು ವಿಚಾರಿಸಿ ಕಾರ್ಯತತ್ಪರರಾಗಬೇಕು.

ಡಾ. ಪಿ. ಗುರುರಾಜ ಭಟ್

ಉಡುಪಿಯ ದೇವಾಲಯಗಳು

ಉಡುಪಿಯ ದೇವಾಲಯಗಳನ್ನು ಕುರಿತು ಬರೆಯುವುದು ಸ್ವಾರಸ್ಯಕರ. ಏಕೆಂದರೆ ಉಡುಪಿಯ ಈ ದೇವಸ್ಥಾನಗಳಿಗೆ ಹಲವು ಶತಮಾನಗಳ ಚಾರಿತ್ರಿಕ ಹಿನ್ನೆಲೆಯಿದೆ. ಅಷ್ಟೇ ಅಲ್ಲದೆ ಇವು ಇಲ್ಲಿಯ ತತ್ತ್ವ ಶಾಸ್ತ್ರದಲ್ಲಾದ ಬದಲಾವಣೆಗಳ ಸಂಕೇತಗಳಾಗಿವೆ.

ಶಾಸನಗಳ ಆಧಾರದಿಂದ ಹೇಳುವುದಾದರೆ, ಉಡುಪಿ ಎಂಬ ಹೆಸರು 1366ರಲ್ಲಿ ಮೊತ್ತ ಮೊದಲಾಗಿ ಕಂಡುಬರುತ್ತದೆ. ಈಗ ಚಂದ್ರೇಶ್ವರ ಮತ್ತು ಅನಂತೇಶ್ವರ ಎಂದು ಪ್ರಸಿದ್ಧವಾಗಿರುವ ಮೂಡ ಮತ್ತು ಪಡುವ ದೇವತೆಗಳಿಗೆ ಬಿಟ್ಟಿರುವ ದತ್ತಿಯ ವಿಚಾರ ಈ ಶಾಸನದಲ್ಲಿದೆ. 1366ರಲ್ಲಿ ಉಲ್ಲೇಖಿತವಾಗಿರುವ 'ಉಡುಪಿ' ಎಂಬ ಹೆಸರು 1366ಕ್ಕೂ ಸುಮಾರು ಐವತ್ತು ನೂರು ವರ್ಷಗಳ ಮೊದಲೇ ಬಳಕೆಯಲ್ಲಿತ್ತೆಂದು ಊಹಿಸಬಹುದು. ಅದೇನಿದ್ದರೂ 14ನೆಯ ಶತಮಾನದ ಆದಿಯಲ್ಲಿ ಉಡುಪಿ ಎಂಬ ಹೆಸರು ಬಳಕೆಯಾಗುತ್ತಿದ್ದುದು ಕಂಡುಬರುತ್ತದೆ. ಉಡುಪಿ ಎಂಬ ಶಬ್ದದ ಸಾಂಪ್ರದಾಯಿಕ ವ್ಯುತ್ಪತ್ತಿಯನ್ನು ನಾನು ಒಪ್ಪಲಾರೆ. ಏಕೆಂದರೆ ಅದು ಬರಿಯ ಊಹೆಯಾದೀತು. ನಮ್ಮ ದೃಷ್ಟಿಕೋನವನ್ನು ಋಜುವಾತು ಪಡಿಸಲು ತಕ್ಕಷ್ಟು ದಾಖಲೆಗಳು ದೊರೆಯುವವರೆಗೆ ನಮ್ಮ ಅಭಿಪ್ರಾಯ ಊಹೆಯಾಗದೆ ಗತ್ಯಂತರವಿಲ್ಲ. ಪ್ರಾಚೀನ ಸಂಸ್ಕೃತ ಸಾಹಿತ್ಯದಲ್ಲಿ ಉಡುಪಿ ರಜತಪೀಠಪುರ ಎಂದು ಕರೆಯಲ್ಪಟ್ಟಿದೆ. ಈ ಹೆಸರು. ಬಹುಶಃ ಪ್ರಥಮ ಬಾರಿಗೆ ಆನಂದ ಗಿರಿಯಿಂದ ರಚಿತವಾಗಿರುವ "ಶ್ರೀ ಶಂಕರ ವಿಜಯ"ದಲ್ಲಿ ಕಂಡುಬರುತ್ತದೆ. ಅದು. ಶ್ರೀ ಶಂಕರಾಚಾರ್ಯರ ಶಿಷ್ಯರಾದ ಶ್ರೀ ಹಸ್ತಾಮಲಕರು ತಮ್ಮ ಗುರುಗಳಿಂದ ಪಂಚಾಯತನ ಪೂಜಾವಿಧಿಗನುಗುಣವಾಗಿ ವೈಷ್ಣವ ಮತವನ್ನು ದಕ್ಷಿಣ ಭಾರತದ ಪಶ್ಚಿಮ ಕರಾವಳಿಯಲ್ಲಿ ಪ್ರಚಾರ ಮಾಡಲು ನಿರ್ದೇಶನಗಳನ್ನು ಪಡೆದುಕೊಂಡರೆಂದು ತಿಳಿಸುತ್ತದೆ. ಶ್ರೀ ಹಸ್ತಾಮಲಕರು ರಜತಪೀಠಪುರವನ್ನು ಸಂದರ್ಶಿಸಿ, ಅಲ್ಲಿ ಪೂಜೆಗಾಗಿ ಶ್ರೀಕೃಷ್ಣನ ಒಂದು ವಿಗ್ರಹವನ್ನು ಸ್ಥಾಪಿಸಿದಂತೆ ಕಾಣುತ್ತದೆ. ಇದನ್ನು ಉಡುಪಿಯಲ್ಲಿ 'ಕೃಷ್ಣಪಂಥ'ದ ಆದಿ ಎಂದು ಪರಿಗಣಿಸಬಹುದು. ಈ ಪ್ರತಿಮೆ ಇಂದಿಗೂ ಶ್ರೀ ಕೃಷ್ಣಮಠದ ಗರ್ಭಗೃಹದ ಒಳಭಾಗದಲ್ಲಿ ಇದೆ. ಈ ವೇಣು ಗೋಪಾಲಕೃಷ್ಣನ ಸುಂದರ ಮೂರ್ತಿ ಪ್ರಾಚೀನ ವಾಸ್ತುಶಿಲ್ಪ ಲಕ್ಷಣಗಳಿಂದ ಕೂಡಿದ್ದು, ನಿಸ್ಸಂದೇಹವಾಗಿ ಶ್ರೀ ಹಸ್ತಾಮಲಕರ ಕಾಲದ್ದೆನ್ನಬಹುದು (ಕ್ರಿ.ಶ. 9ನೆಯ ಶತಮಾನ). ಇನ್ನು ಮುಂದೆ ಹೇಳಲಿರುವ ಕಾರಣಗಳಿಂದಾಗಿ ಕೃಷ್ಣನ ಈ ಪ್ರತಿಮೆ ಮುಖ್ಯವಾದ್ದು.

ರಜತಪೀಠಪುರ ಎನ್ನುವ ಹೆಸರು. ಪ್ರಾಯಶಃ ಶಿವವಳ್ಳಿ ಅಥವಾ ಶಿವಳ್ಳಿ ಎಂಬ ಶಬ್ದದ ಸಂಸ್ಕೃತ ರೂಪ. ಶಿವಳ್ಳಿ ಎಂಬ ಹೆಸರು ಉಡುಪಿಯ ಇತಿಹಾಸದಲ್ಲಿ ಕನಿಷ್ಠ ಪಕ್ಷ 8ನೆಯ ಶತಮಾನದಿಂದ ಬಳಕೆಯಲ್ಲಿದೆ. ಉದ್ಯಾವರದಲ್ಲಿ ದೊರಕಿರುವ, 8ನೆಯ ಶತಮಾನದವು ಎನ್ನಬಹುದಾದ, ಹಲವಾರು ಶಾಸನಗಳಲ್ಲಿ ಉದಯಪುರ (ಉಡುಪಿಯ ಸಮೀಪವಿರುವ ಒಂದು ಹಳ್ಳಿ), ಶಿವಳ್ಳಿ ಮತ್ತು ಬ್ರಹ್ಮಪುರ ಎಂಬ ಹೆಸರುಗಳ ಉಲ್ಲೇಖವಿದೆ. ಶಿವಳ್ಳಿ ಬನವಾಸಿ (ಕದಂಬರ ರಾಜಧಾನಿ) ಅಥವಾ ವಾರಾಣಸಿಯಷ್ಟೇ ಮಹತ್ವಪೂರ್ಣವೆನ್ನಲಾಗುತ್ತಿತ್ತು. ಉಡುಪಿಯಲ್ಲೇ ಅನಂತರದಲ್ಲಿ ದೊರಕಿರುವ ಕೆಲವು ಶಾಸನಗಳಲ್ಲೂ ಉಡುಪಿ ಎಂಬ ಹೆಸರು ಇದೆ. ಆದ್ದರಿಂದ ಶಿವಳ್ಳಿ ಎಂದರೆ, ಒಟ್ಟಿನಲ್ಲಿ ಶಿವನಹಳ್ಳಿ

ಎಂಬರ್ಥ ಬರುತ್ತದೆ. ಈ ಹೆಸರೇ ಸಂಸ್ಕೃತದಲ್ಲಿ ರಜತಪೀಠಪುರವೆಂಬ ಹೆಸರು ಪಡೆದಿರಬೇಕು. ಬಹಳ ಪ್ರಾಚೀನವಲ್ಲದ ಸಂಸ್ಕೃತ ಸಾಹಿತ್ಯದಲ್ಲಿ ಅದು 'ಶಿವರೂಪ್ಯ' ಎಂದು ಕರೆಯಲ್ಪಟ್ಟಿದೆ. ಶಿವಳ್ಳಿ ಎನ್ನುವ ಹೆಸರು ಯೋಗ್ಯವಾದದ್ದೇ; ಏಕೆಂದರೆ ಅಲ್ಲಿ ಜಿಲ್ಲೆಯ ಅತ್ಯುತ್ತಮ ಹಾಗೂ ಅತಿದೊಡ್ಡ ದೇವಸ್ಥಾನಗಳಲ್ಲೊಂದಾದ ಅನಂತೇಶ್ವರ ದೇವಾಲಯವಿದೆ.

ಅನಂತೇಶ್ವರ ದೇವಸ್ಥಾನದ ರಚನೆ ಭವ್ಯವಾದುದು. ಆದರೆ ಈ ಕಟ್ಟಡದ ಭವ್ಯತೆಯನ್ನು ಸಾಮಾನ್ಯವಾಗಿ ಯಾರೂ ಗಮನಿಸುವುದಿಲ್ಲ. ದೇವಸ್ಥಾನ ಗಜಪೃಷ್ಠಾಕಾರದಲ್ಲಿದೆ. ಗರ್ಭಗೃಹದ ಎತ್ತರ 35 ಅಡಿಗಳಿಗಿಂತ ಕಡಿಮೆಯಿರಲಾರದು. ಗರ್ಭಗೃಹದ ಎದುರಿನಲ್ಲಿ 12 ಕಂಬಗಳಿಂದ ಕೂಡಿದ, ಗರ್ಭಗೃಹದ ಸುತ್ತಿಗೆ ಅಭಿಮುಖವಾಗಿರುವ ಒಂದು ಶಿಲಾಮಂಟಪವಿದೆ. ಇದನ್ನು ತೀರ್ಥಮಂಟಪವೆಂದು ಪರಿಗಣಿಸಬಹುದು. ಇದರಿಂದ ಒಂದು ವೃತ್ತಾಕಾರದ ದಾರಿ ಹೊರಡುತ್ತದೆ. ಈ ದಾರಿ ಚಿಕ್ಕ ಚಿಕ್ಕ ತೂತುಗಳಿರುವ ಒಂದು ಕಲ್ಲಿನ ಗೋಡೆಯಿಂದ ಆವೃತವಾಗಿದೆ. ಮೊದಲ ಸುತ್ತಿನ ಗೋಡೆಯ ರಚನೆ ತುಂಬಾ ಸುಂದರವಾಗಿದೆ. ಅದು ಗೋಡೆಯೊಂದಿಗೆ ಕೂಡಿಸುವ ಹಲವಾರು ಚೌಕಸ್ತಂಭಗಳಿಂದ ಕೂಡಿದೆ. ಅಲ್ಲದೆ ಆಳವಿಲ್ಲದ ಗೂಡುಗಳಿಂದಲೂ ಕಾರ್ನೀಸುಗಳಿಂದಲೂ ರಂಧ್ರವಿರುವ ಕಾರ್ನೀಸುಗಳಿಂದಲೂ ಕೂಡಿದೆ.

ಇಡೀ ರಚನೆಗೆ ಕಲ್ಲಿನ ಮಾಡು ಇದೆ. ದೇವಸ್ಥಾನದ ಮಾಡು ನಿಜವಾಗಿಯೂ ಶ್ಲಾಘ್ಯ. ಪ್ರವೇಶ ದ್ವಾರದಲ್ಲಿ (1) ಗಟ್ಟಿ ಬಂಡೆಕಲ್ಲಿನಿಂದ ಮಾಡಿದ ಸುಮಾರು 40 ಅಡಿಗಳ ಎತ್ತರದ ಸ್ತಂಭವಿದೆ. (2) 10 ಅಡಿ ಅಗಲ ಮತ್ತು 10 ಅಡಿ ಎತ್ತರದ ಒಂದು ದೊಡ್ಡ ಬಲಿಪೀಠವಿದೆ. ಈ ಬಲಿಪೀಠ ದೇವಸ್ಥಾನದ ಪ್ರಧಾನ ಬಲಿಪೀಠ. ಇದು ಪ್ರಾಚೀನ ವಾಸ್ತುಶಿಲ್ಪ ಲಕ್ಷಣಗಳನ್ನುಳ್ಳದ್ದಾಗಿದೆ. ಈ ಬಲಿಪೀಠ ಕ್ರಿ.ಶ. 9ನೆಯ ಶತಮಾನಕ್ಕೆ ಪೂರ್ವದ್ದೆಂಬುದನ್ನು ಇದರಲ್ಲಿ ಕೆತ್ತಿರುವ ಸಮುದ್ರ ಕುದುರೆಗಳೂ ಮಕರಗಳೂ ಸೇವಕರಿಂದ ಪರಿವೃತ್ತನಾಗಿರುವ ಸ್ಕಂದನ ಉಬ್ಬುಚಿತ್ರವೂ ಸೂಚಿಸುತ್ತವೆ.

ದೇವಸ್ಥಾನದ ಎದುರಿಗಿರುವ ಶಿಲಾಸ್ತಂಭವನ್ನು ಇಂದಿಗೂ ಮಾನಸ್ತಂಭವೆಂದೇ ತಪ್ಪಾಗಿ ತಿಳಿಯಲಾಗಿದೆ. ವಿದ್ವಾಂಸರು ಮತ್ತು ಇತಿಹಾಸಜ್ಞರು ಈ ದೇವಸ್ಥಾನ ಮೊದಲು ಒಂದು ಜೈನ ಬಸದಿಯಾಗಿದ್ದಿರಬೇಕೆಂದೂ ಅನಂತರ ಶ್ರೀ ಶಂಕರಾಚಾರ್ಯರ ಕಾಲದಲ್ಲಿ ಶಿವದೇವಾಲಯವಾಗಿ ಪರಿವರ್ತಿತವಾಗಿರಬೇಕೆಂದೂ ಊಹಿಸಲು ಎಡೆಯಾಗಿರುವುದು ಈ ತಪ್ಪು ತಿಳಿವಳಿಕೆಯಿಂದಾಗಿ. ಈ ಊಹೆಯಂತೆ, ಅನಂತೇಶ್ವರ ಜೈನತೀರ್ಥಂಕರರಲ್ಲೊಬ್ಬನಾದ ಅನಂತಜಿನೇಶ್ವರನಿರಬೇಕು. ಆದರೆ ಇಂಥ ಅಭಿಪ್ರಾಯ ಸುಳ್ಳೆಂಬುದು ಈ ಕೆಳಗೆ ಕಾಣಿಸಿದ ವಿವರಗಳಿಂದಾಗಿ ವಿಶದವಾಗುತ್ತದೆ:

1 ಶಿಲಾಸ್ತಂಭ ಮಾನಸ್ತಂಭವಲ್ಲ; ಮಾನಸ್ತಂಭದ ರಚನಾಕ್ರಮ, ಅನಂತೇಶ್ವರ ದೇವಸ್ಥಾನದ ಎದುರಿಗಿರುವ ಶಿಲಾಸ್ತಂಭಕ್ಕಿಂತ ತೀರ ಭಿನ್ನವಾಗಿದೆ.

2 ಇದೇ ರಚನೆಯಲ್ಲಿ ಜೈನ ಪ್ರಭಾವವನ್ನು ಸೂಚಿಸಬಲ್ಲಂಥ ಯಾವುದೇ ಉಬ್ಬುಚಿತ್ರವಿಲ್ಲ.

3 ಅನಂತೇಶ್ವರದ ರಚನೆ ಒಂದೇ ವಿಧವಾಗಿದೆ. ಗಜಪೃಷ್ಠಾಕಾರದಲ್ಲಿದೆ. ನನಗೆ ತಿಳಿದಮಟ್ಟಿಗೆ ಯಾವುದೇ ಬಸದಿಯೂ ಇದುವರೆಗೆ ಈ ಆಕಾರದಲ್ಲಿ ಕಟ್ಟಲ್ಪಟ್ಟಿಲ್ಲ. ಬಸದಿ ಚೌಕಾಕಾರವಾಗಿರುತ್ತದೆ. ಇಲ್ಲವೇ ಆಯತಾಕಾರವಾಗಿರುತ್ತದೆ.

4 ಈ ದೇವಸ್ಥಾನದ ನೈಋತ್ಯ ದಿಕ್ಕಿನಲ್ಲಿರುವ ಒಂದು ಚಿಕ್ಕ ಉಪದೇವಳದಲ್ಲಿ ಶಾಸ್ತಾರವೆಂಬ ದೇವರ ವಿಗ್ರಹವಿದೆ. ಈ ಉಪಸ್ಥಾನ ದೇವತೆ ಸಾಮಾನ್ಯವಾಗಿ ಶಿವ ದೇವಾಲಯದ ನೈಋತ್ಯ ದಿಕ್ಕಿನಲ್ಲೇ ಇರುತ್ತದೆ. ಈ ಉಪದೇವತೆಯ ವಿಗ್ರಹ ಪ್ರಾಚೀನ ಶಿಲ್ಪ ಲಕ್ಷಣಗಳನ್ನೇ ಉಳ್ಳದಾಗಿದೆ. (ಕ್ರಿ.ಶ. ಸು. 9–10ನೆಯ ಶತಮಾನ).

5 ಈ ದೇವಸ್ಥಾನಕ್ಕೆ ಬೇರೆ ಎರಡು ಉಪ-ದೇವಸ್ಥಾನಗಳಿದ್ದಿರಬೇಕು: (ಅ) ಗಣೇಶ, (ಆ) ಶ್ರೀಕೃಷ್ಣ. ಈಗ ಗಣಪತಿಯ ವಿಗ್ರಹ ಅನಂತೇಶ್ವರ ದೇವಸ್ಥಾನದ ಒಳಗೆಯೇ ಇದೆ. ಶ್ರೀಕೃಷ್ಣನ ಉಪದೇವಾಲಯ ಪ್ರತ್ಯೇಕ ದೇವಸ್ಥಾನವಾಗಿ ಇದೆ. ಪ್ರಾಯಶಃ ಶಕ್ತಿ(ಪಾರ್ವತಿ) ಕೂಡ ಈ ಉಪದೇವತೆಗಳಲ್ಲೊಬ್ಬಳಾಗಿ ದೇವಸ್ಥಾನದ ವಾಯವ್ಯ ಭಾಗದಲ್ಲಿ ಪೂಜಿಸಲ್ಪಡುತ್ತಿದ್ದಿರಬೇಕು. ಆದರೆ ಈಗ ಈ ದೇವತೆಯ ಯಾವ ಕುರುಹೂ ಕಾಣಿಸುತ್ತಿಲ್ಲ.

6 ದೇವಸ್ಥಾನದ ಎದುರಿಗಿರುವ ಶಿಲಾಸ್ತಂಭ, ಈ ದೇವಸ್ಥಾನ ಹಿಂದೂ ದೇವಾಲಯವೇ ಅಥವಾ ಜೈನ ಬಸದಿಯೇ ಎನ್ನುವುದನ್ನು ನಿರ್ಣಯಿಸುವಲ್ಲಿ ಹೆಚ್ಚಿಗೆ ಏನೂ ಸಹಾಯ ಮಾಡುವ ಆಧಾರವಾಗಲಾರದು; ಏಕೆಂದರೆ ಇಂಥ ಶಿಲಾಸ್ತಂಭಗಳು ಜೈನ ಹಾಗೂ ಹಿಂದೂ ದೇವಾಲಯಗಳೆರಡರ ಮುಂದುಗಡೆಯೂ ಇರುವ ಎಷ್ಟೋ ಉದಾಹರಣೆ ಗಳಿವೆ. ಅಷ್ಟೇ ಅಲ್ಲದೆ ಸ್ತಂಭದ ಪೂರ್ವಪಾರ್ಶ್ವದಲ್ಲಿರುವ ನಂದಿಕೇಶ್ವರನ ಮತ್ತು ಸ್ತಂಭದ ಉತ್ತರ ಪಾರ್ಶ್ವದಲ್ಲಿರುವ ಸೂರ್ಯನ ಉಬ್ಬುಚಿತ್ರಗಳು ಸ್ತಂಭ ಶಿವನಿಗೆ ಅರ್ಪಿತವೆನ್ನು ವುದನ್ನು ರುಜುವಾತುಪಡಿಸುತ್ತವೆ.

ಮೇಲೆ ಹೇಳಿದ ಐತಿಹಾಸಿಕ ಮತ್ತು ವಾಸ್ತುಶಿಲ್ಪದ ಆಧಾರಗಳಿಂದ, ಹೆಸರುವಾಸಿಯಾದ ಈ ದೇವಾಲಯ ಶಿವ ದೇವಾಲಯವಾಗಿಯೇ ಇತ್ತು ಎಂದು ಧಾರಾಳವಾಗಿ ಹೇಳಬಹುದು. ಇಲ್ಲಿ ಅನಂತೇಶ್ವರ ಎಂಬ ಹೆಸರಿನ ಬಗ್ಗೆ ನಾಲ್ಕು ಮಾತನ್ನು ಹೇಳುವುದು ಅಪ್ರಸ್ತುತವಾಗಲಾರದು. ಈ ಬಗ್ಗೆ ಅನಗತ್ಯ ವಾದ ಹಾಗೂ ತಪ್ಪು ಊಹೆಗೆ ಎಡೆಮಾಡಿಕೊಡುವ ವಿವಾದ, ಚರ್ಚೆ, ಬೇಕಷ್ಟಿದೆ. ಅನಂತೇಶ್ವರ ಎನ್ನುವುದು ಒಂದೇ ಶಬ್ದವಲ್ಲ. 'ಅನಂತ' ಮತ್ತು 'ಈಶ್ವರ' ಎನ್ನುವ ಎರಡು ಹೆಸರುಗಳನ್ನು ಒಳ ಗೊಂಡಿರುವ ದ್ವಿಶಬ್ದ. ಇಲ್ಲಿ ಅನಂತ ಶಬ್ದವನ್ನು ನಾಗ ಅಥವಾ ಶೇಷ ಶಬ್ದಕ್ಕೆ ಸಮಾನಾರ್ಥಕವಾಗಿ ತೆಗೆದುಕೊಳ್ಳಬೇಕು. (ಎಲ್ಲಾ ಪ್ರಯೋಗಾತ್ಮಕ ಉದ್ದೇಶಗಳಿಗಾಗಿ ಸ್ಕಂದ ಶಬ್ದದೊಡನೆಯೂ) ರಜತ ಪೀಠಪುರ ಅಥವಾ ಈ ಉಡುಪಿ 'ಸ್ಕಂದ' (ಸುಬ್ರಹ್ಮಣ್ಯ) ಪೂಜೆಗೆ ಹೆಸರುವಾಸಿಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಸ್ಕಂಧ ಮತ್ತು ನಾಗನ ನಡುವೆ ವ್ಯತ್ಯಾಸವಿಲ್ಲ. ಉಡುಪಿಯ ಈ ಪ್ರಸಿದ್ಧ ಶಿವ ದೇವಾಲಯ ಕೂಡ ಬಹಳ ಕಾಲದಿಂದಲೂ ಸ್ಕಂದನೊಂದಿಗೆ ಹೆಸರಿಸಲ್ಪಟ್ಟಿರುವುದರಿಂದ, ನನ್ನ ಅಭಿಪ್ರಾಯದಂತೆ ಶಿವನಿಗೆ ಅನಂತೇಶ್ವರ ಎನ್ನುವುದು ಅನ್ವರ್ಥನಾಮ. ಈ ಅಭಿಪ್ರಾಯದ ಪುಷ್ಟಿಗಾಗಿ, ನಾವು ಪುತ್ತೂರು ತಾಲೂಕಿನ ಬಳ್ಳಮಂಜದಲ್ಲಿರುವ ಮತ್ತು ಕಾಸರಗೋಡು ತಾಲೂಕಿನ ಮಂಜೇಶ್ವರ ದಲ್ಲಿರುವ ಅನಂತೇಶ್ವರನತ್ತ ಗಮನ ಹರಿಸಬಹುದು. ಸುಬ್ರಹ್ಮಣ್ಯ ದೇವರ ಕುರಿತೇ ಇರುವ ಕುಕ್ಕೆ ಲಿಂಗ ಎನ್ನುವ ಹೆಸರು 'ಅನಂತೇಶ್ವರ'ದ ಬಗ್ಗೆಯೆ ಇರಬೇಕು ಎನ್ನುವ ವಾದ ಬರೀ ಊಹೆಯಲ್ಲ (ಏಕೆಂದರೆ ಕುಕ್ಕೆಸ್ಕಂದ; ಲಿಂಗ-ಶಿವ)

ಆಶ್ಚರ್ಯಕರ ವಿಷಯವೆಂದರೆ, ಕ್ರಿ.ಶ. 17-18ನೆಯ ಶತಮಾನಕ್ಕೆ ಮೊದಲಿನ ಯಾವ ಶಾಸನ ವಾಗಲಿ ಸಾಹಿತ್ಯವಾಗಲಿ ಉಡುಪಿಯ ಈ ದೇವತೆಯನ್ನು ಅನಂತೇಶ್ವರ ಎಂದು ಹೇಳಿಲ್ಲ. ಶಾಸನ ಗಳಲ್ಲಿ ಅನಂತೇಶ್ವರನನ್ನು ಉಡುಪಿಯ ಮಹಾದೇವ ಎಂದೇ ಕರೆಯಲಾಗಿದೆ.

ಈ ಅನಂತೇಶ್ವರನನ್ನು ಅನಂತ ಪದ್ಮನಾಭ (ಅನಂತಾಸನ) ಎಂದು ಕರೆಯುವ ಕ್ರಮ ಪ್ರಾರಂಭ ವಾದ್ದು ಮಾಧ್ವಮತದ ಸ್ಥಾಪನೆಯ ಬಳಿಕ. ಇಲ್ಲಿ ಕೂಡ, ನನ್ನ ಅಭಿಪ್ರಾಯದಂತೆ, ಕ್ರಿ.ಶ. 16ನೆಯ ಶತಮಾನದ ಬಳಿಕ. ಶ್ರೀ ಸುಮಧ್ವವಿಜಯದಲ್ಲಿ ಉಲ್ಲೇಖವಾಗಿರುವ ಭುಜಂಗಶಯನ, ವಿಷ್ಣು, ಶ್ರೀವಲ್ಲಭ, ಮುಕುಂದ, ನಾರಾಯಣ–ಈ ಶಬ್ದಗಳು ಅನಂತೇಶ್ವರ ದೇವಸ್ಥಾನದ ಮುಖ್ಯದೇವರಾದ ಶಿವನಿಗೆ ಅನ್ವಯಿಸುವುವೆಂದು ನಾನು ಹೇಳಲಾರೆ. ಬದಲಾಗಿ ಅವು ಶ್ರೀಕೃಷ್ಣನಿಗೆ ಅನ್ವಯಿಸುತ್ತವೆ. ಮತ್ತು ಮಧ್ವಾಚಾರ್ಯರ ತಂದೆಯವರು ಶ್ರೀಕೃಷ್ಣನನ್ನು ಆರಾಧಿಸುತ್ತಿದ್ದಿರಬೇಕು. ಉಪದೇವರುಗಳಿಂದಾಗಿ ಮುಖ್ಯದೇವರಿಗೆ ಮಹತ್ವವಿರುವ ದೇವಸ್ಥಾನಗಳ ಹಲವಾರು ಉದಾಹರಣೆಗಳು ನಮ್ಮ ಜಿಲ್ಲೆಯಲ್ಲೇ ಸಾಕಷ್ಟು ಇವೆ. ಆದ್ದರಿಂದ ವಿಷ್ಣು ದೇವರು ಒಂದು ಲಿಂಗದ ರೂಪದಲ್ಲಿ ಅವತರಿಸಿದರು ಅಥವಾ 'ಅನಂತೇಶ್ವರ' ಎನ್ನುವುದು 'ಅನಂತಾಸನವೇ' ಎನ್ನುವುದು ಹುರುಳಿಲ್ಲದ ವಾದ. ಈ ಮೊದಲು ವಿಷ್ಣು ವನ್ನು 'ಅನಂತಾಸನ' ಅಥವಾ 'ಭುಜಂಗಶಯನ' ಎಂದು ಕರೆದಿರುವುದು ಪ್ರಾಚೀನ ಸಂಸ್ಕೃತಸಾಹಿತ್ಯ ದಲ್ಲಿ ಕಂಡುಬರುವುದಿಲ್ಲ. ಅಷ್ಟೇ ಅಲ್ಲದೆ ಅನಂತೇಶ್ವರ ದೇವಸ್ಥಾನದ ಎದುರಿಗಿದ್ದ ನಂದಿಯನ್ನು ಅಲ್ಲಿಂದ ತೆಗೆದಿದ್ದಾರೆ, ಎನ್ನುವ ಮಾತನ್ನು ನಂಬಬೇಕಾಗುತ್ತದೆ. ಏಕೆಂದರೆ ಅನಂತೇಶ್ವರ ದೇವಸ್ಥಾನ ದಿಂದ ತಂದದ್ದೆನ್ನಲಾಗುವ ಒಂದು ಸುಂದರವಾದ ನಂದಿಯ ವಿಗ್ರಹ ಉಡುಪಿಯ ಸಮೀಪದ ಹರಿತ ಎಂಬ ಊರಲ್ಲಿ ಇದೆ.

ಇತಿಹಾಸಪ್ರಿಯ ಹಾಗೂ ಧರ್ಮಪ್ರಿಯ ಓದುಗರ ಮುಂದೆ ಇನ್ನೊಂದು ಮುಖ್ಯ ವಿಚಾರವನ್ನು ಇಡುತ್ತೇನೆ. ಉಡುಪಿಯ ಸಮೀಪದ ಹಳ್ಳಿಯಾದ ಪಣಿಯಾಡಿಯಲ್ಲಿ ಶ್ರೀ ಅನಂತಪದ್ಮನಾಭ ದೇವರಿಗೆ ಅರ್ಪಿತವಾದ ಒಂದು ಚಿಕ್ಕ ದೇವಾಲಯವಿದೆ. ಇಲ್ಲಿಯ ಪ್ರತಿಮೆ ಬಹು ಆಕರ್ಷಕವಾಗಿದೆ. ಈ ಅನಂತಪದ್ಮನಾಭ ಬಿಂಬ ಅನಂತನ(ಶೇಷ) ಸುರುಳಿಯ ಮೇಲೆ ಕೂತಿದೆ. ಈ ಹಾವಿನ ಏಳು ಹೆಡೆಗಳು ದೇವರ ತಲೆಯ ಮೇಲೆ ಇವೆ. ಹೆಡೆಗಳು ರಕ್ಷಣೆಯ ನೆರಳನ್ನು ನಿರ್ಮಿಸಿವೆ. ದೇವರನ್ನು ಲಲಿತ ಭಂಗಿಯಲ್ಲಿ ಕೆತ್ತಲಾಗಿದೆ. ಶಂಖ. ಚಕ್ರ. ಗದಾ, ಪದ್ಮಧಾರಿಯಾಗಿದೆ. ಈ ಮೂರ್ತಿ. ಈಗ ಸಂಪ್ರದಾಯ ಹೇಳುವಂತೆ, ಶ್ರೀ ಅನಂತೇಶ್ವರ ದೇವರ ಅರ್ಚಕರಾಗಿದ್ದ ಮಾಧವ ಕುಂಜತ್ತಾಯ ಎಂಬವರೊಬ್ಬರಿಗೆ ಭಾರಿ ನೆರೆಯಿಂದಾಗಿ ಕೆಲವು ದಿನಗಳ ವರೆಗೆ ದೇವಸ್ಥಾನಕ್ಕೆ ಹೋಗಲು ಆಗಲಿಲ್ಲ. ಆಗ ಅವರು ಅನಂತೇಶ್ವರ ದೇವರ ದರ್ಶನವಾಗದ ಹೊರತು ಆಹಾರ ತೆಗೆದುಕೊಳ್ಳುವುದಿಲ್ಲ ಎಂದು ಪ್ರತಿಜ್ಞೆ ಮಾಡಿದರಂತೆ. ಒಂದು ರಾತ್ರಿ ಅವರಿಗೊಂದು ಕನಸು ಬಿತ್ತು. ಕನಸಿನಲ್ಲಿ ಕೆರೆಯೊಂದರಲ್ಲಿ ಶ್ರೀ ಅನಂತಪದ್ಮನಾಭನ ಮೂರ್ತಿ ಇರುವುದಾಗಿಯೂ ಆ ಮೂರ್ತಿಯನ್ನು ತಂದು ದೇವಸ್ಥಾನ ಒಂದರಲ್ಲಿ ಪ್ರತಿಷ್ಠಾಪಿಸಬೇಕೆಂದೂ ಆದೇಶವಾಯ್ತಂತೆ. ಅವರು ಅಂತೆಯೇ ಮಾಡಿದರು. ಶ್ರೀ ನಾರಾಯಣ ಪಂಡಿತಾಚಾರ್ಯರಿಂದ ರಚಿತವಾಗಿರುವ 'ಶ್ರೀ ಸುಮಧ್ವವಿಜಯಭಾವ ಪ್ರಕಾಶಿಕಾ'ದಲ್ಲೂ ಈ ಕುಂಜಮಾಧವ ಮತ್ತು ನಾರಾಯಣ ದೇವರ ಬಗ್ಗೆ ಉಲ್ಲೇಖವಿದೆ. ಈ ಕೃತಿ ರಚಿತವಾದ ಕಾಲ ಕ್ರಿ.ಶ. 14ನೆಯ ಶತಮಾನ. ಮೂಲಭೂತವಾದ ತಾರ್ಕಿಕತೆಗೆ ಇಲ್ಲಿ ಅವಕಾಶವಿದೆ. ಉಡುಪಿಯ ಈ ಕುಂಜತ್ತಾಯ ಬ್ರಾಹ್ಮಣ ಕುಟುಂಬದವರು ಅನಂತೇಶ್ವರ ದೇವಸ್ಥಾನದ ಉಪದೇವರಾದ ಶ್ರೀ ಕೃಷ್ಣನ ಆರಾಧಕರಾಗಿದ್ದಿರಬೇಕು. ಈ ಕೃಷ್ಣನನ್ನು ಇಂದಿಗೂ ಕುಂಜತ್ತಾಯ ಕೃಷ್ಣ ಎಂದೇ ಕರೆಯಲಾಗುತ್ತಿದೆ. ಪ್ರಾಯಶಃ ಮಾಧವ ಕುಂಜತ್ತಾಯರು ಈ ಕೃಷ್ಣನ ಆರಾಧಕರಾಗಿರಬೇಕು. ಹಾಗೂ ಪಣಿಯಾಡಿಯ ಅನಂತಪದ್ಮನಾಭ ಶ್ರೀ ಕೃಷ್ಣನಿಗೆ ಸಂಬಂಧಿಸಿರಬೇಕೇ ಹೊರತು. ಅನಂತೇಶ್ವರದ ಮುಖ್ಯ ದೇವರಾದ ಶಿವನಿಗಲ್ಲ.

ಕುಂಜತ್ತಾಯ ಮತ್ತು ನಡ್ವಂತಿಲ್ಲಾಯ ಎರಡೂ ಕುಟುಂಬಗಳವರು ಶ್ರೀ ಕೃಷ್ಣನ ಪರಮ ಆರಾಧಕರಾಗಿದ್ದರು. ಅಲ್ಲದೆ ಮಧ್ವಾಚಾರ್ಯರ ತಂದೆಯವರಾದ ಮಧ್ಯಗೇಹ ಭಟ್ಟರು ಶ್ರೀ ಕೃಷ್ಣನನ್ನು ಪೂಜಿಸುತ್ತಿದ್ದರೆಂದೂ ಈ ಕೃಷ್ಣನೇ ವಾಸುದೇವ. ವಿಷ್ಣು. ನಾರಾಯಣ. ಶ್ರೀವಲ್ಲಭ. ಮುಕುಂದ ಮತ್ತು ಭುಜಂಗಶಯನ ಎಂದು ಕರೆಯಲ್ಪಡುತ್ತಿದ್ದನೆಂದೂ ನಾನು ನಂಬುತ್ತೇನೆ. ಬಹುಶಃ ಶ್ರೀ ಮಧ್ವಾಚಾರ್ಯರಿಗೆ ಈ ಕಾರಣಕ್ಕಾಗಿಯೇ ವಾಸುದೇವ ಎಂದು ನಾಮಕರಣ ಮಾಡಿರಬೇಕು; ವಾಸುದೇವ ಅಥವಾ ಪರವಾಸುದೇವನನ್ನು ಹನ್ನೆರಡು ವರ್ಷಗಳ ಕಾಲ ಪೂಜಿಸಿದ್ದರ ಫಲವಾಗಿ ಮಧ್ವಾಚಾರ್ಯರ ಜನನವಾಯ್ತು.

ಉಡುಪಿಯಲ್ಲಿರುವ ಇನ್ನೊಂದು ದೇವಸ್ಥಾನ ಚಂದ್ರ ಮೌಳೀಶ್ವರ ದೇವಸ್ಥಾನ. ಈ ದೇವಸ್ಥಾನವೂ ಶಿವ ದೇವಸ್ಥಾನವೇ ಆಗಿದ್ದು ಅನಂತೇಶ್ವರ ದೇವಸ್ಥಾನದ ಎದುರಿನಲ್ಲೇ ಇದೆ. ಈ ದೇವಸ್ಥಾನವನ್ನು ಯಾವ ಕಾರಣಕ್ಕಾಗಿ ಬಹಳ ತಗ್ಗು ಪ್ರದೇಶದಲ್ಲಿ ರಚಿಸಿದರು ಎಂದು ಹೇಳುವುದು ಸುಲಭವಲ್ಲ. ಸಂಪ್ರದಾಯ ಇದಕ್ಕೂ ಒಂದು ಕಥೆ ಹೇಳುತ್ತದೆ: ಆದರೆ ಅದು ನಮ್ಮ ತಾರ್ಕಿಕತೆಗೆ ನಿಲುಕುವುದಿಲ್ಲ. ಆದರೂ ಈಗ ಈ ದೇವಸ್ಥಾನ ಇರುವ ಸ್ಥಳದಲ್ಲಿ ಹಿಂದೆ ಅನಂತೇಶ್ವರ ದೇವಸ್ಥಾನದ ಕೆರೆ ಇತ್ತೆನ್ನುವುದು ನಿಸ್ಸಂದೇಹ. ಇಲ್ಲೂ (ಅನಂತೇಶ್ವರ ದೇವಸ್ಥಾನದ ಕುರಿತು ಇರುವಂತೆಯೇ) ಈ ದೇವಸ್ಥಾನ ಮೊದಲ ಜೈನ ತೀರ್ಥಂಕರನಾದ ಚಂದ್ರನಾಥಸ್ವಾಮಿಯ ಬಸದಿಯಾಗಿದ್ದಿರಬೇಕೆಂಬ. ಅನಂತರ ಶಿವ ದೇವಾಲಯವಾಗಿ ಪರಿವರ್ತಿತವಾಗಿರಬೇಕೆಂಬ ಊಹೆಯೊಂದು ಇದೆ. ಆದರೆ ಇದು ಆಧಾರವಿಲ್ಲದ ಊಹೆ. ಚಂದ್ರೇಶ್ವರ ಎನ್ನುವುದು ಚಂದ್ರಮೌಳೀಶ್ವರ ಎನ್ನುವುದಕ್ಕೆ ಇರುವ ಇನ್ನೊಂದು ಹೆಸರು. ದೇವಸ್ಥಾನ ದಕ್ಷಿಣ ಕನ್ನಡದ ದೇವಸ್ಥಾನದ ಸಾಮಾನ್ಯ ರಚನಾ ಶೈಲಿಗೆ ಸಾಕ್ಷಿ. ಈ ದೇವಸ್ಥಾನಕ್ಕೆ ಚೌಕಾಕೃತಿಯ ಒಂದು ಗರ್ಭಗೃಹವಿದೆ. ಸಪುರವಾದ ಸುತ್ತು, ಒಂದು ಮುಖಮಂಟಪ ಮತ್ತು ಒಂದು ತೀರ್ಥಮಂಟಪ ಇವೂ ಇವೆ. ವಾಸ್ತುಶಿಲ್ಪ ಬಹಳ ಸರಳವಾಗಿದೆ. ಈ ದೇವಾಲಯ ಮುರಕಲ್ಲಿನಿಂದ ನಿರ್ಮಿತವಾಗಿದೆ; ಮಾಡು ತಾಮ್ರದ ತಗಡಿನಿಂದ ಮುಚ್ಚಲ್ಪಟ್ಟಿದೆ. ಈ ದೇವಸ್ಥಾನ ನಿರ್ಮಾಣವಾದ ಕಾಲ ಕ್ರಿ.ಶ.ಸು.

11–12ನೆಯ ಶತಮಾನ ಎನ್ನಬಹುದು. ದೇವಸ್ಥಾನದ ಮುಂದುಗಡೆ ಇರುವ ಪ್ರಧಾನ ಬಲಿಪೀಠ ಅನಂತೇಶ್ವರ ದೇವಸ್ಥಾನದ ಎದುರಿಗಿರುವ ಬಲಿಪೀಠದಷ್ಟು ದೊಡ್ಡದು ಮತ್ತು ಹಳೆಯದಲ್ಲ.

ಉಡುಪಿಯಲ್ಲಿ ಇರುವ ದೇವಸ್ಥಾನಗಳ ಪೈಕಿ, ಶ್ರೀಕೃಷ್ಣಮಠ ಮೇಲೆ ಹೇಳಿದ ಎರಡು ದೇವಸ್ಥಾನಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರನ್ನು ಆಕರ್ಷಿಸುತ್ತದೆ. ಅದರ ಹೆಸರು ದೇಶವ್ಯಾಪ್ತವಾಗಿ ತಿಳಿದಿದೆ, ಇದಕ್ಕೆ ಕಾರಣ, ವೈಷ್ಣವ ಸಿದ್ಧಾಂತ ಪ್ರತಿಷ್ಠಾಪನಾಚಾರ್ಯರಾದ ಶ್ರೀ ಮಧ್ವಾಚಾರ್ಯರು ಇಲ್ಲಿ ಶ್ರೀ ಕೃಷ್ಣನ ವಿಗ್ರಹ ಒಂದನ್ನು ಪ್ರತಿಷ್ಠಾಪಿಸಿದಂತೆ ಕಂಡು ಬರುತ್ತದೆ. ಈ ವಿಗ್ರಹವನ್ನು ಅಂದಿನಿಂದ ಮಧ್ವ ಪೀಠದ ಯತಿಗಳು ಪೂಜಿಸುತ್ತಾ ಬಂದಿದ್ದಾರೆ. ಶ್ರೀಕೃಷ್ಣಮಠ ಅನಂತೇಶ್ವರ ದೇವಾಲಯದ ಈಶಾನ್ಯ ದಿಕ್ಕಿನಲ್ಲಿದೆ.

ಈ ಸರಳವಾಸ್ತುವಿನ ಬಗ್ಗೆ, ಇತಿಹಾಸದ ದೃಷ್ಟಿಯಿಂದ, ಸ್ವಲ್ಪ ಹೇಳಬೇಕಾಗುತ್ತದೆ. ಅನಂತೇಶ್ವರ ದೇವಸ್ಥಾನಕ್ಕೆ ಹಿಂದೆ ಒಂದು ಶ್ರೀಕೃಷ್ಣ ಉಪದೇವಾಲಯವಿದ್ದಿರಬೇಕೆಂದು ನಾನು ಈ ಮೊದಲು ಹೇಳಿದ್ದೇನೆ. ಈ ಶ್ರೀಕೃಷ್ಣ ವಿಗ್ರಹ ಶ್ರೀ ಹಸ್ತಾಮಲಕರಿಂದ ಪ್ರತಿಷ್ಠಾಪಿತವಾಗಿರಬೇಕೆನ್ನುವುದನ್ನು ಒಪ್ಪಿಕೊಂಡರೆ, ಈ ಶ್ರೀಕೃಷ್ಣ ಪ್ರತಿಮೆ ಕರ್ನಾಟಕದಲ್ಲಿ ದೊರಕಿರುವ ಶ್ರೀಕೃಷ್ಣನ ಶಿಲಾ ಪ್ರತಿಮೆಗಳಲ್ಲಿ ಮೊತ್ತ ಮೊದಲನೆಯದು ಎಂದು ಹೇಳಬಹುದು. (ಕ್ರಿ.ಶ. 9ನೆಯ ಶತಮಾನ). ಈ ಉಪದೇವಾಲಯ ಈಗ ಇರುವಲ್ಲೇ ಮುಂಚೆಯೂ ಇತ್ತೇ ಎನ್ನುವ ವಿಷಯ ನಮಗೆ ತಿಳಿದಿಲ್ಲ. ಅದು ಈಗ ಇರುವ ಸ್ಥಳದಲ್ಲೇ ಇದ್ದಿರಲೂಬಹುದು ಅಥವಾ ಇಲ್ಲದೇ ಇರಲೂಬಹುದು. ಆದರೆ ಅನಂತೇಶ್ವರ ದೇವಸ್ಥಾನವನ್ನು ಸುತ್ತುವರಿದಿರುವ ಇಡೀ ಜಾಗ ಅನಂತೇಶ್ವರನಿಗೆ ಸೇರಿತ್ತು ಎನ್ನುವುದು ನಿರ್ವಿವಾದದ ವಿಷಯ. ಮಧ್ವಮತದ ಉದಯವಾದ ಅನಂತರ, ಶ್ರೀಮಧ್ವಾಚಾರ್ಯರು ಅದೃಶ್ಯರಾಗುವುದಕ್ಕೆ ಸ್ವಲ್ಪ ಸಮಯದ ಮೊದಲು, ಈಗಿನ ಶ್ರೀಕೃಷ್ಣ ಪ್ರತಿಮೆಯನ್ನು ಉಡುಪಿ ಅಂದರೆ ರೌಪ್ಯಪೀಠದಲ್ಲಿ ಪ್ರತಿಷ್ಠಾಪಿಸಲಾಯಿತು ಎಂದು ಹೇಳುತ್ತಾರೆ. ಈ ಪ್ರತಿಷ್ಠಾಪನೆ ಯಾವಾಗ ಆಯಿತೆನ್ನುವುದು ನಮಗೆ ತಿಳಿದಿಲ್ಲ. ಶ್ರೀ ಸುಮಧ್ವವಿಜಯ ಹೇಳುವುದಿಷ್ಟನ್ನೆ: ಶ್ರೀ ಮಧ್ವಾಚಾರ್ಯರು ಶ್ರೀಕೃಷ್ಣನ ಪ್ರತಿಮೆಗೆ ಪ್ರತ್ಯೇಕವಾದ ಒಂದು ದೇವಾಲಯವಾಗಬೇಕೆಂದು ಮನಗಂಡು ಆ ಪ್ರತಿಮೆಯನ್ನು ನಾಲ್ವರು ವಿದ್ವಾಂಸರು ಪರೀಕ್ಷಿಸಿದ ಬಳಿಕ ಸರೋವರದಲ್ಲಿ ತೊಳೆದು, ಪ್ರತ್ಯೇಕವಾಗಿ ಅದನ್ನು ಪ್ರತಿಷ್ಠಾಪಿಸಿದರು.

ಆದರೆ ಆಶ್ಚರ್ಯದ ವಿಷಯವೆಂದರೆ ಶ್ರೀ ಸುಮಧ್ವವಿಜಯವಾಗಲಿ ವಾದಿರಾಜರಿಂದ ರಚಿತವಾಗಿರುವ ತೀರ್ಥಪ್ರಬಂಧವಾಗಲಿ ಈ ಪ್ರತಿಮೆ ಗೋಪಿಯ ತುಂಡಿನಲ್ಲಿರಿಸಲ್ಪಟ್ಟು ಅರಬ್ಬೀ ಸಮುದ್ರದ ಮೂಲಕವಾಗಿ ಬಂತೆನ್ನುವುದಾಗಿ ಹೇಳುವುದೇ ಇಲ್ಲ. ಈ ವಾದದ ವಿಷಯ ಆಧಾರರಹಿತವಾದ್ದು ಎನ್ನುವುದನ್ನು ನಾನು ನನ್ನ ಇತ್ತೀಚಿನ ಲೇಖನ ಒಂದರಲ್ಲಿ ಹೇಳಿದ್ದೇನೆ. ಏಕೆಂದರೆ ವಡ-ಭಾಂಡೇಶ್ವರ ದೇವಸ್ಥಾನದಲ್ಲಿ (ಮಲ್ಪೆಯ ಸಮೀಪ) ದೇವರು ಸಾಮಾನ್ಯವಾಗಿ ಎಲ್ಲರೂ ತಿಳಿದಿರುವಂತೆ ಬಲರಾಮನಲ್ಲ. ಬದಲಾಗಿ ಅದು ಸ್ಕಂದ. ಆದ್ದರಿಂದ ಬಲರಾಮನ ಮೂರ್ತಿ ಗೋಪಿಯ ಉಂಡೆಯಲ್ಲಿ ಬಂದದ್ದಲ್ಲವಾದಲ್ಲಿ ಶ್ರೀಕೃಷ್ಣನಮೂರ್ತಿಯೂ ಹಾಗೆ ತರಲ್ಪಟ್ಟದ್ದಲ್ಲ ಎನ್ನುವುದನ್ನು ಈಗ ನಾವು ನಿಶ್ಚಿತವಾಗಿ ಹೇಳಬಹುದು. (ಪ್ರಚಲಿತವಿರುವ ಕಥೆ ಹೀಗಿದೆ: ಗೋಪಿಯ ಎರಡು ಉಂಡೆಗಳು ಹಡಗಿನಲ್ಲಿ ಬಂದುವು. ಒಂದರಲ್ಲಿ ಬಲರಾಮನ ಮೂರ್ತಿಯೂ ಇನ್ನೊಂದರಲ್ಲಿ ಕೃಷ್ಣನ ಮೂರ್ತಿಯೂ ಇದ್ದುವು. ಒಂದನ್ನು ವಡಭಾಂಡೇಶ್ವರದಲ್ಲೂ ಇನ್ನೊಂದನ್ನು ಉಡುಪಿಯಲ್ಲೂ ಪ್ರತಿಷ್ಠಾಪಿಸಲಾಯಿತು.) ಶ್ರೀ ಕೃಷ್ಣ ಪ್ರತಿಮೆ (ಪ್ರಾಚೀನ) ವಾಸ್ತುಶಿಲ್ಪ ಲಕ್ಷಣಗಳಿಂದ ಕೂಡಿದೆ. ಈ ಶ್ರೀಕೃಷ್ಣ ಕೌಪೀನಧಾರಿ ಕೃಷ್ಣ. ಮೂರ್ತಿಯ ಲಕ್ಷಣಗಳು ಈ ಮೂರ್ತಿ ಏನಿಲ್ಲೆಂದರೂ ಏಳೆಂಟನೇ ಶತಮಾನದ್ದಾಗಿರಬೇಕು ಎನ್ನುವುದನ್ನು ಸೂಚಿಸುತ್ತವೆ. ಇದು ಇಲ್ಲಿಯೇ ಇದ್ದ ಮೂರ್ತಿಯೇ ಅಥವಾ ಹೊರಗಿನಿಂದ ತರಲ್ಪಟ್ಟದ್ದೇ ಎನ್ನುವುದನ್ನು ಇನ್ನು ಶೋಧಿಸಬೇಕಾಗಿದೆ. ಈ ದಿಸೆಯಲ್ಲಿ, ಸಾಹಿತ್ಯ, ಶಿಲ್ಪ ಮತ್ತು ಪ್ರತಿಮಾವಿಜ್ಞಾನದ ಯೋಗ್ಯ ಅಭ್ಯಾಸ ನಮಗೆ ಸಹಾಯಕವಾಗಬಲ್ಲ ಐತಿಹಾಸಿಕ ಮೂಲ. ಗೋವೆಯಲ್ಲಿ, ಇದೇ ತರದ ಎರಡು ಮೂರ್ತಿಗಳಿವೆ. ಶ್ರೀಕೃಷ್ಣನಿಗೆ ಯಾವಾಗಲೂ ಹೇಳುವ ಪ್ರಾರ್ಥನೆಯಂತೆ ಈ ಕೃಷ್ಣನ ಬಲಗೈಯಲ್ಲಿ ಒಂದು ದಂಡ (ಕೋಲು) ಇದೆ. ಇದನ್ನು ಶ್ರೀ ವಾದಿರಾಜ ಸ್ವಾಮಿಗಳು ಕಡೆಗೋಲು ಎಂದು ಕರೆಯುತ್ತಾರೆ.

1395-96ಕ್ಕೆ ಬಾರಕೂರಿನ ವಿಜಯನಗರದ ರಾಜ್ಯಪಾಲರಾದ ಮಲ್ಲಪ್ಪ ಒಡೆಯರೆಂಬವರು ಶ್ರೀ ಕೃಷ್ಣದೇವರ ಮುಂಭಾಗದಲ್ಲಿ ಮಂಟಪವನ್ನೂ ತೊಳಸಿವೃಂದಾವನವನ್ನೂ ಕಟ್ಟಿಸಿದರೆಂಬ ಉಲ್ಲೇಖ ಶ್ರೀಕೃಷ್ಣಮಠದಲ್ಲಿ ದೊರಕಿದ ಶಾಸನದಲ್ಲಿದೆ. ದೇವರ ಮುಂಭಾಗ ಪಶ್ಚಿಮದಿಕ್ಕಾಗಿದೆ. ಹಾಗಾದರೆ ಕನಕದಾಸರ ಸಂಬಂಧವಾದ ಕತೆಯಲ್ಲಿ ಯಾವ ಹುರುಳೂ ಇಲ್ಲದಂತಾಯಿತು. 17ನೆಯ ಶತಮಾನದ ಅನಂತರ ಯಾವುದೋ ಸಂದರ್ಭದಲ್ಲಿ ಹುಟ್ಟಿಕೊಂಡ ಕಟ್ಟುಕತೆ ಇದು.

ಶ್ರೀಕೃಷ್ಣಮಠದ ರಚನೆ ಮೂರು ಬಾರಿ ಬದಲಾಗಿದೆ. 1437ರಲ್ಲಿ. 1614ರಲ್ಲಿ ಮತ್ತು ಕಳೆದ ಶತಮಾನದಲ್ಲಿ. ಆದ್ದರಿಂದ ಖಚಿತವಾಗಿ ದೇವಸ್ಥಾನದ ಮೂಲರಚನೆ ಹೇಗಿತ್ತೆಂದು ಹೇಳುವುದು ಕಷ್ಟದ ಕೆಲಸ. 1437ರ ಶಾಸನ ಬಾರಕೂರು ರಾಜ್ಯದ ವಿಜಯನಗರದ ಮಾಂಡಲಿಕ ನಡೆಸಿದ ಧಾಳಿಯನ್ನು ಶಿವಳಿ ಸಮರ್ಥವಾಗಿ ಎದುರಿಸಿತು ಎಂದು ಹೇಳುತ್ತದೆ. ಇದರ ಪರಿಣಾಮವಾಗಿ ಶ್ರೀಕೃಷ್ಣನ ಮೂರ್ತಿ ಹೊರಗಿಡಲ್ಪಟ್ಟಿತು. ಇದಕ್ಕೆ ಪ್ರಾಯಶ. ಪರಿಹಾರರೂಪವಾಗಿ. ಮಠಕ್ಕೆ ಸಾಕಷ್ಟು ಭೂಮಿಯನ್ನು ಶಿರಿಗ್ರಾಮದಲ್ಲಿ ಉಂಬಳಿಯಾಗಿ ಕೊಡಲಾಯ್ತು ಎಂದೂ ಈ ಶಾಸನದಿಂದ ತಿಳಿದುಬರುತ್ತದೆ. ಆದ್ದರಿಂದ. ಮೂರ್ತಿ ಪುನಃ ಪ್ರತಿಷ್ಠಾಪನೆಯಾದಾಗ ದೇವಸ್ಥಾನದ ರಚನೆ ಸ್ವಲ್ಪ ಬದಲಾಗಿರಬೇಕೆಂದು ನಾವು ಊಹಿಸಬಹುದಾಗಿದೆ. 1614ರ ಎರಡು ಶಾಸನಗಳು ಐತಿಹಾಸಿಕ ಮತ್ತು ಸಾಮಾಜಿಕ ದೃಷ್ಟಿಯಿಂದ ಬಹಳ ಕುತೂಹಲಜನಕ ಮತ್ತು ಮುಖ್ಯವಾಗಿವೆ. ಅವುಗಳಲ್ಲಿ ಶಕ 1536 ಪ್ರಮಾದಿ ಸಂವತ್ಸರದ ಒಂದು ಶಾಸನ. ಕೌಶಿಕ ಗೋತ್ರದ ಋಕ್ ಶಾಖೆಯ ಸಾಸಷ್ಟೀ ಗ್ರಾಮದ ದಾಮ್ ಪ್ರಭುವಿನ ಮಗನಾದ ದಾಮರ್ಸ ಪ್ರಭು ಶ್ರೀ ಕೃಷ್ಣನಿಗೆ ಒಂದು ದತ್ತಿ ನೀಡಿದ್ದನೆಂದು ಹೇಳುತ್ತದೆ. ಇದನ್ನು ಅವನು ಅವನ ಹಿರಿಯ ಚಿಕ್ಕಪ್ಪನಾದ ರಂಗಪ್ರಭುವಿಗೆ ಅಕ್ಷಯ ಪುಣ್ಯಲೋಕ ಪ್ರಾಪ್ತಿಯಾಗಲೆಂದು ಮಾಡಿದ. ಅವನು ಕೊಟ್ಟ ದತ್ತಿಯ ವಿವರಗಳು ಹೀಗಿವೆ:

1 ಶ್ರೀಕೃಷ್ಣನಿಗೆ ಶಾಶ್ವತವಾಗಿ ದಿನ ಒಂದಕ್ಕೆ 2 ಹಾನೆಯಂತೆ ಹರಿವಾಣ ನೈವೇದ್ಯ ನಡೆಸಲು, ವರ್ಷ ಒಂದಕ್ಕೆ ಒಟ್ಟು 18 ಮುಡಿ

2 ಅನ್ನ ಶುದ್ಧಿಗಾಗಿ ವರ್ಷಕ್ಕೆ 2 ಮುಡಿ

3 ಯತಿಭಿಕ್ಷೆ ಮತ್ತು ದಶಮಿ ದಿನಗಳಲ್ಲಿ ಉತ್ಸವಕ್ಕಾಗಿ ವರ್ಷಕ್ಕೆ 12 ಮುಡಿ
ವರ್ಷ ಒಂದಕ್ಕೆ 50 ಹಾನೆಗಳ ಒಟ್ಟು 32 ಮುಡಿ. ಇದನ್ನು ಕೊಡುವುದಕ್ಕಾಗಿ, ಆರು ವಾರದ ಮೇಲೆ 160 ದೊಡ್ಡ ವರಹ ಗದ್ಯಾಣಗಳು

ದಾಸರ ದಾಮಪ್ರಭುವಿನ (ಇವರು ಬಹುಶಃ ಮೇಲಿನ ದಾಮ್ ಪ್ರಭುವೇ ಇರಬೇಕು) ಮಗನಾದ ಗೋವಿಂದ ಪ್ರಭು ಎಂಬವರು ತಮ್ಮ ತಂದೆತಾಯಿಗಳ ಒಳಿತಿಗಾಗಿಯೂ.ತಮ್ಮ ಮಕ್ಕಳ ಶ್ರೇಯೋಭಿವೃದ್ಧಿಗಾಗಿಯೂ ಶ್ರೀಕೃಷ್ಣನಿಗೆ ದತ್ತಿಕೊಟ್ಟರೆಂದೂ ಶಾಸನ ತಿಳಿಸುತ್ತದೆ. ಅಷ್ಟೇ ಅಲ್ಲದೆ ಇದೇ ಗೋವಿಂದ ಪ್ರಭು ಶ್ರೀಕೃಷ್ಣ ಮಠದ ಜೀರ್ಣೋದ್ಧಾರಕ್ಕೆ ಈ ಕೆಳಗಿನವುಗಳ ಖರ್ಚನ್ನು ಕೊಟ್ಟು ಸಹಾಯಮಾಡಿದರೆಂದೂ ಹೇಳುತ್ತದೆ:

1 ಗುಂಡೋತ್ತರ ತಳಗಲ್ಲು. 2 ಪಾಣಿಪೀಠ. 3 ಚೌಕದ ಭಿತ್ತಿ. 4 ದ್ವಾರಬಂಧ. 5 ತೊಲೆ ಮತ್ತು 6 ತೊಲೆಯ ಮುಚ್ಚಳ. ಇಷ್ಟೇ ಅಲ್ಲದೆ ಶ್ರೀಕೃಷ್ಣನ ಪೂಜೆ ಮಾಡಿದ ಬಳಿಕ ಆಚಾರ್ಯರ ಸಂತರ್ಪಣೆಗಾಗಿ ದಿನ ಒಂದರ ಒಂದು ಹಾನೆಯಂತೆ ವರ್ಷ ಒಂದಕ್ಕೆ 7 ಮುಡಿ 10 ಹಾನೆ ಮತ್ತು ದೇವರ ಮುಂದೆ ತೆಂಗಿನೆಣ್ಣೆಯ ಒಂದು ನಂದಾದೀಪಕ್ಕಾಗಿ ವರ್ಷ ಒಂದಕ್ಕೆ 4 ಮುಡಿಗಳನ್ನು ಆತ ಕೊಟ್ಟಿದ್ದಾನೆ. ಇದನ್ನು 55 ದೊಡ್ಡ ವರಹಗಳ ಮೂಲಕ ಕೊಟ್ಟಿದ್ದಾನೆ.

ಎರಡನೆಯ ಶಾಸನವೂ ಶಕ 1536ರದು. ಆದರೆ ಆನಂದ ಸಂವತ್ಸರದ್ದು (ಪುಷ್ಯ ಶುದ್ಧ ಶನಿವಾರ). ಇದು ಲಿಂಗಪ್ಪಯ್ಯನೆಂಬವನೊಬ್ಬ ಶ್ರೀಕೃಷ್ಣನಿಗೆ 20 ಮುಡಿ ಅಕ್ಕಿಯನ್ನು ಉಂಬಳಿಯಾಗಿ ಕೊಟ್ಟ ಬಗ್ಗೆ ತಿಳಿಸುತ್ತದೆ. ಈತ ಸೋದೆಯ ನಾರಣಪ್ಪಯ್ಯನ ಮಗ. ಉದ್ಯೋಗದಲ್ಲಿ ಚಿನ್ನದ ಕೆಲಸ ಮಾಡುವ ಆಚಾರಿ. ನಾರಣಪ್ಪಯ್ಯನನ್ನು ಭಾರದ್ವಾಜ ಗೋತ್ರದವನೆಂದೂ. ಋಕ್ ಶಾಖೆಯವನೆಂದೂ ಕೊಳಲುಗ್ರಾಮದ ಸಂಕುವಳಿ ಅಗ್ರಹಾರದ ಕೊಂಕಣ ವರ್ಗದ ಬ್ರಾಹ್ಮಣನೆಂದೂ ವರ್ಣಿಸಲಾಗಿದೆ.

ಈ ಉಂಬಳಿಯನ್ನು ನಿತ್ಯ ಅತಿರಸ (ಅತ್ರಾಸ) ನೈವೇದ್ಯ ಮತ್ತು ಒಂದು ಎಳ್ಳೆಣ್ಣೆಯ ನಂದಾದೀಪಗಳ ಬಗ್ಗೆ ಮಾಡಿರುವುದಾಗಿಯೂ ಹೇಳಲಾಗಿದೆ. ಇದರ ಖರ್ಚಿಗಾಗಿ ಲಿಖಿತವಾಗಿರುವ ಒಟ್ಟು ಮೊತ್ತ 100 ಗದ್ಯಾಣ. ಈ ಶಾಸನಗಳಿಂದ ವೇದ್ಯವಾಗುವ ವಿಚಾರಗಳಾವುವೆಂದರೆ–

1 ಗೌಡಸಾರಸ್ವತರಾದ ಈ ದಾನಿಗಳು 1614ರಲ್ಲಿ ದಕ್ಷಿಣಕನ್ನಡದಲ್ಲಿ ಬ್ರಾಹ್ಮಣರೆಂದೇ ಪರಿಗಣಿಸಲ್ಪಟ್ಟಿದ್ದರು.
2 ಈ ವರೆಗೆ ತಿಳಿದಿರುವಂತೆ ಗೌಡ ಸಾರಸ್ವತರಿಂದ ಶ್ರೀಕೃಷ್ಣನಿಗೆ ಉಂಬಳಿ ಕೊಡಲ್ಪಟ್ಟ ಬಗ್ಗೆ ನಮ್ಮ ಜಿಲ್ಲೆಯಲ್ಲಿ ವಿದಿತವಾಗಿರುವ ಶಾಸನಗಳೆಂದರೆ ಇವು ಎರಡೇ.
3 ಮಠದ ರಚನೆ 1614ರಲ್ಲಿ ಈಗ ಇರುವಂತೆಯೇ ಇತ್ತು ಎನ್ನುವುದನ್ನು ಉತ್ತರ ತಳಗಲ್ಲು ಎಂಬುದರ ವಿವರಣೆ ಸೂಚಿಸುತ್ತದೆ.

ದೇವಸ್ಥಾನದ ಜೀರ್ಣೋದ್ಧಾರ ಕುರಿತು ಹೇಳುವ ಮೂರನೆಯ ಶಾಸನ ದೇವನಾಗರೀ ಲಿಪಿಯಲ್ಲಿದ್ದು ಕಳೆದ ಶತಮಾನದ್ದಾಗಿರುತ್ತದೆ.

14ನೆಯ ಶತಮಾನದ ಇನ್ನೊಂದು ಶಾಸನ ಅತಿ ಕುತೂಹಲದಾಯಕವಾಗಿದ್ದು, ಐತಿಹಾಸಿಕ ನಂಬಿಕೆಗೆ ಯೋಗ್ಯವಾಗಿದೆ. ಈ ಶಾಸನ, ಶ್ರೀಕೃಷ್ಣನ ಎದುರಿಗಿರುವ ತೀರ್ಥಮಂಟಪ ಮತ್ತು ತುಳಸೀ ವೃಂದಾವನ ವಿಜಯನಗರದ ರಾಜಪ್ರತಿನಿಧಿಯಾದ (ಪ್ರಾಂತ್ಯಾಧಿಪತಿ) ಮಲ್ಲಪ್ಪ ಒಡೆಯರೆಂಬವನೊಬ್ಬನಿಂದಾಗಿ ರಚಿತವಾಯ್ತು ಎಂಬುದಾಗಿ ಹೇಳುತ್ತದೆ. ಇಲ್ಲಿ ವಿವರಿಸಲ್ಪಟ್ಟಿರುವ ರಚನೆಗಳು ಈಗ ಇರುವ ರಚನೆಗಳಂತೆಯೇ ಇವೆ. ಶಾಸನಗಳಲ್ಲಿ ಮೊದಲ ಬಾರಿಗೆ ನಮಗೆ 'ಮಧ್ವಸರ' (ಸರೋವರ) ಎನ್ನುವ ಹೆಸರು ಗೋಚರಿಸುತ್ತದೆ.

ಮೊತ್ತಮೊದಲನೆಯ ಬಾರಿಗೆ 1396ರಲ್ಲಿ ಮಂಗಳೂರು ರಾಜ್ಯದಲ್ಲಿ ವಿಜಯನಗರದ ರಾಜಪ್ರತಿನಿಧಿಯಾಗಿದ್ದ ಹಡಪದ ಮಾದರಸನೆಂಬವನು ಶ್ರೀಕೃಷ್ಣನ ದೇವಾಲಯದಲ್ಲಿ 12 ಮಂದಿ ಬ್ರಾಹ್ಮಣರ ಸಂತರ್ಪಣೆಗಾಗಿ ಸಾಕಷ್ಟು ಭೂಮಿಯನ್ನು ಕೊಡಿಸುವುದರ ಮೂಲಕ ಏರ್ಪಾಡು ಮಾಡಿದ್ದ. ಕುಂಜಿಬೆಟ್ಟು, ಬನ್ನಂಜೆ, ತೋನ್ಸೆ, ಗುಂಡಿಬಯಲು, ಕಿದಿಯೂರು ಮತ್ತು ಇತರ ಹಳ್ಳಿಗಳಲ್ಲಿ ಧರ್ಮಕಾರ್ಯಕ್ಕಾಗಿ ಶ್ರೀಕೃಷ್ಣಮಠಕ್ಕೆ ಕೊಡಲಾದ ದತ್ತಿಗಳ ಬಗ್ಗೆ ಹಲವಾರು ಶಾಸನಗಳು ತಿಳಿಸುತ್ತವೆ.

ಶ್ರೀಕೃಷ್ಣಮಠದ ಕಟ್ಟಡದ ಬಗ್ಗೆ ಹೇಳುವುದಾದರೆ, ಅದರ ರಚನಾ ವಿಧದಲ್ಲಿ ಒಂದು ಕೌಶಲವಿದೆ. ಪೂರ್ವದಿಕ್ಕಿನಿಂದಲೇ ಗರ್ಭಗುಡಿಗೆ ಪ್ರವೇಶವಿರುವಂತೆ ಮತ್ತು ಪಶ್ಚಿಮದಿಕ್ಕಿನಿಂದ ರಂಧ್ರಗಳಿರುವ ಕಿಟಕಿಯ ಮೂಲಕ ದೇವರನ್ನು ನೋಡಲು ಸಾಧ್ಯವಾಗುವಂತೆ ಅದು ರಚಿತವಾಗಿದೆ. ರಚನೆ ಬಹಳ ಸರಳ ಮತ್ತು ಸಾಧಾರಣವಾಗಿದೆ. ಆಕಾರದಲ್ಲಿ ಆಯತಾಕಾರವಾಗಿದ್ದು, ಎರಡು ಮಂಟಪಗಳಾಗಿ ವಿಭಾಗಿಸಲ್ಪಟ್ಟಿದೆ. ದೊಡ್ಡ ಮಂಟಪ ಉತ್ತರಕ್ಕೂ, ಚಿಕ್ಕದು ದಕ್ಷಿಣ ದಿಕ್ಕಿಗೂ ಇದೆ. ಪೂರ್ವದ್ವಾರ ಮುಂದೆ ದೊಡ್ಡ ಮಂಟಪಕ್ಕೆ ಹೋಗುತ್ತದೆ. (ಈಗ ಈ ದ್ವಾರ ಮುಚ್ಚಲ್ಪಟ್ಟಿದೆ. ವರ್ಷಕ್ಕೊಮ್ಮೆ ಈಗ ಈ ಬಾಗಿಲನ್ನು ತೆರೆಯುತ್ತಾರೆ) ಇಲ್ಲಿಂದ ಪಶ್ಚಿಮ ಗೋಡೆಗೆ ಹತ್ತಿರವಿರುವ ಜಾಗದ ಮೂಲಕ ಚಿಕ್ಕ ಮಂಟಪಕ್ಕೆ ಹೋಗಿ ಇಲ್ಲಿರುವ ಗರ್ಭಗೃಹವನ್ನು ತಲುಪುತ್ತದೆ. ಇದೇ ಬಗೆಯಾದ ರಚನೆಯ ಇನ್ನೊಂದು ಮಾದರಿ ಮಲ್ಪೆಯ ಸಮೀಪದ ಕೊಡವೂರಿನಲ್ಲಿದೆ. ಇಲ್ಲಿ ಗಟ್ಟಿಯಾದ ಗ್ರಾನೈಟ್ ಕಲ್ಲಿನಿಂದ ಕಟ್ಟಲ್ಪಟ್ಟ ಒಂದು ದೇವಾಲಯವಿದೆ. ಇದು ಒಂದೇ ವಿಧವಾದ ರಚನೆ. ಇದನ್ನು ಕಲ್ಮಠ ಎಂದು ಕರೆಯುತ್ತಾರೆ. ಇಲ್ಲಿ ಲೋಹದ ಹಲವಾರು ಕೃಷ್ಣ ಮೂರ್ತಿಗಳು ಮತ್ತು ಲೋಹದ ಲಕ್ಷ್ಮೀನಾರಾಯಣ ವಿಗ್ರಹ (ಕಂಚಿನಿಂದ ಮಾಡಿದವು) ಇವೆ. ಇವಕ್ಕೆ ಪೂಜೆ ಸಲ್ಲುತ್ತದೆ. ಈ ರಚನೆ 15ನೆಯ ಶತಮಾನದ ಅಂತ್ಯ ಅಥವಾ 16ನೆಯ ಶತಮಾನದ ಆದಿಭಾಗದ್ದಿರಬಹುದು. ಇದಕ್ಕೆ ಪೂರ್ವದಿಕ್ಕಿನಲ್ಲಿ ಪ್ರವೇಶದ್ವಾರವಿದೆ. ಇಲ್ಲಿಂದ ಮುಂದೆ ಒಂದು ವಿಶಾಲ ಮಂಟಪವಿದೆ. ಇಲ್ಲಿ ಗರ್ಭಗೃಹವಿದೆ. ಗರ್ಭಗೃಹದೊಳಗೆ ಹೋಗಬೇಕಾದರೆ ಪಶ್ಚಿಮ ಗೋಡೆಗೆ ತಾಗಿಕೊಂಡಿರುವ ಬಾಗಿಲೊಂದರ ಮೂಲಕ ಹೊಗಬೇಕು. ದೇವರನ್ನು ಪಶ್ಚಿಮ ದಿಕ್ಕಿ

ನಲ್ಲಿರುವ ತೂತುಗಳಿರುವ ಕಿಟಕಿಯಿಂದ ನೋಡಬೇಕು. ಈ ಕಿಟಕಿಗೆ ನೇರವಾಗಿ ದೇವವಿಗ್ರಹಗಳನ್ನಿಟ್ಟಿರುವ ಪೀಠವಿದೆ.

ಉಡುಪಿಯ ಆಸುಪಾಸಿನಲ್ಲಿ ಬೇರೆಬೇರೆ ದೇವರುಗಳಿಗೆ ಅರ್ಪಿತವಾಗಿರುವ ಹಲವಾರು ದೇವಾಲಯಗಳಿವೆ. ಇವೆಲ್ಲವೂ ಸಾಕಷ್ಟು ಪುರಾತನ ದೇವಾಲಯಗಳು. ಪ್ರತಿದೇವಾಲಯವೂ ತನ್ನದೇ ಆದ ಇತಿಹಾಸವನ್ನು ಹೊಂದಿರುವುದರಿಂದ, ಇವೆಲ್ಲವುಗಳ ವಿವರವನ್ನು ಇಲ್ಲಿ ಕೊಡುವುದು ಅಸಾಧ್ಯದ ಕೆಲಸ. ನಾವು ಈಗ ಅವೆಲ್ಲವುಗಳ ಬರೀ ಪಟ್ಟಿಯಿಂದಲೇ ತೃಪ್ತರಾಗಬೇಕಾಗಿದೆ.

1 ಉದ್ಯಾವರದ ಸೋಮೇಶ್ವರ (ಬಂಟಕಲ್ಲು) ದೇವಸ್ಥಾನ (7ನೆಯ ಶತಮಾನ)
2 ಕಡಿಯಾಳಿಯ ಮಹಿಷಮರ್ದಿನಿ ದೇವಸ್ಥಾನ (8–9ನೆಯ ಶತಮಾನ)
3 ಉದಿಯಾವರದ ಸಪ್ತಮಾತೃಕ ದೇವಸ್ಥಾನ (10ನೆಯ ಶತಮಾನ)
4 ಅಲೆವೂರಿನ ದುರ್ಗಾ ದೇವಸ್ಥಾನ (10ನೆಯ ಶತಮಾನ)
5 ಕೊಡವೂರಿನ ಶಂಕರನಾರಾಯಣ ದೇವಸ್ಥಾನ (10–11ನೆಯ ಶತಮಾನ)
6 ಕಾನಂಗಿಯ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ (ಸಾಸ್ಮರ?) ದೇವಸ್ಥಾನ (10–11ನೆಯ ಶತಮಾನ)
7 ಇಂದ್ರಾಣಿಯ (ಇಂದ್ರಾಳಿ) ದುರ್ಗಾ ದೇವಾಲಯ (11–12ನೆಯ ಶತಮಾನ)
8 ಅಂಬಲಪಾಡಿ ಜನಾರ್ದನ ದೇವಸ್ಥಾನ (11–12ನೆಯ ಶತಮಾನ)
9 ಬನ್ನಂಜೆ ತಾರಿಗುಡಿ (ತಾಳಿಗುಡಿ) ದೇವಸ್ಥಾನ (11–12ನೆಯ ಶತಮಾನ)
10 ಉದಯಾವರದ ಗಣಪತಿ ದೇವಸ್ಥಾನ (10–11ನೆಯ ಶತಮಾನ)
11 ಮಾಂಗೋಡಿನ ಸುಬ್ರಹ್ಮಣ್ಯ ದೇವಸ್ಥಾನ (11–12ನೆಯ ಶತಮಾನ)
12 ಉಪ್ಪೂರಿನ ಗಣೇಶದೇವಸ್ಥಾನ (11–12ನೆಯ ಶತಮಾನ)
13 ಪೆರಂಪಳ್ಳಿಯ ಮಹಾಲಿಂಗ ದೇವಸ್ಥಾನ (11–12ಯ ಶತಮಾನ)
14 ನಿಟ್ಟೂರಿನ ಸೋಮಲಿಂಗ ದೇವಾಲಯ (11–12ನೆಯ ಶತಮಾನ)
15 ಪೆರಂಪಳ್ಳಿಯ ಗಣೇಶ ದೇವಸ್ಥಾನಗಳು (11–14ನೆಯ ಶತಮಾನ)
16 ಪೈಲೂರಿನ ಮಹಿಷಮರ್ದಿನಿ ದೇವಸ್ಥಾನ (12–13ನೆಯ ಶತಮಾನ)
17 ಕನ್ನರ್ಪಾಡಿಯ ದುರ್ಗಾ ದೇವಸ್ಥಾನ (12–13ನೆಯ ಶತಮಾನ)
18 ಪುತ್ತೂರಿನ ದುರ್ಗಾ ದೇವಸ್ಥಾನ (12–13ನೆಯ ಶತಮಾನ)
19 ಒಡಭಾಂಡೇಶ್ವರದ ಸುಬ್ರಹ್ಮಣ್ಯ ದೇವಸ್ಥಾನ (12–13ನೆಯ ಶತಮಾನ)
20 ಕುಕ್ಕಿಕಟ್ಟೆಯ ಸುಬ್ರಹ್ಮಣ್ಯ ದೇವಸ್ಥಾನ (12–13ನೆಯ ಶತಮಾನ)
21 ಮಂಡೆಚಾರಿನ ಜನಾರ್ದನ ದೇವಸ್ಥಾನ (13ನೆಯ ಶತಮಾನ)
22 ಚಿಟ್ಪಾಡಿಯ ಶ್ರೀನಿವಾಸ ದೇವಸ್ಥಾನ (13–14ನೆಯ ಶತಮಾನ)
23 ಕೊರಂಗರಪಾಡಿಯ ಜನಾರ್ದನ ದೇವಸ್ಥಾನ (13–14ನೆಯ ಶತಕ)
24 ಪೆರಂಪಳ್ಳಿಯ ಸ್ಕಂದ ದೇವಸ್ಥಾನ (14–15ನೆಯ ಶತಮಾನ)

ಮೇಲೆ ಹೇಳಿದ ದೇವಾಲಯ ಮತ್ತು ಸ್ಮಾರಕಗಳ ಕುರಿತಾದ ಬಹಳ ಮುಖ್ಯವಾದ ವಿಷಯಗಳು ಸೂಕ್ಷ್ಮವಾಗಿ ಸೂಚಿತವಾಗಿವೆ.

ಇಲ್ಲಿ ಮಾಡಿರುವ ಕಾಲನಿಗದಿ ನಿರ್ದಿಷ್ಟ ಎಂದು ಹೇಳಲಾಗುವುದಿಲ್ಲ. ಈ ಕಾಲಗಣನೆಯು ರಚನೆಯ ಮತ್ತು ಶಿಲ್ಪ ಲಕ್ಷಣಗಳನ್ನು ಆಧರಿಸಿದೆ. ಸಾಹಿತ್ಯ ದಾಖಲೆಗಳ ಅಭಾವ ಈ ದಿಸೆಯಲ್ಲಿ ಒಂದು ದೊಡ್ಡ ಕೊರತೆಯಾಗಿದೆ.

ಬ್ರಾಹ್ಮೀ, ಮಾಹೇಶ್ವರಿ, ವೈಷ್ಣವಿ ಮತ್ತು ಚಾಮುಂಡ–ಇವರ ಸಾಪ್ತಮಾತೃಕ ಪ್ರತಿಮೆಗಳನ್ನು ಕಡುಶರ್ಕರಪಾಕದಿಂದ ಮಾಡಲಾಗಿದೆ. ಅವು ಜೀವಂತವಾಗಿರುವಂತಿದ್ದು, ಗಾತ್ರದಲ್ಲಿ ಬಹಳ ದೊಡ್ಡವಾಗಿವೆ. (8 ಅಡಿ ಎತ್ತರ). ಸಪ್ತಮಾತೃಕ ದೇವಸ್ಥಾನಗಳು ಬಹಳ ಕಡಿಮೆ.

ಉಡುಪಿಯ ಸಮೀಪದ ಹಳ್ಳಿಯೊಂದರಲ್ಲಿ ಹೆಚ್ಚಿನಂಶ ಹೂತುಹೋದ ದೇವಸ್ಥಾನವೊಂದರ ಇರವಿನಿಂದ, ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರ ಪೂಜೆ ಸ್ಥಿರೀಕರಿಸಲ್ಪಟ್ಟಿದೆ. ಈಗ ಈ ದೇವಸ್ಥಾನದ ಜೀರ್ಣೋದ್ಧಾರವಾಗಿದೆ (ಇದು ಸಾಸ್ತಾರವಿರಬಹುದೆ?)

ಮಾಂಗೋಡು, ಒಡಭಾಂಡೇಶ್ವರ ಮತ್ತು ಕುಕ್ಕಿಕಟ್ಟೆಯಲ್ಲಿರುವ ಸುಬ್ರಹ್ಮಣ್ಯನ ಪ್ರತಿಮೆಗಳು ನಿಜವಾಗಿಯೂ ಕುತೂಹಲ ಕೆರಳಿಸುತ್ತವೆ; ಏಕೆಂದರೆ ಸುಬ್ರಹ್ಮಣ್ಯನನ್ನು ದ್ವಿಹಸ್ತವಾಗಿ ಬಿಂಬಿಸಲಾಗಿದೆ. ಒಡಭಾಂಡೇಶ್ವರದ ಸ್ಕಂದನನ್ನು ಬಲರಾಮ ಎಂದು ಜನ ತಪ್ಪಾಗಿ ತಿಳಿದುಕೊಂಡಿದ್ದಾರೆ.

ಉದ್ಯಾವರದ ಗಣೇಶನಿಗೆ ಎರಡು ಕೈಗಳಿವೆ. ಈ ಪ್ರತಿಮೆಯ ಎತ್ತರ 13″. ಕಿರೀಟ, ನಿಂತಿರುವ ಭಂಗಿ, ಸೊಂಡಿಲುಗಳು ಇದು ಪ್ರಾಚೀನ ಶಿಲ್ಪ ಎಂದು ತಿಳಿಸುತ್ತವೆ. ಈ ವಿಗ್ರಹಕ್ಕೆ ಪ್ರಭಾವಳಿ ಇಲ್ಲ. ಉಪ್ಪೂರಿನ ಗಣೇಶ ವಿಗ್ರಹ ಕಿರೀಟದ ವಿಧ ಮತ್ತು ಸಮಗ್ರ ಬಿಂಬದ ಆಧಾರದ ಮೇಲೆ ಏನಿಲ್ಲೆಂದರೂ ಚೋಳರಕಾಲದ್ದು ಎಂದು ತಿಳಿದುಬರುತ್ತದೆ. ಈ ಗಣೇಶ ಎತ್ತರದಲ್ಲಿ 2′ 9″ ಇದ್ದು, ಪ್ರಾಯಶಃ ದಕ್ಷಿಣ ಕನ್ನಡದ ಅತ್ಯುತ್ತಮ ವಿಗ್ರಹಗಳಲ್ಲೊಂದಾಗಿದೆ.

ಉಡುಪಿಯ ಸಮೀಪದ ಬೈಲೂರಿನ ಮಹಿಷಮರ್ದಿನಿಯಂತೂ ತುಂಬ ಕುತೂಹಲಜನಕವಾಗಿದೆ. ಮಹಿಷಾಸುರನ ಒಂದು ಕಾಲನ್ನು ಮೇಲಕ್ಕೆತ್ತಲಾಗಿದೆ ಮತ್ತು ಅವನ ದೇಹದಲ್ಲಿ ತ್ರಿಶೂಲ ನೆಟ್ಟಿದೆ. ಈ ಪ್ರತಿಮೆ 13ನೆಯ ಶತಮಾನದ್ದೆನ್ನಬಹುದು.

ಕನ್ಯಾರ್ಪಾಡಿಯ ದುರ್ಗೆ ಅಥವಾ ಪರಮೇಶ್ವರಿಯ ಎತ್ತರ ಸುಮಾರು 2′ 9″. ಈ ಪ್ರತಿಮೆ ಬಹಳ ಗಾಂಭೀರ್ಯ ಮತ್ತು ವಿಜಯದ ಮುಖಛಾಯೆಯಿಂದ ಕೂಡಿದೆ. ಪರಮೇಶ್ವರಿಯು ಚಕ್ರ ಮತ್ತು ಶಂಖ, ಖಡ್ಗ ಮತ್ತು ಅಗ್ನಿಯನ್ನು ಹಿಡಿದುಕೊಂಡಿದ್ದಾಳೆ. ಸಿಂಹ ಮೇಲೆ ಹಾರುವ (ಆಕ್ರಮಣ ಮಾಡುವ) ಭಂಗಿಯಲ್ಲಿ ಹಿಂದುಗಡೆಯಲ್ಲಿ ಚಿತ್ರಿತವಾಗಿದೆ.

ಅಂಬಲಪಾಡಿಯ ಜನಾರ್ದನವೂ ಆಕರ್ಷಕವಾಗಿದ್ದು ಗಂಗರ ಕಾಲದ ಶೈಲಿಯ ಎಲ್ಲ ಲಕ್ಷಣಗಳಿಂದ ಕೂಡಿದೆ. ತೊಡವೂರಿನ ಶಂಕರನಾರಾಯಣ ದೇವಸ್ಥಾನ ಪ್ರಮುಖವಾದ್ದು. ಇದು ಸುಮಾರು 10–11ನೆಯ ಶತಮಾನದ್ದು ಎನ್ನಬಹುದು. ದೇವರನ್ನು ಲಿಂಗರೂಪದಲ್ಲಿ ಪೂಜಿಸಲಾಗುತ್ತಿದೆ. ಇಲ್ಲಿರುವ ಪಂಚಲೋಹದ ಶಂಕರನಾರಾಯಣ ಬಿಂಬ ಪಲ್ಲವ–ಚೋಳ ಶೈಲಿಯನ್ನು ತೋರಿಸುತ್ತದೆ.

ಇಂದ್ರಾಣಿಯ ಪಂಚದುರ್ಗೆಯನ್ನು ಐದು ಲಿಂಗಗಳ ರೂಪದಲ್ಲಿ ಪೂಜಿಸುತ್ತಿದ್ದಾರೆ. ಪ್ರಕೃತಿಯ ಮಡಿಲಲ್ಲಿ ಬಹಳ ಎತ್ತರದ ನೆಲೆಯಲ್ಲಿ ಇಂದ್ರಾಣಿ ಆಕರ್ಷಕವಾದ ಇರವನ್ನು ಸುಖಿಸುತ್ತಿದ್ದಾಳೆ. ಪುತ್ತೂರಿನಲ್ಲಿ ಕೂಡ ದುರ್ಗೆ ಲಿಂಗರೂಪದಲ್ಲೇ ಅಲಂಕರಿಸಲ್ಪಡುತ್ತಿರುವುದು ಕುತೂಹಲವಾದ ವಿಷಯ.

ಉಡುಪಿಯಿಂದ ಏಳು ಮೈಲಿದೂರದಲ್ಲಿದ್ದರೂ, ಕುಂಜಾರಗಿರಿಯ (ವಿಮಾನಗಿರಿ) ದುರ್ಗಾದೇವಿ ದೇವಸ್ಥಾನ ಉಡುಪಿಯ ದೇವಸ್ಥಾನಗಳ ಸಮೂಹಕ್ಕೆ ಸೇರುತ್ತದೆ ಎನ್ನಬಹುದು. ಇಲ್ಲಿ ಮಹಿಷಾ-ಸುರ ಮರ್ದಿನಿಯ ಪ್ರತಿಮೆಯನ್ನು ರುದ್ರಾಕ್ಷ ಶಿಲೆಯಲ್ಲಿ ಕೆತ್ತಲಾಗಿದೆ. ಈ ಶಿಲ್ಪ 10–11ನೆಯ ಶತಮಾನದ್ದು (ಇದಕ್ಕೆ ಮೊದಲಿನದಲ್ಲವಾದರೂ) ಎಂದು ಖಚಿತವಾಗಿ ಹೇಳಬಹುದು. ಕುಂಜಾರಗಿರಿಯ ಪಾಜಕಕ್ಷೇತ್ರ ಶ್ರೀಮಧ್ವಾಚಾರ್ಯರು ಜನಿಸಿದ ಸ್ಥಳವಾದ್ದರಿಂದ ಕುಂಜಾರಗಿರಿ ಒಂದುಯಾತ್ರಾ ಸ್ಥಳ. ಮುಖ್ಯವಾಗಿ ವೈಷ್ಣವರಿಗೆ ಬಹು ಸಾನ್ನಿಧ್ಯವುಳ್ಳದು.

ಈ ಎಲ್ಲ ಸ್ಮಾರಕಗಳನ್ನು ವಿವರವಾಗಿ ಅಭ್ಯಾಸಮಾಡಿ, ಇವುಗಳ ವೈಶಿಷ್ಟ್ಯಗಳನ್ನು ಬೆಳಕಿಗೆ ತರುವುದು ಅಗತ್ಯ. ಈ ಕೆಲಸಕ್ಕೆ ಇವು ಯೋಗ್ಯ.

ಉತ್ಖನನ

ಪ್ರಾಚ್ಯವಸ್ತು ಸಂಶೋಧನೆಯಲ್ಲಿ ಶಿಸ್ತು, ಪ್ರಾಮಾಣಿಕತೆ, ತಾಳ್ಮೆ ಮತ್ತು ಸೂಕ್ಷ್ಮವಾದ ಅವಲೋಕನ, ನಿಷ್ಪಕ್ಷಪಾತವಾದ ವಿಮರ್ಶೆ ಇವುಗಳು ಮುಖ್ಯ. ಅದರಲ್ಲಿಯೂ ಉತ್ಖನನದಲ್ಲಿ ದೊರೆತ ವಸ್ತುಗಳ ಪರೀಕ್ಷೆಗೆ ಹಲವು ವೈಜ್ಞಾನಿಕರ ಸಹಾಯ ಮತ್ತು ವಿಧಾನಗಳು ಉಪಯೋಗಿಸಲ್ಪಡುವುವು. ಆದರೆ ಪ್ರಾಚ್ಯವಸ್ತು ಸಂಶೋಧಕನು ಉತ್ಖನನದಲ್ಲಿ ವಸ್ತುಗಳನ್ನು ಸರಿಯಾದ ಕ್ರಮದಲ್ಲಿ ಸಂಗ್ರಹಿಸಬೇಕು. ಆಗ ಇತರ ವೈಜ್ಞಾನಿಕರ ವರದಿಗಳಿಗೆ, ವಿಧಾನಗಳಿಗೆ ಬೆಲೆಯಿದೆ. ಅವನ ಕ್ರಮದಲ್ಲಿ, ಅವಲೋಕನದಲ್ಲಿ ತಪ್ಪಾದರೆ ಉತ್ಖನನದ ಅನಂತರ ಅವುಗಳನ್ನು ಸರಿಮಾಡಲು ಬರುವುದೇ ಇಲ್ಲ. ಒಂದು ದೇವಾಲಯವನ್ನು ತಪ್ಪಾಗಿ ವರ್ಣಿಸಿದ್ದರೆ, ಶಾಸನವನ್ನು ತಪ್ಪಾಗಿ ಓದಿದ್ದರೆ, ಅದು ತಿಳಿದ ಮೇಲೆ ಮತ್ತೆ ಅವುಗಳನ್ನು ಪರೀಕ್ಷಿಸಿ ಸರಿಪಡಿಸಿಕೊಳ್ಳಲು ಸಾಧ್ಯವಿದೆ. ಆದರೆ ಉತ್ಖನನದಲ್ಲಿ ತಪ್ಪಾದರೆ ಅನಂತರ ಅದನ್ನು ಸರಿಪಡಿಸಲು ಸಾಧ್ಯವಿಲ್ಲ. ಆದುದರಿಂದ ಸಂಶೋಧಕನು ನುರಿತ ಉತ್ಖನನಶಾಸ್ತ್ರಜ್ಞರಿಂದ ಸರಿಯಾಗಿ ಆದಷ್ಟು ಹೆಚ್ಚು ಕಾಲ ತರಬೇತಿಯನ್ನು ಹೊಂದಿದ ಮೇಲೆ ಸ್ವತಂತ್ರವಾಗಿ ಉತ್ಖನನವನ್ನು ಮಾಡುವುದು ಎಲ್ಲರಿಗೂ ಶ್ರೇಯಸ್ಕರ. ಇಲ್ಲದಿದ್ದಲ್ಲಿ, ಉತ್ತಮ ಪಂಡಿತನಾಗಿದ್ದರೂ ಕೂಡ ಉತ್ಖನನದಲ್ಲಿ ಸರಿಯಾದ ಶಿಕ್ಷಣವಿಲ್ಲದಿದ್ದಲ್ಲಿ, ಅನಿವಾರ್ಯವಾಗಿ ತಪ್ಪುಗಳನ್ನು ಮಾಡಿ ಬಿಡಿಸಲಾರದ ಸಮಸ್ಯೆಗಳನ್ನುಂಟುಮಾಡಿ, ನಂಬಲನರ್ಹವಾದ ಇತಿಹಾಸದ ಸೃಷ್ಟಿಗೆ ಕಾರಣನಾಗಬಹುದು. ಆದುದರಿಂದ ಪ್ರಾಚ್ಯವಸ್ತು ಸಂಶೋಧನೆಯಲ್ಲಿ ಉತ್ಖನನವು ಒಂದು ಮಹತ್ವದ ಮತ್ತು ತುಂಬಾ ಗುರುತರ ಹೊಣೆಗಾರಿಕೆಯ ಅಂಗವಾಗಿದೆ. ಇದರ ನಿರ್ವಹಣೆಯಲ್ಲಿ ಪ್ರಾಚ್ಯವಸ್ತು ಸಂಶೋಧಕನ ಪಾತ್ರವು ಬಹು ದೊಡ್ಡದು. ಈ ಕಾರಣದಿಂದ ಭಾರತ ಸರ್ಕಾರದವರು ಪ್ರಾಚ್ಯವಸ್ತು ಉತ್ಖನನ ಮಾಡುವ ಬಗೆಗೆ ಕೆಲವೊಂದು ಕಾನೂನುಗಳನ್ನು ಮಾಡಿದ್ದಾರೆ. ಈ ಕಾನೂನುಗಳ ಪ್ರಕಾರ ಪ್ರಾಕ್ತನ ಶಾಸ್ತ್ರಜ್ಞನು ಅನುಮತಿ ಪಡೆಯಬೇಕು. ಅನುಮತಿಯನ್ನು ಕೋರುವ ಪ್ರಾಕ್ತನ ಶಾಸ್ತ್ರಜ್ಞನು ಉತ್ಖನನ ಮಾಡುವುದರಲ್ಲಿ ಸರಿಯಾದ ತರಬೇತಿಯನ್ನು ಹೊಂದಿರಬೇಕು. ಮತ್ತು ಉತ್ಖನನ ಮಾಡುವ ಸ್ಥಳದ ಮಹತ್ವ ಮತ್ತು ಉದ್ದೇಶಗಳನ್ನು ಸ್ಪಷ್ಟವಾಗಿ ಅರಿತು ತಿಳಿಸಬೇಕು. ಇಂಥವರಿಗೆ ಮಾತ್ರ ಅನುಮತಿಯನ್ನು ಕೊಡಲಾಗುವುದು. ಅನುಮತಿಯಿಲ್ಲದೆ ಪ್ರಾಕ್ತನಶಾಸ್ತ್ರಜ್ಞನಾಗಲಿ, ಯಾರೇ ಆಗಲಿ ಉತ್ಖನನ ಮಾಡಿದಲ್ಲಿ ಕಾನೂನಿನ ಪ್ರಕಾರ ಶಿಕ್ಷೆಗೆ ಒಳಗಾಗುವರು[1].

—ಡಾ. ಅ. ಸುಂದರ

---

1 ಪ್ರಾಚ್ಯವಸ್ತು ಸಂಶೋಧನೆ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ (1972), ಪು. 119–121

ಕೆ. ಜಿ. ರಾಮಕೃಷ್ಣ

ಭಾರತದಲ್ಲಿ ಟೈರ್ ಕೈಗಾರಿಕೆ

ಇತ್ತೀಚೆಗೆ ಭಾರತದ ಟೈರ್ ಕೈಗಾರಿಕೆಯಲ್ಲಿ ಕಂಡುಬಂದಿರುವ ಪ್ರಗತಿ ಅಗಾಧವಾದ್ದು. 1960ರಲ್ಲಿ ಕೇವಲ 15 ಲಕ್ಷ ಟೈರ್‌ಗಳನ್ನು ಮಾತ್ರ ತಯಾರಿಸುತ್ತಿದ್ದ ಕೈಗಾರಿಕೆ 11 ವರ್ಷಗಳ ಅನಂತರ, ಅಂದರೆ 1971ರ ವೇಳೆಗೆ, 45 ಲಕ್ಷ ಟೈರ್‌ಗಳನ್ನು ತಯಾರಿಸುವ ಸಾಮರ್ಥ್ಯವನ್ನು ಹೊಂದಿದೆ, ಎಂದರೆ ಸುಮಾರು ಸೇ. 300ರಷ್ಟು ಹೆಚ್ಚಳವನ್ನು ಸಾಧಿಸಿವೆ. ಈ ಕಾಲದಲ್ಲಿ ಕಾರ್ಖಾನೆಗಳ ಸಂಖ್ಯೆ 2ರಿಂದ 7ಕ್ಕೆ ಏರಿವೆ. ಅಲ್ಲದೆ, ನಮ್ಮ ದೇಶದಲ್ಲಿ ತಯಾರಾದ ಟೈರ್‌ಗಳು ಗುಣಮಟ್ಟದಲ್ಲಿ ಯಾವ ಮುಂದುವರಿದ ದೇಶದಲ್ಲಿ ತಯಾರಾದ ಟೈರ್‌ಗಳಿಗೂ ಕಡಿಮೆ ಇಲ್ಲ. ಅಮೆರಿಕ ಮತ್ತು ಯೂರೋಪಿನ ದೇಶಗಳಿಗೆ ಭಾರತದ ಟೈರ್‌ಗಳು ರಫ್ತಾಗುತ್ತಿರುವುದೇ ಇದಕ್ಕೆ ಸಾಕ್ಷಿ.

ಕಾರ್ಖಾನೆಗಳ ಬೆಳವಣಿಗೆ

ಭಾರತದಲ್ಲಿ ರಬ್ಬರ್ ಟೈರ್‌ಗಳನ್ನು ತಯಾರಿಸುವುದಕ್ಕಾಗಿ 1936ರಲ್ಲಿ ಎರಡು ಕಾರ್ಖಾನೆಗಳನ್ನು–ಡನ್‌ಲಪ್‌ಮತ್ತು ಫೈರ್‌ಸ್ಟೋನ್–ಕಲ್ಕತ್ತ ಮತ್ತು ಬೊಂಬಾಯಿ ನಗರಗಳಲ್ಲಿ ಸ್ಥಾಪಿಸಲಾಯಿತು. ಆ ಕಾಲದಲ್ಲಿ ಪ್ರಪಂಚದಲ್ಲಿ ರಬ್ಬರ್ ಸಮೃದ್ಧಿಯಾಗಿ ಸಿಗುತ್ತಿತ್ತು. ಅಲ್ಲದೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಒಂದು ನಿಯಂತ್ರಣವೂ ಇತ್ತು. ಭಾರತದಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸುವುದಕ್ಕೆ ಎರಡು ಮುಖ್ಯ ಕಾರಣಗಳೆಂದರೆ ರಬ್ಬರಿನ ಅಂತರರಾಷ್ಟ್ರೀಯ ಬೆಲೆ ಮತ್ತು ಭಾರತದ ಆಂತರಿಕ ಬೆಲೆಯಲ್ಲಿನ ಹೆಚ್ಚು ಅಂತರ. ಭಾರತದಲ್ಲಿ ಅದರ ಬೆಲೆ ಪೌಂಡಿಗೆ 10 ಪೈಸೆಯಾದರೆ, ಅಂತರರಾಷ್ಟ್ರೀಯ ಬೆಲೆ 30 ಪೈಸೆಯಾಗಿತ್ತು. ಅಲ್ಲದೆ, ದೇಶದ ಉತ್ಪಾದನೆಯಲ್ಲಿ ಅರ್ಧಭಾಗವನ್ನು ಅಂತರರಾಷ್ಟ್ರೀಯ ಮಾರುಕಟ್ಟೆಗಳಿಗೆ ಕಳುಹಿಸಲು ಅಂತರರಾಷ್ಟ್ರೀಯ ರಬ್ಬರ್ ಸಂಘದಿಂದ ಅನುಮತಿ ಸಹ ಇತ್ತು.

ಮುಂದೆ ಸುಮಾರು 20 ವರ್ಷಗಳ ವರೆಗೆ ಕೇವಲ ಮೇಲೆ ಹೇಳಿದ ಎರಡು ಕಾರ್ಖಾನೆಗಳೇ ಭಾರತದ ರಬ್ಬರ್ ಟೈರ್‌ಗಳ ಬೇಡಿಕೆಯನ್ನು ಸಂಪೂರ್ಣವಾಗಿ ಪೂರೈಸುತ್ತಿದ್ದುವು. 1956ರಿಂದ ಮುಂದೆ ಭಾರತದಲ್ಲಿ ರಬ್ಬರ್ ಟೈರ್‌ಗಳ ಬೇಡಿಕೆ ಹೆಚ್ಚಾದ್ದರಿಂದ 1959ರಲ್ಲಿ ಸಿಯಟ್ ಕಂಪೆನಿಯವರಿಗೆ ತಮ್ಮ ಕಾರ್ಖಾನೆಯನ್ನು ಪ್ರಾರಂಭಿಸಲು ಅವಕಾಶ ಕೊಡಲಾಯಿತು. ಮುಂದೆ 1963ರ ವೇಳೆಗೆ 4 ಹೊಸ ಕಾರ್ಖಾನೆಗಳು—ಗುಡ್ ಇಯರ್, ಪ್ರೀಮಿಯರ್, ಇನ್‌ಚೆಕ್ ಮತ್ತು ಮ್ಯಾನ್ ಫೀಲ್ಡ್ (ಮದರಾಸ್ ರಬ್ಬರ್ ಕಾರ್ಖಾನೆ)—ಪ್ರಾರಂಭವಾದುವು.

ಉತ್ಪಾದನ ಸಾಮರ್ಥ್ಯ

ಈ ರೀತಿಯ ಹೊಸ ಕಾರ್ಖಾನೆಗಳ ಸ್ಥಾಪನೆಯಿಂದ ಉತ್ಪಾದನೆಯೂ ಪ್ರತಿವರ್ಷವೂ ಹೆಚ್ಚುತ್ತ ಬಂದಿದೆ ಎಂಬುದನ್ನು ಮುಂದಿನ ಪಟ್ಟಿಯಿಂದ ಕಾಣಬಹುದು:

ವರ್ಷ	ಟ್ರಕ್ ಮತ್ತು ಬಸ್ ಟೈರ್‌ಗಳು	ಕಾರ್ ಮತ್ತು ಜೀಪ್ ಟೈರ್‌ಗಳು	ಮೋಟಾರ್ ಸೈಕಲ್ ಮತ್ತು ಸ್ಕೂಟರ್ ಟೈರ್‌ಗಳು	ಟ್ರಾಕ್ಟರ್ ಟೈರ್‌ಗಳು	ಎ.ಡಿ.ವಿ. ಟೈರ್‌ಗಳು	ಮೊತ್ತ	ಸೇಕಡ ಹೆಚ್ಚಳ
1960	919200	342000	98400	49476	48900	1459176	...
1961	979200	472800	110400	48456	71988	1682844	15.32
1962	1070400	518400	121200	56556	90600	1857156	10.35
1963	1244000	548400	133220	43212	85368	2054580	10.63
1964	1238400	688800	164400	74544	94260	2260404	10.01
1965	1364400	762000	226800	94032	117012	2564244	13.44
1966	1404000	722400	223200	90228	118860	2558688	0.21 *
1967	1507200	754800	213600	92800	119835	2688315	5.06 *
1968	1855567	862166	430876	148771	144811	3442191	28.04
1969	2050000	970000	575000	170000	190000	3955000	14.89

*ಈ ವರ್ಷಗಳಲ್ಲಿ ಎರಡು ಕಾರ್ಖಾನೆಗಳಲ್ಲಿ ನಡೆದ ಮುಷ್ಕರದಿಂದಾಗಿ ಉತ್ಪಾದನೆ ಕಡಿಮೆಯಾಯಿತು. [ಭಾರತೀಯ ರಬ್ಬರ್ ತಯಾರಕರ ಸಂಘದ ವರದಿಗಳಿಂದ] •

ಭಾರತದ ರಬ್ಬರ್ ತಯಾರಕರ ಸಂಘ ಸರ್ಕಾರಕ್ಕೆ ಸಲ್ಲಿಸಿದ ಮನವಿಯಲ್ಲಿ 1973–74ರ ವೇಳೆಗೆ 60 ಲಕ್ಷ ವಿವಿಧ ರೀತಿಯ ರಬ್ಬರ್ ಟೈರ್‌ಗಳು ಬೇಕಾಗಬಹುದು ಎಂದು ಅಂದಾಜು ಮಾಡಿತ್ತು. ಮತ್ತು ಆ ಹೊತ್ತಿಗೆ 80 ಲಕ್ಷ ಟೈರ್‌ಗಳನ್ನು ಉತ್ಪಾದಿಸಲು ಅನುಮತಿಯನ್ನು ಕೇಳಿತ್ತು. ಇತ್ತೀಚೆಗೆ ಸರ್ಕಾರ ಸಂಘದ ಮನವಿಗೆ ಅನುಗುಣವಾಗಿ ತನ್ನ ಒಪ್ಪಿಗೆಯನ್ನು ನೀಡಿತು. ಇದರಿಂದಾಗಿ ಭಾರತದಲ್ಲಿ ಕೊರತೆ ಜಾಸ್ತಿಯಾಗದೆ ರಫ್ತು ವ್ಯಾಪಾರವನ್ನು ಮುಂದುವರಿಸಬಹುದು.

ಇದಕ್ಕೆ ಪ್ರಥಮ ಹೆಜ್ಜೆಯಾಗಿ 16.4 ಲಕ್ಷ ಟೈರ್ ಮತ್ತು ಟ್ಯೂಬ್‌ಗಳನ್ನು ತಯಾರಿಸಲು ಆ ಸಂಸ್ಥೆಗಳಿಗೆ ಸರ್ಕಾರ ಅನುಮತಿ ನೀಡಿತು. ಅದೂ ಅಲ್ಲದೆ, ಹೊಸ ಸಂಸ್ಥೆಗಳಿಗೆಂದು 15 ಲಕ್ಷ ಟೈರ್‌ಗಳನ್ನು ತಯಾರಿಸುವ ಸಾಮರ್ಥ್ಯ ಮೀಸಲಾಗಿಟ್ಟಿತ್ತು ಮತ್ತು ಹೊಸ ತಯಾರಿಕೆದಾರರು ಯಾರಾದರೂ ಇದ್ದರೆ ಅವರು ಸರ್ಕಾರಕ್ಕೆ ಬರೆದುಕೊಳ್ಳಬಹುದೆಂದು ತಿಳಿಸಿತು. ಈ ಪ್ರಕಟಣೆಯಿಂದಾಗಿ ಸುಮಾರು 40 ಜನ ಮುಂದಾದರು. ಇವರ ಪೈಕಿ 3 ಅಥವಾ 4 ಜನರ ಯೋಜನೆಯನ್ನು ಸರ್ಕಾರ ಅಂಗೀಕರಿಸಬಹುದಾದ ಸೂಚನೆಗಳು ಕಾಣಬರುತ್ತಿವೆ.

ಅಲ್ಲದೆ ಈಗಿರುವ ಕಾರ್ಖಾನೆಗಳಿಗೆ ಮತ್ತೆ 10 ಲಕ್ಷ ವಿವಿಧ ರೀತಿಯ ಟೈರ್‌ಗಳ ಉತ್ಪಾದನೆಗೆ ಅನುಮತಿ ನೀಡಬೇಕೆಂಬ ವಿಷಯ ಸಹ ಅವರ ಮುಂದಿದೆ. ಆದರೆ ಈ ರೀತಿಯ ಅಂಗೀಕಾರಕ್ಕೆ ಪ್ರೇರಕವಾಗಲಿರುವ ವಿಷಯವೆಂದರೆ, ಹೊಸದಾಗಿ ಬರಲಿರುವ ಕಾರ್ಖಾನೆಗಳು ಸರಿಯಾಗಿ ಕಾಲಕ್ಕೆ ತಕ್ಕಂತೆ ಉತ್ಪಾದನೆ ಪ್ರಾರಂಭಿಸಲು ಇರುವ ಸಾಧ್ಯಾಸಾಧ್ಯತೆಗಳು.

ನಾಲ್ಕು ಮತ್ತು ಐದನೆಯ ಪಂಚವಾರ್ಷಿಕ ಯೋಜನೆಗಳಲ್ಲಿ

ಕೆಳಗಿನ ಪಟ್ಟಿಯಿಂದ ಸದ್ಯದಲ್ಲಿರುವ ಕಾರ್ಖಾನೆಗಳ ಉತ್ಪಾದನ ಶಕ್ತಿ ಮತ್ತು 1973–74 ಅಂದರೆ 4ನೆಯ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿರುವ ಸ್ಥಿತಿಯನ್ನು ಕಾಣಬಹುದು.

(ಲಕ್ಷ ಸಂಖ್ಯೆಗಳಲ್ಲಿ)

ಕಾರ್ಖಾನೆಗಳು	ಸದ್ಯದ ಉತ್ಪಾದನ ಸ್ಥಿತಿ	ಸದ್ಯದಲ್ಲಿ ಆಗುವ ವಿಸ್ತರಣೆ	ಮೊತ್ತ	25% ಹೆಚ್ಚಳಕ್ಕೆ ಅನುಮತಿ ನೀಡಿರುವುದು	1973–74ರ ಸ್ಥಿತಿ
ಡನ್‌ಲಪ್	11.97	2.50	14.47	3.62	18.09
ಫೈರ್‌ಸ್ಟೋನ್	6.72	...	6.72	1.68	8.40
ಸಿಯಟ್	4.00	2.50	6.50	1.62	8.12
ಮ್ಯಾನ್ಸ್‌ಫೀಲ್ಡ್	3.60	2.50	6.10	1.52	7.62
ಗುಡ್‌ಇಯರ್	3.10	2.90	6.00	1.50	7.50
ಇನ್‌ಚೆಕ್	3.00	3.00	6.00	1.50	7.50
ಪ್ರೀಮಿಯರ್	3.00	3.00	6.00	1.50	7.50
	35.39	16.40	51.79	12.94	64.73

ಮುಂದೆ ಅನುಮತಿ ಪಡೆಯುವ ಅಥವಾ ಪಡೆದ ಉತ್ಪಾದನ ಸಾಮರ್ಥ್ಯ:

ಮೋದಿ (ಅನುಮತಿ ನೀಡಲಾಗಿದೆ) 4.00 ಲಕ್ಷ

ಹೊಸ ಕಾರ್ಖಾನೆಗಳಿಗಾಗಿ ಮೀಸಲಾಗಿರುವ ಸಾಮರ್ಥ್ಯ (3 ಅಥವಾ 4) 15.00 ಲಕ್ಷ

19.00ಲಕ್ಷ

(ಆಧಾರ: ಭಾರತದ ರಬ್ಬರ್ ತಯಾರಕರ ಸಂಘದ ವಾರ್ಷಿಕ ವರದಿಗಳು)

ಸರ್ಕಾರ ಸೇ. 25ರ ಹೆಚ್ಚಳಕ್ಕೆ ಅನುಮತಿ ನೀಡಿದ್ದರೂ ಆ ಸಾಮರ್ಥ್ಯವನ್ನು ಉಪಯೋಗಿಸಿ ಕೊಂಡು ಕಾರ್ಖಾನೆಗಳು–ಸದ್ಯದಲ್ಲಿ ಮತ್ತು ಮುಂದೆ–1973–74ರ ಹೊತ್ತಿಗೆ 80 ಲಕ್ಷ ಸಂಖ್ಯೆ ಯನ್ನು ಮುಟ್ಟುತ್ತವೆಂಬ ಹಿರಿಯಾಸೆ ಹೊಂದಿದೆ. ಆದರೆ, ಈ ಗುರಿಯನ್ನು ಮಟ್ಟುತ್ತವೆಯೋ ಇಲ್ಲವೆ ಎಂಬ ವಿಷಯವನ್ನು ಕಾರ್ಖಾನೆಗಳ ಹಿತಕರ ವಾತಾವರಣದ ಮೇಲೆ ನಿರ್ಧರಿಸಬೇಕಾಗಿದೆ. 1973–74ರ. ಹೊತ್ತಿಗಿನ ಒಟ್ಟು ಉತ್ಪಾದನೆಯಲ್ಲಿ 60 ಲಕ್ಷವನ್ನು ಭಾರತದ ಬಳಕೆಗೂ ಮಿಕ್ಕದ್ದನ್ನು ಹೊರದೇಶ ಗಳಿಗೆ ರಫ್ತುಮಾಡಲೂ ಉಪಯೋಗಿಸಬೇಕೆಂಬ ಆಸೆಯನ್ನು ಸರ್ಕಾರ ಹೊಂದಿದೆ.

ಇದೇ ಅಲ್ಲದೆ. ಐದನೆಯ ಯೋಜನೆಯಲ್ಲಿ ಉತ್ತಮವಾದ ರಬ್ಬರ್ ಟೈರ್‌ಗಳ ಕೈಗಾರಿಕೆ ಹೊಂದಿರಲು ಈಗಾಗಲೆ ಯೋಜನೆಯನ್ನು ನಿರ್ಮಿಸಲಾಗುತ್ತಿದೆ. ಮತ್ತು ಆ ಕಾಲದಲ್ಲಿ ಉತ್ಪಾದನೆ, ರಫ್ತು ಮತ್ತು ಗುಣಮಟ್ಟಗಳ ಬಗ್ಗೆ. ಕಾರ್ಖಾನೆಗಳ ಮಧ್ಯೆ ಸರಿಯಾದ ಸ್ಪರ್ಧೆಯಿರಬೇಕೆಂಬ ಅಂಶ ವನ್ನು ಸಹ ಸರ್ಕಾರ ಗಣನೆಗೆ ತೆಗೆದುಕೊಂಡಿದೆ. ಅದೂ ಅಲ್ಲದೆ, ಕೇವಲ ಒಂದೇ ಒಂದು ಸಂಸ್ಥೆಯನ್ನು

ಚೆನ್ನಾಗಿ ವಿಸ್ತರಿಸಬೇಕೆ ಅಥವಾ ದೇಶದ ನಾನಾ ಭಾಗಗಳಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸಬೇಕೆ ಎಂಬ ಬಗ್ಗೆಯೂ ತನ್ನ ಗಮನ ಹರಿಸುತ್ತಿದೆ. ಹೀಗಾಗಿ ಐದನೆಯ ಯೋಜನೆಯ ಮುಕ್ತಾಯದ ವೇಳೆಗೆ ಭಾರತದ ಟೈರು ಕೊರತೆ ಹೋಗಿ ಈ ಕೈಗಾರಿಕೆ ಚೆನ್ನಾಗಿ ಬೆಳೆದ ಸ್ಥಿತಿ ತಲಪಬಹುದು.

ನಾಲ್ಕನೆಯ ಯೋಜನೆಯ ಅವಧಿಯಲ್ಲಿ ಪೂರೈಕೆ ಸಾಧಾರಣವಾಗಿ ಸರಿಯಾಗಿರುವುದೆಂದು ಭಾವಿಸಿದಲ್ಲಿ ಅದೇ ಅವಧಿಯಲ್ಲಿಯ ಬೇಡಿಕೆಯ ಬಗ್ಗೆ ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಏತಕ್ಕೆಂದರೆ, ರಾಷ್ಟ್ರೀಯ ಯೋಜನಾ ಆಯೋಗ ಇನ್ನೂ ವಾಹನಗಳ ತಯಾರಿಕಾಗುರಿಯ ಬಗ್ಗೆ ಯಾವ ಒಂದು ನಿರ್ದಿಷ್ಟ ನಿರ್ಧಾರವನ್ನೂ ಕೈಗೊಂಡಿಲ್ಲ. ಆದ್ದರಿಂದ ಸುಮಾರು ಎಷ್ಟು ಸಂಖ್ಯೆಯಲ್ಲಿ ವಿವಿಧ ರೀತಿಯ ಟೈರುಗಳು ಆ ಅವಧಿಗೆ ಬೇಕಾಗಬಹುದು ಎಂಬ ಬಗ್ಗೆ ಕೈಗಾರಿಕೆ ಬಹಳ ಆಲೋಚಿಸ ಬೇಕಾಗಿದೆ. ಅದೂ ಅಲ್ಲದೆ, ಈ ಬಗ್ಗೆ ನಿರ್ದಿಷ್ಟ ನಿರ್ಧಾರವಿಲ್ಲದೇ ಇರುವುದರಿಂದ, ಎಷ್ಟು ಟೈರ್ ಗಳನ್ನು ರಫ್ತು ಮಾಡಬಹುದು ಎಂಬುದನ್ನು ಸಹ ನಿರ್ಧರಿಸಲಾಗಿಲ್ಲ.

ನಾಲ್ಕನೆಯ ಯೋಜನೆಯ ಮುಂದಿನ ವರ್ಷಗಳ ಸಾಮಾನ್ಯ ಆರ್ಥಿಕ ಅಂದಾಜಿನ ಮೇಲೆ ನೋಡಿದಲ್ಲಿ ಕೆಳಕಂಡ ರೀತಿಯಲ್ಲಿ ಟೈರ್ ಕೈಗಾರಿಕೆಯ ಬೆಳವಣಿಗೆಯನ್ನು ಅಂದಾಜು ಮಾಡಬಹುದು.

1969–70ರಿಂದ 1973–74ರ ವರೆಗಿನ ಅಂದಾಜು ಪಟ್ಟಿ

(1969–1970)

ಮೋಟಾರ್ ಸೈಕಲ್‌ಗಳು ಮತ್ತು ಸ್ಕೂಟರ್ ಗಳು	ಜೀಪ್‌ಗಳು	ಕಾರುಗಳು	ದೊಡ್ಡ ಟೈರಿನ ವಾಹನಗಳು	ಟ್ರಾಕ್ಟರ್‌ಗಳು	ಎ.ಡಿ.ಪಿ	ರಫ್ತು	ಒಟ್ಟು ಬೇಕಾಗುವವು
478834	154183	780659	1867496	187067	130000	250000	3848239

(1970–1971)

ವಿವಿಧ ಟೈರ್‌ಗಳು	31-3-70 ರಲ್ಲಿನ ಸಂಖ್ಯೆ	70–71ರಲ್ಲಿ ಬದಲಿಸಬೇಕಾದ ಟೈರ್‌ಗಳು	70–71ರಲ್ಲಿ ತಯಾರಿಸಲಾದ ಹೊಸ ವಾಹನ ಗಳು	ಹೊಸವಾಹನ ಗಳಿಗೆ ಬೇಕಾಗುವ ಟೈರ್‌ಗಳು	ಒಟ್ಟು ಬೇಕಾ ಗುವ ಟೈರ್‌ಗಳ ಮೊತ್ತ
1 ಮೋಟಾರ್ ಸೈಕಲ್ ಸ್ಕೂಟರ್ ಆಟೋರಿಕ್ಷ	439784	219892	115000	345000	564892
2 ಜೀಪ್‌ಗಳು	68114	102174	12000	60000	162174
3 ಕಾರುಗಳು, ಟ್ಯಾಕ್ಸಿಗಳು	514933	566426	54000	270000	836426
4 ಮಿಲಿಟರಿಮತ್ತು ಸರ್ಕಾರಿ ವಾಹನ ಗಳು, ಲಾರಿಗಳು, ಬಸ್ಸುಗಳು ಮುಂತಾದವು	422280	1689120	56000	336000	2025120

5 ಟ್ರಾಕ್ಟರ್‌ಗಳು	92409	138614	21000	84000	2220614
6 ಎ.ಡಿ.ವಿ.	—	—	—	—	145000
7 ರಫ್ತು	—	—	—	—	300000
ಒಟ್ಟು	1537520	2716226	258000	1095000	6256226

(1971–72)

1	5,32,795	2,66,398	1,35,000	4,05,000	6,71,398
2	76,710	1,15,065	13,000	65,000	1,80,065
3	5,43,186	5,97,505	60,000	3,00,000	8,97,505
4	4,57,166	18,28,684	63,000	3,78,000	22,06,684
5	1,08,789	1,63,184	26,000	1,04,000	2,67,184
6	—	—	—	—	1,65,000
7	—	—	—	—	3,50,000
ಒಟ್ಟು	17,18,646	29,70,836	2,97,000	12,52,000	47,37,836

(1972–73)

1	6,41,155	3,20,578	1,65,000	4,95,000	8,15,578
2	85,875	1,28,813	14,000	70,000	1,98,813
3	5,76,027	6,33,630	66,000	3,30,000	9,63,360
4	4,97,308	19,89,232	70,000	4,20,000	24,09,452
5	1,29,350	1,94,025	32,000	1,28,000	3,22,075
6	—	—	—	—	1,90,070
7	—	—	—	—	4,00,000
ಒಟ್ಟು	19,29,715	32,66,278	3,47,000	14,43,000	52,99,278

(1973–74)

	31–3–73	1973–74	1973–74		
1	7,74,097	3,87,049	2,00,000	6,00,000	9,87,049
2	95,581	1,43,372	15,000	75,000	2,18,373

3	6.13.226	6.74.559	75.000	3.75.000	10.49,559
4	5.42.443	21.69.772	80.000	4.80,000	26.49,772
5	1,54.883	2.32.325	40.000	1.60.000	3.92.326
6	—	—	—	—	2,20,000
7	—	—	—	—	4,50,000
ಒಟ್ಟು	21.80.230	36.07.077	4.10.000	16.90.000	59.67.079

ಟಿಪ್ಪಣಿ: 1 ಪ್ರತಿವರ್ಷವೂ ಸೇ. 5ರಷ್ಟು ವಾಹನಗಳನ್ನು ಉಪಯೋಗವಿಲ್ಲವೆಂದು ನಿರ್ಧರಿಸಲಾಗುತ್ತದೆ. ಹಿಂದಿನ ವರ್ಷಗಳಲ್ಲಿಯ ಹೊಸ ವಾಹನಗಳ ಉತ್ಪಾದನೆಯನ್ನು ಸೇರಿಸಲಾಗಿದೆ.

2 1969–1974ರ ಹೊಸ ವಾಹನಗಳ ಉತ್ಪಾದನೆಯನ್ನು ಅಂದಾಜು ಮಾಡಲಾಗಿದೆ.

(ಆಧಾರ: ಭಾರತದ ರಬ್ಬರ್ ತಯಾರಿಕೆಗಾರರು ಯೋಜನಾ ಆಯೋಗಕ್ಕೆ ಸಲ್ಲಿಸಿದ ಮನವಿ)

ಮೇಲಿನ ಅಂದಾಜಿನಂತೆ. ವಿವಿಧ ರೀತಿಯ 59.67 ಲಕ್ಷ ಟೈರುಗಳಿಗೆ ಬೇಡಿಕೆ ಇರಬಹುದು ಎಂದು ಊಹಿಸಬಹುದು. ಇಂದಿನ ವರೆಗೆ ನಡೆದುಬಂದಿರುವ ಯೋಜನೆಗಳಲ್ಲಿ ಈ ಕೈಗಾರಿಕೆಯ ಬೆಳವಣಿಗೆಯನ್ನು ಅವಲೋಕಿಸಿ ಈ ಅಂದಾಜನ್ನು ಮಾಡಲಾಗಿದೆ. ಎರಡನೆಯ ಯೋಜನೆಯಲ್ಲಿ ಈ ಕೈಗಾರಿಕೆ ಸೇ. 12ರಷ್ಟು. ಮೂರನೆಯ ಯೋಜನೆಯಲ್ಲಿ ಸೇ. 10ರಷ್ಟು ಮತ್ತು ಮುಂದೆ 3 ವರ್ಷಗಳ ಯೋಜನೇತರ ಕಾಲದಲ್ಲಿ ಸೇ. 19ರಷ್ಟು ಬೆಳವಣಿಗೆ ಹೊಂದಿತು. ಮೇಲ್ಕಂಡ ಅವಧಿಯಲ್ಲಿ ಆದ ಟೈರ್‌ಗಳ ಹೆಚ್ಚಳ 5.8 ಲಕ್ಷ. 7.9 ಲಕ್ಷ ಮತ್ತು 13.9 ಲಕ್ಷ. ನಾಲ್ಕನೆಯ ಯೋಜನೆಯ ಅವಧಿಯಲ್ಲಿ (1969–74) 20.72 ಲಕ್ಷ ಹೆಚ್ಚಳವನ್ನು ಅಂದಾಜು ಮಾಡಲಾಗಿದೆ. ಭಾರತದಲ್ಲಿಯ ಬೇಡಿಕೆ 60.72 ಲಕ್ಷವನ್ನು ಮುಟ್ಟಿದರೂ ಕೊರತೆ ಇಲ್ಲದಂತೆ ಬೇಡಿಕೆಯನ್ನು ಪೂರೈಸಬಲ್ಲ ಭರವಸೆ ಕೈಗಾರಿಕೆಗೆ ಇದೆ. ಇದರಿಂದಾಗಿ 1973–74ರ ವೇಳೆಗೆ 60 ಲಕ್ಷವೆಂದು ಅಂದಾಜು ಮಾಡಲಾಯಿತು.

ರಫ್ತಿಗೆ ಉತ್ತೇಜನ

ಭಾರತದಲ್ಲಿ ತಯಾರಾದ ಟೈರುಗಳು ಅಂತರರಾಷ್ಟ್ರೀಯ ಮಟ್ಟದವೆಂದು ನಿರ್ಧರಿಸಿರುವುದರಿಂದ ಮತ್ತು ಅವುಗಳ ತಯಾರಿಕೆಯಲ್ಲಿ ಉಪಯೋಗಿಸುವ ವಸ್ತುಗಳಲ್ಲಿ ಸೇ. 85ರಷ್ಟು ಭಾರತದಲ್ಲೇ ದೊರೆಯುವುದರಿಂದ. ಹೆಚ್ಚು ಖರ್ಚಿಲ್ಲದೆ ಹೊರದೇಶಗಳಿಗೆ ಇವನ್ನು ರಫ್ತು ಮಾಡಿ ವಿದೇಶಿ ವಿನಿಮಯವನ್ನು ಗಳಿಸಬಹುದು. ಆದರೆ ಈ ದಿಸೆಯಲ್ಲಿರುವ ಎರಡು ತೊಂದರೆಗಳೆಂದರೆ. ಬಹಳ ದುಬಾರಿಯಾದ ತಯಾರಿಕೆ ವೆಚ್ಚ ಮತ್ತು ಹೊರದೇಶಗಳಲ್ಲಿ ಭಾರತದ ಟೈರ್‌ಗಳಿಗೆ ಇಡಬೇಕಾದ ವ್ಯಾಪಾರ ನಾಮ (ಬ್ರಾಂಡ್ ನೇಮ್). ಇತ್ತೀಚೆಗೆ ಕೇಂದ್ರ ಸರ್ಕಾರ ಒಂದು ಸುತ್ತೋಲೆಯನ್ನು ಹೊರಡಿಸಿ. ಪ್ರತಿಯೊಬ್ಬ ಉತ್ಪಾದಕನೂ ತನ್ನ ಉತ್ಪಾದನೆಯಲ್ಲಿ ಸೇ. 10ರಷ್ಟನ್ನು ರಫ್ತು ಮಾಡಬೇಕೆಂದು ನಿಗದಿ ಮಾಡಿತು. ರಫ್ತಿನ ವಿಷಯದಲ್ಲಿ ಅನೇಕ ರೀತಿಯ ರಿಯಾಯಿತಿಗಳನ್ನು ತೋರಿಸುವುದಾಗಿ ಹೇಳಿತು. ಈ ರಿಯಾಯಿತಿಯಲ್ಲಿ ಪ್ರಮುಖವಾದವುಗಳೆಂದರೆ 1 ನಿಗದಿಯಾದ್ದಕ್ಕಿಂತ ಹೆಚ್ಚಿಗೆ ತಯಾರಿಸಲು ಅನುಮತಿ. ಆದರೆ. ಹೆಚ್ಚಾಗಿ ತಯಾರಾದ ಸಂಖ್ಯೆಯನ್ನು ರಫ್ತಿಗಾಗಿ ಉಪಯೋಗಿಸಬೇಕು. 2 ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಾರಲು ಮಾಡಬೇಕಾದ ಖರ್ಚಿಗೆ ವಿದೇಶಿ ವಿನಿಮಯವನ್ನು ಕೊಡುವುದು. ಇದರಿಂದ ರಫ್ತು ವ್ಯಾಪಾರ ಪ್ರತಿವರ್ಷವೂ ಹೆಚ್ಚುತ್ತ ಬಂದಿದೆಯೆಂಬುದನ್ನು ಕೆಳಗಿನ ಪಟ್ಟಿಯಿಂದ ಕಾಣಬಹುದು.

ವರ್ಷ	ಲಕ್ಷ ರೂ. ಗಳಲ್ಲಿ
1962–63	58.5
1963–64	76.3
1964–65	221.4
1965–66	274.8
1966–67	310.6
1967–68	232.6
1968–69	330.6
1969–70	400.0

(ಆಧಾರ: ಭಾರತದ ರಬ್ಬರ್ ತಯಾರಿಕೆದಾರರ ಸಂಘದ ವಾರ್ಷಿಕ ವರದಿಗಳು)

ಇತ್ತೀಚೆಗೆ ನೀಡಿರುವ ರಿಯಾಯಿತಿಗಳಿಂದ ಉತ್ತೇಜನಗೊಂಡಿರುವುದೇ ಅಲ್ಲದೆ ಕನಿಷ್ಠ ಸೇ. !0ರಷ್ಟನ್ನು ರಫ್ತು ಮಾಡಲೇಬೇಕಾಗಿರುವುದರಿಂದ ಎಲ್ಲ ಕಂಪನಿಗಳೂ ರಫ್ತು ಮಾಡಲು ಮುಂದಾಗುತ್ತಿವೆ. ಹೀಗೆ ಎಲ್ಲ ಕಂಪನಿಗಳೂ ಮುಂದಾದಲ್ಲಿ 1973–74ರ ಹೊತ್ತಿಗೆ ಇವುಗಳ ರಫ್ತು ರೂ. 17 ಕೋಟಿ ಆಗಬಹುದೆಂದು ಅಂದಾಜು ಮಾಡಲಾಗಿದೆ.

ಮುನ್ನೋಟ

ಭಾರತದ ಟೈರ್ ಕೈಗಾರಿಕೆ ಒಳ್ಳೆಯ ಹೆಸರನ್ನು ಪಡೆದಿದ್ದಾಗ್ಯೂ ಅದು ಅನೇಕ ಆಂತರಿಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಕಚ್ಚಾ ಸಾಮಗ್ರಿಗಳ ವಿಪರೀತ ಬೆಲೆ ಮತ್ತು ಸರಕಾರದ ನಿಯಂತ್ರಣ–ಇವು ಪ್ರಮುಖವಾದ ಸಮಸ್ಯೆಗಳು. ಇವುಗಳಿಂದಾಗಿ ಕೈಗಾರಿಕೆಯು ಬೆಳವಣಿಗೆ ನಿರ್ದಿಷ್ಟವಾದ ರೀತಿಯಲ್ಲೇ ಹೋಗುತ್ತದೆಯೇ ಎಂಬ ಬಗ್ಗೆ ಸ್ವಲ್ಪ ಶಂಕೆಯುಂಟಾಗುತ್ತದೆ. ಆದರೂ 5ನೆಯ ಯೋಜನೆಯ ಅಂತ್ಯದ ವೇಳೆಗೆ 1 ಕೋಟಿ ಟೈರ್‌ಗಳನ್ನು ತಯಾರಿಸಬಹುದು ಮತ್ತು ರಫ್ತಿನಿಂದ 20 ಕೋಟಿ ರೂ. ಗಳನ್ನು ಗಳಿಸಬಹುದು ಎಂಬ ಆಶಾಭಾವನೆ ಕೈಗಾರಿಕೆಗೆ ಇದೆ.

ಭಾರತದ ಹಲವಾರು ಕೈಗಾರಿಕೆಗಳಲ್ಲಿ ಸಮನ್ವಯ ಮತ್ತು ಆಧುನೀಕರಣ ಕಾರ್ಯಕ್ರಮದ ಅಗತ್ಯ ಹೆಚ್ಚಾಗಿದೆ. ಮೊದಲನೆಯದಾಗಿ ಕೆಲವು ಕೈಗಾರಿಕೆಗಳನ್ನು ಹೆಚ್ಚು ಸೌಲಭ್ಯವಿರುವ ಪ್ರದೇಶಗಳಿಗೆ ಸ್ಥಳಾಂತರಿಸುವುದು ಅಗತ್ಯವಾಗಿದೆ. 1951ರಲ್ಲಿ ಜಾರಿಗೆ ಬಂದ ಕೈಗಾರಿಕೆಗಳ (ಅಭಿವೃದ್ಧಿ ಮತ್ತು ಆಡಳಿತ) ಕಾನೂನು ಇಂಥ ಸ್ಥಳಾಂತರಕ್ಕೆ ಅವಕಾಶ ನೀಡಿದೆ. . . . ಎರಡನೆಯದಾಗಿ ಉತ್ಪಾದನ ವಿಧಾನಗಳನ್ನು ಪುನರ್‌ವ್ಯವಸ್ಥೆಗೊಳಿಸಿ ಅದರ ಸಾಮರ್ಥ್ಯವನ್ನು ಹೆಚ್ಚಿಸುವುದು. ಮೂರನೆಯದಾಗಿ ಉತ್ಪಾದನೆಯ ಪ್ರತಿಯೊಂದು ವಿಭಾಗದಲ್ಲೂ ಆದಷ್ಟು ಮಿತವ್ಯಯವನ್ನು ಸಾಧಿಸುವುದು. ಉದಾಹರಣೆಗೆ ಕಬ್ಬಿಣ ಮತ್ತು ಉಕ್ಕು, ಸಕ್ಕರೆ, ಹತ್ತಿಗಿರಣಿ, ಸೆಣಬು ಮತ್ತು ಇತರ ಕೈಗಾರಿಕೆಗಳು ಪ್ರತಿಯೊಂದು ಯಾಂತ್ರಿಕ ವಿಭಾಗಕ್ಕೂ ಹೆಚ್ಚು ಸಂಖ್ಯೆಯ ಕೆಲಸಗಾರರನ್ನು ನೇಮಿಸಿಕೊಂಡಿವೆ. ಇದರಿಂದ ಉತ್ಪಾದನ ವೆಚ್ಚ ಹೆಚ್ಚಿ ಮಾರಾಟ ಬೆಲೆ ಏರುತ್ತಿದೆ. ಹಲವಾರು ಕಾರ್ಖಾನೆಗಳು ಆದರ್ಶಗಾತ್ರಕ್ಕಿಂತ ತುಂಬ ಸಣ್ಣದಾಗಿವೆ. ಆದುದರಿಂದ ಅವುಗಳ ಉತ್ಪಾದನ ಪ್ರಾವೀಣ್ಯ ಕೂಡ ಕಡಿಮೆ. ಉದಾಹರಣೆಗೆ ಕೆಲವು ಸಕ್ಕರೆ ಕಾರ್ಖಾನೆಗಳು ದಿನವೊಂದಕ್ಕೆ ಸರಾಸರಿ 800 ಟನ್‌ಗಳಿಗಿಂತಲೂ ಕಡಿಮೆ ಸಕ್ಕರೆಯನ್ನು ಉತ್ಪಾದಿಸುತ್ತವೆ. ಕಾಗದದ ಕಾರ್ಖಾನೆಗಳು ವರ್ಷಕ್ಕೆ 8,000 ಟನ್‌ಗಳಿಗಿಂತಲೂ ಕಡಿಮೆ ಪರಿಮಾಣದ ಕಾಗದವನ್ನು ತಯಾರಿಸುತ್ತಿವೆ. ಸಿಮೆಂಟ್ ಕಾರ್ಖಾನೆಗಳಲ್ಲಿ ಕೆಲವು ವರ್ಷವೊಂದಕ್ಕೆ 1,50,000 ಟನ್‌ಗಳಿಗಿಂತಲೂ ಕಡಿಮೆ ಸಿಮೆಂಟನ್ನು ಉತ್ಪಾದಿಸುತ್ತಿವೆ. ಕೆಲವು ಸಂಯುಕ್ತ ಹತ್ತಿ ಗಿರಣಿಗಳೂ 25,000 ಕದಿರಣಿಗೆ ಮತ್ತು 600 ಮಗ್ಗಗಳನ್ನು ಹೊಂದಿವೆ. ಇವೆಲ್ಲವೂ ಆದರ್ಶ ಕಾರ್ಖಾನೆಯ ಉತ್ಪಾದನ ಸಾಮರ್ಥ್ಯಕ್ಕಿಂತ ತುಂಬ ಕಡಿಮೆಯಾಗಿವೆ. ಆದುದರಿಂದ ಇಂತಹ ಕಾರ್ಖಾನೆಗಳ ಉತ್ಪಾದನ ಶಕ್ತಿಯನ್ನು ವೃದ್ಧಿಪಡಿಸಿ ಅವನ್ನು ಆದರ್ಶ ಕಾರ್ಖಾನೆಗಳ ಮಟ್ಟಕ್ಕೆ ತರುವುದು ಅವಶ್ಯವಾಗಿದೆ. ಈ ಕೆಲಸ ಸಮನ್ವಯ ಮತ್ತು ಆಧುನೀಕರಣಗಳಿಂದ ಮಾತ್ರ ಸಾಧ್ಯವಾಗುತ್ತದೆ[1].

—ಕೃಷ್ಣನಾಯಕ್

1 ಆಧುನಿಕ ಭಾರತದ ಆರ್ಥಿಕ ಸಮಸ್ಯೆಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು (1971), ಪು. 338

ಬಿ. ಎಂ. ಕುಮಾರಸ್ವಾಮಿ

ಕೊಲಂಬೋ ಯೋಜನೆಯಲ್ಲಿ ಭಾರತದ ಪಾತ್ರ

ಇಂದಿನ ಪ್ರಪಂಚ ರಾಜಕೀಯವಾಗಿ ಬಂಡವಾಳವಾದಿ ಮತ್ತು ಸಮತಾವಾದಿ ಎಂಬ ಎರಡು ಪ್ರಮುಖ ಬಣಗಳಾಗಿ ಒಡೆದಿದೆ. ಅದೇ ರೀತಿ, ಆರ್ಥಿಕವಾಗಿ ಮುಂದುವರಿದ ದೇಶಗಳು ಮತ್ತು ಹಿಂದುಳಿದ ದೇಶಗಳು ಎಂದು ಭಾಗವಾಗಿದೆ. ಅಮೆರಿಕ. ಬ್ರಿಟನ್. ರಷ್ಯ. ಜಪಾನ್ ಮತ್ತು ಪಶ್ಚಿಮ ಯೂರೋಪಿನ ರಾಷ್ಟ್ರಗಳು ಆರ್ಥಿಕವಾಗಿ ಮುಂದುವರಿದ ರಾಷ್ಟ್ರಗಳ ಗುಂಪಿಗೆ ಸೇರಿದ್ದರೆ, ಆಫ್ರಿಕ, ದಕ್ಷಿಣ ಅಮೆರಿಕ, ಹಾಗೂ ಆಗ್ನೇಯ ಏಷ್ಯಗಳ ದೇಶಗಳು. ಶತಮಾನಗಳ ದಾಸ್ಯ. ಜಡತೆ. ಅಜ್ಞಾನ ಮತ್ತು ಶೋಷಣೆಗೆ ಸಿಲುಕಿ. ಆರ್ಥಿಕವಾಗಿ ಅತಿ ಹಿಂದುಳಿದ ದೇಶಗಳ ಬಣಕ್ಕೆ ಸೇರಿವೆ. ಈ ದೇಶಗಳ ಹಿಂದುಳಿಕೆಯ ಬಗ್ಗೆ ಜಾಗತಿಕ ಪ್ರಜ್ಞೆ ಉಂಟಾದ್ದು ಸುಮಾರು 1940ರಿಂದ ಈಚೆಗೆ ಮಾತ್ರ.

ಅತ್ತ ಪಾಶ್ಚಾತ್ಯ ದೇಶಗಳು 19 ಮತ್ತು 20ನೆಯ ಶತಮಾನಗಳಲ್ಲಿ ಕೈಗಾರಿಕೆ, ವ್ಯವಸಾಯ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ಕ್ರಾಂತಿಕಾರಕ ಮುನ್ನಡೆ ಸಾಧಿಸಿ ತಮ್ಮ ಜೀವನಮಟ್ಟವನ್ನು ವೇಗವಾಗಿ ಹೆಚ್ಚಿಸಿಕೊಳ್ಳುತ್ತಿರುವಾಗ ಇತ್ತ ಏಷ್ಯ, ದಕ್ಷಿಣ ಅಮೆರಿಕ ಹಾಗೂ ಆಫ್ರಿಕದ ಅನೇಕ ದೇಶಗಳು ದಾರಿದ್ರ್ಯದಲ್ಲಿ ತೊಳಲುತ್ತ, ತಮ್ಮ ಆರ್ಥಿಕ ಮುನ್ನಡೆಗೆ ಏನೂ ಪ್ರಯತ್ನವನ್ನೇ ಮಾಡದಿರಲು ಮುಖ್ಯವಾದ ಒಂದು ಕಾರಣವೆಂದರೆ, ಇತ್ತೀಚಿನ ವರೆಗೂ ಅವು ರಾಜಕೀಯ ದಾಸ್ಯದಲ್ಲಿದ್ದದ್ದು.

1940ರಿಂದ ಈಚೆಗೆ ಈ ದೇಶಗಳು ದಾಸ್ಯಮುಕ್ತವಾಗಿ, ರಾಜಕೀಯ ಸ್ವಾತಂತ್ರ್ಯ ಪಡೆದಿರುವುದರಿಂದ ಅವುಗಳ ಆರ್ಥಿಕ ಮುನ್ನಡೆಯ ಹಾದಿಯಲ್ಲಿ ಪ್ರಬಲವಾದ ಅಡ್ಡಿಯೊಂದು ನಿವಾರಣೆ ಯಾದಂತಾಗಿದೆ. ಈಗ ಈ ದೇಶಗಳು ತಮ್ಮ ಆರ್ಥಿಕ ಪರಿಸ್ಥಿತಿಯ ಬಗ್ಗೆ ಸ್ಪಷ್ಟವಾದ ಪ್ರಜ್ಞೆ ತಳೆದು ತಮ್ಮ ಜೀವನಮಟ್ಟವನ್ನು ಸುಧಾರಿಸಿಕೊಳ್ಳಲು ಅಗತ್ಯವಾದ ತ್ವರಿತಗತಿಯ ಆರ್ಥಿಕ ಮುನ್ನಡೆ ಸಾಧಿಸಿಕೊಳ್ಳಬೇಕಾಗಿದೆ.

ಹಿಂದುಳಿದ ದೇಶಗಳು ಸಾಧಿಸಬೇಕಾದ ತೀವ್ರವಾದ ಆರ್ಥಿಕ ಮುನ್ನಡೆ. ಕೇವಲ ಬಿಡಿ ಬಿಡಿಯಾದ ರಾಷ್ಟ್ರಮಟ್ಟದ ಪ್ರಯತ್ನಗಳಿಂದ ಸಾಧ್ಯವಾಗುವುದಿಲ್ಲ ಎಂಬುದು ಸ್ಪಷ್ಟವಾಗಿದೆ. ಇದೊಂದು ಅಂತಾರಾಷ್ಟ್ರೀಯ ಸಮಸ್ಯೆ. ಈ ಸಮಸ್ಯೆಯ ಪರಿಹಾರಕ್ಕೆ ಅಂತಾರಾಷ್ಟ್ರೀಯ ಸಹಕಾರ ಅತ್ಯಗತ್ಯ. ಪ್ರತಿಯೊಂದು ಪ್ರದೇಶದಲ್ಲಿರುವ ಹಿಂದುಳಿದ ದೇಶಗಳೂ ಒಟ್ಟು ಸೇರಿ. ತಮ್ಮ ಪ್ರಗತಿ ಸಾಧನೆಗೆ ಸಾಂಘಿಕ ಪ್ರಯತ್ನ ಮಾಡುವುದು ಅನಿವಾರ್ಯ. ಈ ರೀತಿಯ ಸಾಂಘಿಕ ಪ್ರಯತ್ನ ಎರಡು ದಿಕ್ಕುಗಳಲ್ಲಿ ನಡೆಯಬೇಕು:

1 ತಮ್ಮ ಸಮಸ್ಯೆಗಳು ಮತ್ತು ಅಗತ್ಯಗಳ ಬಗ್ಗೆ ಮುಂದುವರಿದ ದೇಶಗಳ ಗಮನ ಸೆಳೆಯುವುದು ಹಾಗೂ ಅವುಗಳಿಂದ ತಾಂತ್ರಿಕ ಮತ್ತು ಬಂಡವಾಳ ನೆರವನ್ನು ಪಡೆಯುವುದು.

2 ತಮ್ಮತಮ್ಮಲ್ಲೇ ಸೌಹಾರ್ದ ಬೆಳೆಸಿಕೊಂಡು ಸಾಧ್ಯವಾದಷ್ಟು ಸಮಸ್ಯೆಗಳನ್ನು ಪರಸ್ಪರ ನೆರವು ನೀಡಿಕೆಯ ಮೂಲಕ ಪರಿಹರಿಸಿಕೊಳ್ಳುವುದು. ಆ ರೀತಿಯಲ್ಲಿ ಪ್ರಾದೇಶಿಕ ಆರ್ಥಿಕ ಸ್ವಯಂ ಪರಿಪೂರ್ಣತೆ ಸಾಧಿಸುವುದು.

ಇಂಥ ಸಾಂಘಿಕ ಪ್ರಯತ್ನದ ಮೂಲಕ ಮಾತ್ರ ಹಿಂದುಳಿದ ದೇಶಗಳು ಜಾಗತಿಕ ಸಹಕಾರ ಸೌಹಾರ್ದಗಳನ್ನು ಗಳಿಸಿ ತಮ್ಮ ಗುರಿ ಸಾಧನೆಯಲ್ಲಿ ಸಫಲವಾಗಲು ಸಾಧ್ಯ ಎಂಬ ಅರಿವು ಇಂದು ಹೆಚ್ಚಾಗಿರುವುದು ಸ್ವಾಗತಾರ್ಹ. ಆರ್ಥಿಕ ಪ್ರಗತಿ ಸಾಧನೆಯ ಸಲುವಾಗಿ ದಕ್ಷಿಣ ಹಾಗೂ ಆಗ್ನೇಯ ಏಷ್ಯ ದೇಶಗಳು ರಚಿಸಿಕೊಂಡಿರುವ 'ಕೊಲಂಬೋ ಯೋಜನೆ' ಇಂಥ ಸಾಂಘಿಕ ಪ್ರಯತ್ನಕ್ಕೆ ಉತ್ತಮ ಉದಾಹರಣೆಯಾಗಿದೆ.

ಯೋಜನೆಯ ಸ್ವರೂಪ

1950ರ ಜನವರಿಯಲ್ಲಿ ಕಾಮನ್ವೆಲ್ತ್ ದೇಶಗಳ ವಿದೇಶಾಂಗ ಮಂತ್ರಿಗಳ ಸಮ್ಮೇಳನವೊಂದು ಶ್ರೀ ಲಂಕಾದ ರಾಜಧಾನಿಯಾದ ಕೊಲಂಬೋ ನಗರದಲ್ಲಿ ನಡೆಯಿತು. ಈ ಸಮ್ಮೇಳನದಲ್ಲಿ ಹೊಸದಾಗಿ ಸ್ವಾತಂತ್ರ್ಯ ಪಡೆದಿದ್ದ ದಕ್ಷಿಣ ಹಾಗೂ ಆಗ್ನೇಯ ಏಷ್ಯ ದೇಶಗಳಲ್ಲಿ ಸಮಗ್ರವಾದ ರೀತಿಯಲ್ಲಿ ತೀವ್ರಗತಿಯ ಆರ್ಥಿಕ ಮುನ್ನಡೆಯನ್ನು ತರಲು ಅಗತ್ಯವಾದ ಕಾರ್ಯಕ್ರಮವನ್ನು ಯೋಜಿಸಲು ನಿರ್ಧರಿಸಲಾಯಿತು. ಈ ನಿರ್ಧಾರವನ್ನು ಕಾರ್ಯರೂಪಕ್ಕೆ ತರಲು ಸಮ್ಮೇಳನ ಒಂದು 'ಸಲಹಾ ಸಮಿತಿ'ಯನ್ನು ನೇಮಿಸಿತು.

ದಕ್ಷಿಣ ಹಾಗೂ ಆಗ್ನೇಯ ಏಷ್ಯ ದೇಶಗಳ ಜನಗಳ ಅಗತ್ಯಗಳ ಸರ್ವೇಕ್ಷಣೆಮಾಡುವುದು, ಅವುಗಳಲ್ಲಿ ದೊರಕಬಹುದಾದ ಸಂಪನ್ಮೂಲಗಳ ಅಂದಾಜು ಮಾಡುವುದು ಮುಂತಾದ ಜವಾಬ್ದಾರಿಗಳನ್ನು ಈ ಸಲಹಾ ಸಮಿತಿಗೆ ವಹಿಸಲಾಯಿತು.

ಕೊಲಂಬೋ ಸಮ್ಮೇಳನದ ಸಲಹಾ ಸಮಿತಿ 1950ರ ಮೇ ತಿಂಗಳಿನಲ್ಲಿ ಆಸ್ಟ್ರೇಲಿಯದ ಸಿಡ್ನಿ ನಗರದಲ್ಲಿ ಸಭೆ ಸೇರಿತು. ನಾಲ್ಕು ತಿಂಗಳುಗಳ ಅನಂತರ ಲಂಡನ್ನಿನಲ್ಲಿ ಪುನಃ ಸಭೆ ಸೇರಿ, ಕಾಮನ್ವೆಲ್ತ್ ದೇಶಗಳು ತಯಾರಿಸಿದ್ದ ಆರು ವರ್ಷಗಳ ಅಭಿವೃದ್ಧಿ ಯೋಜನೆಯನ್ನು ಪರಿಶೀಲಿಸಿತು. ಈ ಯೋಜನೆಯೇ ಕೊನೆಗೆ 'ದಕ್ಷಿಣ ಹಾಗೂ ಆಗ್ನೇಯ ಏಷ್ಯ ದೇಶಗಳಲ್ಲಿ ಸಹಕಾರಿ ಆರ್ಥಿಕ ಅಭಿವೃದ್ಧಿಗಾಗಿ ಕೊಲಂಬೋ ಯೋಜನೆ' ಎಂಬ ಹೆಸರು ಪಡೆಯಿತು.

ಕೊಲಂಬೋ ಯೋಜನೆ ಕಾಮನ್ವೆಲ್ತ್ ದೇಶಗಳಿಂದ ರೂಪಿಸಲ್ಪಟ್ಟರೂ, ಪ್ರಾರಂಭದಿಂದಲೂ ದಕ್ಷಿಣ ಹಾಗೂ ಆಗ್ನೇಯ ಏಷ್ಯದ ಎಲ್ಲ ದೇಶಗಳನ್ನೂ ಒಳಗೊಳ್ಳಬೇಕೆಂಬುದೇ ಗುರಿಯಾಗಿತ್ತು. ಆರ್ಥಿಕ ಮುನ್ನಡೆಯ ಸಾಧನೆಗಾಗಿ ಪ್ರಾರಂಭವಾದ ಈ ಸಾಮೂಹಿಕ ಪ್ರಯತ್ನದ ಕಡೆಗೆ ಪಾಶ್ಚಾತ್ಯ ದೇಶಗಳ ದೃಷ್ಟಿ ಹರಿಯಿತು. ಅವುಗಳಿಂದ ಅಪೇಕ್ಷಿತ ಸಹಕಾರವೂ ದೊರೆಯಿತು.

ಪ್ರಾರಂಭದಲ್ಲಿ ಕೇವಲ ಏಳು ಸದಸ್ಯ ದೇಶಗಳಿದ್ದುವು. ಇಂದು ಒಟ್ಟು ಸದಸ್ಯತ್ವ 24ಕ್ಕೆ ಏರಿದೆ. ಇವುಗಳನ್ನು ಕೊಲಂಬೋ ಯೋಜನೆಯ ಪ್ರದೇಶಕ್ಕೆ ಒಳಪಟ್ಟ ದೇಶಗಳು ಮತ್ತು ಹೊರಗಿನ ದೇಶಗಳು ಎಂದು ಸ್ಥೂಲವಾಗಿ ವಿಂಗಡಿಸಬಹುದು. ಪ್ರದೇಶಕ್ಕೆ ಒಳಪಟ್ಟ ದೇಶಗಳು: ಅಫ್ಘಾನಿಸ್ತಾನ, ಭೂತಾನ, ಬರ್ಮ, ಇಂಡಿಯ, ಶ್ರೀ ಲಂಕಾ, ಇರಾನ್, ಖ್ಮೇರ್ ಗಣರಾಜ್ಯ, ಕೊರಿಯಾ ಗಣರಾಜ್ಯ, ಮಲೇಷ್ಯ, ನೇಪಾಳ, ಪಾಕಿಸ್ತಾನ, ಫಿಲಿಪ್ಪೀನ್ಸ್, ಸಿಂಗಪುರ, ಥೈಲೆಂಡ್ ಮತ್ತು ವಿಯಟ್ನಾಂ ಗಣರಾಜ್ಯ. ಪ್ರದೇಶಕ್ಕೆ ಹೊರಪಟ್ಟ ದೇಶಗಳು: ಆಸ್ಟ್ರೇಲಿಯ, ಬ್ರಿಟನ್, ಕೆನಡ, ಜಪಾನ್, ನ್ಯೂ ಜೀಲೆಂಡ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳು.

ರಚನೆ

ಕೊಲಂಬೋ ಯೋಜನೆಯ ರಚನೆಯಲ್ಲಿ ಮೂರು ಅಂಗಸಂಸ್ಥೆಗಳು ಪ್ರಧಾನವಾಗಿವೆ:

1 ಸಲಹಾ ಸಮಿತಿ: ಇದು ಅತ್ಯಂತ ಪ್ರಧಾನವಾದ ಅಂಗಸಂಸ್ಥೆ. ಯೋಜನೆಯ ಎಲ್ಲ ನೀತಿ ನಿರೂಪಣೆ ಮಾಡುವ ಸಂಸ್ಥೆ ಇದು. ಸದಸ್ಯರಾಷ್ಟ್ರಗಳ ಮಂತ್ರಿಗಳು ಇದರ ಸದಸ್ಯರಾಗಿರುವರು. ಇದು ಪ್ರತಿವರ್ಷ ಯಾವುದಾದರೊಂದು ಸದಸ್ಯ ದೇಶದ ರಾಜಧಾನಿಯಲ್ಲಿ ಸಭೆ ಸೇರಿ, ವಲಯ

ದೇಶಗಳ ಅಭಿವೃದ್ಧಿಯ ಮಟ್ಟವನ್ನು ಸಮೀಕ್ಷಿಸುತ್ತದೆ ಮತ್ತು ತೀವ್ರ ಅಭಿವೃದ್ಧಿಗೆ ಅಗತ್ಯವಾದ, ಅಂತರರಾಷ್ಟ್ರೀಯ ಬಂಡವಾಳ ಮತ್ತು ತಾಂತ್ರಿಕ ನೆರವಿನ ಬಗ್ಗೆ ವಿಚಾರ ಮಾಡುತ್ತದೆ.

2 ತಾಂತ್ರಿಕ ಸಹಕಾರ ಸಮಿತಿ: ಇದು ಸದಸ್ಯ ದೇಶಗಳ ಪ್ರತಿನಿಧಿಗಳಿಂದ ರಚಿತವಾಗಿದೆ. ಕೊಲಂಬೋ ದಲ್ಲಿ ಕ್ರಮವಾಗಿ ಸಭೆ ಸೇರಿ ಸದಸ್ಯ ದೇಶಗಳ ನಡುವೆ ಪರಸ್ಪರ ತಾಂತ್ರಿಕ ನೆರವನ್ನು ಉತ್ತೇಜಿಸುವ ಹಾಗೂ ಅಂಥ ಯೋಜನೆಗಳನ್ನು ಸಮನ್ವಯಗೊಳಿಸುವ ಕಾರ್ಯಕ್ಕೆ ಸಂಬಂಧಿಸಿದಂತೆ ಚರ್ಚೆ ಮಾಡುತ್ತದೆ.

3 ಕೊಲಂಬೋ ಯೋಜನೆಯ ಬ್ಯೂರೋ: ವಲಯ ರಾಷ್ಟ್ರಗಳಿಗೆ ದೊರೆತ ತಾಂತ್ರಿಕ ನೆರವಿನ ದಾಖಲೆ ಇಡುವುದು. ಅಂತರ್ವಲಯ ತಾಂತ್ರಿಕ ತರಬೇತಿಯ ಕಾರ್ಯಕ್ರಮಗಳನ್ನು ಯೋಜಿಸುವುದು ಮತ್ತು ಕೊಲಂಬೋ ಯೋಜನೆಗೆ ಸಂಬಂಧಿಸಿದ ಎಲ್ಲ ಸುದ್ದಿ ಸಮಾಚಾರಗಳನ್ನು ಪ್ರಸಾರ ಮಾಡುವುದು ಈ ಪುಟ್ಟ ಅಂಗಸಂಸ್ಥೆಯ ಜವಾಬ್ದಾರಿಗಳಾಗಿವೆ.

ಮೊದಲು ಕೊಲಂಬೋ ಯೋಜನೆಯನ್ನು ಆರು ವರ್ಷಗಳ ಯೋಜನೆಯಾಗಿ ರೂಪಿಸಲಾಯಿತು. ಅನಂತರ ಸಲಹಾ ಸಮಿತಿ ಅದನ್ನು ಕ್ರಮವಾಗಿ 1957–61, 1961–66, 1966–71 ಮತ್ತು 1971–76 ಈ ರೀತಿ ಮುಂದುವರಿಸುತ್ತ ಬಂದಿದೆ. ಕಾರ್ಯಾವಧಿಯನ್ನು 1976ರಿಂದ ಮುಂದು ವರಿಸುವ ಪ್ರಶ್ನೆಯನ್ನು 1974ರ ಸಭೆಯಲ್ಲಿ ನಿರ್ಧರಿಸಲಾಗುವುದು.

ಕೊಲಂಬೋ ಯೋಜನೆಯ ಆಡಳಿತದಲ್ಲಿ ಯಾವುದೇ ಅಂಗ ಸಂಸ್ಥೆಯಲ್ಲಿ ಓಟು ಮಾಡುವ ಪದ್ಧತಿಯಿಲ್ಲ. ನೆರವಿನ ವ್ಯವಹಾರಗಳನ್ನು ದ್ವಿಪಕ್ಷೀಯ ಆಧಾರದ ಮೇಲೆ ಸರ್ಕಾರಗಳ ಮಟ್ಟದಲ್ಲಿ ನಡೆಸಲಾಗುತ್ತದೆ. ಕೆಲವು ಬಾರಿ ಖಾಸಗಿ ಸಂಸ್ಥೆಗಳು ನೆರವನ್ನು ಪಡೆಯಬಹುದಾದರೂ, ಅಂಥ ಕೋರಿಕೆ ಸಂಬಂಧಪಟ್ಟ ಸರ್ಕಾರದ ಮೂಲಕವೇ ಬರಬೇಕಾಗುತ್ತದೆ.

ಈ ಯೋಜನೆಯಲ್ಲಿ ನೀಡಲಾಗುವ ನೆರವು ಮುಖ್ಯವಾಗಿ ಎರಡು ರೀತಿಯದು:

1 ಅಭಿವೃದ್ಧಿ ಯೋಜನೆಗಳಿಗಾಗಿ ಸಾಲ ಮತ್ತು ದಾನದ ರೂಪದಲ್ಲಿ ಬಂಡವಾಳ ಸಹಾಯ.

2 ತಾಂತ್ರಿಕ ನೆರವು, ಪರಿಣತರ ಸೇವೆ, ವಿದೇಶದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಹೆಚ್ಚಿನ ಅಭ್ಯಾಸಾವಕಾಶ ಗಳು, ಸಂಶೋಧನೆ ಮತ್ತು ತರಬೇತಿಯ ಸಲುವಾಗಿ ಸಲಕರಣೆಗಳ ಪೂರೈಕೆ ಮತ್ತು ಅಂತರ್ವಲಯ ತರಬೇತು.

ಸದಸ್ಯರಾಷ್ಟ್ರವಾಗಿ ಭಾರತ ಗಳಿಸಿರುವ ಲಾಭ

ಭಾರತ ಕೊಲಂಬೋ ಯೋಜನೆಯ ಸದಸ್ಯ ರಾಷ್ಟ್ರವಾಗಿ ಆಸ್ಟ್ರೇಲಿಯ, ಕೆನಡ, ನ್ಯೂ ಜೀಲೆಂಡ್' ಇಂಗ್ಲೆಂಡ್ ಮತ್ತು ಜಪಾನ್ ದೇಶಗಳಿಂದ ಮೇಲೆ ಹೇಳಿದ ಎರಡೂ ರೀತಿಯ ನೆರವುಗಳನ್ನು ಅಪಾರ ವಾಗಿ ಪಡೆದಿದೆ.

1970ರ ನವಂಬರ್ ತಿಂಗಳ ವರೆಗೆ ಆಸ್ಟ್ರೇಲಿಯ ಭಾರತಕ್ಕೆ 20.62 ಕೋಟಿ ರೂ.ಗಳಷ್ಟು ಸಲಕರಣೆಗಳು ಮತ್ತು ಸಾಮಗ್ರಿಗಳನ್ನು ದಾನವಾಗಿ ನೀಡಿದೆ. ಇದೇ ಕಾಲಾವಧಿಯಲ್ಲಿ ಅದು ನೀಡಿರುವ ಆಹಾರ ಧಾನ್ಯಗಳ ನೆರವು 42.26 ಕೋಟಿ ರೂ.ಗಳಷ್ಟಾಗಿದೆ. ಇದಲ್ಲದೆ1,001 ಭಾರತೀಯರಿಗೆ ಆಸ್ಟ್ರೇಲಿಯದಲ್ಲಿ ತಾಂತ್ರಿಕ ತರಬೇತಿ ದೊರಕಿದೆ. 50 ಜನ ಪರಿಣತರ ಸೇವೆಯನ್ನೂ ಅದು ಭಾರತಕ್ಕೆ ಒದಗಿಸಿದೆ.

ಆಸ್ಟ್ರೇಲಿಯದ ನೆರವು ಪಡೆದ ಕೆಲವು ಮುಖ್ಯ ಕ್ಷೇತ್ರಗಳೆಂದರೆ ತುಂಗಭದ್ರಾ ಮತ್ತು ರಾಮ ಗುಂಡಂ ವಿದ್ಯುಚ್ಛಕ್ತಿ ಯೋಜನೆಗಳು, ಅಖಿಲ ಭಾರತ ರೇಡಿಯೋ, ರೈಲ್ವೆ ಅಭಿವೃದ್ಧಿ, ರಾಜಸ್ಥಾನ ಕಾಲುವೆ ಯೋಜನೆ ಮತ್ತು ಡೈರಿ ಅಭಿವೃದ್ಧಿ ಯೋಜನೆ.

ಕೆನಡ ನಮಗೆ ಒಟ್ಟು 348 ಕೋಟಿ ರೂ.ಗಳಷ್ಟು ನೆರವನ್ನಿತ್ತಿದೆ. ಇದರಲ್ಲಿ 182 ಕೋಟಿ ರೂ· ಗಳಷ್ಟು ಗೋಧಿಯ ರೂಪದಲ್ಲೂ 8.83 ಕೋಟಿ ರೂ.ಗಳಷ್ಟು ವಿಶೇಷ ಆಹಾರ ಸಹಾಯದ ರೂಪದಲ್ಲೂ ದೊರಕಿದೆ. ಉಳಿದ ನೆರವು, ಸಲಕರಣೆಗಳು ಮತ್ತು ಸಾಮಗ್ರಿಗಳ ರೂಪದಲ್ಲಿದೆ. ಕೆನಡ–ಇಂಡಿಯಾ ರಿಯಾಕ್ಟರ್, ಮಯೂರಾಕ್ಷಿ, ಕುಂದಾ ಮತ್ತು ಇಡಿಕ್ಕಿ ಜಲವಿದ್ಯುದ್ಯೋಜನೆಗಳು

ಭಾರತದ ಆರ್ಥಿಕ ಮುನ್ನಡೆಗೆ ಕೆನಡಾದ ನೆರವಿನ ಉತ್ತಮ ನಿದರ್ಶನಗಳಾಗಿವೆ. ಇಷ್ಟಲ್ಲದೆ ಕೆನಡ 80 ಪರಿಣತರ ಸೇವೆಯನ್ನು ಒದಗಿಸಿದೆ ಹಾಗೂ 1.188 ಭಾರತೀಯರಿಗೆ ತಾಂತ್ರಿಕ ತರಬೇತು ನೀಡಿದೆ.

ಕ್ಷೀರಾಭಿವೃದ್ಧಿ ಯೋಜನೆಗಳು ಹಾಗೂ ಅಖಿಲ ಭಾರತೀಯ ವೈದ್ಯ ವಿಜ್ಞಾನಗಳ ಸಂಸ್ಥೆ-ಇವು ನ್ಯೂ ಜೀಲೆಂಡಿನ ನೆರವಿನಿಂದ ಹೆಚ್ಚು ಲಾಭ ಪಡೆದಿವೆ. 1970ರ ಕೊನೆಯ ವರೆಗೆ ನ್ಯೂ ಜೀಲೆಂಡಿನಿಂದ ಪಡೆದಿರುವ ಒಟ್ಟು ನೆರವು 5.57 ಕೋಟಿ ರೂ.ಗಳಷ್ಟಾಗುತ್ತದೆ.

ಕೊಲಂಬೊ ಯೋಜನೆಯ ಪ್ರಕಾರ ಭಾರತಕ್ಕೆ ಇಂಗ್ಲೆಂಡಿನಿಂದ ಬಂಡವಾಳದ ನೆರವೇನೂ ದೊರೆತಿಲ್ಲ. ಆದರೆ ಅದು ದೆಹಲಿಯಲ್ಲಿರುವ ಭಾರತೀಯ ತಂತ್ರಶಾಸ್ತ್ರಸಂಸ್ಥೆಗೆ 6.5 ಲಕ್ಷ ಪೌಂಡುಗಳ ಬೆಲೆಬಾಳುವ ಉಪಕರಣಗಳನ್ನೂ ದೇಶದ ಇತರ ವೈಜ್ಞಾನಿಕ ಸಂಸ್ಥೆಗಳಿಗೆ 5 ಲಕ್ಷ ಪೌಂಡು ಬೆಲೆಬಾಳುವ ವೈಜ್ಞಾನಿಕ ಉಪಕರಣಗಳನ್ನೂ ಒದಗಿಸಿದೆ. 2.863 ಭಾರತೀಯರಿಗೆ ಇಂಗ್ಲೆಂಡಿನಲ್ಲಿ ತಾಂತ್ರಿಕ ತರಬೇತು ನೀಡಲಾಗಿದೆ. 278 ಜನ ಬ್ರಿಟಿಷ್ ಪರಿಣತರ ಸೇವೆ ಭಾರತಕ್ಕೆ ದೊರೆತಿದೆ.

ಭಾರತಕ್ಕೆ ಜಪಾನಿನ ನೆರವು ಮುಖ್ಯವಾಗಿ ತಾಂತ್ರಿಕ ತರಬೇತು ಹಾಗೂ ಪರಿಣತರ ಸೇವೆಯ ರೂಪದಲ್ಲಿದೆ. ವ್ಯವಸಾಯದ ಪ್ರದರ್ಶನ ಕ್ಷೇತ್ರಗಳು, ಮೀನುಗಾರಿಕೆ, ಸಣ್ಣ ಗಾತ್ರದ ಕೈಗಾರಿಕೆಗಳು, ಸಾರ್ವಜನಿಕ ಆರೋಗ್ಯ-ಈ ಕ್ಷೇತ್ರಗಳು ಜಪಾನಿನ ನೆರವಿನಿಂದ ಹೆಚ್ಚು ಲಾಭ ಗಳಿಸಿವೆ. 1970ರ ವರೆಗೆ 483 ಭಾರತೀಯರಿಗೆ ಜಪಾನಿನಲ್ಲಿ ತರಬೇತು ನೀಡಲಾಗಿದೆ. 94 ಜನ ಜಪಾನಿ ಪರಿಣತರ ಸೇವೆ ಭಾರತಕ್ಕೆ ದೊರಕಿದೆ.

ಭಾರತದ ನೆರವು ನೀಡಿಕೆ

ಕೊಲಂಬೊ ಯೋಜನೆಯ ಸದಸ್ಯ ರಾಷ್ಟ್ರವಾಗಿ ಭಾರತ, ಮುಂದುವರಿದ ರಾಷ್ಟ್ರಗಳಿಂದ ಅಪಾರವಾದ ನೆರವನ್ನು ಪಡೆದಿದೆಯಷ್ಟೆ. ಪ್ರತಿಯಾಗಿ ಇತರ ರಾಷ್ಟ್ರಗಳಿಗೆ ನೆರವು ನೀಡುವಲ್ಲಿ ಭಾರತ ಕೊಲಂಬೊ ಯೋಜನೆಯ ವಲಯ ರಾಷ್ಟ್ರಗಳಲ್ಲಿ ಅತ್ಯಂತ ಹಿರಿಯ ಪಾತ್ರ ವಹಿಸಿದೆ ಎಂಬುದು ಗಮನಾರ್ಹವಾದುದು. 1972ರ ವರೆಗೆ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಭಾರತ ನೀಡಿರುವ ಒಟ್ಟು ನೆರವು 122 ಕೋಟಿ ರೂ.ಗಳಷ್ಟಾಗುತ್ತದೆ.

1969ರ ಮಾರ್ಚ್ ವರೆಗೆ ಭಾರತ ನೇಪಾಳಕ್ಕೆ ಒಟ್ಟು 60 ಕೋಟಿ ರೂ.ಗಳಷ್ಟು ನೆರವು ನೀಡಿದೆ. ಅದರಲ್ಲಿ 26 ಕೋಟಿ ರೂ.ಗಳನ್ನು ರಸ್ತೆ ಮತ್ತು ವಿಮಾನ ನಿಲ್ದಾಣಗಳ ನಿರ್ಮಾಣ ಮತ್ತು ನಿರ್ವಹಣೆಗಾಗಿ ವೆಚ್ಚ ಮಾಡಲಾಗಿದೆ. ನೀರಾವರಿ, ವಿದ್ಯುಚ್ಛಕ್ತಿ, ಕುಡಿಯುವ ನೀರಿನ ಸರಬರಾಜು-ಈ ಬಾಬುಗಳಿಗೆ 22.24 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ. ವ್ಯವಸಾಯ, ಸಾಮೂಹಿಕ ಅಭಿವೃದ್ಧಿ ಮತ್ತು ವಿದ್ಯಾಭ್ಯಾಸದ ಕ್ಷೇತ್ರಗಳಲ್ಲೂ ನೇಪಾಳಕ್ಕೆ ಭಾರತ ಹೆಚ್ಚಿನ ಸಹಾಯ ಮಾಡಿದೆ.

ಭೂತಾನದ ಎರಡನೆಯ ಪಂಚವಾರ್ಷಿಕ ಯೋಜನೆಯನ್ನು (1966–1971) ಕಾರ್ಯಗತಗೊಳಿಸಲು ಭಾರತ ಸುಮಾರು 20 ಕೋಟಿ ರೂ.ಗಳಷ್ಟು ಧನಸಹಾಯ ನೀಡಿದೆ.

ವಲಯ ರಾಷ್ಟ್ರಗಳಿಗೆ ತಾಂತ್ರಿಕ ನೆರವು ನೀಡುವಲ್ಲಿಯೂ ಭಾರತದ ಪಾತ್ರ ಹಿರಿದಾಗಿದೆ. 1970ರ ಕೊನೆಯ ವರೆಗೆ ಭಾರತ ಒಟ್ಟು 4.674 ತಾಂತ್ರಿಕ ತರಬೇತಿ ಅವಕಾಶಗಳನ್ನು ನೀಡಿದೆ. ಇದರಲ್ಲಿ ಸುಮಾರು ಅರ್ಧದಷ್ಟು ಅವಕಾಶಗಳು ನೇಪಾಳಿಗಳಿಗೆ ದೊರಕಿವೆ. ಶ್ರೀ ಲಂಕಾಗೆ 541 ಅವಕಾಶಗಳು, ಮಲೇಷ್ಯಕ್ಕೆ 420; ಥೈಲೆಂಡಿಗೆ 346, ಫಿಲಿಪ್ಪೀನ್ಸ್‌ಗೆ 315, ಅಫ್ಘಾನಿಸ್ತಾನಕ್ಕೆ 199 ಮತ್ತು ಬರ್ಮಕ್ಕೆ 108 ಅವಕಾಶಗಳು ದೊರೆತಿವೆ.

ಇದಲ್ಲದೆ ವಲಯ ರಾಷ್ಟ್ರಗಳಲ್ಲಿ ನೀರಾವರಿ, ಜಲಶಕ್ತಿ, ಸಮೀಕ್ಷೆ, ಸಹಕಾರೀ ಸಂಸ್ಥೆಗಳ ನಿರ್ವಹಣೆ, ಮೀನುಗಾರಿಕೆ, ಸಣ್ಣ ಗಾತ್ರದ ಕೈಗಾರಿಕೆಗಳು, ವಿದ್ಯಾಭ್ಯಾಸ, ವ್ಯವಸಾಯ, ಅಂಕಿ-ಅಂಶ, ಕ್ಷೀರಾಭಿವೃದ್ಧಿ, ನೌಕಾಶಾಸ್ತ್ರ, ರೈಲ್ವೆ, ವಿಮಾನ ಸಂಚಾರ ಮುಂತಾದ ಕ್ಷೇತ್ರಗಳ ಅಭಿವೃದ್ಧಿಗಾಗಿ 300 ಜನ ಪರಿಣತರ ಸೇವೆಯನ್ನೂ ಭಾರತ ಒದಗಿಸಿದೆ.

ಇದೇ ರೀತಿ ವಲಯದ ಅನೇಕ ದೇಶಗಳಿಗೆ ಭಾರತ ಸಲಕರಣೆಗಳು ಮತ್ತು ಸಾಮಗ್ರಿಗಳನ್ನು ಒದಗಿಸಿದೆ. 1967ರಲ್ಲಿ ಕ್ಷೀರಾಭಿವೃದ್ಧಿಯ ಸಲುವಾಗಿ ಶ್ರೀ ಲಂಕಾಗೆ 1,000 ಕರೆಯುವ ಎಮ್ಮೆಗಳನ್ನು ದಾನವಾಗಿ ಕೊಡಲಾಯಿತು. ಇವರ ಮೌಲ್ಯ 40 ಲಕ್ಷ ರೂ.ಗಳು.

ಬರ್ಮ ದೇಶ 1.200 ಜನರಿಗೆ ಮೋಜಣಿ ತರಬೇತಿ ನೀಡುವ ಸಲುವಾಗಿ ಮೋಜಣಿ ಉಪಕರಣಗಳನ್ನು ನೀಡಬೇಕೆಂದು ಕೋರಿತು. 2.3 ಲಕ್ಷ ರೂ. ಮೌಲ್ಯದ ಉಪಕರಣಗಳಲ್ಲಿ ಹೆಚ್ಚಿನ ಪಾಲನ್ನು ಈಗಾಗಲೇ ಸರಬರಾಜು ಮಾಡಲಾಗಿದೆ. ಚರಿತ್ರಾರ್ಹವಾದ ಕಲಾವಸ್ತುಗಳನ್ನು ರಕ್ಷಿಸುವ ಸಲುವಾಗಿ ಬರ್ಮ ದೇಶಕ್ಕೆ ಕೆಲವು ವಿಶೇಷ ಉಪಕರಣಗಳು ಮತ್ತು ರಾಸಾಯನಿಕ ದ್ರವ್ಯಗಳನ್ನು ಭಾರತ ಒದಗಿಸಿದೆ.

1968 ಮತ್ತು 1969ರಲ್ಲಿ ಭಾರತ ಅಫ್ಘಾನಿಸ್ಥಾನಕ್ಕೆ ಖಾನಾಬಾದ್–ಆಲ್ಚಿನ್ ಯೋಜನೆಯ ಪೂರ್ವಭಾವೀ ಸಮೀಕ್ಷೆ ಹಾಗೂ ಯೋಗ್ಯತೆಯ ಅಧ್ಯಯನ ನಡೆಸಲು, ಕಾಲುವೆಗಳ ನಕ್ಷೆ ತಯಾರಿಸಲು, ಕಾಬೂಲ್ ನಗರಕ್ಕೆ ಮತ್ತು ಅದರ ಹೊರವಲಯಕ್ಕೆ ವಿದ್ಯುತ್ತಿನ ಸರಬರಾಜಿಗೆ ಸಂಬಂಧಿಸಿದಂತೆ ವಿಶದವಾದ ವೆಚ್ಚ, ಲೆಕ್ಕಾಚಾರ ಮತ್ತು ಯೋಜನೆ ನಿರ್ಮಾಣಕ್ಕಾಗಿ ತನ್ನ ಎಂಜನಿಯರುಗಳ ಸೇವೆಯನ್ನು ಒದಗಿಸಿತು.

ಕಾರ್ಯೋಡಿಯದ ಮೇಕಾಂಗ್ ನದೀಯೋಜನೆ ಸಮಿತಿಯ ಕೋರಿಕೆಯ ಮೇರೆಗೆ ಕೆಳಗಣ ಮೇಕಾಂಗ್ ಪ್ರದೇಶದಲ್ಲಿ ಪ್ರವಾಹ ಮುನ್ಸೂಚನಾ ಸೇವೆಯ ವ್ಯವಸ್ಥೆಗಾಗಿ ಭಾರತ ಒಬ್ಬ ಪರಿಣತರ ಸೇವೆಯನ್ನು ಒದಗಿಸಿತು.

ಥೈಲೆಂಡಿನ ರೈಲ್ವೆ ವ್ಯವಸ್ಥೆಯ ಅಧ್ಯಯನ ನಡೆಸಲು ಮತ್ತು ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ರೈಲುಗಳ ವೇಗವನ್ನು ಹೆಚ್ಚಿಸುವ ಬಗ್ಗೆ ಅಧ್ಯಯನ ನಡೆಸಿ ವರದಿ ಮಾಡಲು ರೈಲ್ವೆ ಎಂಜಿನಿಯರುಗಳ ತಂಡ ಒಂದನ್ನು ಭಾರತ ಆ ದೇಶದ ಕೋರಿಕೆಯ ಮೇರೆಗೆ ಕಳಿಸಿಕೊಟ್ಟಿತು.

ಇದೇ ರೀತಿ, ಫಿಲಿಫೀನ್ಸ್‌ನಲ್ಲಿ ಚಂಡಮಾರುತದಿಂದ ಸಂಚಾರ ವ್ಯವಸ್ಥೆ ಅಸ್ತವ್ಯಸ್ತಗೊಂಡಾಗ ಅದನ್ನು ತ್ವರಿತವಾಗಿ ಸರಿಪಡಿಸುವ ಬಗ್ಗೆ ಸೂಚನೆಗಳನ್ನು ಕೊಡಲು ಭಾರತ ಆ ದೇಶಕ್ಕೆ ರೈಲ್ವೆ ಎಂಜಿನಿಯರುಗಳ ತಂಡವನ್ನು ಕಳುಹಿಸಿತು. ಆ ತಂಡ ಫಿಲಿಫೀನ್ಸ್ ರೈಲ್ವೆ ವ್ಯವಸ್ಥೆಯನ್ನು ಆಧುನೀಕರಣಗೊಳಿಸುವ ಕ್ರಮಗಳ ಬಗ್ಗೆಯೂ ತಿಳಿವಳಿಕೆ ನೀಡುವ ಕೆಲಸ ನೆರವೇರಿಸಿತು.

1950ರಲ್ಲಿ ಕೊಲಂಬೋ ಯೋಜನೆ ಉದಯವಾದಂದಿನಿಂದ 1970ರ ಕೊನೆಯ ವರೆಗೆ ಭಾರತ ಒಟ್ಟು 4.12 ಕೋಟಿ ರೂ.ಗಳ ತಾಂತ್ರಿಕ ನೆರವನ್ನು ವಲಯದ ಇತರ ದೇಶಗಳಿಗೆ ನೀಡಿದೆ. ಇದಲ್ಲದೆ ಮೂರನೆಯ ದೇಶಗಳ ಪರವಾಗಿ ತಾಂತ್ರಿಕ ತರಬೇತು ಅವಕಾಶಗಳನ್ನು ಕಲ್ಪಿಸುವುದರಲ್ಲೂ ಭಾರತ ಮುಂದಿದೆ. ಈ ವ್ಯವಸ್ಥೆಯಲ್ಲಿ ಮೂರನೆಯ ದೇಶದ ವೆಚ್ಚದಲ್ಲಿ ಭಾರತದಲ್ಲಿ ತಾಂತ್ರಿಕ ತರಬೇತಿ ಕೊಡಲಾಗುತ್ತದೆ. ಅಮೆರಿಕ ಮತ್ತು ವಿಶ್ವಸಂಸ್ಥೆಯ ಅಭಿವೃದ್ಧಿ ಯೋಜನೆಗಳು ಬೇರೆ ದೇಶಗಳ ಅನೇಕ ಜನರಿಗೆ ಈ ವ್ಯವಸ್ಥೆಯ ಪ್ರಕಾರ ಭಾರತದಲ್ಲಿ ತಾಂತ್ರಿಕ ತರಬೇತಿಯನ್ನು ಕೊಡಿಸಿವೆ. ಅಭ್ಯರ್ಥಿ ತನ್ನ ದೇಶದಲ್ಲಿರುವಂಥ ಪರಿಸರದಲ್ಲೇ ತರಬೇತು ಪಡೆಯುವುದು ಹೆಚ್ಚು ಲಾಭದಾಯಕ. ಆದಕಾರಣ ದಕ್ಷಿಣ ಮತ್ತು ಆಗ್ನೇಯ ಏಷ್ಯ ದೇಶಗಳ ಜನಗಳಿಗೆ ಸಮಾನ ಪರಿಸರವಿರುವ ಭಾರತದಲ್ಲಿ ತಾಂತ್ರಿಕ ತರಬೇತು ಒದಗಿಸುವುದು ಈ ವ್ಯವಸ್ಥೆಯ ಉದ್ದೇಶವಾಗಿದೆ.

1972ರ ಜುಲೈ 1ರ ವರೆಗೆ ಕೊಲಂಬೋ ಯೋಜನೆ 21 ವರ್ಷಗಳ ಅಮೂಲ್ಯ ಸೇವೆ ಸಲ್ಲಿಸಿರುತ್ತದೆ. ದಕ್ಷಿಣ ಹಾಗೂ ಆಗ್ನೇಯ ಏಷ್ಯ ರಾಷ್ಟ್ರಗಳ ದಾರಿದ್ರ್ಯದ ಸಂಕೋಲೆಯನ್ನು ಹರಿಯಲೋಸುಗ ಕಿರಿದಾಗಿ ಪ್ರಾರಂಭವಾದ ಈ ಸಂಸ್ಥೆ ಇಂದು ಬೃಹತ್ತಾಗಿ ಬೆಳೆದಿದೆ. ಈ ಮಹತ್ಕಾರ್ಯದಲ್ಲಿ ಭಾರತ ದಾನಿ ರಾಷ್ಟ್ರವಾಗಿ ಹಿರಿಯ ಪಾತ್ರ ವಹಿಸಿರುವುದು ಹೆಮ್ಮೆಯ ಸಂಗತಿ. ಕೊಲಂಬೋ ಯೋಜನೆಯ ವಲಯ ರಾಷ್ಟ್ರಗಳಿಂದ ಬಂದಿರುವ ಒಟ್ಟು ನೆರವಿನಲ್ಲಿ 59%ರಷ್ಟು ಭಾರತದ ಕೊಡುಗೆಯಾಗಿದೆ.

ಭಾರತವೇ ಸ್ವತಃ ಬಂಡವಾಳದ ಅಭಾವವನ್ನು ಎದುರಿಸುತ್ತಿದೆ ಹಾಗೂ ಅದರ ಅಂತಾರಾಷ್ಟ್ರೀಯ ವ್ಯಾಪಾರಗಳಿಕೆ ಅಷ್ಟೇನೂ ಸಮರ್ಪಕವಾಗಿಲ್ಲ. ಆಂತರಿಕವಾಗಿಯೂ ದೇಶ ಹಲವಾರು ಬೃಹತ್ ಆರ್ಥಿಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಭಾರತ ತನ್ನ ನೆರೆಯ ರಾಷ್ಟ್ರಗಳಿಗೆ ನೀಡುತ್ತಿರುವ ನೆರವಿನ ಮಹತ್ತ್ವ ಸ್ಪಷ್ಟವಾಗುತ್ತದೆ.

ನಮ್ಮಲ್ಲೇ ಬಂಡವಾಳದ ಅಭಾವವಿರುವುದರಿಂದ ನೆರೆಯ ರಾಷ್ಟ್ರಗಳಿಗೆ ನಾವು ಹೆಚ್ಚಿನ ಬಂಡವಾಳ ಸಹಾಯವನ್ನು ನೀಡಲಾರೆವು. ಆದರೆ ನಮ್ಮಲ್ಲಿ ತಾಂತ್ರಿಕ ಪರಿಣತಿಯ ಕೊರತೆಯೇನೂ ಇಲ್ಲ. ಕೊಲಂಬೋ ವಲಯದ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ನಾನಾ ಕ್ಷೇತ್ರಗಳಲ್ಲಿ ಅಗತ್ಯವಾದ ಪರಿಣತ ಸೇವೆಯನ್ನು ನಾವು ಸಲ್ಲಿಸಬಹುದಾಗಿದೆ. ಭಾರತ ಹಾಗೂ ಈ ರಾಷ್ಟ್ರಗಳ ಆರ್ಥಿಕ ಹಾಗೂ ಸಾಮಾಜಿಕ ಪರಿಸರಗಳಲ್ಲಿ ಹೆಚ್ಚಿನ ಹೋಲಿಕೆ ಇರುವುದರಿಂದ ಭಾರತದಲ್ಲಿ ಅಭಿವೃದ್ಧಿಪಡಿಸಲಾಗಿರುವ ತಾಂತ್ರಿಕ ಸೌಲಭ್ಯಗಳನ್ನು ಈ ದೇಶಗಳಿಗೆ ನೇರವಾಗಿ ರವಾನಿಸಿ ಸ್ಥಾಪಿಸಬಹುದು. ಈ ದೃಷ್ಟಿಯಿಂದ ಭಾರತ ಪಾಶ್ಚಾತ್ಯ ರಾಷ್ಟ್ರಗಳ ತಾಂತ್ರಿಕ ವಿಧಾನಗಳನ್ನು ನೇರವಾಗಿ ಅನುಕರಣ ಮಾಡದೆ, ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ವಿಶಿಷ್ಟವಾದ ತಾಂತ್ರಿಕ ಜ್ಞಾನ ಹಾಗೂ ಸೌಲಭ್ಯಗಳನ್ನು ಬೆಳೆಸಿಕೊಳ್ಳುವುದು ಸೂಕ್ತವಾಗಿದೆ. ಈ ರೀತಿ ಕೊಲಂಬೋ ಯೋಜನೆಯ ಚೌಕಟ್ಟಿನಲ್ಲಿ ಭಾರತ ದಕ್ಷಿಣ ಮತ್ತು ಆಗ್ನೇಯ ಏಷ್ಯ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಯಲ್ಲಿ ಅತ್ಯಂತ ಪ್ರಧಾನವಾದ ಪಾತ್ರ ವಹಿಸಬಹುದು.

ಕೆ. ಎಸ್. ಶಿವಣ್ಣ

ಆಗ್ನೇಯ ಏಷ್ಯದಲ್ಲಿ ಜಪಾನೀಯರ ಆಳ್ವಿಕೆ

ಆಧುನಿಕ ಏಷ್ಯದ ಇತಿಹಾಸದಲ್ಲಿ ಜಪಾನ್ ಪ್ರಗತಿಪರ ರಾಷ್ಟ್ರವಾಗಿ ಉದಯಿಸಿದ್ದು ಒಂದು ವಿಶೇಷ ಸಂಗತಿಯೆನ್ನಬಹುದು. ಈ ಪುಟ್ಟ ರಾಷ್ಟ್ರದ ಜನ ಏಷ್ಯದಲ್ಲೇ ಒಂದು ವಿಶೇಷತರವಾದ ಕ್ರಾಂತಿಯನ್ನುಂಟು ಮಾಡಿದರು. ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಪಾಶ್ಚಾತ್ಯ ಸಂಸ್ಕೃತಿಯನ್ನು ತಮ್ಮ ಸಂಸ್ಕೃತಿಯ ಚೌಕಟ್ಟಿನೊಳಗೆ ಅಳವಡಿಸಿಕೊಂಡ ಜಪಾನೀಯರು, ಈ ಶತಮಾನದ ಮೊದಲನೆಯ ಭಾಗದಲ್ಲಿ ಪಾಶ್ಚಾತ್ಯರನ್ನೇ ಆಶ್ಚರ್ಯಪಡಿಸುವಷ್ಟರ ಮಟ್ಟಿಗೆ ಮುಂದುವರಿದು ವಿಶ್ವದ ಪ್ರಮುಖ ರಾಷ್ಟ್ರಗಳ ಸಾಲಿನಲ್ಲಿ ತಮ್ಮ ಸ್ಥಾನವನ್ನು ಬಲಪಡಿಸಿಕೊಂಡರು. ಜಪಾನಿನಲ್ಲಾದ ಈ ಕ್ರಾಂತಿ, 1904-1905ರಲ್ಲಿ ಜಪಾನೀಯರು ರಷ್ಯವನ್ನು ಯುದ್ಧದಲ್ಲಿ ಸೋಲಿಸಿದ್ದೇ ಮೊದಲಾದ ಘಟನೆಗಳು ಏಷ್ಯನರ ಜಾಗೃತಿಗೆ ಸ್ಫೂರ್ತಿ ಕೊಟ್ಟುವು. ಪಾಶ್ಚಾತ್ಯರಂತೆ ತಾವೂ ಸರ್ವತಂತ್ರ ಸ್ವತಂತ್ರರಾಗಿ, ಬಲವಾದ ದೇಶೀಯ ಸರ್ಕಾರಗಳನ್ನು ಸ್ಥಾಪಿಸಿಕೊಳ್ಳಬೇಕೆಂಬ ಹಂಬಲ ಅವರಲ್ಲಿ ಹುಟ್ಟಿತು. ಆದರೆ ಜಪಾನೀಯರು ಪಾಶ್ಚಾತ್ಯ ಸಂಸ್ಕೃತಿ, ನಾಗರಿಕತೆ, ಆಚಾರ, ವಿಚಾರಗಳನ್ನು ಪಡೆದುಕೊಂಡು ತಮ್ಮ ದೇಶವನ್ನು ಕಾಪಾಡಿಕೊಂಡರೂ, ಪಾಶ್ಚಾತ್ಯರಂತೆ ಅವರೂ ತಮ್ಮದೇ ಆದ ಸಾಮ್ರಾಜ್ಯವನ್ನು ಕಟ್ಟುವ ಸಾಹಸಕ್ಕೆ ಇಳಿದರು. ತಮ್ಮೆಲ್ಲ ಶಕ್ತಿ ಐಶ್ವರ್ಯಗಳನ್ನು ಈ ಕಾರ್ಯಕ್ಕೋಸ್ಕರ ವಿನಿಯೋಗಿಸಿದರು. ಸುಮಾರು 50ವರ್ಷಗಳ ಅವಧಿಯಲ್ಲೇ ಅಂದರೆ 1868–1945ರಲ್ಲಿ ಜಪಾನೀಯರು ಈ ಕನಸನ್ನು ನನಸು ಮಾಡಿದ್ದರು. ಮೊದಲು ಕೊರಿಯ, ಮಂಚೂರಿಯಗಳನ್ನು ಕಬಳಿಸಿದರು. ಅನಂತರ ಒಂದನೆಯ ಮಹಾಯುದ್ಧದ ಕಾಲದಲ್ಲಿ, ಮಿತ್ರರಾಷ್ಟ್ರಗಳ ಪಕ್ಷ ಸೇರಿಕೊಂಡು, ಚೀನ ದೇಶದ ಮೇಲೆ ತಮ್ಮ ಹತೋಟಿ ಸ್ಥಾಪಿಸಿದರು. ಇನ್ನೂ ಮುಂದುವರಿದು ಹೋಗಿ, ಎರಡನೆಯ ಮಹಾಯುದ್ಧದ ಸಮಯದಲ್ಲಿ ಆಗ್ನೇಯ ಏಷ್ಯವನ್ನೇ ಗೆದ್ದುಕೊಂಡರು. 1941–1945ರ ಅವಧಿಯಲ್ಲಿ ಆಗ್ನೇಯ ಏಷ್ಯದಲ್ಲಿ ಜಪಾನೀಯರ ಪ್ರಾಬಲ್ಯವಿತ್ತು. ಈ ಕಾಲದಲ್ಲಿ ಅವರ ಆಳ್ವಿಕೆಯಿಂದ ಈ ಪ್ರದೇಶದ ಜನರ ಮೇಲೆ ವಿವಿಧ ರೀತಿಯ ಪರಿಣಾಮಗಳಾದುವು.[1] ಅವನ್ನು ಸ್ಥೂಲವಾಗಿ ವಿವೇಚಿಸುವುದೇ ಈ ಲೇಖನದ ಉದ್ದೇಶ.

ಎರಡನೆಯ ಮಹಾಯುದ್ಧದ (1939–1945) ಕಾಲ ಆಗ್ನೇಯ ಏಷ್ಯದ ರಾಷ್ಟ್ರಗಳ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಒಂದು ಪ್ರಮುಖ ಘಟ್ಟವೆನ್ನಬಹುದು. 1941ರಲ್ಲಿ ಜಪಾನ್ ಎರಡನೆಯ ಮಹಾಯುದ್ಧದಲ್ಲಿ ಅಧಿಕೃತವಾಗಿ ಧುಮುಕಿ, ಇಂಡೋಚೀನ, ಥೈಲೆಂಡ್, ಮಲಯ, ಇಂಡೋನೇಷ್ಯ, ಬರ್ಮ ಮೊದಲಾದ ದೇಶಗಳನ್ನು ಒಂದೊಂದಾಗಿ ಆಕ್ರಮಿಸಿತು. 1941ರ ಆದಿ ಭಾಗದಿಂದ 1945ರ ವರೆಗೆ ಸುಮಾರು 40 ತಿಂಗಳುಗಳ ಕಾಲ ಜಪಾನೀಯರು ಆಗ್ನೇಯ ಏಷ್ಯವನ್ನು ಆಳಿ ಅನೇಕ ಮೂಲಭೂತವಾದ ಬದಲಾವಣೆಗಳನ್ನು ಜಾರಿಗೆ ತಂದು ಪಲ್ಲಟವನ್ನುಂಟು ಮಾಡಿದರು.

---

[1] Robert C. Bone : *Contemporary Southeast Asia*, New York (1966) ಪುಟ 63

ಎರಡನೆಯ ಮಹಾಯುದ್ಧದ ಕಾಲದಲ್ಲಿ, ಆಗ್ನೇಯ ಏಷ್ಯ ಜಪಾನೀಯರ ಹತೋಟಿಗೆ ಬರುವ ಮುನ್ನ, ಈ ಪ್ರದೇಶ ಪಾಶ್ಚಾತ್ಯರ ವಸಾಹತಾಗಿತ್ತು. ಬ್ರಿಟಿಷರು ಮಲಯ ಮತ್ತು ಬರ್ಮಾಗಳಲ್ಲೂ ಡಚ್ಚರು ಇಂಡೊನೇಷ್ಯದಲ್ಲೂ ಅಮೆರಿಕನ್ನರು ಫಿಲಿಫೀನ್ಸಿನಲ್ಲೂ ಫ್ರೆಂಚರು ಇಂಡೋಚೀನದಲ್ಲೂ ತಮ್ಮ ವಸಾಹತುಗಳನ್ನು ಸ್ಥಾಪಿಸಿದರು. ಪಾಶ್ಚಾತ್ಯರ ಸಂಪರ್ಕದಿಂದ ಈ ದೇಶಗಳಲ್ಲಿ ರಾಷ್ಟ್ರೀಯ ಪ್ರಜ್ಞೆ ಉಗಮವಾಗಿತ್ತು. ಆದರೂ ರಾಷ್ಟ್ರೀಯ ಚಳವಳಿಗಳ ಬಗ್ಗೆ ಪಾಶ್ಚಾತ್ಯರು ಸಂಶಯದ ದೃಷ್ಟಿ ತಳೆದು, ಅವುಗಳನ್ನು ಹತ್ತಿಕ್ಕಿದ್ದರು. ಅನೇಕ ಕಡೆ ಜನನಾಯಕರನ್ನು ಸೆರೆಗೆ ದೂಡಿದ್ದರು. ವಾತಾವರಣ ಈ ರೀತಿಯಿದ್ದಾಗ ಎರಡನೆಯ ಮಹಾಯುದ್ಧ ಪ್ರಾರಂಭವಾಯಿತು. ಅದರೊಂದಿಗೆ ಜಪಾನೀಯರ ಆಗಮನವೂ ಆಯಿತು. ಈ ಕಾಲದಲ್ಲಿ ಡಚ್ಚರು, ಫ್ರೆಂಚರು, ಅಮೆರಿಕನರು, ಬ್ರಿಟಿಷರು ಆಗ್ನೇಯ ಏಷ್ಯದಲ್ಲಿದ್ದ ತಮ್ಮ ವಸಾಹತುಗಳನ್ನು ಕಾಪಾಡಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ತಮ್ಮ ತಮ್ಮ ದೇಶಗಳೇ ಹಿಟ್ಲರನ ದಾಳಿಗೆ ತುತ್ತಾಗಿದ್ದಾಗ, ತಮ್ಮ ಜೀವ ಉಳಿಸಿಕೊಳ್ಳುವುದೇ ಅವರಿಗೆ ಕಷ್ಟದ ಕೆಲಸವಾಗಿತ್ತು. ಆದ್ದರಿಂದ ಅವರು ಈ ವಸಾಹತುಗಳನ್ನು ಜಪಾನೀಯರ ದಾಳಿಗೆ ಬಿಟ್ಟು ಅಲ್ಲಿಂದ ತಾತ್ಕಾಲಿಕವಾಗಿ ಕಾಲ್ತೆಗೆದಿದ್ದರು. ಪಾಶ್ಚಾತ್ಯರ ಬದಲು ಜಪಾನೀಯರು ಬಂದರು. ಅವರು ಅನೇಕ ರೀತಿಗಳಲ್ಲಿ ಒಳಗೊಳಗೆ ಹೊಗೆಯಾಡುತ್ತಿದ್ದ ರಾಷ್ಟ್ರೀಯ ಪ್ರಜ್ಞೆಗೆ ಪ್ರೋತ್ಸಾಹಕೊಟ್ಟು ಅದೊಂದು ದೊಡ್ಡ ಕಾಳ್ಗಿಚ್ಚಿನೋಪಾದಿಯಲ್ಲಿ ಬೆಳೆಯುವಂತೆ ಸಹಾಯಮಾಡಿದರು.[2]

ಪಾಶ್ಚಾತ್ಯರು ಮುಖ್ಯವಾಗಿ ತಮ್ಮ ಸ್ವಾರ್ಥಕ್ಕಾಗಿ ಆಗ್ನೇಯ ಏಷ್ಯದ ಪ್ರಕೃತಿ ಸಂಪತ್ತನ್ನು ಆಧುನಿಕ ಸಲಕರಣೆಗಳ ಸಹಾಯದಿಂದ ವೃದ್ಧಿಪಡಿಸಿದ್ದರು. ಆಧುನಿಕ ಕಾಲದಲ್ಲಿ ಈ ಪ್ರದೇಶ ರಬ್ಬರ್, ಟಿನ್, ಪೆಟ್ರೋಲಿಯಂ, ಅಕ್ಕಿ, ಸಕ್ಕರೆ, ಚಹ, ಕ್ವಿನೈನ್, ತೇಗ, ಹೊಗೆಸೊಪ್ಪು ಮೊದಲಾದ ವಸ್ತುಗಳನ್ನು ವಿಶ್ವದ ಮಾರುಕಟ್ಟೆಗೆ ರಫ್ತು ಮಾಡುವಂತೆ ಪಾಶ್ಚಾತ್ಯರು ಮಾಡಿದ್ದರು. ಆಯಕಟ್ಟಿನ ಮತ್ತು ಆರ್ಥಿಕ ಕಾರಣಗಳಿಂದಾಗಿ ಆಗ್ನೇಯ ಏಷ್ಯದ ಎರಡನೆಯ ಮಹಾಯುದ್ಧದ ಕಾಲದಲ್ಲಿ ಪ್ರಮುಖವಾಗಿತ್ತು. ಈ ಕಾಲದಲ್ಲಿ ಜಪಾನೀಯರು ಏಷ್ಯದ ಈ ಭಾಗವನ್ನು ತಮ್ಮ ಅಧೀನದಲ್ಲಿಟ್ಟುಕೊಳ್ಳಲು ಏಕೆ ಅಷ್ಟು ಹೆಣಗಾಡಿದರೆಂಬುದಕ್ಕೆ ಮೇಲೆ ತಿಳಿಸಿದ ಅಂಶಗಳೇ ಕಾರಣವೆಂದು ತಿಳಿಯಬಹುದು. ಯುದ್ಧವನ್ನು ವಿಜಯದ ಹಾದಿಯಲ್ಲಿ ಕೊಂಡೊಯ್ಯಲು ಆಗ್ನೇಯ ಏಷ್ಯದ ಸಂಪತ್ತು ಜಪಾನೀಯರಿಗೆ ಅವಶ್ಯಕವಾಗಿತ್ತು. ಈ ಆರ್ಥಿಕ ಹಿತಾಸಕ್ತಿಯನ್ನು ಪಡೆದುಕೊಳ್ಳುವುದಕ್ಕೆ ಅವರು ಆಗ್ನೇಯ ಏಷ್ಯದ ಜನಾಂಗದವರಲ್ಲಿ ಹೊಗೆಯಾಡುತ್ತಿದ್ದ ರಾಷ್ಟ್ರಪ್ರಜ್ಞೆಯನ್ನು, ಅವರಲ್ಲಿ ಪಾಶ್ಚಾತ್ಯರ ವಸಾಹತು ನೀತಿಯ ಬಗ್ಗೆಯಿದ್ದ ದ್ವೇಷವನ್ನು ಅಸ್ತ್ರವಾಗಿ ಬಳಸಿಕೊಂಡರು.[3]

ಜಪಾನೀಯರು ತಮ್ಮ ಯೋಜನೆಯನ್ನು ಜಾರಿಗೆ ತರುವ ಸಲುವಾಗಿ ಎಲ್ಲ ಪದ್ಧತಿಗಳನ್ನೂ ನಡೆಸಿದ್ದರು. ಯುದ್ಧದ ಉದ್ದೇಶಕ್ಕೆ ಹೊಸ ತಿರುವು, ಹೊಸ ಅರ್ಥ ಕೊಟ್ಟರು. ಆಗ್ನೇಯ ಏಷ್ಯದ ಜನನಾಯಕರ ಬೆಂಬಲ ಅವರಿಗೆ ಅಗತ್ಯವಾಗಿತ್ತು. ಅವರಲ್ಲಿ ಪಾಶ್ಚಾತ್ಯರ ಬಗ್ಗೆಯಿದ್ದ ದ್ವೇಷದ ಅರಿವಿತ್ತು. ಅದೇ ರೀತಿ ಅಲ್ಲಿಯ ಜನನಾಯಕರು ಜಪಾನೀಯರ ಬಗ್ಗೆ ಅನುಕೂಲಕರ ಭಾವನೆಗಳನ್ನು ಹೊಂದಿದ್ದ ವಿಷಯವೂ ತಿಳಿದಿತ್ತು. 'ಏಷ್ಯ ಏಷ್ಯನರಿಗೆ' ಎಂಬ ಜಪಾನೀಯರ ಸೊಲ್ಲಿಗೆ ಆಗ್ನೇಯ ಏಷ್ಯದ ನಾಯಕರು ಮರುಳಾದದ್ದುಂಟು. ಜಪಾನೀಯರು ತಮ್ಮ ದೇಶಗಳನ್ನು ಪಾಶ್ಚಾತ್ಯರ ದಾಸ್ಯಸಂಕೋಲೆಯಿಂದ ಬಿಡುಗಡೆ ಮಾಡಲು ಬರುವ ಉದಾರ ನೀತಿಯ ಏಷ್ಯನ್ ಬಂಧುಗಳೆಂದು ಅವರು ನಂಬಿದರು.[4] ಕೆಲವು ಸಂದರ್ಭಗಳಲ್ಲಿ ಜಪಾನೀಯರು ಹಾಗೆ ನಡೆದುಕೊಂಡದ್ದುಂಟು. ಉದಾಹರಣೆಗೆ, ಜಪಾನೀಯರು, ಹಿಂದೆ ಪಾಶ್ಚಾತ್ಯರು ಸ್ವಾತಂತ್ರ್ಯ ಚಳುವಳಿಯ ಕಾರಣಗಳಿಗಾಗಿ ಸೆರೆಮನೆಗೆ ತಳ್ಳಿದ್ದ ಸ್ವಾತಂತ್ರ್ಯ,

---

[2] ಅದೇ, ಪು. 64

[3] ಅದೇ, ಪು. 63

[4] D. C. E. Hall: *A History of Southeast Asia*, London (1968) ಪುಟ 667–671

ನಾಯಕರನ್ನು ಜೈಲಿನಿಂದ ಬಿಡುಗಡೆ ಮಾಡಿದರು. ಇಂಡೊನೇಷ್ಯದ ಮುಖಂಡರಾದ ಸುಕಾರ್ನೋ, ಹಟ್ಟಾ, ಬರ್ಮದ ಆಂಗ್ ಸಾನ್ ಮೊದಲಾದವರು ಮೊದಮೊದಲು ಜಪಾನೀಯರಿಗೆ ಬೆಂಬಲಕೊಟ್ಟರು.

ಜಪಾನೀಯರ ಈ ಎಲ್ಲ ನಡವಳಿಕೆಗಳ ಹಿಂದೆ ಅವರ ಆರ್ಥಿಕ ಹಾಗೂ ಮಿಲಿಟರಿ ಹಿತಾಸಕ್ತಿ ಅಡಗಿತ್ತು. ಕಾರಣ ಯಾವುದೇ ಇರಲಿ, ಜಪಾನೀಯರ 40 ತಿಂಗಳುಗಳ ಆಳ್ವಿಕೆಯಿಂದ ಆಗ್ನೇಯ ಏಷ್ಯದಲ್ಲಿ ಪ್ರಮುಖ ಬದಲಾವಣೆಗಳಾಗಿ, ಅಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಚಳುವಳಿಗಳಿಗೆ ಅದು ಹೊಸ ತಿರುವನ್ನು ಕೊಟ್ಟಿತೆನ್ನಬಹುದು. ಜಪಾನೀಯರು ಸ್ವಾತಂತ್ರ್ಯ ನೀಡಬಹುದೆಂಬ ಲವಲವಿಕೆಯಿಂದ ಅನೇಕರು ಅವರಿಗೆ ಸಹಕಾರ ನೀಡಿದರು. ದೇಶೀಯರ ಸಹಕಾರ ಪಡೆಯಬೇಕಾಗಿದ್ದರೆ ರಾಷ್ಟ್ರೀಯ ಚಳವಳಿಗೆ ಪ್ರೋತ್ಸಾಹ ಕೊಡುವುದು ಆವಶ್ಯಕವೆಂಬುದು ,ಜಪಾನೀಯರಿಗೂ ಗೊತ್ತಿತ್ತು. ಆದರೆ ರಾಷ್ಟ್ರೀಯ ಚಳವಳಿ ಪ್ರಬಲವಾದರೆ ತಮ್ಮ ಸ್ಥಾನಮಾನಕ್ಕೆ ಗಂಡಾಂತರ ಬರುವುದೆಂಬುದನ್ನೂ ಅವರು ಮನಗಂಡಿದ್ದರು . ಆದ್ದರಿಂದ ಅವರು ಮಂದಮಾರ್ಗ ಹಿಡಿದರು. ರಾಷ್ಟ್ರಾಭಿಮಾನಿ ದೇಶೀಯ ನಾಯಕರಿಗೆ ಇದರಿಂದ ನಿರಾಶೆಯಾಯಿತು. ಏಷ್ಯ ಏಷ್ಯನರಿಗೆ ಎಂಬ ಸೊಲ್ಲಿನ ಅರ್ಥವೆಂದರೆ, ಏಷ್ಯ ಜಪಾನೀಯರಿಗೆ ಎನ್ನುವಂತೆ ಆಯಿತು. ಜಪಾನೀ ನೊಗವನ್ನು ಕಳಚಲು ಅವರು ಯತ್ನಿಸತೊಡಗಿದರು. ಆಗ್ನೇಯ ಏಷ್ಯದ ರಾಷ್ಟ್ರೀಯ ಮುಖಂಡರಾದ ಸುಕಾರ್ನೊ, ಹಟ್ಟಾ ಮುಂತಾದವರು ದೇಶಪ್ರೇಮಿಗಳನ್ನು ಒಳಗೊಳಗೇ ಜಪಾನರ ವಿರುದ್ಧ ಸಂಘಟಿಸುತ್ತಿದ್ದರು. ಹೊರಗಡೆ ಅವರು ಸಹಕಾರದ ಸೋಗು ಹಾಕುವುದು ಅನಿವಾರ್ಯವಾಗಿತ್ತು. ಇಲ್ಲದಿದ್ದರೆ ರಾಷ್ಟ್ರೀಯ ಶಿಸ್ತು, ಸಂಘಟನೆ ಆಗ ಶಕ್ಯವಾಗುತ್ತಿರಲಿಲ್ಲ. 1943ರಲ್ಲಿ ಇಂಡೊನೇಷ್ಯದ ಸುಕಾರ್ನೊ ಬಹಿರಂಗವಾಗಿ ಗೆರಿಲಾ ದಳವನ್ನು ರಚಿಸತೊಡಗಿದರು.[5]

ಜಪಾನೀ ಆಳ್ವಿಕೆಯಲ್ಲಿ ಆಗ್ನೇಯ ಏಷ್ಯದಲ್ಲಿ ರಾಷ್ಟ್ರೀಯ ಚಳವಳಿ ವಿರಾಟ್ ಸ್ವರೂಪ ತಾಳಿದುದೇನೋ ನಿಜ. ಅದರ ಸದುಪಯೋಗ ಮಾಡಿಕೊಳ್ಳುವ ಜನರ ಆಸೆ ಈಡೇರಲಿಲ್ಲ, ಅಷ್ಟೆ. ಜಪಾನರಿಗೆ ಇದರಿಂದ ಪ್ರಾಣಸಂಕಟ ಬಂತು. ಸಾಮ್ರಾಜ್ಯವಾದಕ್ಕೆ ರಾಷ್ಟ್ರೀಯ ಮುಖಂಡರು ಕಡುಹಗೆಗಳು. ಅದಕ್ಕೆ ಜಪಾನೀ ಸಾಮ್ರಾಜ್ಯವಾದವೂ ಒಂದೇ, ಐರೋಪ್ಯ ಸಾಮ್ರಾಜ್ಯವಾದರೂ ಒಂದೇ. ಸಾಮ್ರಾಜ್ಯವಾದ ಮತ್ತು ರಾಷ್ಟ್ರೀಯವಾದದೊಳಗೆ ಸ್ನೇಹಭಾವನೆ ಎಂದಿಗೂ ಸಾಧ್ಯವಿರಲಿಲ್ಲ. ಐರೋಪ್ಯರಂತೆ ಜಪಾನೀಯರೂ ಸಾಮ್ರಾಜ್ಯವಾದಿಗಳಾಗಿದ್ದರು. ಕಳೆದ ಅರ್ಧ ಶತಮಾನದ ಜಪಾನೀ ಇತಿಹಾಸವೇ ಅದಕ್ಕೆ ಸಾಕ್ಷಿ. ಸಾಮ್ರಾಜ್ಯಾಭಿಲಾಷೆಯಿಲ್ಲದೆ ಇರುತ್ತಿದ್ದರೆ ಕೊರಿಯ, ಚೀನ ಮೊದಲಾದ ದೇಶಗಳಿಗೆ ಜಪಾನ್ ದಂಡೆತ್ತಿ ಹೋಗುತ್ತಿದ್ದಿಲ್ಲ.

ಜಪಾನೀ ಆಳ್ವಿಕೆಯಲ್ಲಿ ಆಗ್ನೇಯ ಏಷ್ಯದಲ್ಲಿ ರಾಷ್ಟ್ರೀಯತಾಭಾವನೆ ಹೆಚ್ಚಿನ ಪ್ರೋತ್ಸಾಹ ಪಡೆಯಿತೆಂದು ಹೇಳಬಹುದು. ಜಪಾನೀಯರಿಂದ ಸೋತ ಪಾಶ್ಚಾತ್ಯರು ದೇಶೀಯರ ದೃಷ್ಟಿಯಲ್ಲಿದ್ದ ಸ್ಥಾನಮಾನಗಳನ್ನು ಕಳೆದುಕೊಂಡರು. ಜಪಾನೀಯರು ಸರ್ಕಾರದ ಮತ್ತು ವಾಣಿಜ್ಯ ಉದ್ಯಮದ ವಿಭಾಗಗಳಲ್ಲಿ ಉನ್ನತ ಸ್ಥಾನಗಳಲ್ಲಿದ್ದ ಪಾಶ್ಚಾತ್ಯರನ್ನು ತೆಗೆದುಹಾಕಿ, ದೇಶೀಯರಿಗೆ ಗೌರವದ ಹುದ್ದೆಗಳನ್ನು ಮೊತ್ತಮೊದಲಿಗೆ ಕೊಟ್ಟರು. ಪಾಶ್ಚಾತ್ಯರ ಸೋಲಿನಿಂದಾಗಿ, ಅವರು ಅಜೇಯರೆಂಬ ನಂಬಿಕೆ ಸುಳ್ಳಾಯಿತು. ಅನೇಕ ಅಮೇರಿಕನ್ ಮತ್ತು ಐರೋಪ್ಯರನ್ನು ಜಪಾನೀಯರು ಸಾರ್ವಜನಿಕ ಕ್ಷೇತ್ರಗಳಿಂದ ತಳ್ಳಿ ಹಾಕಿದ್ದಲ್ಲದೆ, ಅವರನ್ನು ಜೈಲಿನಲ್ಲಿ ಹಾಕಿ, ಅವರಿಂದ ಕಡ್ಡಾಯ ಶ್ರಮವನ್ನೂ ಪಡೆದರು. ಪಾಶ್ಚಾತ್ಯರಿಗೆ ಮಿಂಚಿನಂತೆ ಸಂಭವಿಸಿದ ಇಂಥ ಅವನತಿ ಅವರ ಬಗ್ಗೆ ಇದ್ದ ಶ್ರೇಷ್ಠಭಾವನೆಗಳನ್ನು ನಿರ್ಮೂಲಮಾಡಿತು. ಅವರ ಸೋಲು ದೇಶೀಯ ಜನಾಂಗಗಳ ಮೇಲೆ ತನ್ನದೇ ಆದ ಪ್ರಭಾವ ಮುದ್ರೆಯನ್ನು ಒತ್ತಿದ್ದಲ್ಲದೆ, ಏಷ್ಯನರು ಪಾಶ್ಚಾತ್ಯ ಜನಾಂಗದವರಿಗಿಂತ ಏನೂ ಕೀಳಲ್ಲ ಎಂಬುದನ್ನು ತೋರಿಸಿಕೊಟ್ಟಿತು.[6] ಜಪಾನೀಯರ ವಿಜಯ ಏಷ್ಯನ್ ಜನಾಂಗದವರ ವಿಜಯ ಎನ್ನುವ ಮನೋಭಾವ ಹರಡಲಿತ್ತು. ಇಂಥ ಭಾವನೆಗೆ ಜಪಾನೀಯರ 'ಏಷ್ಯ ಏಷ್ಯನರಿಗೆ' ಎಂಬ ಕೂಗು ಪುಟ

[5] Vera Micheles Dean, ಉದ್ಧೃತ ಗ್ರಂಥ, ಪು. 142–143

[6] Claude A. Buss : *Southeast Asia and the World Today*, New York (1958), ಪು. 36-38

ಕೊಟ್ಟಿತು. ಜಪಾನೀಯರು ರಾಷ್ಟ್ರೀಯತೆಯ ಭಾವನೆಗಳನ್ನು ಆಗ್ನೇಯ ಏಷ್ಯದ ರಾಷ್ಟ್ರಗಳಲ್ಲಿ ಪ್ರಚೋದಿಸಿದರಲ್ಲದೆ, ರೇಡಿಯೋ ಮತ್ತು ವೃತ್ತಪತ್ರಿಕೆಗಳ ಮೂಲಕ ಪಾಶ್ಚಾತ್ಯರ ವಸಾಹತು ನೀತಿಯ ವಿರುದ್ಧ ಘೋಷಣೆಗಳನ್ನು ಯಥಾವತ್ತಾಗಿ ಪ್ರಸಾರಮಾಡಿದರು. ಹಳ್ಳಿಹಳ್ಳಿಗಳಿಗೂ ಜಪಾನೀಯರ ಈ ಸಂದೇಶ ತಲುಪುವಂತಾಯಿತು.

ಪಾಶ್ಚಾತ್ಯರ ವಸಾಹತು ಸರ್ಕಾರಗಳಲ್ಲಿ ಉನ್ನತ ಹುದ್ದೆಯನ್ನೇರುವುದು ಕನಸಿನ ಮಾತಾಗಿತ್ತು. ಜಪಾನೀಯರ ಆಳ್ವಿಕೆಯಲ್ಲಿ ದೇಶೀಯರು ಉನ್ನತ ಸ್ಥಾನಮಾನ, ಗೌರವಗಳನ್ನು ಪಡೆಯುವಂತಾಯಿತು, ಗೌರವದ ಜೊತೆಗೆ ಇಂಥ ಬಡ್ತಿಗಳಿಂದ ಆಡಳಿತದ ಅನುಭವ ಬೆಳೆಯಿತು. ಪಾಶ್ಚಾತ್ಯರಾಷ್ಟ್ರಗಳ ವಿರುದ್ಧ ಕಟ್ಟಕಡೆಯ ಹೋರಾಟ ನಡೆಸಲು ಜಪಾನೀಯರು ಭಾಗಶಃ ಮಿಲಿಟರಿ ಸಂಸ್ಥೆಗಳನ್ನು ಸಂಘಟಿಸಿದರಲ್ಲದೆ, ದೇಶೀಯರ ಸೈನ್ಯಗಳನ್ನು ರಚಿಸಿದರು. ದೇಶೀಯರನ್ನು ಸೈನ್ಯದಲ್ಲಿ ಉನ್ನತ ಹುದ್ದೆಗಳಿಗೆ ನೇಮಕ ಮಾಡಿದರು. ಇವರ ಉದ್ದೇಶ "ಪಾಶ್ಚಾತ್ಯ ರಾಷ್ಟ್ರಗಳ ವಿರುದ್ಧ ಹೋರಾಟ." ಇದೊಂದು ಮುಖ್ಯವಾದ ಬದಲಾವಣೆ. ಏಕೆಂದರೆ, ಫಿಲಿಫೀನ್ಸ್ ವಿನಾ ಉಳಿದ ರಾಷ್ಟ್ರಗಳಲ್ಲಿ ಜಪಾನೀಯರಿಗೆ ಹಿಂದೆ ಇದ್ದ ವಸಾಹತು ಸರ್ಕಾರಗಳು ದೇಶೀಯರಿಗೆ ಹೆಚ್ಚಿನ ಮಿಲಿಟರಿ ಶಿಕ್ಷಣವನ್ನು ಕೊಡಲು ನಿರಾಕರಿಸಿದ್ದುವು. ಆದರೆ ಈಗ ಜಪಾನೀಯರ ನೀತಿಯಿಂದಾಗಿ ಆಗ್ನೇಯ ಏಷ್ಯದಲ್ಲಿ ನವೀನವಾದ ಮಿಲಿಟರಿ ಮುಖಂಡರುಗಳ ಗುಂಪೊಂದು ಸೃಷ್ಟಿಯಾಯಿತು. ಮಹಾಯುದ್ಧ ಮುಗಿದ ತರುವಾಯ ಪಾಶ್ಚಾತ್ಯರು ತಮ್ಮ ಮೊದಲ ಹತೋಟಿಯನ್ನು ಹೇರಲು ಬಂದಾಗ ಅವರ ವಿರುದ್ಧ ಶಸ್ತ್ರಾಸ್ತ್ರ ಸಜ್ಜಿತರಾಗಿ ಹೋರಾಡಲು ಈ ಮಿಲಿಟರಿ ಅನುಭವ ಬಹಳ ಮಹತ್ವದ್ದಾಗಿತ್ತು[7].

ಬರ್ಮಾ ಮತ್ತು ಇಂಡೊನೇಷ್ಯಗಳಲ್ಲಿ ಬ್ರಿಟಿಷರ ಮತ್ತು ಡಚ್ಚರ ವಿರುದ್ಧ ಇಂಥ ಮುಖಂಡರು ಹೋರಾಡಿದರು. ಮಿಲಿಟರಿ ಶಿಕ್ಷಣ ಅನೇಕ ದೇಶೀ ಯುವಕರಿಗೆ ಹೊಸದೊಂದು ಕ್ಷೇತ್ರವನ್ನೇ ತೆರೆಯಿತು. ಇಂಥ ಮಿಲಿಟರಿ ವರ್ಗಕ್ಕೆ ಸೇರಿದ ಮುಖಂಡರು ಆಗ್ನೇಯ ಏಷ್ಯದ ನವೀನ ರಾಷ್ಟ್ರಗಳಲ್ಲಿ ಅಷ್ಟು ಕ್ರಿಯಾತ್ಮಕವಲ್ಲದಿದ್ದರೂ ಹೆಚ್ಚಿನ ಪ್ರಭಾವವನ್ನು ಇವತ್ತಿಗೂ ಬೀರುತ್ತಿದ್ದಾರೆ. ಒಟ್ಟಿನಲ್ಲಿ ಮಹಾಯುದ್ಧದ ವರ್ಷಗಳಲ್ಲಿ ಜಪಾನೀಯರ ಆಳ್ವಿಕೆಯಿಂದಾಗಿ ರಾಷ್ಟ್ರೀಯ ಭಾವನೆಗಳಿಗೆ ಹೆಚ್ಚಿನ ಪ್ರಚೋದನೆ ಸಿಕ್ಕಿತೆನ್ನಬಹುದು.

ಪಾಶ್ಚಾತ್ಯ ರಾಷ್ಟ್ರಗಳಿಂದ ತಮಗೆ ಸೋಲು ಖಂಡಿತವೆಂಬ ಸೂಚನೆಗಳು ಬರುತ್ತಿದ್ದಂತೆ ಜಪಾನೀಯರು 1943ರ ವೇಳೆಗೆ ಬರ್ಮಾ ಮತ್ತು ಫಿಲಿಪೀನ್ಸ್‌ಗೆ ಸಂಪೂರ್ಣ 'ಸ್ವಾತಂತ್ರ್ಯ' ಕೊಟ್ಟರು. ಆಗಸ್ಟ್ 1945ರಲ್ಲಿ ಜಪಾನ್ ಶರಣಾಗತವಾಯಿತು. ಅದಕ್ಕೆ ಸ್ವಲ್ಪ ಮುಂಚೆ ಇಂಡೊನೇಷ್ಯಕ್ಕೂ ಅವರು ಸಂಪೂರ್ಣ 'ಸ್ವಾತಂತ್ರ್ಯ' ಕೊಟ್ಟರು. ಇಂಡೊನೇಷ್ಯದಲ್ಲಿ ಸುಕಾರ್ನೊ ನೇತೃತ್ವದಲ್ಲಿ ಗಣರಾಜ್ಯದ ಸ್ಥಾಪನೆಯಾಯಿತು. ಯುದ್ಧ ಮುಗಿದ ಅನಂತರ ಬ್ರಿಟನ್, ಫ್ರಾನ್ಸ್, ನೆದರ್ಲೆಂಡ್ಸ್ ದೇಶಗಳು ತಮ್ಮತಮ್ಮ ವಸಾಹತುಗಳಿಗೆ ವಾಪಸಾಗಲು ಪ್ರಯತ್ನ ನಡೆಸಿದುವು. ಆ ವೇಳೆಗೆ ರಾಷ್ಟ್ರಪ್ರಜ್ಞೆ ಪ್ರಬಲವಾಗಿ ಬೆಳೆದಿತ್ತು. ದೇಶೀಯರು ದಾಸ್ಯದ ನೊಗವನ್ನು ಮತ್ತೆ ಹೊರಲು ಸಿದ್ಧರಿರಲಿಲ್ಲ. ಅನೇಕ ದೇಶಗಳಲ್ಲಿ ಹಿಂಸಾತ್ಮಕ ಹೋರಾಟ ನಡೆಸಿ ಸ್ವಾತಂತ್ರ್ಯವನ್ನು ಪಡೆಯಬೇಕಾಯಿತು.

ಉಳಿದೆಡೆಗಳಲ್ಲಿ ಲೋಕೋಚಿತ ಬುದ್ಧಿ ಇದ್ದ ಸಾಮ್ರಾಜ್ಯಶಾಹಿ ರಾಷ್ಟ್ರಗಳು ತಾವೇ ಮುಂದಾಗಿ ಸ್ವಾತಂತ್ರ್ಯ ಘೋಷಿಸಿ ದೇಶೀಯರ ಸ್ನೇಹವನ್ನು ಉಳಿಸಿಕೊಂಡುವು. ಇಂಡೋನೇಷ್ಯ ಮತ್ತು ವಿಯೆಟ್ನಾಂಗಳಲ್ಲಿ ಸ್ವಾತಂತ್ರ್ಯಕ್ಕಾಗಿ ಡಚ್ಚರ ಮತ್ತು ಫ್ರೆಂಚರ ವಿರುದ್ಧ ಹಿಂಸಾತ್ಮಕ ಹೋರಾಟಗಳಾದುವು. ಇಂಡೊನೇಷ್ಯದಲ್ಲಿ 1945ರಿಂದ 1946ರ ವರೆಗೆ ಇಂಥ ಹೋರಾಟ ನಡೆಯಿತು. ಕೊನೆಗೆ ಅನಿವಾರ್ಯವಾಗಿ ಡಚ್ಚರು ಸ್ವಾತಂತ್ರ್ಯ ಘೋಷಿಸಬೇಕಾಯಿತು. ವಿಯೆಟ್ನಾಂ ಹೊ ಚಿ-ಮಿನ್ಹರ ನಾಯಕತ್ವದಲ್ಲಿ ಫ್ರೆಂಚರ ವಿರುದ್ಧ 1946ರಿಂದ 1954ರ ವರೆಗೆ ಇಂಥ ಹಿಂಸಾತ್ಮಕ ಹೋರಾಟ ನಡೆಸಿ ಸ್ವಾತಂತ್ರ್ಯ ಪಡೆಯಿತು. ಫಿಲಿಪೀನ್ಸ್‌ನಲ್ಲಿ ಮಾತ್ರ ಹೋರಾಟದ ಅವಶ್ಯಕತೆ ಇರಲಿಲ್ಲ. ಅಮೆರಿಕನರು ಮಹಾಯುದ್ಧಕ್ಕೆ

---

[7] Vera Micheles Dean ; *The Nature of the Non-western World*, ಪು. 143

ಮುಂಚೆಯೇ ಫಿಲಿಪೀನ್ಸ್‌ಗೆ 1946ರಲ್ಲಿ ಸ್ವಾತಂತ್ರ್ಯ ಕೊಡುವುದಾಗಿ ಘೋಷಿಸಿದ್ದರು. ಬ್ರಿಟಿಷರು ಬರ್ಮದಲ್ಲಿ ಯಾವ ಹೆಚ್ಚಿನ ಘಟನೆಗಳನ್ನೂ ಎದುರಿಸದೆ 1948ರಲ್ಲಿ ಸ್ವಾತಂತ್ರ್ಯ ಘೋಷಿಸಿದರು. 1957ರಲ್ಲಿ ಮಲಯ ಬ್ರಿಟಿಷರಿಂದ ಸ್ವಾತಂತ್ರ್ಯ ಗಳಿಸಿತು. ಅನೇಕ ಶತಮಾನಗಳಿಂದ ಪರಕೀಯ ದಾಸ್ಯದಿಂದ ಹೀಗೆ ಮುಕ್ತಗೊಂಡ ಆಗ್ನೇಯ ಏಷ್ಯನ್ ರಾಷ್ಟ್ರಗಳು ತಮ್ಮ ಆಂತರಿಕ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಭವಿಷ್ಯವನ್ನು ರೂಪಿಸಿಕೊಳ್ಳುವ ಕಾಲವಿನ್ನೂ ಬರಬೇಕಾಗಿದೆ.

ಹೀಗೆ ಜಪಾನೀಯರು ಎರಡನೆಯ ಮಹಾಯುದ್ಧದ ಕಾಲದಲ್ಲಿ ಈ ರಾಷ್ಟ್ರಗಳಲ್ಲಿ ಪ್ರವೇಶಿಸಿ ದೊಡ್ಡ ಆಂದೋಳನವನ್ನೆ ನಡೆಸಿದರೆಂದರೆ ತಪ್ಪಲ್ಲ. ಪ್ರಾಯಶಃ ಜಪಾನೀಯರು ಈ ರೀತಿ ಇಲ್ಲಿಗೆ ಬಂದು ಪಾಶ್ಚಾತ್ಯರು ಅನೇಕ ಶತಮಾನಗಳ ಕಾಲದಿಂದ ಕಟ್ಟಿದ್ದ ಭದ್ರವಾದ ವಸಾಹತಿನ ಕೋಟೆಗಳನ್ನು ಒಡೆಯದಿದ್ದರೆ ಆ ರಾಷ್ಟ್ರಗಳು ಸ್ವತಂತ್ರವಾಗಲು ಇನ್ನು ಹೆಚ್ಚಿನ ಕಾಲ ಬೇಕಾಗುತ್ತಿತ್ತು. ಆದ್ದರಿಂದ ಪರೋಕ್ಷವಾಗಿ ಜಪಾನೀಯರ ಆಡಳಿತ ಇಲ್ಲಿಯ ಜನಾಂಗಗಳಿಗೆ ಒಂದು ರೀತಿಯ ಪ್ರಚೋದನೆ ನೀಡಿತು. ಈ ಲಾಭವನ್ನು ನೋಡಿದಲ್ಲಿ, ಅವರ ಆಡಳಿತದ ಕ್ರೂರತೆ, ಶೋಷಣೆಗಳು ಹೆಚ್ಚಿನವಾಗಿ ತೋರುವುದಿಲ್ಲ. ಆಗ್ನೇಯ ಏಷ್ಯದ ಹಲವು ಕಡೆ ಜಪಾನೀಯರ ಮತ್ತು ದೇಶೀಯರ ಹಿತಾಸಕ್ತಿಗಳು ಪರಸ್ಪರ ಪೂರಕವಾಗಿದ್ದರಿಂದಲೇ ಜಪಾನೀಯರು ಅಷ್ಟು ಕಾಲ ಅಲ್ಲಿ ತಳವೂರಿ ನಿಲ್ಲುವಂತಾಯಿತು. ಜಪಾನೀಯರ ದಾಳಿಯನ್ನು ಎದುರಿಸಿ ಆಗ್ನೇಯ ಏಷ್ಯವನ್ನು ಕಾಪಾಡದೆ, ಪಾಶ್ಚಾತ್ಯರು ದೇಶೀಯರ ದೃಷ್ಟಿಯಲ್ಲಿ ಕೀಳಾದರು. ಹೀಗೆ ಒಟ್ಟಾಗಿ ನೋಡುವಾಗ ಜಪಾನೀಯರ ಆಡಳಿತ ಆಗ್ನೇಯ ಏಷ್ಯದಲ್ಲಿ ಒಂದು ಆಂದೋಳನಕ್ಕೆ ಎಡೆ ನೀಡಿತು.

ಪ್ರಗತಿಯೆಂದರೆ ಪ್ರಕೃಷ್ಟವಾದ ಗತಿ, ಶ್ರೇಯಸ್ಸಿನ ಮಾರ್ಗ, ಉತ್ತಮ ದಶೆಗೆ ದಾರಿ– ಎಂದರ್ಥ. ಅದನ್ನು ಯಾರು ತಾನೆ ಬೇಡವೆನ್ನುತ್ತಾರೆ? ಅದು ಅತ್ಯಂತ ಅಪೇಕ್ಷ್ಯವಾದದ್ದು. ಮತ್ತು ಅದು ಬದಲಾವಣೆಗಳಿಂದ ಸಾಧ್ಯವಾಗತಕ್ಕದ್ದು. ಇದನ್ನು ನಮ್ಮ ಶಾಸ್ತ್ರಗಳು ಚೆನ್ನಾಗಿ ಅಂಗೀಕರಿಸಿವೆ. 'ಜಗತ್' ಎಂಬ ಶಬ್ದದ ಅರ್ಥದಲ್ಲಿಯೇ ಈ ಅಭಿಪ್ರಾಯ ಅಡಕವಾಗಿದೆ. ಜಗತ್ ಎಂದರೆ ಸದಾ ನಡೆಯುತ್ತಿರತಕ್ಕದ್ದು, ಸರ್ವದಾ ಚಲನೆ ಮಾಡುತ್ತಿರತಕ್ಕದ್ದು, ಕ್ಷಣೇಕ್ಷಣೇ ತಿರುಗುತ್ತಿರತಕ್ಕದ್ದು–ಎಂದರ್ಥ. ಚಲನೆ, ಪರಿವರ್ತನೆ ಎಂದರೆ ಬದಲಾವಣೆ. ಸ್ಥಳ ಬದಲಾಯಿಸುವುದರಲ್ಲಿ ಬದಲಾವಣೆ. ಕಾಲ ಬದಲಾಯಿಸುವುದರಲ್ಲಿ ಬದಲಾವಣೆ. ಸಂದರ್ಭ ಬದಲಾಯಿಸುವುದರಲ್ಲಿ ಬದಲಾವಣೆ. ಅದು ತಾನಾಗಿಯೇ ನಡೆಯುತ್ತದೆ. ಮತ್ತು ಆರೋಗ್ಯಕ್ಕಾಗಿ ನಡೆಯುತ್ತದೆ; ಜೀವಿತಕ್ಕಾಗಿ ನಡೆಯುತ್ತದೆ. ಆದರೆ ಮೂರು ಸಂಗತಿಗಳು ಈ ಬದಲಾವಣೆಯಲ್ಲಿ ಕೂಡಿಕೊಂಡಾಗ ಅದು ಪ್ರಗತಿಯಾಗುತ್ತದೆ:(1) ನಾವು ಉದ್ದೇಶಿಸಿರುವ ಬದಲಾವಣೆ ನಮ್ಮ ಪೂರ್ವಚರಿತ್ರೆಗೆ ಹೊಂದಿಕೊಳ್ಳುವಂಥಾದ್ದೆ? (2) ನಮ್ಮ ಭವಿಷ್ಯದ ಉದ್ದೇಶಕ್ಕೆ ನಾವು ಹೊಂಚಿರುವ ಬದಲಾವಣೆ ಸಾಧಕವಾದೀತೆ, ಬಾಧಕವಾಗಲಾರದೆ? (3) ನಾವು ಯಾವ ಸಮಾಜಕ್ಕೆ ಸೇರಿದ ಭವಿಷ್ಯದ ಉದ್ದೇಶವೆಂದು ಲಕ್ಷ್ಯದಲ್ಲಿಟ್ಟುಕೊಂಡಿದ್ದೇವೋ ಆ ಮುಂದಿನ ಗುರಿಯು ನಮ್ಮ ಹಿಂದಿನ ಚರಿತ್ರೆಯಿಂದ ಗೊತ್ತಾಗಿರುವ ಪುರುಷಾರ್ಥಕ್ಕೆ ಅನುಸಾರವಾಗಿದೆಯೇ?

ಹೀಗೆ ದೊರೆತ ಪುರಾತನ ಸಂಸ್ಕೃತಿ ಸಂಪ್ರದಾಯಗಳು, ಆ ಸಂಸ್ಕೃತಿ ಸಂಪ್ರದಾಯಗಳಿಂದ ತೋರಿಬಂದ ದೊರೆತ ಸಾಮರ್ಥ್ಯ–ಇವು ನಾವು ಎಂಥ ಬದಲಾವಣೆಗಳನ್ನು ಅಂಗೀಕರಿಸಬೇಕೆಂಬ ವಿಷಯದಲ್ಲಿ ನಿರ್ಣಾಯಕವಾಗುತ್ತವೆ. ನಮ್ಮ ಪ್ರಗತಿಯ ಲಕ್ಷ್ಯಕ್ಕೆ ತಕ್ಕಂತೆ ನಮ್ಮ ಬದಲಾವಣೆ ಇರಬೇಕು[1].

—ಡಿ. ವಿ. ಜಿ.

[1] ಸಾರ್ವಜನಿಕದಲ್ಲಿ ಸಾತ್ತ್ವಿಕ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬೆಂಗಳೂರು–4, ಪ್ರ: ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು (1971), ಪು. 26–27

ಸದಾಶಿವಯ್ಯ

ಕೃಷಿ ಅಭಿವೃದ್ಧಿಯಲ್ಲಿ ಏಷ್ಯದ ಅಭಿವೃದ್ಧಿ ಬ್ಯಾಂಕಿನ ಪಾತ್ರ

ಏಷ್ಯದ ಅಭಿವೃದ್ಧಿ ಬ್ಯಾಂಕು 1966ರ ಡಿಸೆಂಬರ್‌ನಿಂದ ಕಾರ್ಯಾಚರಣೆ ನಡೆಸುತ್ತಿರುವ ಒಂದು ಹಣಕಾಸು ಸಂಸ್ಥೆ. ಏಷ್ಯದ ಅಭಿವೃದ್ಧಿ ಬ್ಯಾಂಕನ್ನು ದೂರಪ್ರಾಚ್ಯ ಮತ್ತು ಏಷ್ಯದ ಆರ್ಥಿಕ ಆಯೋಗದ (ECAFE) ಸತತ ಪ್ರಯತ್ನದಿಂದಾಗಿ ಸ್ಥಾಪಿಸಲಾಯಿತು. ಈ ಬ್ಯಾಂಕಿನ ಸದಸ್ಯತ್ವ ಏಷ್ಯದ ರಾಷ್ಟ್ರಗಳಿಗೆ ಮಾತ್ರವಲ್ಲದೆ ವಿಶ್ವಸಂಸ್ಥೆಯ ಅಥವಾ ಅಂಗಸಂಸ್ಥೆಗಳ ಸದಸ್ಯತ್ವ ಹೊಂದಿದ ಇತರ ರಾಷ್ಟ್ರಗಳಿಗೂ ದೊರಕುವುದಾದರೂ ಏಷ್ಯದ ರಾಷ್ಟ್ರಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವುದೇ ಬ್ಯಾಂಕಿನ ಮುಖ್ಯ ಉದ್ದೇಶ. ಬ್ಯಾಂಕು ತನ್ನ ಸಾಲ ಕಾರ್ಯಾಚರಣೆಯನ್ನು 1968ರ ಜನವರಿಯಲ್ಲಿ ಆರಂಭಿಸಿತು. ಬ್ಯಾಂಕಿನ ಮೊದಲನೆಯ ಸಾಲವಾದ 5 ದಶಲಕ್ಷ ಡಾಲರುಗಳನ್ನು ಥೈಲೆಂಡಿನ ಕೈಗಾರಿಕಾ ಹಣಕಾಸು ಕಾರ್ಪೊರೇಷನಿಗೆ ನೀಡಲಾಯಿತು. ಅಂದಿನಿಂದ ಇದುವರೆಗೆ ಕೃಷಿ, ನೀರಾವರಿ, ಮೀನುಗಾರಿಕೆ, ಕೈಗಾರಿಕೆ, ವಿದ್ಯುಚ್ಛಕ್ತಿ, ಸಾರಿಗೆ ಮುಂತಾದವುಗಳಿಗೆ ಸಂಬಂಧಪಟ್ಟ ಅನೇಕ ಅಭಿವೃದ್ಧಿ ಕಾರ್ಯಗಳಿಗೆ ಹಣದ ನೆರವನ್ನೂ ತಾಂತ್ರಿಕ ನೆರವನ್ನೂ ನೀಡಲಾಗಿದೆ. ಕೃಷಿಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಬ್ಯಾಂಕು ಕೈಗೊಂಡಿರುವ ಕಾರ್ಯಾಚರಣೆಗಳನ್ನು ಅವಲೋಕಿಸುವುದೇ ಪ್ರಸ್ತುತ ಲೇಖನದ ಉದ್ದೇಶ.

ಏಷ್ಯದ ಕೃಷಿ ವ್ಯವಸ್ಥೆ

ಏಷ್ಯ ಖಂಡದಲ್ಲಿ ಜಪಾನ್ ಒಂದನ್ನು ಬಿಟ್ಟರೆ ಇತರ ಎಲ್ಲ ರಾಷ್ಟ್ರಗಳೂ ಅಭಿವೃದ್ಧಿಶೀಲರಾಷ್ಟ್ರಗಳಾಗಿವೆ. ಈ ರಾಷ್ಟ್ರಗಳಲ್ಲಿ ಕೃಷಿಯದೇ ಪ್ರಧಾನ ಸ್ಥಾನ. ಹೆಚ್ಚಿನ ಸಂಖ್ಯೆಯ ಜನರು ಕೃಷಿಕ್ಷೇತ್ರದಲ್ಲಿ ಕಾರ್ಯನಿರತರಾಗಿದ್ದಾರಲ್ಲದೆ ತಮ್ಮ ಜೀವನೋಪಾಯಕ್ಕಾಗಿ ಕೃಷಿಯನ್ನೇ ಅವಲಂಬಿಸಿದ್ದಾರೆ. ಏಷ್ಯದ ರಾಷ್ಟ್ರಗಳ ವರಮಾನ ಸುಮಾರು ಅರ್ಧಭಾಗ ಕೃಷಿಕ್ಷೇತ್ರದಿಂದ ಲಭ್ಯವಾಗುತ್ತದೆ. ಈ ರಾಷ್ಟ್ರಗಳ ರಫ್ತು ವ್ಯಾಪಾರದಲ್ಲಿಯೂ ಕೃಷಿ ಉತ್ಪನ್ನಗಳು ಪ್ರಮುಖ ಪಾತ್ರ ವಹಿಸಿ ವಿದೇಶಿ ವಿನಿಮಯ ಗಳಿಕೆಯಲ್ಲಿ ನೆರವಾಗುತ್ತಿವೆ. ಹೀಗೆ ಇವುಗಳ ಆರ್ಥಿಕ ವ್ಯವಸ್ಥೆಯಲ್ಲಿ ಕೃಷಿ ಪ್ರಧಾನಸ್ಥಾನ ಹೊಂದಿರುವುದಾದರೂ ಆಧುನಿಕ ದೃಷ್ಟಿಯಿಂದ ನೋಡಿದರೆ ಈ ಕ್ಷೇತ್ರದಲ್ಲಿ ಅನೇಕ ಕುಂದುಕೊರತೆಗಳು ಕಂಡುಬರುತ್ತವೆ. ಭೂ ವ್ಯವಸ್ಥೆ ಜಮೀನುಗಳ ಅಭಿವೃದ್ಧಿಗೆ ಉತ್ತೇಜಕಗಳನ್ನು ಹುಟ್ಟಿಸುವಂತಹದಾಗಿರುವುದಿಲ್ಲ. ಹಿಡುವಳಿಗಳು ಆರ್ಥಿಕ ಹಿಡುವಳಿಗಳಾಗಿರದೆ ತುಂಡು ಜಮೀನುಗಳಾಗಿವೆ. ವಿಜ್ಞಾನದ ಪ್ರಗತಿಯಿಂದಾಗಿ ವ್ಯಾವಸಾಯಿಕ ಕಾರ್ಯಾಚರಣೆಗಳು ಸ್ವಲ್ಪಮಟ್ಟಿಗೆ ಉತ್ತಮಗೊಂಡಿದ್ದರೂ ಪೂರ್ವಾಚಾರಗಳ ಅನುಸರಣೆ ಇನ್ನೂ ತಪ್ಪಿಲ್ಲ. ತತ್ಪರಿಣಾಮವಾಗಿ ಎಕರೆಯೊಂದರ ಉತ್ಪನ್ನ ಮುಂದುವರಿದ ರಾಷ್ಟ್ರಗಳಲ್ಲಿ ಇರುವುದಕ್ಕಿಂತ ತುಂಬ ಕಡಿಮೆಯಾಗಿದೆ. ಭೂಮಿಯ ಮೇಲೆ ಜನಸಂಖ್ಯೆಯ ಒತ್ತಡ ಹೆಚ್ಚಾಗಿರುವುದರಿಂದ ಕೃಷಿಕಾರ್ಮಿಕರ ತಲಾ ಉತ್ಪನ್ನ ಮುಂದುವರಿದ ರಾಷ್ಟ್ರಗಳಲ್ಲಿ ಇರುವುದಕ್ಕಿಂತ ಬಹಳ ಕೆಳಮಟ್ಟದಲ್ಲಿದೆ. ಕೃಷಿಕ್ಷೇತ್ರದಲ್ಲಿ ವೈಜ್ಞಾನಿಕ ತಿಳಿವಳಿಕೆ ಹೆಚ್ಚುಹೆಚ್ಚಾಗಿ ಬಳಕೆಗೆ ಬರುವಂತೆ ಮಾಡುವುದರಲ್ಲಿ ಏಷ್ಯದ ರಾಷ್ಟ್ರಗಳು ವಿಶೇಷ ಆಸಕ್ತಿಯನ್ನು ವಹಿಸುತ್ತಿವೆ. ಈ ಆಸಕ್ತಿಯನ್ನು ಮತ್ತಷ್ಟು

ಹೆಚ್ಚಿಸುವ ಉದ್ದೇಶದಿಂದಲೂ ಕೃಷಿಗೆ ಸಂಬಂಧಪಟ್ಟ ಕಾರ್ಯಕ್ರಮಗಳನ್ನು ರೂಪಿಸುವ ಉದ್ದೇಶದಿಂದಲೂ ಏಷ್ಯದ ಅಭಿವೃದ್ಧಿ ಬ್ಯಾಂಕು 1967ರಲ್ಲಿ ಏಷ್ಯದ ಕೃಷಿ ಸರ್ವೇಕ್ಷಣೆಯೊಂದನ್ನು ನಡೆಸಿತು.

ಏಷ್ಯದ ಕೃಷಿ ಸರ್ವೇಕ್ಷಣೆ

ಏಷ್ಯದ ಕೃಷಿಸರ್ವೇಕ್ಷಣೆಯ ಅಂಗವಾಗಿ ಎರಡು ತಂಡಗಳನ್ನು—1 ಸಲಹಾ ತಂಡ ಮತ್ತು 2 ತಾಂತ್ರಿಕ ಮತ್ತು ಆರ್ಥಿಕ ಸರ್ವೇಕ್ಷಣಾ ತಂಡಗಳನ್ನು—ನೇಮಿಸಲಾಯಿತು. ಪ್ರೊ. ಕಜೂಷಿ ಒಕಾವ ಮತ್ತು ಪ್ರೊ ಟಿ. ಡಬ್ಲ್ಯು. ಶೂಲ್ಜರ ನೇತೃತ್ವದಲ್ಲಿ ರಚಿಸಲಾದ ಸಲಹಾತಂಡದಲ್ಲಿ ಹನ್ನೊಂದು ಕೃಷಿ ತಜ್ಞರಿದ್ದರು. ಏಷ್ಯದ ಕೃಷಿ ಸರ್ವೇಕ್ಷಣೆಯ ವಿಷಯವ್ಯಾಪ್ತಿ ಮತ್ತು ಇತರ ರೂಪರೇಷೆಗಳನ್ನು ಈ ತಂಡ ನಿರ್ದಿಷ್ಟಗೊಳಿಸಿತು. ತಾಂತ್ರಿಕ ಮತ್ತು ಆರ್ಥಿಕ ಸರ್ವೇಕ್ಷಣೆಯ ತಂಡದ ನೇತೃತ್ವವನ್ನು ಡಾ. ನಾಮ್ ಕ್ಯು ಯಂಗರಿಗೆ ವಹಿಸಲಾಯಿತು. ಈ ತಂಡದಲ್ಲಿ ಹದಿನಾರು ಕೃಷಿತಜ್ಞರಿದ್ದರು. ಸರ್ವೇಕ್ಷಣೆಯನ್ನು ಯಶಸ್ವಿಯಾಗಿ ನಡೆಸಿದ ಮತ್ತು ವರದಿಯನ್ನು ಸಿದ್ಧಗೊಳಿಸಿದ ಕೀರ್ತಿ ಈ ತಂಡಕ್ಕೆ ಸಲ್ಲುತ್ತದೆ. ಏಷ್ಯ ಕೃಷಿ ಸಮೀಕ್ಷೆ ಏಷ್ಯ ಖಂಡದ ಕೃಷಿ ವ್ಯವಸ್ಥೆಯಲ್ಲಿ ಕಂಡುಬರುವ ಹಲವಾರು ನ್ಯೂನತೆಗಳನ್ನು ಸ್ಪಷ್ಟಪಡಿಸುತ್ತದೆ. ಏಷ್ಯದ ಅಭಿವೃದ್ಧಿ ಬ್ಯಾಂಕು ಕೈಗೊಳ್ಳಬಹುದಾದ ಕೆಲವು ಬಂಡವಾಳ ವಿನಿಯೋಜನ ಕಾರ್ಯಕ್ರಮಗಳನ್ನು ಶಿಫಾರಸು ಮಾಡಿತು.

ಏಷ್ಯದ ಕೃಷಿ ಸರ್ವೇಕ್ಷಣೆ ಪೂರ್ಣವಾದ ಅನಂತರ ಕೃಷಿಗೆ ಸಂಬಂಧಪಟ್ಟಂತೆ ಪ್ರಾದೇಶಿಕ ವಿಚಾರಗೋಷ್ಠಿಯೊಂದನ್ನು ಏರ್ಪಡಿಸಲಾಯಿತು. ಈ ವಿಚಾರಗೋಷ್ಠಿಯಲ್ಲಿ ಕೃಷಿಸರ್ವೇಕ್ಷಣೆಯ ಆಧಾರದ ಮೇಲೆ ಶಿಫಾರಸು ಮಾಡಲಾದ ಸಲಹೆಗಳನ್ನು ಪುನರ್ ಪರಿಶೀಲಿಸಲಾಯಿತು. ಇದಲ್ಲದೆ, ಕೃಷಿ ಅಭಿವೃದ್ಧಿಗೆ ಅಗತ್ಯವಾದ ಅಧೋರಚನೆಯ (ಇನ್ಫ್ರಾಸ್ಟ್ರಕ್ಚರ್) ನಿರ್ಮಾಣ, ಗ್ರಾಮಾಂತರ ಸಂಸ್ಥೆಗಳ ಸ್ಥಾಪನೆ, ನೀರಾವರಿ ಮತ್ತು ಕೃಷಿ ಕಾರ್ಮಿಕರ ತಲಾ ಉತ್ಪನ್ನವನ್ನು ಹೆಚ್ಚಿಸುವಿಕೆ, ಕೃಷಿ ಉತ್ಪನ್ನಗಳ ಮಾರಾಟವನ್ನು ಸುವ್ಯವಸ್ಥಿತಗೊಳಿಸುವಿಕೆ–ಇವೇ ಮುಂತಾದ ವಿಷಯಗಳೂ ಪ್ರಾದೇಶಿಕ ವಿಚಾರಗೋಷ್ಠಿಯಲ್ಲಿ ಪ್ರಸ್ತಾಪಕ್ಕೆ ಬಂದವು. ಆದ್ಯತೆಗೆ ತಕ್ಕಂತೆ ಕಾರ್ಯಕ್ರಮಗಳನ್ನು ರೂಪಿಸುವುದರಲ್ಲಿ ಪ್ರಾದೇಶಿಕ ವಿಚಾರಗೋಷ್ಠಿ ವಿಶೇಷ ಶ್ರಮ ವಹಿಸಿತು. ಇವುಗಳ ಪರಿಣಾಮವಾಗಿ ಕೃಷಿ ಸರ್ವೇಕ್ಷಣೆಯ ಆಧಾರದ ಮೇಲೆ ಶಿಫಾರಸು ಮಾಡಲಾದ ಸಲಹೆಗಳಲ್ಲಿ ಕೆಲವು ಉಪಯುಕ್ತ ಮಾರ್ಪಾಡುಗಳಾದವು. ಏಷ್ಯ ಖಂಡದ ಕೃಷಿ ಅಭಿವೃದ್ಧಿಗಾಗಿ ಏಷ್ಯದ ಅಭಿವೃದ್ಧಿ ಬ್ಯಾಂಕು ಯಾವ ರೀತಿಯ ಹಣ ಮತ್ತು ತಾಂತ್ರಿಕ ಸಹಾಯವನ್ನು ನೀಡಬೇಕೆಂಬುದನ್ನು ಪ್ರಾದೇಶಿಕ ವಿಚಾರಗೋಷ್ಠಿ ಸ್ಪಷ್ಟಪಡಿಸಿತು.

ಬ್ಯಾಂಕಿನ ಸಾಲ ಕಾರ್ಯಾಚರಣೆಗಳು

ಕೃಷಿಕ್ಷೇತ್ರಕ್ಕೆ ಸಂಬಂಧಪಟ್ಟ ಬ್ಯಾಂಕಿನ ಸಾಲ ಕಾರ್ಯಾಚರಣೆಗಳು ಕೃಷಿ ಸರ್ವೇಕ್ಷಣೆ ಮತ್ತು ಕೃಷಿ ಪ್ರಾದೇಶಿಕ ವಿಚಾರಗೋಷ್ಠಿಗಳು ಸೂಚಿಸಿದ ದಿಕ್ಕಿನಲ್ಲಿ ಸಾಗುತ್ತಿರುವುದು ಸಮಾಧಾನಕರವಾದ ವಿಷಯ. ಧನ ಸಹಾಯವನ್ನಲ್ಲದೆ ತಾಂತ್ರಿಕ ಸಹಾಯವನ್ನೊದಗಿಸುವುದಕ್ಕೂ ಬ್ಯಾಂಕು ವಿಶೇಷ ಗಮನ ನೀಡುತ್ತಿದೆ. ಏಷ್ಯದ ಹಿಂದುಳಿದ ರಾಷ್ಟ್ರಗಳಲ್ಲಿ ಕೃಷಿ ಅಭಿವೃದ್ಧಿ ಯೋಜನೆಗಳ ರಚನೆ ಮತ್ತು ಅನುಸರಣೆ ಉತ್ತಮಗೊಳ್ಳಲೆಂಬ ದೃಷ್ಟಿಯಿಂದಲೂ ಕೃಷಿಅಭಿವೃದ್ಧಿಗೆ ಪೂರಕವಾಗಬಲ್ಲ ಗ್ರಾಮಾಂತರ ಸಂಸ್ಥೆಗಳ ಸ್ಥಾಪನೆಯನ್ನು ಸುಗಮಗೊಳಿಸುವ ದೃಷ್ಟಿಯಿಂದಲೂ ಬ್ಯಾಂಕು ತಾಂತ್ರಿಕ ಸಹಾಯವನ್ನು ಒದಗಿಸುತ್ತಿದೆ. 1970ರ ವೇಳೆಗೆ ಕೃಷಿಗೆ ಸಂಬಂಧಪಟ್ಟ ಇಪ್ಪತ್ತು ಯೋಜನೆಗಳಿಗೆ ಬೇಕಾಗುವ 64.6 ದಶಲಕ್ಷ ಡಾಲರ್ ಮೌಲ್ಯದ ಸಾಲವನ್ನು ಕೊಡುವುದಕ್ಕೆ ಬ್ಯಾಂಕು ಒಪ್ಪಿತಲ್ಲದೆ, ಇಪ್ಪತ್ನಾಲ್ಕು ಯೋಜನೆಗಳಿಗೆ ತಾಂತ್ರಿಕ ಸಹಾಯವನ್ನು ನೀಡಲು ಒಪ್ಪಿಕೊಂಡಿತು. ಬ್ಯಾಂಕಿನ ಒಪ್ಪಿಗೆ ಪಡೆದ ಯೋಜನೆಗಳ ಕಾರ್ಯಕ್ಷೇತ್ರ ಜಲಸಂಪನ್ಮೂಲದ ಅಭಿವೃದ್ಧಿಗೆ, ಕೈಗಾರಿಕಾ ಬೆಳೆಗಳ ಉತ್ಪಾದನೆ, ಕೃಷಿ ಕೈಗಾರಿಕೆಗಳ ಅಭಿವೃದ್ಧಿ, ಕೃಷಿ ಯಾಂತ್ರೀಕರಣ, ಮತ್ಸ್ಯೋದ್ಯಮದ ಬೆಳವಣಿಗೆ, ಜಾನುವಾರು ಪೋಷಣೆ—ಇವುಗಳಿಗೆ ಸೀಮಿತವಾಗಿತ್ತು.

1971ರಲ್ಲಿ 27.34 ದಶಲಕ್ಷ ಡಾಲರ್ ಮೌಲ್ಯದ 6 ಕೃಷಿ ಸಾಲಗಳನ್ನು ಇಂಡೋನೇಷ್ಯ, ನೇಪಾಳ, ವಿಯೆಟ್ನಾಂ ಗಣರಾಜ್ಯ ಮತ್ತು ಪಶ್ಚಿಮ ಸಮೋವ ರಾಷ್ಟ್ರಗಳಿಗೆ ಕೊಡಲು ಬ್ಯಾಂಕು ತನ್ನ ಒಪ್ಪಿಗೆಯನ್ನು ಸೂಚಿಸಿತು. 1971ರಲ್ಲಿ ಮತ್ತು 1968ರಿಂದ 1971ರ ವರೆವಿಗೆ ಬ್ಯಾಂಕು ಮಂಜೂರು ಮಾಡಿದ ವಿವಿಧ ಬಗೆಯ ಸಾಲಗಳನ್ನು ಮತ್ತು ಅವುಗಳ ಮೊತ್ತಗಳನ್ನು ಕೆಳಗೆ ಕೊಟ್ಟಿದೆ:

	1971		1968—1971	
ಕ್ಷೇತ್ರ	ಮೊತ್ತ (ಸಾವಿರ ಡಾಲರುಗಳಲ್ಲಿ)	ಒಟ್ಟು ಸಾಲದ ಸೇಕಡ	ಮೊತ್ತ (ಸಾವಿರ ಡಾಲರುಗಳಲ್ಲಿ)	ಒಟ್ಟು ಸಾಲದ ಸೇಕಡ
ಕೃಷಿ	27,340	10.8	91,893	14.4
ವಿದ್ಯುಚ್ಛಕ್ತಿ	1,05,540	41.5	1,51,690	23.7
ಕೈಗಾರಿಕೆ	46,150	18.2	2,04,170	32.0
ಸಾರಿಗೆ ಮತ್ತು ಸಂಪರ್ಕ	44,200	17.4	1,36,410	21.4
ನೀರು ಸರಬರಾಜು	30,800	12.1	51,300	8.0
ಶಿಕ್ಷಣ	—	—	3,000	0.5
ಒಟ್ಟು	2,54,030	100.0	6,38,463	100.0

1971ರಲ್ಲಿ ಕೃಷಿ ಕ್ಷೇತ್ರಕ್ಕೆ ನೀಡಲಾದ 6 ಸಾಲಗಳನ್ನು ರಿಯಾಯತಿ ಬಡ್ಡಿದರದಲ್ಲಿ ಅಂದರೆ ಸೇಕಡ 1½–3ರ ದರದಲ್ಲಿ ಕೊಡಲಾಯಿತು. ಈ ಸಾಲಗಳನ್ನು ಕೊಡುವುದಕ್ಕಾಗಿ ಬ್ಯಾಂಕು ತನ್ನ ಮೂರು ವಿಶೇಷ ನಿಧಿಗಳನ್ನು—ತಾಂತ್ರಿಕ ಸಹಾಯದ ವಿಶೇಷ ನಿಧಿ, ವಿವಿಧೋದ್ದೇಶ ವಿಶೇಷ ನಿಧಿ ಮತ್ತು ವ್ಯಾವಸಾಯಿಕ ವಿಶೇಷ ನಿಧಿ—ಬಳಸಿಕೊಂಡಿತು.

ಬ್ಯಾಂಕಿನ ತಾಂತ್ರಿಕ ಸಹಾಯ

ಏಷ್ಯದ ಅಭಿವೃದ್ಧಿ ಬ್ಯಾಂಕು ವಿವಿಧ ಕ್ಷೇತ್ರಗಳಿಗೆ ತಾಂತ್ರಿಕ ಸೌಲಭ್ಯವನ್ನು ಒದಗಿಸುತ್ತಿದ್ದರೂ ಕೃಷಿ ಕ್ಷೇತ್ರಕ್ಕೆ ಮಾತ್ರ ಹೆಚ್ಚಿನ ಸೌಲಭ್ಯವನ್ನು ಒದಗಿಸಿದೆ. 1971ರಲ್ಲಿ ಕೃಷಿಗೆ ಸಂಬಂಧಪಟ್ಟ 5 ತಾಂತ್ರಿಕ ಸಹಾಯ ಯೋಜನೆಗಳಿಗೆ ಬ್ಯಾಂಕು ತನ್ನ ಒಪ್ಪಿಗೆಯನ್ನು ನೀಡಿತು. ಈ ಯೋಜನೆಗಳ ಅನುಷ್ಠಾನಕ್ಕಾಗಿ ಒಟ್ಟು 7.06,000 ಡಾಲರುಗಳನ್ನು ದಾನದ ರೂಪದಲ್ಲಿ ಕೊಡುವ ಹೊಣೆಯನ್ನು ಬ್ಯಾಂಕು ಹೊತ್ತಿತು. 1971ರಲ್ಲಿ ಮತ್ತು 1967–71ರಲ್ಲಿ ಬ್ಯಾಂಕಿನ ಒಪ್ಪಿಗೆ ಪಡೆಯಲಾದ ವಿವಿಧ ತಾಂತ್ರಿಕ ಸಹಾಯ ಯೋಜನೆಗಳ ವಿವರವನ್ನು ಮುಂದೆ ಕೊಡಲಾಗಿದೆ:

	1971		1967—1971	
ಕ್ಷೇತ್ರ	ಸಂಖ್ಯೆ	ಮೊತ್ತ (ಡಾಲರುಗಳಲ್ಲಿ)	ಸಂಖ್ಯೆ	ಮೊತ್ತ (ಡಾಲರುಗಳಲ್ಲಿ)
ಕೃಷಿ	5	7,06,000	29	48,59,450
ಅಭಿವೃದ್ಧಿ ಹಣಕಾಸಿನ ಸಂಸ್ಥೆಗಳು	1	26,000	8	5,60,500

ವಿದ್ಯುಚ್ಛಕ್ತಿ	2	1.49.000	4	4,14,000
ಕೈಗಾರಿಕೆ	2	75,300	5	3,39,300
ಸಾಗಣೆ	3	5,38,000	9	16,21,000
ನೀರು ಸರಬರಾಜು	—	—	1	1,50.000
ಇತರೆ	2	41,700	2	41,700
ಒಟ್ಟು	15	15,3,6000	58	79,85,950

ಇತರ ಸಂಸ್ಥೆಗಳೊಡನೆ ಸಂಬಂಧ

ಏಷ್ಯದ ಅಭಿವೃದ್ಧಿ ಬ್ಯಾಂಕಿನ ಪ್ರಣಾಳಿಕೆ ಸೂಚಿಸಿರುವಂತೆ ಏಷ್ಯದ ಅಭಿವೃದ್ಧಿ ಬ್ಯಾಂಕು ಇತರ ಪ್ರಾದೇಶಿಕ ಅಭಿವೃದ್ಧಿ ಬ್ಯಾಂಕುಗಳು, ಪ್ರಪಂಚ ಬ್ಯಾಂಕು, ವಿಶ್ವಸಂಸ್ಥೆ ಮತ್ತು ಅದರ ಅಂಗಸಂಸ್ಥೆಗಳೊಡನೆ ಸಂಬಂಧ ಇಟ್ಟುಕೊಂಡಿದೆ. ಏಷ್ಯ ಖಂಡದ ಕೃಷಿ ಅಭಿವೃದ್ಧಿಯನ್ನು ಸಾಧಿಸುವ ದೃಷ್ಟಿಯಿಂದ ಆಹಾರ ಮತ್ತು ಕೃಷಿಸಂಸ್ಥೆಯೊಡನೆ ಬ್ಯಾಂಕು ಸಮಾಲೋಚನೆ ನಡೆಸುತ್ತಿದೆಯಲ್ಲದೆ, ಅದರ ಸಹಭಾಗಿತ್ವವನ್ನು ಪಡೆಯುತ್ತಿರುತ್ತದೆ. ಉದಾ: 1971ರ ಜನವರಿಯಲ್ಲಿ ಇವೆರಡು ಸಂಸ್ಥೆಗಳ ಅಧಿಕಾರಿಗಳು ಮನಿಲಾದಲ್ಲಿ ಸಮಾಲೋಚನೆ ನಡೆಸಿದರು. ಈ ಸಂದರ್ಭದಲ್ಲಿ ಎರಡೂ ಸಂಸ್ಥೆಗಳ ಸಹಕಾರದಿಂದ ಕಾರ್ಯಗತಗೊಳಿಸಬಹುದಾದ ಅನೇಕ ಕೃಷಿ ಅಭಿವೃದ್ಧಿ ಯೋಜನೆಗಳನ್ನು ಪರಿಶೀಲಿಸಲಾಯಿತು.

ಇದಲ್ಲದೆ, 1971ರಲ್ಲಿ ಅಂತರರಾಷ್ಟ್ರೀಯ ಕೃಷಿ ಸಂಶೋಧನೆ ಕುರಿತಾದ ಸಲಹಾ ತಂಡದ (ಕನ್ಸಲ್ಟೇಟಿವ್ ಗ್ರೂಪ್ ಆನ್ ಇಂಟರ್‌ನ್ಯಾಷನಲ್ ಅಗ್ರಿಕಲ್ಚರಲ್ ರಿಸರ್ಚ್) ಸದಸ್ಯತ್ವವನ್ನು ಬ್ಯಾಂಕು ಪಡೆಯಿತು. ಕೃಷಿ ಸಂಶೋಧನೆಯ ಮಹತ್ವವನ್ನು ಪ್ರಚುರಪಡಿಸಿ, ಅದರ ಬೆಳವಣಿಗೆಗೆ ಸಹಾಯ ಮಾಡುವುದೇ ಸಲಹಾ ತಂಡದ ಮುಖ್ಯ ಉದ್ದೇಶ. ಈ ಸಲಹಾ ತಂಡದ ಪೂರ್ಣ ಪ್ರಯೋಜನವನ್ನು ಪಡೆದು ಏಷ್ಯ ಭೂಭಾಗದ ಕೃಷಿ ಅಭಿವೃದ್ಧಿಯನ್ನು ಸಾಧಿಸುವುದಕ್ಕಾಗಿ ಬ್ಯಾಂಕು ಸತತವಾಗಿ ಶ್ರಮಿಸುತ್ತಿದೆ.

ಬ್ಯಾಂಕು ಎದುರಿಸುತ್ತಿರುವ ಮುಖ್ಯ ಸಮಸ್ಯೆ

ಕೃಷಿ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸಬೇಕಾದರೆ ಹಣದ ಅವಶ್ಯಕತೆ ಬಹಳವಾಗಿರುತ್ತದೆ. ಆದ್ದರಿಂದ ಬ್ಯಾಂಕು ಹೆಚ್ಚುಹೆಚ್ಚು ಸಾಲಗಳನ್ನು ತನ್ನ ಪ್ರಾದೇಶಿಕ ಸದಸ್ಯರಾಷ್ಟ್ರಗಳಿಗೆ ಕೊಡಬೇಕಾಗುತ್ತದೆ. ಆದರೆ ಬ್ಯಾಂಕಿನ ಹಣಕಾಸಿನ ಸ್ಥಿತಿಗತಿಗಳು ಅಷ್ಟೊಂದು ಉತ್ತಮವಾಗಿಲ್ಲ. ಸಾಕಷ್ಟು ಪರಿಮಾಣದಲ್ಲಿ ಸಂಪನ್ಮೂಲಗಳನ್ನು ರೂಢಿಸಿಕೊಳ್ಳುವುದು ಬ್ಯಾಂಕಿಗೆ ಒಂದು ಬೃಹತ್ ಸಮಸ್ಯೆಯಾಗಿದೆ. ಒಂದುಕಡೆ ಸಂಪನ್ಮೂಲದ ಅಭಾವವಿದ್ದರೆ ಮತ್ತೊಂದು ಕಡೆ ರಿಯಾಯಿತಿ ಬಡ್ಡಿದರದಲ್ಲಿ ಕೊಡಲಾಗುತ್ತಿರುವ ಸಾಲದ ಪರಿಮಾಣ ಹೆಚ್ಚಾಗುತ್ತಿದೆ. 1969ರಿಂದ ಕೊಡಲಾಗುತ್ತಿರುವ ರಿಯಾಯಿತಿ ಸಾಲದ ವಾರ್ಷಿಕ ದರ ಶೇಕಡ 100ಕ್ಕಿಂತ ಮಿಗಿಲಾಗಿದೆ. ಆದರೆ ಸಂಪನ್ಮೂಲಗಳನ್ನು ಅದಕ್ಕನುಗುಣವಾಗಿ ರೂಢಿಸಿಕೊಳ್ಳುವುದು ಸಾಧ್ಯವಾಗಿಲ್ಲ. 1969-71ರ ಅವಧಿಯಲ್ಲಿ ವಿವಿಧೋದ್ದೇಶ ವಿಶೇಷ ನಿಧಿ ಮತ್ತು ವ್ಯವಸಾಯಿಕ ವಿಶೇಷ ನಿಧಿಗಳ ಸಂಪನ್ಮೂಲ ವಾರ್ಷಿಕವಾಗಿ ಶೇಕಡ 55ರಷ್ಟು ಮಾತ್ರ ಹೆಚ್ಚಾಯಿತು. ರಿಯಾಯಿತಿ ಸಾಲಗಳನ್ನು ಕೇವಲವಾಗಿ ವಿಶೇಷ ನಿಧಿಗಳಲ್ಲಿರುವ ಸಂಪನ್ಮೂಲವನ್ನು ಉಪಯೋಗಿಸಿಕೊಳ್ಳಲಾಗುವುದರಿಂದ ಅಂತಹ ಸಂಪನ್ಮೂಲಗಳನ್ನು ಹೆಚ್ಚು ಹೆಚ್ಚಾಗಿ ಸಂಗ್ರಹಿಸುವುದು ಅಗತ್ಯ. ವಿಶೇಷ ನಿಧಿಗಳನ್ನು ಹೆಚ್ಚು ಶಕ್ತಿಯುತವಾಗಿ ಮಾಡುವಾಗ ಉದ್ಭವಿಸುವ ಸಮಸ್ಯೆಗಳ ಅಧ್ಯಯನಕ್ಕೆ ಬ್ಯಾಂಕು ಗಮನ ಹರಿಸಿದೆ. ಇದು ಬ್ಯಾಂಕಿನ ಕರ್ತವ್ಯ ಪ್ರಜ್ಞೆಯನ್ನು ಸೂಚಿಸುತ್ತದೆ.

ಸಂಪನ್ಮೂಲದ ಅಭಾವ ಸಂಪೂರ್ಣವಾಗಿ ನಿವಾರಣೆಯಾಗದೆ ಏಷ್ಯದ ಅಭಿವೃದ್ಧಿ ಬ್ಯಾಂಕಿನ ಧ್ಯೇಯ ಉದ್ದೇಶಗಳು ಸಫಲವಾಗುವಂತಿಲ್ಲ. ಏಷ್ಯ ಭೂಭಾಗದ ಕೃಷಿ ರಾಷ್ಟ್ರಗಳ ಕನಸು ನನಸಾಗುವಂತಿಲ್ಲ. ಆದ್ದರಿಂದ ಈ ಸಮಸ್ಯೆಯ ನಿವಾರಣೆಗೆ ಆದ್ಯಗಮನಕೊಡುವುದು ಪ್ರಾದೇಶಿಕ ಹಾಗೂ ಇಡೀ ವಿಶ್ವದ ಹಿತದೃಷ್ಟಿಯಿಂದ ಬಹು ಅಗತ್ಯ.

ವಿಲ್ಯಂ ಮಾಡ್ತಾ

ಮಾತೃಭಾಷೆ, ಸ್ವಭಾಷೆ ಮತ್ತು ಅನ್ಯಭಾಷೆ

ಮಾನವಜಾತಿಗೆ ಪರಿಮಿತಿಗೊಂಡಿರುವ ಸಂಪರ್ಕ ಸಾಧನವೆಂದರೆ ಭಾಷೆ. ಇದು ಅನುವಂಶೀಯವಾಗಿ ಸಾಗುವುದರ ಬದಲು ಸಾಂಸ್ಕೃತಿಕವಾಗಿ. ಸಂಸ್ಕೃತಿಯ ಶಾಖೆಯಾಗಿ ಮಾನವ ಜನಾಂಗದಲ್ಲಿ ಸಾಗಿದೆ, ಸಾಗುತ್ತಿದೆ. ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ಭಾಷಾ ಪ್ರಪಂಚವನ್ನು ಅವಲೋಕಿಸಿದಾಗ ಅಲ್ಲಿ ಸ್ವಭಾಷೆ ಮತ್ತು ಪರಭಾಷೆಯೆಂದು ಎರಡು ವರ್ಗಗಳನ್ನು ಗುರುತಿಸಬಹುದು.

ಒಬ್ಬ ವ್ಯಕ್ತಿ ಯಾವ ಸಮಾಜದ ಸದಸ್ಯನಾಗಿ ಬಾಳಿಕೊಂಡಿರುತ್ತಾನೆಯೊ ಆ ಸಮಾಜ ರೂಪಿಸಿಕೊಂಡ ಭಾಷೆಯೇ ಅವನ ಸ್ವಭಾಷೆ. ಇದನ್ನು ಪ್ರಥಮ ಭಾಷೆ (L_1) ಎಂದೂ ಕರೆಯುವುದುಂಟು. ಈ ಸಂದರ್ಭದಲ್ಲಿ ಸ್ವಭಾಷೆ ಮತ್ತು ಮಾತೃಭಾಷೆಗಳೊಳಗಿನ ಸೂಕ್ಷ್ಮ ವ್ಯತ್ಯಾಸವನ್ನು ಗಮನಿಸಬೇಕು. ಹೆತ್ತವರಿಂದ ಕಲಿತುಕೊಂಡು, ಹುಟ್ಟಿನಿಂದ ಕೇಳಿಕೊಂಡು, ಶೈಶವಾವಸ್ಥೆಯಿಂದಲೇ ಆಡಿಕೊಂಡು ಬಂದಿರುವ ಭಾಷೆಯೇ ಮಾತೃಭಾಷೆ: ಇದು ಸ್ವಭಾಷೆಯೂ ಹೌದು. ಆದರೆ ಎಲ್ಲ ಸ್ವಭಾಷೆಗಳೂ ಮಾತೃಭಾಷೆಗಳಾಗಲಾರವು.

ಒಂದು ಮಗು ಕನ್ನಡ ಸಮಾಜದಲ್ಲಿ ಹುಟ್ಟಿ ಅದರ ಅಂಗವಾಗಿ ಬೆಳೆದು ಹುಟ್ಟಿನಿಂದ ಕನ್ನಡದಲ್ಲಿಯೇ ಸಾಮಾಜಿಕ ಸಂಪರ್ಕವನ್ನು ಬೆಳೆಯಿಸಿಕೊಂಡು ಬಂದರೆ ಕನ್ನಡ ಆಕೆಗೆ ಮಾತೃಭಾಷೆಯೂ ಹೌದು; ಸ್ವಭಾಷೆಯೂ ಹೌದು. ಒಂದು ವೇಳೆ ಅದು ಚಿಕ್ಕ ವಯಸ್ಸಿನಿಂದ ಕನ್ನಡದ ಜೊತೆಯಲ್ಲಿ ಇಂಗ್ಲಿಷನ್ನೂ ಕಲಿತು ಆ ಭಾಷೆಯಲ್ಲಿ ಸಂಪೂರ್ಣವಾಗಿ ತನ್ನ ವಿಚಾರಗಳನ್ನು ವಿನಿಮಯ ಮಾಡುವ, ತನ್ನ ಜೀವನದ ಉದ್ದಕ್ಕೂ ಪ್ರತಿರಂಗದಲ್ಲಿಯೂ ಅದನ್ನು ಬಳಸುವ ಸಾಮರ್ಥ್ಯ ಪಡೆದುಕೊಂಡರೆ ಇಂಗ್ಲಿಷೂ ಅದಕ್ಕೆ ಸ್ವಭಾಷೆಯೆ ; ಆದರೆ ಅದು ಮಾತೃಭಾಷೆಯಲ್ಲ.

ಓರ್ವ ವ್ಯಕ್ತಿ ಹಲವು ಭಾಷೆಗಳಲ್ಲಿ ಪಾರಂಗತನಾಗಿ ಅವುಗಳ ಮೂಲಕ ತನ್ನ ಅಭಿಪ್ರಾಯಗಳನ್ನು ಸಂಪೂರ್ಣವಾಗಿ ಅಭಿವ್ಯಕ್ತಗೊಳಿಸಲು ಅಥವಾ ಆ ಭಾಷೆಗಳ ಮೂಲಕ ಇತರರ ಅಭಿಪ್ರಾಯ ಆಲೋಚನೆಗಳನ್ನು ತಿಳಿದುಕೊಳ್ಳಲು ಸಮರ್ಥನಾದರೆ ; ಅಲ್ಲದೆ, ತನ್ನ ಜೀವನದುದ್ದಕ್ಕೂ ಅವನ್ನು ಆತ ಬಳಸಿಕೊಂಡು ಬಂದರೆ ಅವೆಲ್ಲವೂ ಆತನ ಪ್ರಥಮ ಭಾಷೆಗಳೇ.

ಹೀಗೆ ಒಂದು ಭಾಷೆ ಸ್ವಭಾಷೆ ಎನಿಸಿಕೊಳ್ಳಬೇಕಾದರೆ ಆ ಭಾಷೆಯನ್ನಾಡುವ ಜನರ ಸಾಮಾಜಿಕ ಸಾಂಸ್ಕೃತಿಕ ಸಂಸ್ಕಾರಗಳ ದೀಕ್ಷೆಯಾಗಬೇಕು. ಹುಟ್ಟು ಇಲ್ಲವೆ ಬಾಲ್ಯಾವಸ್ಥೆಯಿಂದ ಪ್ರತಿರಂಗದಲ್ಲಿಯೂ ಅದನ್ನು ಬಳಸುವ ಸಾಮರ್ಥ್ಯವನ್ನು ಪಡೆದುಕೊಳ್ಳಬೇಕು. ಆಜೀವಪರ್ಯಂತ ಅದನ್ನು ಬಳಸಬೇಕು: ಅರ್ಥಾತ್ ಮಧ್ಯದಲ್ಲಿ ಅದನ್ನು ಸಂಪೂರ್ಣವಾಗಿ ಬಿಟ್ಟುಕೊಡಬಾರದು. ಒಟ್ಟಿನಲ್ಲಿ ಆ ಭಾಷೆ ಕರಗತವಾಗಬೇಕು.

ಸಾಮಾನ್ಯವಾಗಿ ಒಬ್ಬ ವ್ಯಕ್ತಿಗೆ ಒಂದೇ ಸ್ವಭಾಷೆ. ಆದರೆ ಸಾಮಾಜಿಕ ಸಂಪರ್ಕಗಳನ್ನು ಅವಲಂಬಿಸಿ ಒಂದಕ್ಕಿಂತ ಹೆಚ್ಚು ಸ್ವಭಾಷೆಗಳನ್ನು ಆತ ಪಡೆದುಕೊಳ್ಳಬಹುದು. ಉದಾಹರಣೆಗೆ ದಕ್ಷಿಣ ಕನ್ನಡ ಜಿಲ್ಲೆಯ ಕೊಂಕಣಿ ಕ್ರೈಸ್ತರಲ್ಲಿ ಹಲವರು ತಮ್ಮ ಮಾತೃಭಾಷೆಯೊಂದಿಗೆ ಪರಿಸರದಲ್ಲಿರುವ ತುಳುವನ್ನು ಮಾತ್ರ

ವಲ್ಲದೆ ನೆರೆಹೊರೆಯ ಮಲಯಾಳಂ ಹಾಗೂ ಕನ್ನಡ ಭಾಷೆಯನ್ನೂ ತಮ್ಮ ದೈನಂದಿನ ವ್ಯವಹಾರದಲ್ಲಿ ನಿರರ್ಗಳವಾಗಿ ಬಳಸುತ್ತಾರೆ. ಈ ಎಲ್ಲ ಭಾಷೆಗಳೂ ಅವರಿಗೆ ಸ್ವಭಾಷೆಗಳು.

ಪೂರ್ವಜರ ಸ್ವಭಾಷೆಯೇ ಮುಂದಿನ ಪೀಳಿಗೆಗೂ ಸ್ವಭಾಷೆಯಾಗಿ ಉಳಿಯಬೇಕೆಂಬ ನಿಯಮ ವಿಲ್ಲ. ಉದಾಹರಣೆಗೆ ಬೇರೊಂದು ಭಾಷೆ ಸ್ವಭಾಷೆಯಾಗಿ ಉಳ್ಳ ಕುಟುಂಬವೊಂದು ಕನ್ನಡ ನಾಡಿಗೆ ಬಂದು ನೆಲಸಿತೆಂದು ಪರಿಗಣಿಸೋಣ. ಆಗ ಇಲ್ಲಿಯ ಪರಿಸರಕ್ಕೆ ಅನುಗುಣವಾಗಿ ಆ ಕುಟುಂಬದ ಮಕ್ಕಳು ಕನ್ನಡವನ್ನು ತಮ್ಮ ನಿತ್ಯದ ವ್ಯವಹಾರಕ್ಕೋಸ್ಕರ ಸಹಜವಾಗಿ ಉಪಯೋಗಿಸಿಕೊಳ್ಳುತ್ತಾರೆ. ಕೊನೆಕೊನೆಗೆ ಅವರ ಹಿಂದಿನ ಭಾಷೆಯು ಬಳಕೆ ಕಡಿಮೆಯಾಗಿ ಅದು ಅವರಲ್ಲಿ ಕಣ್ಮರೆಯಾಗುವ ಸಂಭವವೂ ಉಂಟು. ಆ ಸಮಯದಲ್ಲಿ ಕನ್ನಡವೇ ಅವರ ಸ್ವಭಾಷೆಯಾಗುತ್ತದೆ.

ಒಂದು ಭಾಷೆ ಸ್ವಭಾಷೆಯಾಗಿ ಕರಗತಗೊಳ್ಳಬೇಕಾದರೆ ಸುತ್ತಮುತ್ತ ಆ ಭಾಷೆಯ ಪರಿಸರ ಅತ್ಯಗತ್ಯ. ಒಂದು ನಿಗದಿತವಾದ ಉದ್ದೇಶವನ್ನಿಟ್ಟುಕೊಂಡು ದಿನನಿತ್ಯ ಸ್ವಲ್ಪ ವೇಳೆಯನ್ನು ಅಭ್ಯಾಸ ಕ್ಕೆಂದು ಮೀಸಲಾಗಿಟ್ಟು ಶಾಲೆ ಮೊದಲಾದ ಸಂಸ್ಥೆಗಳ ಅಥವಾ ಭಾಷಾ ಪ್ರಯೋಗಶಾಲೆ ಇತ್ಯಾದಿ ಭಾಷಾ ಅಭ್ಯಾಸ ಸಲಕರಣೆಗಳ ಸಹಾಯವನ್ನು ಪಡೆದು ಯಾರೂ ಸ್ವಭಾಷೆಯನ್ನು ಕಲಿಯುವುದಿಲ್ಲ. ಅದು ನಮ್ಮ ಪರಿಸರಕ್ಕೆ ಅನುಗುಣವಾಗಿ ಸಹಜವಾಗಿ ಮತ್ತು ಸಾಮಾಜಿಕ ಸಂಪರ್ಕದಿಂದಾಗಿ ನಿಧಾನ ವಾಗಿ ಬರುವಂತಹದು. ಅಲ್ಲದೆ, ಆ ಭಾಷೆಯಲ್ಲಿ ನಾವು ನಿರರ್ಗಳವಾಗಿ, ತಡವರಿಸದೆ ನಮ್ಮ ಭಾವನೆ ಗಳನ್ನು ಸ್ಪಷ್ಟವಾಗಿ, ಸುಲಭವಾಗಿ ವ್ಯಕ್ತಪಡಿಸುತ್ತೇವೆ; ಅಂತೆಯೇ ತಿಳಿಯುತ್ತೇವೆ. ಈ ಕಾರಣದಿಂದಾಗಿ ಸ್ವಭಾಷೆ ದೈನಂದಿನ ಸಾಮಾಜಿಕ ವ್ಯವಹಾರದಲ್ಲಿ ಮಾತ್ರವಲ್ಲದೆ ಶಿಕ್ಷಣರಂಗದಲ್ಲಿಯೂ ಮಹತ್ವ ಪಡೆಯುತ್ತದೆ.

ಸ್ವಭಾಷೆಯನ್ನು ಬಿಟ್ಟು ಉಳಿದ ಭಾಷೆ ಪರಭಾಷೆ. ಇದನ್ನು ಅನ್ಯಭಾಷೆಯೆಂದೂ ದ್ವಿತೀಯ ಭಾಷೆ (L_2) ಎಂದೂ ಕರೆಯುವುದುಂಟು. ಅನ್ಯ ಭಾಷೆಯ ಬಳಕೆ ಸ್ವಭಾಷೆಯಷ್ಟು ಇಲ್ಲ. ಅದರ ಉಪಯೋಗ ಬಹು ಸೀಮಿತ. ಉದಾಹರಣೆಗೆ ಇನ್ನೊಂದು ಸಮಾಜದ ವ್ಯಕ್ತಿಗಳೊಡನೆ ಸಂಪರ್ಕ ಬೆಳೆಯಿಸಲು, ಅನ್ಯ ಸಂಸ್ಕೃತಿಯನ್ನು ತಿಳಿದುಕೊಳ್ಳಲು, ಪರಭಾಷೆಯಲ್ಲಿ ಅಭಿವ್ಯಕ್ತಗೊಂಡ ಸಾಹಿತ್ಯ ವಿಜ್ಞಾನಾದಿಗಳನ್ನು ಅರಿತುಕೊಳ್ಳಲು, ಈ ರೀತಿಯಲ್ಲಿ ಬೇಕಾದ ಕೇವಲ ಕೆಲವೇ ಸನ್ನಿವೇಶಗಳಲ್ಲಿ ಮಾತ್ರ ಅನ್ಯಭಾಷೆಯನ್ನು ಬಳಸುತ್ತೇವೆ.

ದ್ವಿತೀಯ ಭಾಷೆಯನ್ನು ಕಲಿಯುವುದು ಅಷ್ಟೊಂದು ಸುಲಭದ ಕೆಲಸವಲ್ಲ. ಅದನ್ನು ಪ್ರಯತ್ನ ಪೂರ್ವಕವಾಗಿ ಉದ್ದೇಶಪೂರ್ವಕವಾಗಿ ಶಿಕ್ಷಣ ಸಂಸ್ಥೆಗಳ ಭಾಷಾ ಬೋಧನ ಸಲಕರಣೆಗಳ ಸಹಾಯ ದಿಂದ ಕಲಿತುಕೊಳ್ಳಬೇಕಾಗುತ್ತದೆ. ಪರಭಾಷಾ ಅಧ್ಯಯನದಲ್ಲಿ ನಿರ್ದಿಷ್ಟವಾದ ಗುರಿಯಿರಬೇಕಾಗು ತ್ತದೆ. ಈ ಗುರಿಯನ್ನು ಅವಲಂಬಿಸಿ ವರ್ತಕರು, ಸಮಾಜಸೇವಕರು, ಧರ್ಮ ಪ್ರಚಾರಕರು, ಸಾಹಿತ್ಯ ಅಭ್ಯಾಸಿಗಳು ಬೇರೆ ಬೇರೆ ಮಟ್ಟದಲ್ಲಿ ಪರಭಾಷೆಯ ಸಾಮರ್ಥ್ಯವನ್ನು ಪಡೆದುಕೊಳ್ಳುತ್ತಾರೆ. ಒಂದು ನಿರ್ದಿಷ್ಟ ಅವಧಿಯೊಳಗೆ ಭಾಷಾ ಅಧ್ಯಯನದ ಉದ್ದೇಶವನ್ನು ಸಾಧಿಸಲು ತಕ್ಕುದಾದ ಪದ್ಧತಿಯನ್ನು ಅಳವಡಿಸಿ ಯೋಜಿತವಾದ ರೀತಿಯಲ್ಲಿ ಪರಭಾಷಾ ಅಧ್ಯಾಪನ, ಅಧ್ಯಯನಗಳನ್ನು ನಡೆಯಿಸಬೇಕಾಗು ತ್ತದೆ.

ಸಂಕುಚಿತಗೊಳ್ಳುತ್ತಿರುವ ಇಂದಿನ ಪ್ರಪಂಚದಲ್ಲಿ ನಾವು ಹಲವಾರು ಭಾಷೆಗಳನ್ನು ಕಲಿಯುವುದು ಅನಿವಾರ್ಯ. ಕನ್ನಡಿಗರ ಹಾಗೂ ಕರ್ನಾಟಕದ ಬಹುಮುಖಿ ಅಭಿವೃದ್ಧಿಗೆ ಕನ್ನಡದ ಜೊತೆಗೆ ಇಂಗ್ಲಿಷ್ ಮೊದಲಾದ ಭಾಷೆಗಳ ಕಲಿಕೆಯೂ ಅಗತ್ಯವೆನಿಸುವುದು. ಆದರೆ ಅಂಥ ಯಾವ ಭಾಷೆಯೂ ಪ್ರಥಮ ಭಾಷೆಯ ಸ್ಥಾನವನ್ನು ಪಡೆದುಕೊಳ್ಳಲಾರದು. ಉಪಯುಕ್ತತೆಯ ದೃಷ್ಟಿಯಿಂದ ಪರಭಾಷೆಗಳನ್ನು ಕಲಿಸಲು ಅವುಗಳ ಅಧ್ಯಾಪನ ಅಧ್ಯಯನ ಸೂತ್ರಗಳನ್ನು ಚೆನ್ನಾಗಿ ತಿಳಿದುಕೊಂಡ ಅಧ್ಯಾಪಕರನ್ನು ಅಧಿಕ ಸಂಖ್ಯೆಯಲ್ಲಿ ನೇಮಿಸಬೇಕಾಗುವುದು.

ಎಂ. ಪ್ರಭುಸ್ವಾಮಿ

ಭಾರತದ ಹತ್ತಿ ಜವಳಿ ಕೈಗಾರಿಕೆಯ ಸಮಸ್ಯೆಗಳು

ಭಾರತದ ಕೈಗಾರಿಕೆಗಳ ಪೈಕಿ ಹತ್ತಿ ಜವಳಿ ಕೈಗಾರಿಕೆ ಬಹು ಪುರಾತನವಾದ್ದು. ಆಧುನಿಕ ರೀತಿಯ ಹತ್ತಿ ಗಿರಣಿಗಳು ಪ್ರಾರಂಭವಾಗಿ ಒಂದು ಶತಮಾನಕ್ಕಿಂತ ಹೆಚ್ಚಾಗಿದೆ. ಇವು ಭಾರತದ ಆರ್ಥಿಕ ವ್ಯವಸ್ಥೆಯ ಮೇಲೆ ತಮ್ಮ ಪ್ರಭಾವ ಬೀರಿವೆ. ಈಗಲೂ ಭಾರತದ ಕೈಗಾರಿಕೆಗಳ ಪೈಕಿ ಹತ್ತಿ ಜವಳಿ ಕೈಗಾರಿಕೆ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಹತ್ತಿ ಜವಳಿ ಕೈಗಾರಿಕೆಯಲ್ಲಿ ಪ್ರಪಂಚದಲ್ಲೇ ಅಮೆರಿಕದ ಸಂಯುಕ್ತ ಸಂಸ್ಥಾನಗಳು ಮೊದಲನೆಯ ಸ್ಥಾನ ಪಡೆದಿದ್ದರೆ, ಭಾರತ ಎರಡನೆಯ ಸ್ಥಾನ ಪಡೆದಿದೆ. ಕಾರ್ಖಾನೆಗಳ ತಳಹದಿಯ ಮೇಲೆ ಬೆಳೆದುಬಂದಿರುವ ಭಾರತದ ಕೈಗಾರಿಕೆಗಳ ಪೈಕಿ ಹತ್ತಿ ಜವಳಿ ಕೈಗಾರಿಕೆ ಮೊದಲನೆಯ ಸ್ಥಾನ ಪಡೆದಿದೆ. ಸುಮಾರು 9.67 ಲಕ್ಷ ಜನರಿಗೆ ಉದ್ಯೋಗ ದೊರಕಿಸಿಕೊಟ್ಟಿದೆ. ಅಂದರೆ ಒಟ್ಟು ಕಾರ್ಖಾನೆ ಉದ್ಯೋಗಿಗಳ ಪೈಕಿ ಸೇಕಡ 20ರಷ್ಟು ಉದ್ಯೋಗಿಗಳು ಹತ್ತಿ ಜವಳಿ ಕೈಗಾರಿಕೆಯೊಂದರಲ್ಲೇ ಕಂಡುಬರುತ್ತಾರೆ. ಉದ್ಯೋಗಿಗಳಿಗೆ ಕೊಡುವ ವೇತನದ ದೃಷ್ಟಿಯಿಂದಲೂ ಒಟ್ಟು ಉತ್ಪಾದನೆಯ ದೃಷ್ಟಿಯಿಂದಲೂ ನೋಡಿದರೆ ಹತ್ತಿ ಜವಳಿ ಕೈಗಾರಿಕೆಯ ವಿಶಿಷ್ಟ ಸ್ಥಾನ ಕಂಡುಬರುತ್ತದೆ. ವಿದೇಶೀ ವಿನಿಮಯವನ್ನು ಗಳಿಸುವುದರಲ್ಲಿ ಸೆಣಬು ಮತ್ತು ಚಹ ಕೈಗಾರಿಕೆಗಳ ಅನಂತರ ಹತ್ತಿ ಜವಳಿ ಕೈಗಾರಿಕೆ ಬರುತ್ತದೆ. ಎಂದರೆ ಇದು ಮೂರನೆಯ ಸ್ಥಾನ ಪಡೆದಿದೆ. ಹತ್ತಿ ಜವಳಿಯನ್ನು ರಫ್ತು ಮಾಡುವ ದೇಶಗಳ ಪೈಕಿ ಭಾರತ ಎರಡನೆಯ ಸ್ಥಾನ ಪಡೆದಿದೆ. ಮೊದಲನೆಯದು ಜಪಾನ್. ಹತ್ತಿ ಜವಳಿ ರಫ್ತು ಮಾಡುವ ಎಲ್ಲ ದೇಶಗಳನ್ನೂ ಗಣನೆಗೆ ತೆಗೆದುಕೊಂಡರೆ ಪ್ರಪಂಚದ ಒಟ್ಟು ರಫ್ತಿನ ಪೈಕಿ ಸೇಕಡ 13ರಷ್ಟನ್ನು ಭಾರತ ಒದಗಿಸುತ್ತದೆ ಎನ್ನಬಹುದು.

ಮೊದಲನೆಯ ಹತ್ತಿ ಜವಳಿ ಕಾರ್ಖಾನೆ ಕಲ್ಕತ್ತ ನಗರದ ಹತ್ತಿರ 1818ರಲ್ಲಿ ಫೋರ್ಟ್ ಗ್ಲೋಸ್ಟರ್ ಕಾರ್ಖಾನೆ ಎಂಬ ಹೆಸರಿನಿಂದ ಆರಂಭವಾಯಿತು. ಆದರೆ ಈ ಕೈಗಾರಿಕೆಯ ನಿಜವಾದ ಬೆಳವಣಿಗೆ 1854 ರಿಂದ ಆರಂಭವಾಯಿತು ಎನ್ನಬಹುದು. ಆ ವರ್ಷ ಕೌಸಾಜಿ ನಾನಾಭಾಯಿ ದಾವರ್ ಎಂಬ ಕೈಗಾರಿಕೋದ್ಯಮಿಗಳು ಮುಂಬಯಿಯ ಹತ್ತಿರ ಒಂದು ಹತ್ತಿ ಜವಳಿ ಕಾರ್ಖಾನೆ ಸ್ಥಾಪಿಸಿ ಭಾರತದ ಹತ್ತಿ ಜವಳಿ ಕೈಗಾರಿಕೆಗೆ ತಳಹದಿ ಹಾಕಿದರು ಎನ್ನಬಹುದು. ಕಳೆದ 120 ವರ್ಷಗಳಲ್ಲಿ ಕೈಗಾರಿಕೆ ಅನೇಕ ಸಮಸ್ಯೆಗಳನ್ನು ಎದುರಿಸಿ ಬೆಳೆದು ಬಂದಿದ್ದರೂ ಈಗಲೂ ಅದು ಸಮಸ್ಯೆಗಳನ್ನು ಎದುರಿಸುವ ಪರಿಸ್ಥಿತಿಯಲ್ಲೇ ಇದೆ.

ಪಂಚವಾರ್ಷಿಕ ಯೋಜನೆಗಳು ಭಾರತದಲ್ಲಿ ಪ್ರಾರಂಭವಾದ ಮೇಲೆ ಈ ಕೈಗಾರಿಕೆ ಯಾವ ರೀತಿ ಅಭಿವೃದ್ಧಿ ಹೊಂದಿದೆ ಮತ್ತು ಈಗ ಇದು ಎದುರಿಸುತ್ತಿರುವ ಸಮಸ್ಯೆಗಳೇನು ಎಂಬುದನ್ನು ಈಗ ಪರಿಶೀಲಿಸಬಹುದು.

ಕೋಷ್ಟಕ 1

1951–72ರ ಅವಧಿಯಲ್ಲಿ ಹತ್ತಿ ಜವಳಿ ಕೈಗಾರಿಕೆಯ ಬೆಳವಣಿಗೆ[1]

ವರ್ಷ	ಕಾರ್ಖಾನೆಗಳ ಸಂಖ್ಯೆ	ಕಾರ್ಖಾನೆಗಳಲ್ಲಿದ್ದ ಕದಿರುಗಳ ಸಂಖ್ಯೆ	ಮಗ್ಗಗಳ ಸಂಖ್ಯೆ
1951	430	1.10 ಕೋಟಿ	1,95,000
1955	452	1.20 ಕೋಟಿ	2,05,000
1960	476	1.35 ಕೋಟಿ	2,00,000
1966	575	1.61 ಕೋಟಿ	2,03,000
1970	656	1.76 ಕೋಟಿ	2,06 000
1972	670	1.81 ಕೋಟಿ	2,06,000

ಕೋಷ್ಟಕ 2

1972ರಲ್ಲಿ ವಿವಿಧ ರಾಜ್ಯಗಳಲ್ಲಿರುವ ಹತ್ತಿ ಬಟ್ಟೆ ಕಾರ್ಖಾನೆಗಳು

ರಾಜ್ಯ	ಕಾರ್ಖಾನೆಗಳ ಸಂಖ್ಯೆ	ಸೇಕಡವಾರು
ತಮಿಳು ನಾಡು	208	31.0
ಗುಜರಾತ್	118	17.6
ಮಹಾರಾಷ್ಟ್ರ	100	14.9
ಪಶ್ಚಿಮ ಬಂಗಾಳ	39	5.8
ಉತ್ತರ ಪ್ರದೇಶ	36	5.4
ಆಂಧ್ರ ಪ್ರದೇಶ	32	4.8
ಮೈಸೂರು	27	4.0
ಕೇರಳ	27	4.0
ಮಧ್ಯ ಪ್ರದೇಶ	23	3.4
ರಾಜಸ್ಥಾನ	20	3.0
ದೆಹಲಿ	10	1.5
ಹರಿಯಾಣಾ	10	1.5
ಪಂಜಾಬ್	8	1.2
ಬಿಹಾರ	5	0.8
ಒರಿಸ್ಸ	4	0.6

[1] ಆಧಾರ: ಯೋಜನಾ ಹೊಸದೆಹಲಿ, ಜೂನ್, 15, 1973, ಪು. 427

[2] ಅದೇ ಪು. 428

ರಾಜ್ಯ	ಕಾರ್ಖಾನೆಗಳ ಸಂಖ್ಯೆ	ಸೇಕಡವಾರು
ಅಸ್ಸಾಂ	2	0.3
ಕಾಶ್ಮೀರ	1	0.2
	670	100

ಒಂದನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಕಾರ್ಖಾನೆಗಳು 70 ಕೋಟಿ ಕಿಜಿ ನೂಲನ್ನೂ 430 ಕೋಟಿ ಮೀಟರು ಬಟ್ಟೆಯನ್ನೂ ಉತ್ಪಾದಿಸಬೇಕೆಂದು ನಿಗದಿ ಮಾಡಲಾಗಿತ್ತು. ಯೋಜನೆಯ ಅವಧಿಯಲ್ಲಿ ಕಾರ್ಖಾನೆಗಳು ಈ ಗುರಿಗಳನ್ನು ಮೀರಿ ನಡೆದುವು. ಒಂದನೆಯ ಯೋಜನೆಯ ಕೊನೆಯ ವೇಳೆಗೆ 74.4 ಕೋಟಿ ಕೆಜಿ. ನೂಲನ್ನೂ 466.5 ಕೋಟಿ ಮೀಟರು ಬಟ್ಟೆಯನ್ನೂ ಕಾರ್ಖಾನೆಗಳು ಉತ್ಪಾದಿಸಿದ್ದುವು. ಪತ್ತಿಬಟ್ಟೆಯ ತಲಾ ಉಪಯೋಗ 14.41 ಮೀಟರುಗಳಷ್ಟಿತ್ತು.

ಎರಡನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಹತ್ತಿ ಬಟ್ಟೆಯ ತಲಾ ಬಳಕೆ 17ಮೀ. ಗಳಷ್ಟಿರಬೇಕೆಂದೂ ರಫ್ತು ಮಾಡಬೇಕಾದ ಹತ್ತಿ ಜವಳಿ 100 ಕೋಟಿ ಮೀಟರುಗಳಷ್ಟಿರಬೇಕೆಂದೂ ನಿಗದಿ ಪಡಿಸಲಾಯಿತು. ಕಾರ್ಖಾನೆಗಳಲ್ಲಿ ಹತ್ತಿ ಜವಳಿ ಉತ್ಪಾದನೆ 470 ಕೋಟಿ ಮೀಟರುಗಳನ್ನು ತಲಪಬೇಕೆಂದು ಗೊತ್ತು ಮಾಡಲಾಯಿತು. ಮೇಲ್ಕಂಡ ಗುರಿಗಳನ್ನು ತಲಪಲು ಜವಳಿ ವಿಚಾರಣಾ ಸಮಿತಿ ಕೆಲವು ಶಿಫಾರಸುಗಳನ್ನು ಮಾಡಿತು. ಆ ಶಿಫಾರಸುಗಳಿಗನುಗುಣವಾಗಿ ಕೇಂದ್ರ ಸರ್ಕಾರ 1958ರಲ್ಲಿ ಬಟ್ಟೆಯ ಮೇಲೆ ವಿಧಿಸಿದ್ದ ಅಬ್ಕಾರಿ ಸುಂಕದ ದರವನ್ನು ಇಳಿಸಿತು. ಆದರೆ ಎರಡನೆಯ ಪಂಚವಾರ್ಷಿಕ ಯೋಜನೆಯ ಅಂತ್ಯದ ವೇಳೆಗೆ ಬಟ್ಟೆ ಉತ್ಪಾದನೆ 464.9 ಕೋಟಿ ಮೀಟರುಗಳನ್ನು ಮುಟ್ಟಿತು. ಹತ್ತಿ ಜವಳಿ ತಲಾ ಬಳಕೆ 0.33 ಮೀಟರುಗಳಷ್ಟು ಮಾತ್ರ ಹೆಚ್ಚಿತು.

ಮೂರನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಬಟ್ಟೆಗೆ ಉಂಟಾಗುವ ಬೇಡಿಕೆ 850.40 ಕೋಟಿ ಮೀಟರುಗಳಾಗಬಹುದೆಂದು ಅಂದಾಜು ಮಾಡಲಾಯಿತು. ಈ ಗುರಿಯನ್ನು ಸಾಧಿಸಲು ಹತ್ತಿ ಜವಳಿ ಕಾರ್ಖಾನೆಗಳು 530.40 ಕೋಟಿ ಮೀಟರುಗಳಷ್ಟು ಬಟ್ಟೆಯನ್ನು ಉತ್ಪಾದಿಸಬೇಕೆಂದೂ, ಕೈಮಗ್ಗ ಮತ್ತು ಯಾಂತ್ರಿಕ ಮಗ್ಗಗಳಿಂದ 320 ಕೋಟಿ ಮೀಟರುಗಳಷ್ಟು ಬಟ್ಟೆಯನ್ನು ಉತ್ಪಾದಿಸಬೇಕೆಂದೂ ನಿರ್ಧರಿಸಲಾಯಿತು. ಬಟ್ಟೆಯ ತಲಾ ಬಳಕೆ 16 ಮೀಟರುಗಳಾಗಬಹುದೆಂದು ಅಂದಾಜು ಮಾಡಲಾಯಿತು. ಆದರೆ ಮೂರನೆಯ ಯೋಜನೆಯ ಅವಧಿಯಲ್ಲಿ ಭಾರತ ಎರಡು ಯುದ್ಧಗಳಲ್ಲಿ ಪಾಲ್ಗೊಳ್ಳಬೇಕಾಗಿ ಬಂದುದರಿಂದ ಹತ್ತಿ ಜವಳಿ ಕೈಗಾರಿಕೆ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಅದರ ಪರಿಣಾಮವಾಗಿ 1965–66ರಲ್ಲಿ ಕಾರ್ಖಾನೆಗಳು 90.7 ಕೋಟಿ ಕೆಜಿ. ನೂಲನ್ನು 440.1 ಕೋಟಿ ಮೀಟರುಗಳಷ್ಟು ಬಟ್ಟೆಯನ್ನು ಮಾತ್ರ ಉತ್ಪಾದಿಸಿದುವು. ಈ ಯೋಜನೆಯ ಅವಧಿಯಲ್ಲಿ ಹತ್ತಿ ಜವಳಿ ಕಾರ್ಖಾನೆಗಳ ಆಧುನೀಕರಣಕ್ಕಾಗಿ ಮತ್ತು ಸವೆದು ಹೋದ ಯಂತ್ರಗಳ ಬದಲು ಹೊಸ ಯಂತ್ರಗಳನ್ನು ಅಳವಡಿಸುವುದಕ್ಕಾಗಿ 105 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಯಿತು.

1966–67ರಲ್ಲಿ ಕಾರ್ಖಾನೆಗಳು 420.2 ಕೋಟಿ ಮೀಟರುಗಳಷ್ಟು ಬಟ್ಟೆಯನ್ನು ಮಾತ್ರ ಉತ್ಪಾದಿಸಿದುವು. ಆದರೆ ಕೈಮಗ್ಗ ಮತ್ತು ಯಾಂತ್ರಿಕ ಮಗ್ಗಗಳ ಉತ್ಪಾದನೆ 310.2 ಕೋಟಿ ಮೀಟರುಗಳನ್ನು ತಲುಪಿತು. 1967–68ರಲ್ಲಿ ಕಾರ್ಖಾನೆಗಳು 425.8 ಕೋಟಿ ಮೀಟರು ಮತ್ತು 1968–69ರಲ್ಲಿ 429.8 ಕೋಟಿ ಮೀಟರು ಬಟ್ಟೆಯನ್ನು ಉತ್ಪಾದಿಸಿದುವು.

ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಬಟ್ಟೆ ಉತ್ಪಾದನೆಯಲ್ಲಿ ಈ ಕೆಳಗೆ ಕಂಡಂತೆ ಗುರಿಯನ್ನು ಸಾಧಿಸಲು ನಿರ್ಧರಿಸಲಾಗಿದೆ: 1 ಕಾರ್ಖಾನೆಗಳ ಉತ್ಪಾದನೆ 510 ಕೋಟಿ

ಮೀಟರು; 2 ಕೈಮಗ್ಗ ಮತ್ತು ಯಾಂತ್ರಿಕ ಮಗ್ಗಗಳ ಉತ್ಪಾದನೆ 575 ಕೋಟಿ ಮೀಟರು; 3 ನೂಲಿನ ಉತ್ಪಾದನೆ 120 ಕೋಟಿ ಕಿ.ಗ್ರಾ.; 4 ಬಟ್ಟೆಯ ತಲಾ ಬಳಕೆ 16 ಮೀಟರುಗಳು. ದೇಶದಲ್ಲಿ ಕೆಲವು ಕಾರ್ಖಾನೆಗಳು ಮುಚ್ಚಲ್ಪಟ್ಟಿರುವುದರಿಂದ ಬಟ್ಟೆ ಉತ್ಪಾದನೆ ಕಡಿಮೆಯಾಗಿರುವುದಲ್ಲದೆ ನಿರುದ್ಯೋಗ ಉಂಟಾಗಿದೆ ಎಂಬ ನಿರ್ಧಾರಕ್ಕೆ ಸರ್ಕಾರ ಬಂತು. ಮುಚ್ಚಿರುವ ಕಾರ್ಖಾನೆಗಳಲ್ಲಿ ಪುನಃ ಉತ್ಪಾದನೆ ಆರಂಭಿಸಬೇಕೆಂದು ಸರ್ಕಾರ ತೀರ್ಮಾನಿಸಿತು. ತಾನು ಘೋಷಿಸಿರುವ ಸಮಾಜವಾದಿ ನೀತಿಯನ್ನು ಅನುಷ್ಠಾನಕ್ಕೆ ತರುವುದಕ್ಕಾಗಿ ಮುಚ್ಚಿರುವ ಕಾರ್ಖಾನೆಗಳನ್ನು ತಾನೇ ವಹಿಸಿಕೊಂಡು ಉತ್ಪಾದನೆ ಆರಂಭಿಸಬೇಕೆಂದು ಕೇಂದ್ರ ಸರ್ಕಾರ ತೀರ್ಮಾನಿಸಿ 1971ರಲ್ಲಿ ಒಂದು ಅಧಿನಿಯಮವನ್ನು ಜಾರಿಗೆ ತಂದಿತು. ಅದರ ಪ್ರಕಾರ ಖಾಸಗಿ ಮಾಲೀಕರು ಕಾರ್ಖಾನೆಗಳನ್ನು ನಡೆಸಲು ಸಾಧ್ಯವಾಗಲು ಹಿಂಜರಿದರೆ ಅಂಥ ಕಾರ್ಖಾನೆಗಳನ್ನು ಕೇಂದ್ರ ಸರ್ಕಾರವೇ ತನ್ನ ವಶಕ್ಕೆ ತೆಗೆದುಕೊಳ್ಳಲಾರಂಭಿಸಿತು. ಜೊತೆಗೆ ಬಡಜನರಿಗೆ ಅಗ್ಗದ ದರದಲ್ಲಿ ಬಟ್ಟೆ ಒದಗಿಸುವ ಯೋಜನೆಯನ್ನು ಜಾರಿಗೆ ತಂದಿತು. 1972ರ ನವೆಂಬರ್ ತಿಂಗಳಿಂದ ಜವಳಿ ನಿಯಂತ್ರಣವನ್ನು ಜಾರಿಗೆ ತಂದು, ನಿಯಂತ್ರಿತ ದರದಲ್ಲಿ ಬಟ್ಟೆಗಳನ್ನು ಸರ್ಕಾರಿ ಅಂಗಡಿಗಳ ಮೂಲಕ, ಜನತಾ ಬಜಾರುಗಳ ಮೂಲಕ ಮತ್ತು ಕಾರ್ಖಾನೆಗಳ ಅಂಗಡಿಗಳ ಮೂಲಕ ಮಾರುವ ಪದ್ಧತಿಯನ್ನು ಜಾರಿಗೆ ತಂದಿದೆ. ಕಾರ್ಖಾನೆಗಳ ಒಟ್ಟು ಉತ್ಪಾದನೆಯಲ್ಲಿ ಶೇಕಡ 20ರಷ್ಟನ್ನು ಅಗ್ಗದ ದರದ ಬಟ್ಟೆ ಉತ್ಪಾದನೆಗೆ ಮೀಸಲಿಡಬೇಕೆಂದು ಸೂಚಿಸಲಾಗಿದೆ. ಜೊತೆಗೆ ಕಾರ್ಖಾನೆಗಳು ತಮ್ಮ ಒಟ್ಟು ಉತ್ಪಾದನೆಯಲ್ಲಿ ಶೇಕಡ 15ರಷ್ಟನ್ನು ರಫ್ತು ಮಾಡಬೇಕೆಂದು ಕಡ್ಡಾಯಗೊಳಿಸಲಾಗಿದೆ. 1972ರ ಅಕ್ಟೋಬರ್ ಕೊನೆಯ ವೇಳೆಗೆ ಮುಚ್ಚಲ್ಪಟ್ಟಿದ್ದ 46 ಕಾರ್ಖಾನೆಗಳನ್ನು ಸರ್ಕಾರ ವಹಿಸಿಕೊಂಡಿತು. 1973ರ ಮೇ ತಿಂಗಳ ಕೊನೆಯ ವೇಳೆಗೆ ಒಟ್ಟು 103 ದುರ್ಬಲ ಗಿರಣಿಗಳನ್ನು (ಮುಚ್ಚಲ್ಪಟ್ಟಿದ್ದವು) ಸರ್ಕಾರ ವಹಿಸಿಕೊಂಡಿದೆ. ಭಾರತ ಸರ್ಕಾರದ ವಿದೇಶೀ ವ್ಯಾಪಾರ ಸಚಿವಾಲಯದ ಅಧೀನದಲ್ಲಿರುವ ರಾಷ್ಟ್ರೀಯ ಜವಳಿ ಕಾರ್ಪೋರೇಷನ್ ಈ ಕಾರ್ಖಾನೆಗಳ ಆಡಳಿತ ಜವಾಬ್ದಾರಿಯನ್ನು ವಹಿಸಿಕೊಂಡಿದೆ. ಪ್ರತಿಯೊಂದು ಕಾರ್ಖಾನೆಗೂ ಆಡಳಿತಾಧಿಕಾರಿಯನ್ನು ಸರಕಾರ ನೇಮಿಸಿದೆ. ಈ ನೀತಿಯ ಪರಿಣಾಮವಾಗಿ ಸುಮಾರು 1.10.000 ಕೆಲಸಗಾರರಿಗೆ ಪುನಃ ಉದ್ಯೋಗ ಒದಗಿಸಿದಂತಾಗಿದೆ.

ಮೇಲ್ಕಂಡ ಕ್ರಮಗಳನ್ನು ಕೈಗೊಂಡಿದ್ದರೂ ಭಾರತದ ಸಹಸ್ರಾರು ಜನರಿಗೆ ಅವರ ಕೊಳ್ಳುವ ಶಕ್ತ್ಯಾನುಸಾರವಾಗಿ ಬಟ್ಟೆ ಒದಗಿಸುವುದು ದೊಡ್ಡ ಸಮಸ್ಯೆಯಾಗಿಯೇ ಉಳಿದಿದೆ. ಪರದೇಶಗಳೊಡನೆ ಹೋಲಿಸಿದರೆ ನಮ್ಮ ಜನರ ಪರಿಸ್ಥಿತಿ ಶೋಚನೀಯ ಮಟ್ಟದಲ್ಲಿರುವುದು ಕಂಡು ಬರುತ್ತದೆ. ಅನೇಕ ವರ್ಷಗಳಿಂದ ನಮ್ಮ ಜನಕ್ಕೆ ಒದಗಿಸುತ್ತಿರುವ ಬಟ್ಟೆಯ ಪರಿಮಾಣವನ್ನು ಪರಿಶೀಲಿಸಿದಾಗ ಅನೇಕರಿಗೆ ತಲಾ 2.5 ಕೆಜಿ. ನೂಲಿನಿಂದ ಉತ್ಪಾದಿಸಲ್ಪಡುವಷ್ಟು ಬಟ್ಟೆಯನ್ನು ಮಾತ್ರ ಪೂರೈಸಲಾಗುತ್ತಿದೆ ಎಂಬುದು ಕಂಡುಬರುತ್ತದೆ. ಆದರೆ ಜಪಾನ್ ದೇಶದಲ್ಲಿ ಮತ್ತು ಅನೇಕ ಯೂರೋಪಿಯನ್ ದೇಶಗಳಲ್ಲಿ ಇದರ ನಾಲ್ಕರಷ್ಟು ಪರಿಮಾಣದಲ್ಲಿ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಇದರ ಆರರಷ್ಟು ಪರಿಮಾಣದಲ್ಲಿ ಬಟ್ಟೆ ಒದಗಿಸಲಾಗುತ್ತಿದೆ ಎಂಬುದು ಕಂಡುಬರುತ್ತದೆ.

ಹತ್ತಿ ಜವಳಿ ಕೈಗಾರಿಕೆಯ ಶೋಚನೀಯ ಪರಿಸ್ಥಿತಿಗೆ ಮುಖ್ಯ ಕಾರಣಗಳಿವು: 1 ಕಚ್ಚಾ ಹತ್ತಿಯ ಉತ್ಪಾದನೆಯ ಕೊರತೆ; 2 ಹಣಕಾಸಿನ ಮುಗ್ಗಟ್ಟು; 3 ಅಧಿಕ ತೆರಿಗೆ; 4 ಕೈಗಾರಿಕಾ ವಿವಾದಗಳು.

ಕಚ್ಚಾ ಹತ್ತಿಯ ಉತ್ಪಾದನೆಯ ಕೊರತೆ

ಪ್ರಪಂಚದ ಪ್ರಮುಖ ಹತ್ತಿ ಬೆಳೆಯುವ ದೇಶಗಳೊಡನೆ ಭಾರತವನ್ನು ಹೋಲಿಸಿದರೆ, ಹತ್ತಿ ಬೆಳೆಯುವ ಪ್ರದೇಶದ ವಿಸ್ತೀರ್ಣದ ದೃಷ್ಟಿಯಿಂದ ಭಾರತವು ಮೊದಲನೆಯ ಸ್ಥಾನ.

ಕೋಷ್ಟಕ 3

ಪ್ರಪಂಚದ ಪ್ರಮುಖ ದೇಶಗಳಲ್ಲಿ ಹತ್ತಿ ಬೆಳೆಗಾಗಿ ಮೀಸಲಿಟ್ಟಿರುವ ನೆಲದ ವಿಸ್ತೀರ್ಣ[3]

ದೇಶ	ಹತ್ತಿ ಬೆಳೆಯುವ ನೆಲದ ವಿಸ್ತೀರ್ಣ (ಕೋಟಿ ಎಕರೆಗಳಲ್ಲಿ)
ಭಾರತ	18.90
ಚೀನ	12.40
ಅಮೆರಿಕ ಸಂಯುಕ್ತ ಸಂಸ್ಥಾನಗಳು	10.80
ಬ್ರಜಿಲ್	6.50
ಸೋವಿಯೆತ್ ದೇಶ	6.40
ಪಾಕಿಸ್ತಾನ ಮತ್ತು ಬಂಗ್ಲಾ ದೇಶ	4.44
ಈಜಿಪ್ಟ್	1.60
ಮೆಕ್ಸಿಕೋ	1.40
ಸೂಡಾನ್	1.30

ಭಾರತದಲ್ಲಿ ಹತ್ತಿ ಬೆಳೆಯುವ ಪ್ರದೇಶ ಅಧಿಕವಾಗಿದ್ದರೂ ಪ್ರತಿ ಎಕರೆಯ ಹತ್ತಿ ಉತ್ಪನ್ನ ಬಹಳ ಕಡಿಮೆ. ವಿವಿಧ ದೇಶಗಳಲ್ಲಿ ಪ್ರತಿ ಎಕರೆ ಭೂಮಿಯಿಂದ ಪಡೆಯುವ ಕಚ್ಚಾ ಹತ್ತಿ ಉತ್ಪನ್ನ ಹೀಗಿದೆ: ಈಜಿಪ್ಟ್ 605 ಪೌಂಡುಗಳು; ಸೋವಿಯೆತ್ ದೇಶ 650 ಪೌಂಡುಗಳು; ಅಮೆರಿಕ ಸಂಯುಕ್ತ ಸಂಸ್ಥಾನಗಳು 517 ಪೌಂಡುಗಳು; ಚೀನ 239 ಪೌಂಡುಗಳು; ಪಾಕಿಸ್ತಾನ 229 ಪೌಂಡುಗಳು; ಭಾರತ 120 ಪೌಂಡುಗಳು.

ಭಾರತ ಹತ್ತಿಯನ್ನು ಆಮದು ಮಾಡಿಕೊಳ್ಳಬೇಕಾಗಿದೆ. ಇದರಿಂದ ಅನೇಕ ಸಂದರ್ಭಗಳಲ್ಲಿ ಹತ್ತಿ ಜವಳಿ ಕೈಗಾರಿಕೆಯ ಪ್ರಗತಿಗೆ ತೊಂದರೆಯಾಗಿದೆ. ಕಾರ್ಖಾನೆಗಳ ಉಪಯೋಗಕ್ಕೆ 65 ಲಕ್ಷ ಬೇಲು, ಅಂಬರ್ ಚರಕಾ ಮತ್ತು ಆಸ್ಪತ್ರೆಗಳ ಉಪಯೋಗಕ್ಕಾಗಿ 1 ಲಕ್ಷ ಬೇಲು ಮತ್ತು ರಫ್ತಿಗಾಗಿ 2 ಲಕ್ಷ ಬೇಲು ಕಚ್ಚಾ ಹತ್ತಿ ಬೇಕಾಗಿದೆ. ಇಷ್ಟು ಹತ್ತಿಯನ್ನು ಒದಗಿಸಬೇಕಾದರೆ ಹತ್ತಿ ಬೆಳೆಯನ್ನು ಶೇ. 30–40ರಷ್ಟು ಹೆಚ್ಚಿಸಬೇಕಾಗಿದೆ. ಹತ್ತಿಯ ಉತ್ಪನ್ನ ಹೆಚ್ಚಿಸಿದರೆ ಅದರ ಆಮದನ್ನು ನಿಲ್ಲಿಸಿ ಉತ್ಪನ್ನದ ವೆಚ್ಚ ಕಡಿಮೆ ಮಾಡಬಹುದು.

ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಅಂತ್ಯದ ವೇಳೆಗೆ 80 ಲಕ್ಷ ಬೇಲು ಕಚ್ಚಾ ಹತ್ತಿ ಉತ್ಪಾದನೆ ಮಾಡಬೇಕೆಂಬ ಗುರಿ ಹೊಂದಲಾಗಿದೆ. ಆದರೆ 1972–73ರ ಉತ್ಪಾದನೆಯ ನಿರೀಕ್ಷೆಯನ್ನು ಪರಿಶೀಲಿಸಿದರೆ ಇನ್ನೂ 60 ಲಕ್ಷ ಬೇಲುಗಳಷ್ಟು ಹತ್ತಿಯನ್ನು ಮಾತ್ರ ಉತ್ಪಾದಿಸುತ್ತಿದ್ದೇವೆ ಎನ್ನಬಹುದು. ಕಚ್ಚಾ ಹತ್ತಿ ಕೊರತೆಯ ಪರಿಣಾಮವಾಗಿ ಒಂದು ವರ್ಷದಲ್ಲಿ ಬೆಲೆಗಳು ಶೇಕಡ 50 ರಿಂದ 85ರಷ್ಟು ಏರಿದವು. ಇದರಿಂದ ಹತ್ತಿ ಜವಳಿ ಬೆಲೆಯ ಮೇಲೆ ಪರಿಣಾಮ ಉಂಟಾಗಿದೆ.

3 ಆಧಾರ: ಅದೇ, ಪು. 428

ಹಣಕಾಸಿನ ಮುಗ್ಗಟ್ಟು

ಬ್ಯಾಂಕುಗಳು ಹತ್ತಿ ಜವಳಿ ಕಾರ್ಖಾನೆಗಳಿಗೆ ಸಾಲ ಒದಗಿಸುವ ವಿಷಯದಲ್ಲಿ ನಿರ್ಬಂಧ ನೀತಿಯನ್ನು ಅನುಸರಿಸುತ್ತಿವೆ. ಕಾರ್ಖಾನೆಗಳು ಕೊಳ್ಳಬೇಕಾದ ಎಲ್ಲಾ ಸಾಮಗ್ರಿಗಳ ಬೆಲೆ ಏರಿರುವುದರಿಂದ ಕಾರ್ಖಾನೆಗಳಿಗೆ ಅಧಿಕ ಪ್ರಮಾಣದಲ್ಲಿ ಹಣದ ಅವಶ್ಯಕತೆ ಇದೆ. ಆದರೆ ಇದು ಒದಗುತ್ತಿಲ್ಲ. ಇದರ ಪರಿಣಾಮವಾಗಿ ಅನೇಕ ಕಾರ್ಖಾನೆಗಳು ದುಸ್ಥಿತಿಯಲ್ಲಿವೆ.

ಕಾರ್ಖಾನೆಗಳನ್ನು ಆಧುನೀಕರಣಗೊಳಿಸುವುದು ಅತ್ಯಾವಶ್ಯಕವಾಗಿದೆ. ಕಾರ್ಖಾನೆಗಳು ಆಧುನೀಕರಣಗೊಳ್ಳದಿದ್ದರೆ ಸ್ಪರ್ಧಾ ಪ್ರಪಂಚದಲ್ಲಿ ಉಳಿಯುವುದೇ ಕಷ್ಟವಾಗುತ್ತದೆ. 1968–1973ರ ಅವಧಿಯಲ್ಲಿ ಹತ್ತಿ ಜವಳಿ ಕಾರ್ಖಾನೆಗಳ ಆಧುನೀಕರಣಕ್ಕಾಗಿ ಅಮೆರಿಕ 2.000 ಕೋಟಿ ರೂ., ಜಪಾನ್ 800 ಕೋಟಿ ರೂ. ಮತ್ತು ಇಂಗ್ಲೆಂಡ್ 500 ಕೋಟಿ ರೂ.ಗಳನ್ನು ಖರ್ಚು ಮಾಡಿವೆ. ಆದರೆ ಕಳೆದ 16 ವರ್ಷಗಳಲ್ಲಿ (1956–1972) ಭಾರತದಲ್ಲಿ ಕೇವಲ 240 ಕೋಟಿ ರೂ. ಮಾತ್ರ ಖರ್ಚು ಮಾಡಲಾಗಿದೆ ಎಂಬ ಅಂಶವನ್ನು ರಾಷ್ಟ್ರೀಯ ಜವಳಿ ಕಾರ್ಪೋರೇಷನ್ ಅಧ್ಯಕ್ಷ ಶ್ರೀ ಕಾಮತಾ ಪ್ರಸಾದ್ ತ್ರಿಪಾಠಿಯವರು ಹೇಳಿದ್ದಾರೆ. ಜೊತೆಗೆ ಈಗ ಕೇಂದ್ರ ಸರ್ಕಾರ ವಹಿಸಿಕೊಂಡಿರುವ ದುರ್ಬಲ ಹತ್ತಿ ಗಿರಣಿಗಳನ್ನು ಆಧುನೀಕರಣಗೊಳಿಸಬೇಕಾದರೆ ಕೂಡಲೇ 100 ಕೋಟಿ ರೂ. ಬೇಕೆಂಬ ಅಂಶವನ್ನು ತ್ರಿಪಾಠಿಯವರು ಒಪ್ಪಿಕೊಂಡಿದ್ದಾರೆ.

ಕನಿಷ್ಠ ಬಡ್ಡಿ ದರದಲ್ಲಿ ಹಣಕಾಸನ್ನು ಒದಗಿಸಿ ಹತ್ತಿ ಬಟ್ಟೆ ಕಾರ್ಖಾನೆಗಳಿಗೆ ಬಂದೊದಗಿರುವ ಆರ್ಥಿಕ ಮುಗ್ಗಟ್ಟನ್ನು ಹೋಗಲಾಡಿಸಬೇಕಾಗಿದೆ.

ಅಧಿಕ ತೆರಿಗೆ

ಹತ್ತಿಬಟ್ಟೆ ಕಾರ್ಖಾನೆಗಳು ಎದುರಿಸುತ್ತಿರುವ ಮತ್ತೊಂದು ಸಮಸ್ಯೆ ಎಂದರೆ ತೆರಿಗೆಗಳ ಹೊರೆ. ಹಿಂದೆ ಆರ್ಥಿಕ ಪರಿಸ್ಥಿತಿ ಆಶಾದಾಯಕವಾಗಿದ್ದಾಗ ಹತ್ತಿ ಕಾರ್ಖಾನೆಗಳ ಅಧಿಕ ಲಾಭದಲ್ಲಿ ಒಂದಂಶವನ್ನು ಕೇಂದ್ರ ಸರ್ಕಾರ ಪಡೆಯಲು ತೆರಿಗೆಗಳನ್ನು ವಿಧಿಸಿತು. ಈಗಲೂ ಆ ತೆರಿಗೆಗಳನ್ನು ಮುಂದುವರಿಸುತ್ತಿದೆ. ಕೇಂದ್ರ ಅಬ್ಕಾರಿ ಸುಂಕ ಒಂದರಿಂದಲೇ ಕೇಂದ್ರ ಸರ್ಕಾರಕ್ಕೆ ಪ್ರತಿ ವರ್ಷ 110 ಕೋಟಿ ರೂ. ವರಮಾನ ಬರುತ್ತಿದೆ. ಈಗ ಕಾರ್ಖಾನೆಗಳು ದುಸ್ಥಿತಿಯಲ್ಲಿರುವಾಗ ಈ ತೆರಿಗೆಯಿಂದ ಮನ್ನಾ ಮಾಡಿದರೆ ಅವು ಚೇತರಿಸಿಕೊಳ್ಳಲು ಎಷ್ಟೋ ಸಹಾಯ ಮಾಡಿದಂತಾಗುತ್ತದೆ.

ಕೈಗಾರಿಕಾ ವಿವಾದಗಳು

ಅನೇಕ ಹತ್ತಿ ಜವಳಿ ಕಾರ್ಖಾನೆಗಳು ಕೈಗಾರಿಕಾ ವಿವಾದಗಳ ಪರಿಣಾಮವಾಗಿ ದುಸ್ಥಿತಿಯನ್ನು ಅನುಭವಿಸುತ್ತಿವೆ. ಕಚ್ಚಾ ವಸ್ತುಗಳ ಅಧಿಕ ಬೆಲೆಯ ಪರಿಣಾಮವಾಗಿ ಕಾರ್ಖಾನೆಗಳು ಕೊಳ್ಳುವ ವಸ್ತುಗಳ ಬೆಲೆ ಶೇಕಡ 50ರಿಂದ 80ರ ವರೆಗೆ ಏರಿವೆ. ಆದರೆ ಇದೇ ಸಮಯದಲ್ಲಿ ಕೆಲಸಗಾರರು ಅಧಿಕ ಕೂಲಿದರ ಮತ್ತು ಬೋನಸ್ಸುಗಳನ್ನು ಕೊಡಬೇಕೆಂಬ ಬೇಡಿಕೆಗಳನ್ನು ಮುಂದೊಡ್ಡಿದ್ದಾರೆ. ಇದರ ಪರಿಣಾಮವಾಗಿ ವರ್ಷದಲ್ಲಿ ಅನೇಕ ತಿಂಗಳುಗಳ ಕಾಲ ಕೆಲವು ಕಾರ್ಖಾನೆಗಳು ಮುಚ್ಚಲ್ಪಡುತ್ತಿವೆ. ಇದರಿಂದ ಕೂಲಿಗಾರರಿಗೆ ತೊಂದರೆ ಸಂಭವಿಸಿರುವುದಲ್ಲದೆ, ಉತ್ಪಾದನೆಯ ಮೇಲೂ ದುಷ್ಪರಿಣಾಮ ಉಂಟಾಗಿದೆ.

ಹತ್ತಿ ಜವಳಿ ಕೈಗಾರಿಕೆ ಮೇಲ್ಕಂಡ ಸಮಸ್ಯೆಗಳನ್ನು ನಿವಾರಿಸಿಕೊಳ್ಳುವ ಶಕ್ತಿ ಪಡೆದರೆ ಮಾತ್ರ ಈ ಕೈಗಾರಿಕೆ ತನ್ನ ಮೊದಲಿನ ಉನ್ನತ ಸ್ಥಾನವನ್ನು ಹೊಂದಿ ಭಾರತದ ಆರ್ಥಿಕಾಭಿವೃದ್ಧಿಗೆ ತನ್ನ ಕೊಡುಗೆಯನ್ನು ಸಲ್ಲಿಸಬಹುದಾಗಿದೆ.

ಸೇಡಿಯಾಪು ಕೃಷ್ಣಭಟ್ಟ

ಪಾಂಡಿ ಮತ್ತು ಪಾಂಡ್ಯರು

ಸುಮಾರು ಇಪ್ಪತ್ತು ವರ್ಷಗಳ ಕೆಳಗೆ ಒಮ್ಮೆ ಕುಂದಾಪುರಕ್ಕೆ ಹೋಗಿದ್ದಾಗ, ಅಲ್ಲಿರುವ ನನ್ನ ಆಪ್ತರೊಬ್ಬರ ಮನೆಯಲ್ಲಿ ಎರಡು ಮೂರು ದಿನಗಳನ್ನು ಹಾಯಾಗಿ ಕಳೆದಿದ್ದೆ. ಆ ನನ್ನ ಗೆಳೆಯರೊಡನೆ ಒಂದು ದಿನ ಪ್ರಾತಃ ಸಮುದ್ರದ ಕರೆಗೆ ತಿರುಗಾಡುತ್ತಾ ಹೋದೆ. ಅಲ್ಲಿ, ಸಮುದ್ರದ ಹಿನ್ನೀರಿನಲ್ಲಿ ದಂಡೆಯ ಸಮೀಪ ಒಂದು ದೋಣಿ ಇತ್ತು. ಅದನ್ನು ದಂಡೆಯ ಮೇಲೆ ಸ್ವಲ್ಪ ದೂರದಲ್ಲಿದ್ದ ಒಂದು ಮರಕ್ಕೋ, ಗೂಟಕ್ಕೋ—ಸರಿಯಾಗಿ ನೆನಪಿಲ್ಲ—ಬಿಗಿದಿತ್ತು. ಆ ದೋಣಿ ನಾನು ಆ ವರೆಗೆ ನೋಡಿದ ಯಾವ ದೋಣಿಯಂತೆಯೂ ಇರಲಿಲ್ಲ. ನಾನು ನೋಡಿದ ದೋಣಿಗಳೆಲ್ಲ ಅಗಲ ಕಿರಿದಾಗಿ ಉದ್ದವಾಗಿದ್ದುವು. ಇದು ಹಾಗಿರದೆ ಸಾಕಷ್ಟು ಅಗಲವಾಗಿದ್ದು, 'ಮಂಜಿ' ಎಂದು ನಾವು ಮಂಗಳೂರಲ್ಲಿ ಕರೆಯುವ ಹಾಯಿಹಡಗಿಗಿಂತ ಚಿಕ್ಕದಾಗಿ, ವಿಶಿಷ್ಟವಾದೊಂದು ಆಕೃತಿಯದಾಗಿದ್ದುದರಿಂದ ನನ್ನಲ್ಲಿ ಕುತೂಹಲವನ್ನು ಹುಟ್ಟಿಸಿತು. ಅಂತಹ ದೋಣಿಗೆ ಹೆಸರೇನೆಂದು ನನ್ನ ಗೆಳೆಯರನ್ನು ಕೇಳಿದೆ. ಅವರಿಗದು ಗೊತ್ತಿರಲಿಲ್ಲ. ಅಷ್ಟರಲ್ಲಿ ಒಬ್ಬ ಮನುಷ್ಯ ಆ ದೋಣಿಯನ್ನು ಬಂಧನದಿಂದ ಬಿಡಿಸಿ ಅದರ ಮೇಲೇರುವುದಕ್ಕೆ ಬಂದ. ಇದೆಂತಹ ದೋಣಿ ಎಂದು ಅವನೊಡನೆ ಕೇಳಿಯೇ ಬಿಟ್ಟೆ. ಅವನು 'ಪಾಂಡಿ' ಎಂದ. ಕೌತುಕದ ಹೆಸರು! ಅಷ್ಟರಿಂದ ತೃಪ್ತನಾಗದೆ, "ಪಾಂಡಿ ಎಂದರೇನಪ್ಪಾ?" ಎಂದೆ. ಅವನು ಕುಂದಾಪುರದ ಆಡುನುಡಿಯ ವಿಶಿಷ್ಟ ಸ್ವರೋಚ್ಚಾರಭಂಗಿಯಲ್ಲಿ 'ದ್ವಡ್ ದ್ವಾಣಿ' ಎಂದ. ನನಗೆ ಆ ಮಾತು ಸರಿಯಾಗಿ ತಿಳಿಯದೆ ಪೆಚ್ಚುಮೋರೆಯಲ್ಲಿ ನನ್ನ ಗೆಳೆಯರ ಮುಖ ನೋಡಿದೆ. ಅವನು ಹೇಳಿದ್ದು 'ದೊಡ್ಡ ದೋಣಿ' ಎಂದು ಅವರು ನನಗೆ ತಿಳಿಸಿದರು. ಈ ಲೇಖನಕ್ಕೆ ಆ ಅಂಬಿಗನೇ ಆದಿ.

ಅದಕ್ಕೆ ಮೊದಲು ಬಾಲ್ಯದಲ್ಲಿಯೇ ನಾನು ಪಾಂಡಿ ಎಂಬ ಶಬ್ದವನ್ನು ಹಲವು ಸಲ ಕೇಳಿದ್ದೇನೋ ಇತ್ತು. ಆದರೆ ಅದರ ಅರ್ಥದ ಗಂಧವೂ ನನಗೆ ತಟ್ಟಿರಲಿಲ್ಲ. ನಮ್ಮೂರಲ್ಲಿ ಕೆಲವರಿಗೆ 'ಕೋಟಿ' ಎಂಬ ಹೆಸರಿರುತ್ತದೆ. (ಇದೊಂದು ತುಳುವರಲ್ಲಿ ಹಿಂದಿನಿಂದಲೂ ಬಳಕೆಯಲ್ಲಿದ್ದ ಹೆಸರು. ಉದಾ: ಕೋಟಿ ಚೆನ್ನಯ) ಯಾವನಾದರೊಬ್ಬ 'ಕೋಟಿ' ಎಂಬ ಹೆಸರುಳ್ಳ ಮನುಷ್ಯನನ್ನಾಗಲಿ, ಕೋಟಿ ಎಂಬ ಸಂಖ್ಯೆಯನ್ನಾಗಲಿ ಅವಜ್ಞೆ ಮಾಡಿ ಮಾತಾಡುವ ಸಂದರ್ಭಗಳಲ್ಲಿ ನಮ್ಮ ಜನರು 'ಕೋಟಿಯೋ ಪಾಂಡಿಯೋ' ಎಂಬ ನುಡಿಗಟ್ಟನ್ನು ತಿರಸ್ಕಾರದ ಧ್ವನಿಯಲ್ಲಿ ಆಡುವುದುಂಟು. ಇದರ ಅರ್ಥವೇನೆಂದು ನಾನು ಹಿರಿಯರನ್ನು ಕೇಳಿದ್ದರೂ, ನನಗೆ ಅದನ್ನು ಯಾರೂ ತಿಳಿಸಿರಲಿಲ್ಲ. ಕಾರಣವೇನೆಂದರೆ—ಅವರಿಗೂ ಅದು ಗೊತ್ತಿದ್ದಿಲ್ಲ! ಅದೊಂದು ತಿರಸ್ಕಾರದ ವಚೋವಿಲಾಸ ಎಂದಿಷ್ಟೇ ಎಲ್ಲರಿಗೂ ಗೊತ್ತಿದ್ದುದು. ಪಾಂಡಿ ಎಂದರೆ ಒಂದು ಬಗೆಯ ದೋಣಿ ಎಂಬುದು ನನಗೆ ತಿಳಿದು ಬಂದೊಡನೆ, ಪಾಂಡಿಯೊಡನೆ ತಿರಸ್ಕಾರಕ್ಕೊಳಗಾಗುವಲ್ಲಿ 'ಕೋಟಿ'ಯ ಅರ್ಥವಿಶೇಷವೂ ಆಗ ಝಳಕ್ಕನೆ ಹೊಳೆಯಿತು. 'ಕೋಟಿ' ಎಂಬುದು ಒಂದು ಬಗೆಯ ಹಾಯಿ ಹಡಗಿನ ಹೆಸರೂ ಆಗಿದೆ. ಇದು ನಮ್ಮೂರಲ್ಲಿ ಎಲ್ಲರಿಗೂ ತಿಳಿದಿರುವ ಸಂಗತಿ. ಆದುದರಿಂದ, ಸಂಖ್ಯಾವಾಚಕವಾದ ಕೋಟಿಯನ್ನೋ ಕೋಟಿ ಎಂಬ ಹೆಸರುಳ್ಳ ವ್ಯಕ್ತಿಯನ್ನೋ ಅವಜ್ಞೆ ಮಾಡುವ ಸಂದರ್ಭದಲ್ಲಿ, ಕೋಟಿ ಎಂಬ ಶಬ್ದಕ್ಕಿರುವ ಮತ್ತೊಂದು ಅರ್ಥವನ್ನು—ಎಂದರೆ ಹಡಗು ಎಂಬರ್ಥವನ್ನು— ಶ್ಲೇಷೆಯಿಂದ ಅವಲಂಬಿಸಿ, ಸಜಾತೀಯವಾದ ಪಾಂಡಿಯೊಡನೆ ಸಮೀಕರಿಸಿ

ತಿರಸ್ಕರಿಸುವ ಮಾತು ಅದು ಎಂಬುದು ಆಗ ನನಗೆ ಸುಸ್ಪಷ್ಟವಾಗಿ ತಿಳಿದು ಬಂತು. ಪಾಂಡಿ ಎಂದರೆ 'ದೊಡ್ಡ ದೋಣಿ'ಎಂದು ತಿಳಿದುದರಿಂದ, ನಮ್ಮಲ್ಲಿ ರೂಢವಾಗಿರುವ 'ಚೋರುಪಾಂಡಿ' ಎಂಬ ಇನ್ನೊಂದು ಮಾತಿನ ಸಂಪೂರ್ಣ ಅರ್ಥವೂ ಆಗ ನನಗೆ ಗೊತ್ತಾಯಿತು. ಹೊಟ್ಟೆಬಾಕ ಎಂಬರ್ಥ ದಲ್ಲಿ ಈ 'ಚೋರುಪಾಂಡಿ' ಎಂಬ ಮಾತು ನಮ್ಮೂರಲ್ಲಿ ರೂಢವಾಗಿದೆ. ಚೋರು ಎಂದರೆ ಅನ್ನ. (ಇದು ಮಲಯಾಳ ಭಾಷೆಯ ಶಬ್ದ. ಕೇರಳದಿಂದ ನಮ್ಮ ಜಿಲ್ಲೆಗೆ ಕಲ್ಲಿನ ಕೆಲಸಕ್ಕಾಗಿ ಅಥವಾ ಮರದ ಕೆಲಸಕ್ಕಾಗಿ ಇಲ್ಲವೆ 'ಚೆಂಡೆ' ಎಂಬ ವಾದ್ಯ ಬಾರಿಸುತ್ತ ಜೀವನ ನಿರ್ವಹಣ ಮಾಡುವುದಕ್ಕಾಗಿ ಬರುತ್ತಿದ್ದ ಮಲಯಾಳಿಗಳು ನಮ್ಮಲ್ಲಿ ಉಣ್ಣುವ ಅನ್ನದ ಪರಿಮಾಣವು ನಮಗೆ ಅಸಾಮಾನ್ಯವಾಗಿ ಕಂಡುಬರುತ್ತಿದ್ದುದರಿಂದಲೋ ಏನೋ ಉಣ್ಣುವ ವ್ಯಕ್ತಿಯ ಮೇಲೆ ತಿರಸ್ಕಾರವನ್ನು ಸೂಚಿಸುವ ಸಂದರ್ಭಗಳಲ್ಲಿ ಅನ್ನ ಎಂಬುದರ ಬದಲಾಗಿ 'ಚೋರು' ಎಂಬ ಮಲಯಾಳ ಶಬ್ದವನ್ನು ಪ್ರಯೋಗಿಸುವ ಸಂಪ್ರದಾಯವು ನಮ್ಮವರಲ್ಲಿ ನೆಲೆಗೊಂಡಿದೆ.) 'ಚೋರುಪಾಂಡಿ' ಎಂಬ ಸಮಸ್ತಪದದ ಉತ್ತರಾರ್ಧದ ಅರ್ಥ ನನಗೆ ಅದುವರೆಗೂ ತಿಳಿದಿರಲಿಲ್ಲ. ಪಾಂಡಿ ಎಂದರೆ ದೊಡ್ಡದೋಣಿ ಎಂದರೆ ಹಡಗು ಎಂದು ಗೊತ್ತಾದಾಗ 'ಚೋರುಪಾಂಡಿ' ಎಂದರೆ 'ಅನ್ನ ತುಂಬಿಸುವ ಹಡಗು' ಎಂಬುದೂ ಗೊತ್ತಾಗಿ, ಆ ಪರಿಹಾಸವಚನದ ಸ್ವಾರಸ್ಯವೂ ಅದರ ಔಚಿತ್ಯವೂ ನನಗೆ ಅರ್ಥವಾಯಿತು.

ಹೀಗೆ ನನ್ನ ಬಗೆಗೊಂಡ ಪಾಂಡಿ ನನ್ನನ್ನು ಎತ್ತಲೋ ಎಳೆಯುತ್ತಾ ಹೋಯಿತು. ಪಾಂಡಿ ಎಂದರೆ ನೌಕೆ ಎಂಬ ಅರ್ಥವನ್ನು ಪುಷ್ಟೀಕರಿಸುವ ಬೇರೆ ಸಾಕ್ಷ್ಯಗಳೂ ಸಿಕ್ಕಿದವು. ನಾವು ಕನ್ನಡದಲ್ಲಿ 'ಪಾಣೆಮಂಗಳೂರು' ಎಂದು ಕರೆಯುವ ಒಂದು ಊರು ನೇತ್ರಾವತಿಯ ದಡದಲ್ಲಿ ಇದೆಯಷ್ಟೆ. ಅದನ್ನು ತುಳುವಿನಲ್ಲಿ ಇಂದು ಕೂಡ ಹಾಗೆ ಕರೆಯುವುದಿಲ್ಲ; 'ಪಾಣೇರ್' ಎನ್ನುತ್ತಾರೆ. ನಮ್ಮೂರ ಹಿರಿಯರು ಅದನ್ನು ಕರೆಯುವ ಹೆಸರು ಬೇರೊಂದು: ಅವರು 'ಪಾಂಡಿಮಾರ್' ಎನ್ನುತ್ತಾರೆಂದು ಗೆಳೆಯರೊಬ್ಬರಿಂದ ತಿಳಿದು ಬಂತು. ಆಗ ಅದು ಪಾಣೇರ್ ಎಂಬುದರ ಪೂರ್ವರೂಪವೆಂಬುದೂ ನಿಶ್ಚಯವಾಯಿತು.

ನಮ್ಮೂರ ಸ್ಥಳನಾಮಗಳಲ್ಲಿ '-ಮಾರ್' ಎಂದು ಕೊನೆಗೊಳ್ಳುವ ಶಬ್ದಗಳು ಎಷ್ಟೋ ಇವೆ. ಆ ಶಬ್ದಗಳ ಉತ್ತರಾರ್ಧಗಳು ಗದ್ದೆ ಎಂಬರ್ಥವನ್ನು ಕೊಡುತ್ತವೆಂಬುದು ವಿಚಾರಾಂತರದಲ್ಲಿ ತಿಳಿದು ಬಂದಿದೆ. ವಸ್ತುತಃ 'ಮಾರ್' ಎಂಬುದು ಆ ಶಬ್ದದ ಪೂರ್ಣರೂಪವಲ್ಲ; ಪೂರ್ಣರೂಪವು 'ಬಿಮಾರ್' ಎಂಬುದಾಗಿದೆ. ಬಿಮಾರ್ ಎಂದರೆ ಒಂದು ವಿಶಿಷ್ಟ ಬಗೆಯ ದೊಡ್ಡ ಗದ್ದೆ. ತುಳುನುಡಿಯಲ್ಲಿ ಎರಡು ಪದಗಳು ಸಮಾಸವಾಗುವಾಗ ಉತ್ತರ ಪದದ ಆದಿಗೆ ಲೋಪ ಬರುವುದು ಬಹಳ ಸಾಧಾರಣ ವಾಗಿದೆ. ಉದಾ: ಕೋಡಿ + ಪಾಡಿ = ಕೋಡ್ಯಾಡಿ. ಬೆಂಗಾಯ + ಬಿಮಾರ್ = ಬೆಂಗಾಯಮಾರ್. ಸೇಡಿ + ಕಾಪು = ಸೇಡಿಯಾಪು ಇತ್ಯಾದಿ. (ಉತ್ತರಪದದ ಆದಿ ಮಾತ್ರವಲ್ಲ. ಅದರೊಡನೆ ಪೂರ್ವಪದದ ಕೊನೆಯೂ ಲುಪ್ತವಾಗುವುದುಂಟು. ಉದಾ: ಬಾಕಿಲ್ + ಬಿಮಾರ್ = ಬಾಕಿಮಾರ್. ಬಾಯಿ + ಅಜಿಲ್ = ಬಾಜಿಲ್ ಇತ್ಯಾದಿ) ಹೀಗೆಯೇ ಪಾಂಡಿ + ಬಿಮಾರ್ ಎಂಬುದು 'ಪಾಂಡಿಮಾರ್' ಎಂದಾಗಿದೆಯೆಂಬುದು ನಿಸ್ಸಂದಿಗ್ಧವಾಗಿ ಗೊತ್ತಾಗಿ, 'ಪಾಂಡಿಗಳು (ಮಳೆಗಾಲದಲ್ಲಿ) ತಂಗುವ ದೊಡ್ಡ ಗದ್ದೆ' ಎಂಬುದೇ ಪಾಂಡಿಮಾರ್-ಪಾಣೇರ್ ಎಂಬುದರ ಮೂಲಾರ್ಥವೆಂದು ನನಗೆ ಅವಗತವಾಯಿತು. ಪಾಂಡಿಮಾರ್ ಎಂಬುದು ಪಾಣೇರ್ ಎಂದಾಗಿ ಮೂಲಾರ್ಥವು ಮರೆಯಾದ ಮೇಲೆ, ರಸ್ತೆಗಳಿಗೆ ಇಲ್ಲದಿದ್ದ ಹಿಂದಿನ ಕಾಲದಲ್ಲಿ ಜಿಲ್ಲೆಯ ದಕ್ಷಿಣ ಪೂರ್ವ ಭಾಗಗಳಿಂದ ಮಂಗಳೂರಿಗೆ ಸರಕುಹೇರುವ ಪಡವುಗಳ ನಿಲ್ದಾಣವು ಅದಾಗಿದ್ದುದರಿಂದಲೋ ಏನೋ, 'ಮಂಗಳೂರು' ಎಂಬ ಶಬ್ದವೂ ಪಾಣೇರ್ ಎಂಬುದಕ್ಕೆ ಸೇರಿಕೊಂಡು 'ಪಾಣೆಮಂಗಳೂರು' ಎಂಬ ಗಂಭೀರವಾದ ನಾಮಧೇಯವನ್ನು ವ್ಯಾಪಾರ ವ್ಯವಹಾರಗಳಲ್ಲಿ ಪಡೆದು ರೂಢವಾಗಿರಬೇಕೆಂಬೂ ಸ್ಪಷ್ಟವಾಯಿತು.

ನನ್ನ ಕಣ್ಣಿಗೆ ಬಿದ್ದ 'ಪಾಂಡಿ' ದೊಡ್ಡ ಹಡಗಾಗಿದ್ದುದೂ ಅದರ ಆಕೃತಿ ದೊಡ್ಡ ಹಡಗಿನದೇ ಆಗಿತ್ತು. ಪಾಂಡಿ ಎಂದರೆ ಮೂಲತಃ 'ಸರಕು ಸಾಗಿಸುವ ಹಡಗು' ಎಂಬರ್ಥವೇ ಇದ್ದಿರಬೇಕೆಂಬುದಕ್ಕೆ ನನಗೊಂದು ಪ್ರಬಲವಾದ ಆಧಾರ ಸಿಕ್ಕಿತು. ಅದೇನೆಂದರೆ-ಸುಳ್ಯ ತಾಲೂಕಿನಲ್ಲೂ ಕಾಸರಗೋಡು ತಾಲೂಕಿನ ಭಾಗಗಳಲ್ಲೂ, ನಾವು ಸಾಧಾರಣವಾಗಿ ಬಂದರು (Port) ಎಂಬುದನ್ನು ಅಲ್ಲಿಯವರು

‘ಪಾಂಡ್ಯಾಲ’ ಎನ್ನುತ್ತಾರೆಂದು ಮಿತ್ರರೊಬ್ಬರಿಂದ ಅಯಾಚಿತವಾಗಿ ತಿಳಿದು ಬಂತು. ಈ ಶಬ್ದವು ಪಾಂಡಿ + ಆಲ ಎಂಬೆರಡು ಶಬ್ದಗಳು ಸೇರಿ ರೂಪುಗೊಂಡಂತಿದೆ. ಹಾಗಿದ್ದರೆ, ಈ ‘ಆಲ’ ಎಂಬುದರ ಅರ್ಥವೇನು? ಪಾಂಡ್ಯಾಲ ಎಂಬ ಶಬ್ದದ ಪ್ರಯೋಗವನ್ನವಲಂಬಿಸಿ ಅರ್ಥಮಾಡುವಾಗ, (ಪಾಂಡಿ = ನೌಕೆ, ಪಾಂಡ್ಯಾಲ = ಬಂದರು. ಬಂದರು ಎಂದರೆ ಕಡಲ ತೀರದಲ್ಲಿ ಅಥವಾ ನದಿಯ ದಡದಲ್ಲಿ ನೌಕೆಗಳು ತಂಗುವ ಸ್ಥಳವಷ್ಟೆ?) ‘ಆಲ’ ಎಂದರೆ ನೌಕೆಗಳು ನಿಲ್ಲುವ ದಡ ಅಥವಾ ದಂಡೆ ಎಂದು ಅನುಮಾನಿಸಬೇಕಾಗುತ್ತದೆ. ನಮ್ಮ ನೇತ್ರಾವತಿ ನದಿಯ ದಡದ ಉದ್ದಕ್ಕೂ ಹಲವು ಊರುಗಳ ಹೆಸರಿನ ಉತ್ತರಾರ್ಧವು-‘ಆಲ’ ಎಂದಿರುವುದು ಈ ಅನುಮಾನಕ್ಕೆ ಪೋಷಕವಾಗಿದೆ. ಉದಾ: ಕುಡಾಲ, ಉಳ್ಳಾಲ, ಪರಿಯಾಲ, ಬಂಟಾಲ-ಬಂಟವಾಳ, ಕಡೆಶ್ಯಾಲ-ಕಡೇಶ್ವಾಲ ಇತ್ಯಾದಿ. ಮಂಗಳೂರನ್ನು ನಮ್ಮ ತುಳುನಾಡಿನ ಯಾವ ಮನೆಮಾತಿನಲ್ಲಿಯೂ ‘ಮಂಗಳೂರು’ ಎಂದು ಹೇಳುವವರು ಇಲ್ಲವೇ ಇಲ್ಲ. ತುಳುವಿನಲ್ಲಿ ಅದು ‘ಕುಡಾಲ-ಕುಡಲ-ಕುಡ್ಲ’, ಹವ್ಯಕರ ಕನ್ನಡದಲ್ಲಿ ‘ಕೊಡೆಯಾಲ’, ಕೊಂಕಣಿಗರ ಮಾತಿನಲ್ಲಿ ‘ಕೊಡಿಯಾಲ’, ಮಾಪಿಳ್ಳೆಯವರ ಮಲಯಾಳದಲ್ಲಿ ‘ಮೈಕಾಲ’, ಹಿಂದುಸ್ತಾನಿ ಮಾತಾಡುವ ಮುಸಲ್ಮಾನರಲ್ಲಿ ಅದು ‘ಕೌಡಲ್’ (= ಕೌಡಲ). ನೇತ್ರಾವತಿ ಮತ್ತು ‘ಪಲಾನಿ (= ಫಲ್ಗುಣಿ) ಎಂಬೆರಡು ಹೊಳೆಗಳು ಅಲ್ಲಿ ‘ಕೂಡುವುದರಿಂದ’ ಕನ್ನಡದ ‘ಕೂಡಲು’ ಮತ್ತು ತುಳುವಿನ ಇದೇ ಅರ್ಥದ ‘ಕೂಡೆಲ್’ ಎಂಬ ಶಬ್ದದಲ್ಲಿ ಕುಡಾಲ ಇತ್ಯಾದಿ ರೂಪದ ಹೆಸರಿನ ಮೂಲವನ್ನು ಹಲವರು ವಿದ್ವಾಂಸರು ಊಹಿಸಿದ್ದಾರೆ. ಆದರೆ ಉಳ್ಳಾಲ, ಪರಿಯಾಲ ಇತ್ಯಾದಿಗಳೊಡನೆ ಇದನ್ನು ಹೋಲಿಸುವಾಗ ಆ ಊಹೆಯಲ್ಲಿ ಸಂಶಯ ಹುಟ್ಟುತ್ತದೆ. ಏಕೆಂದರೆ ಅಲ್ಲಿ ಹೊಳೆಗಳ ‘ಕೂಡಲು’ ಎಂದರೆ ಸಂಗಮ ಇಲ್ಲ. ನಮಗೀಗ ದೊರಕಿರುವ ‘ಪಾಂಡ್ಯಾಲ’ ಎಂಬ ಶಬ್ದವು ಆ ಹೆಸರಿನ ಮೂಲದ ಮೇಲೆ ಪ್ರಕಾಶ ಬೀರುತ್ತದೆ. ಉಳ್ಳಾಲ ಪರಿಯಾಲ ಎಂಬ ಶಬ್ದಗಳಲ್ಲಿರುವಂತೆಯೇ ಕುಡಾಲದಲ್ಲಿಯೂ ಒಂದು ‘ಆಲ’ ಇದೆಯಷ್ಟೆ. (ಕುಡಾಲ ಎಂಬ ರೂಪವು ಒಳನಾಡಿನ ತುಳುವಿನದು. ಒಳನಾಡಿನ ತುಳು ಬಹಳಮಟ್ಟಿಗೆ ಹಳೆಯ ರೂಪಗಳನ್ನು ಉಳಿಸಿಕೊಂಡಿದೆ.) ಆದರೆ ನೌಕೆಗಳ ನಿಲ್ದಾಣ ಎಂಬರ್ಥವನ್ನು ‘ಪಾಂಡ್ಯಾಲ’ವು ನಮಗೆ ಸೂಚಿಸುವುದಾದರೂ, ‘ಕೊಡಿಯಾಲ’ ಎಂಬ ಶಬ್ದರೂಪದಲ್ಲಿ ಅದರ ಅರ್ಥವು ನಿಸ್ಸಂದಿಗ್ಧವಾಗಿ ಸ್ಫುಟವಾಗುತ್ತದೆ. ‘ಕೊಡಿ’ ಎಂದರೆ ತುಳುವಿನಲ್ಲಿ ತುದಿ ಕೊನೆ ಎಂಬರ್ಥ. ನೇತ್ರಾವತಿಯ ದಂಡೆಯ ಮೇಲಿರುವ ಪರಿಯಾಲ ಉಳ್ಳಾಲ ಮೊದಲಾದ ಹಲವು ‘ಆಲ’ ಗಳಲ್ಲಿ ಕೊಡಿಯಾಲವು ತುತ್ತತುದಿಯ ಆಲ. ಅದು ನೇತ್ರಾವತಿಯ ಕೊನೆಯಲ್ಲಿರುವುದರಿಂದಲೇ ಅದು ‘ಕೊಡಿಯಾಲ’ (ಕೊಡಿ + ಆಲ) ಎಂದರೆ ಕೊನೆಯ ಆಲ; ಮತ್ತೆ ‘ಆಲ’ವಿಲ್ಲ, ಕಡಲೇ ಸೈ. ಸಂಸ್ಕೃತದಲ್ಲಿ ಆಲವಾಲ ಎಂಬೊಂದು ಶಬ್ದವಿದೆ. ಗಿಡಗಳ ಬುಡದಲ್ಲಿ ನೀರು ನಿಲ್ಲುವುದಕ್ಕಾಗಿ ಕಟ್ಟಿದ ದಂಡೆ ಎಂಬುದು ಅದರ ಅರ್ಥ. ನಾವೀಗ ಕಂಡುಕೊಂಡ ‘ಆಲ’ಕ್ಕೂ ನೀರಿನ ದಡ ಅಥವಾ ದಂಡೆ ಎಂಬುದೇ ಅರ್ಥವಾಗಿರುವುದರಿಂದ ಆಲ ಹಾಗೂ ಆಲವಾಲಗಳು ಒಂದೇ ಮೂಲದವೆಂದು ತೋರುತ್ತವೆ. ಸಂಸ್ಕೃತದಲ್ಲಿ ಆಲು ಎಂಬ ಶಬ್ದಕ್ಕೆ ತೆಪ್ಪ ಅರ್ಥಾತ್ ನೌಕಾವಿಶೇಷವೆಂಬ ಅರ್ಥವಿರುವುದು, ಆಲ ಎಂದರೆ ‘ನೌಕೆಗಳು ತಂಗಲು ಯೋಗ್ಯವಾದ ಕಡಲಿನ ಅಥವಾ ನದಿಯ ದಡ’ ಎಂದು ನಾವು ಊಹಿಸಿದ ಅರ್ಥಕ್ಕೆ ಮತ್ತಷ್ಟು ಪುಷ್ಟಿಕೊಡುತ್ತದೆ. ಪಾಂಡ್ಯಾಲ (ಎಂದರೆ ‘ಪಾಂಡಿಗಳು ತಂಗುವ ದಡ’)ಎಂಬುದು ಮಂಗಳೂರಿನಂತಹ ದೊಡ್ಡ ಬಂದರಿಗೆ ಹಿತವಾದ ಹೆಸರಾದುದರಿಂದಲೂ, ನಾನು ನೋಡಿದ ಹಾಯಿ ಹಡಗುಗಳಲ್ಲಿ ಅತಿದೊಡ್ಡದಾದ ‘ಕೋಟಿ’ಯೊಡನೆ ಪಾಂಡಿಯು ಸಮೀಕರಿಸಲ್ಪಡುವುದಾದುದರಿಂದಲೂ, ‘ಪಾಂಡಿ’ ಎಂದರೆ ನಾನು ಕುಂದಾಪುರದಲ್ಲಿ ನೋಡಿದಂಥ ‘ದೊಡ್ಡ ದೋಣಿ’ಗಳಿಗೆ ಮಾತ್ರ ಇದ್ದ ಹೆಸರಾಗಿರದೆ, ಸಮುದ್ರಮಾರ್ಗವಾಗಿ ಸರಕುಸಾಗಿಸುವ ‘ದೊಡ್ಡ ಹಾಯಿಹಡಗುಗಳಿಗೂ ಬಳಕೆಯಾಗುತ್ತಿದ್ದ ಹೆಸರೆಂಬುದರಲ್ಲಿ ಇನ್ನು ಸಂಶಯದ ಲೇಶವೂ ಇಲ್ಲ.

ಹೀಗೆ ನಮ್ಮ ನಾಡಿನಲ್ಲಿ ಒಂದು ಕಾಲದಲ್ಲಿ ಪಾಂಡಿ ಎಂಬ ಶಬ್ದವು ‘ಸರಕು ಸಾಗಿಸುವ ಹಡಗು’ ಎಂಬರ್ಥದಲ್ಲಿ ವ್ಯಾಪಕವಾಗಿ ಬಳಕೆಯಲ್ಲಿತ್ತೆಂಬುದು ತಿಳಿದು ಬಂದ ಪರಿಣಾಮವಾಗಿ, ಪಾಂಡಿಯ ಕುರಿತು ನನ್ನ ಕುತೂಹಲವು ಮತ್ತಷ್ಟು ಅರಳತೊಡಗಿತು. ಏಕೆಂದರೆ, ಇತಿಹಾಸ ಪ್ರಸಿದ್ಧವಾದ ‘ಪಾಂಡ ಎಂಬ ಶಬ್ದಕ್ಕೂ ಈ ನಮ್ಮ ‘ಪಾಂಡಿ’ಗೂ ಏನಾದರೂ ಸಂಬಂಧವಿದ್ದಿರಬೇಕೆಂಬ ಊಹೆ ನನ್ನಲ್ಲಿ ನೆಲೆ

ಗೊಂಡಿತು. ಪಾಂಡ್ಯ ಎಂಬುದು ಪುರಾತನ ಕಾಲದ ತಮಿಳುನಾಡಿನ ಮೂರು ದೇಶಗಳಲ್ಲಿ (ಪಾಂಡ್ಯ. ಚೇರ. ಚೋಳ) ಒಂದು. ಅಲ್ಲದೆ ಪಾಂಡಿಚೇರಿ. ಪಾಂಡಿಬಜಾರ್ ಇತ್ಯಾದಿಯಾಗಿ 'ಪಾಂಡಿ'ಯೊಡಗೂಡಿದ ಸ್ಥಳನಾಮಗಳು ಇಂದೂ ಅಲ್ಲಿ ಇವೆ. ಆದುದರಿಂದ ತಮಿಳಿನಲ್ಲಿ ಪಾಂಡಿ ಎಂಬುದಕ್ಕೆ ಏನು ಅರ್ಥವಿದೆ ಎಂಬುದನ್ನು ಮೊದಲಾಗಿ ತಿಳಿದುಕೊಳ್ಳುವುದು ಅವಶ್ಯವೆಂದು ತೋರುತ್ತಿದೆ. ಇದಕ್ಕಾಗಿ ತಮಿಳು ಬಲ್ಲವರ ಸಹಕಾರದಿಂದ ತಮಿಳುಕೋಶದಲ್ಲಿ ಹುಡುಕಿದೆ. ಆದರೆ, ಪಾಂಡಿಗೆ ನೌಕೆ ಎಂಬರ್ಥ ಅಲ್ಲಿ ಕಾಣಲಿಲ್ಲ. ಪಾಂಡ್ಯ ಶಬ್ದದ ನಿಷ್ಪತ್ತಿಯ ಕುರಿತು ಅದರಿಂದೇನೂ ತಿಳಿದು ಬರಲಿಲ್ಲ. ಆದರೂ ನಾನು ನಿರಾಶನಾಗದೆ. ಪಾಂಡ್ಯಶಬ್ದಕ್ಕೆ ತಮಿಳು ವಿದ್ವಾಂಸರು ಕಂಡ ನಿಷ್ಪತ್ತಿ ಏನು ಎಂಬುದನ್ನು ತಿಳಿಯುವುದಕ್ಕಾಗಿ. ಮದ್ರಾಸಿನಲ್ಲಿ ಒಂದು ಉನ್ನತಾಧಿಕಾರದಲ್ಲಿದ್ದ ನನ್ನ ಮಿತ್ರರೊಬ್ಬರ ಮೂಲಕ. ಮದ್ರಾಸಿನ ತಮಿಳು ಭಾಷಾತತ್ವಜ್ಞರಲ್ಲಿ ಹಿರಿಪ್ರಾಯರೆಂದು ವಿಖ್ಯಾತರಾದ ವಿದ್ವಾಂಸರೊಬ್ಬರ ಅಭಿಪ್ರಾಯವನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಿದೆ. ಆ ನನ್ನ ಮಿತ್ರರು ಆ ವಿದ್ವಾಂಸರನ್ನು ಸಂದರ್ಶಿಸಿ ಅವರ ಅಮೂಲ್ಯವಾದ ಅಭಿಪ್ರಾಯಗಳನ್ನು ನನಗೆ ತಿಳಿಸಿದರು. ಅವರ ಸಾರಾಂಶ ಇಷ್ಟು: "ಪಾಂಡ್ಯ ಎಂಬ ಶಬ್ದದ ನಿಷ್ಪತ್ತಿ ಅಗಮ್ಯ. ಪಾಂಡಿಬಜಾರ್ ಎಂಬುದರ ಅರ್ಥ ತಿಳಿಯುವುದಿಲ್ಲ. ಪಾಂಡಿಚೇರಿ ಎಂಬುದು ಪಾಶ್ಚಾತ್ಯರು ಮಾಡಿದ ಹೆಸರು: ಆ ಸ್ಥಳಕ್ಕೆ ಊರವರಿಟ್ಟ ಹೆಸರು ಪುದುಚೇರಿ".

ಅನಂತರ ಒಮ್ಮೆ ನಾನು ಮದ್ರಾಸಿಗೆ ಹೋಗಿದ್ದಾಗ. ಪ್ರೆಸಿಡೆನ್ಸಿ ಕಾಲೇಜಿನ ಪ್ರೊಫೆಸರರೊಬ್ಬರ ಪರಿಚಯವು. ಅವರ ಕೈಕೆಳಗೆ ಪಿ.ಎಚ್‌ಡಿ.ಗಾಗಿ ಅಭ್ಯಾಸಮಾಡುತ್ತಿದ್ದ ನಮ್ಮೂರ ಕಿರಿಯರೊಬ್ಬರ ಮಿತ್ರತ್ವದಿಂದ ಅನಿರೀಕ್ಷಿತವಾಗಿ ಲಭಿಸಿತು. ಆ ಪ್ರೊಫೆಸರರು ಒಳ್ಳೆ ವ್ಯಾಸಂಗಿಗಳು. ಅವರು ತಮಿಳರಂತೆಯೂ ಕೋಲಾರದವರಾದುದರಿಂದ ಕನ್ನಡವನ್ನೂ ಚೆನ್ನಾಗಿ ಬಲ್ಲವರು. ಪ್ರಸಂಗವಶಾತ್. ನನ್ನ ತಲೆಯೊಳಗೆ ಸುಳಿಯುತ್ತಿದ್ದ 'ಪಾಂಡಿ' ಹೊರ ಬಂತು. ಆ ಶಬ್ದದ ಅರ್ಥ ತಮಗರಿಯದೆಂದೂ. ಪಾಂಡಿ ಎಂಬ ಹೆಸರಿನ ಒಂದು ಆಟವನ್ನು ಮಕ್ಕಳು ಆಡುತ್ತಾರೆಂದೂ. ಆ ಆಟದ ಉಪಕರಣವು ನೌಕೆಯ ಆಕಾರದ್ದೆಂದೂ ತಿಳಿಸಿದರು. ಇದರಿಂದಾಗಿ. ನೌಕೆ ಎಂಬ ಅರ್ಥದಲ್ಲಿ ಪಾಂಡಿ ಎಂಬ ಶಬ್ದದ ಪ್ರಯೋಗವು ದಕ್ಷಿಣ ಕನ್ನಡಕ್ಕೆ ಮಾತ್ರ ಮೀಸಲಾಗಿರದೆ. ಒಂದು ಕಾಲದಲ್ಲಿ ತಮಿಳುನಾಡಿನಲ್ಲಿಯೂ ಬಳಕೆಯಲ್ಲಿತ್ತೆಂಬ ತಥ್ಯವು ತಿಳಿದು ಬಂತು. ಹಾಗಾದರೆ ತಮಿಳು ನಾಡಿನ ಪಾಂಡಿಚೇರಿ ಮೊದಲಾದವುಗಳಿಗೂ ನೌಕಾರ್ಥದ ಸಂಬಂಧವಿದ್ದಿರಬಾರದೇ? ಪಾಂಡಿಚೇರಿ ಎಂಬುದು ಸಮುದ್ರದ ಬಳಿಯಲ್ಲಿಯೇ ಇದೆ ಎಂಬುದು ಇಲ್ಲಿ ಗಮನೀಯವಾದ ಸಂಗತಿ. ಪಾಂಡಿಚೇರಿಗೆ ಪುದುಚೇರಿ (ಪುದು = ಹೊಸ) ಎಂಬ ಇನ್ನೊಂದು ಹೆಸರು ಕೇಳಬರುತ್ತಿದೆಯಾದರೂ. 'ಪುದುಚೇರಿ' ಎಂಬ ಶಬ್ದವೇ 'ಪಾಂಡಿಚೇರಿ' ಎಂಬ ರೂಪವನ್ನು ಪಾಶ್ಚಾತ್ಯರ ಬಾಯಲ್ಲಿ ಪಡೆಯಿತೆನ್ನುವುದು ಸರ್ವಥಾ ಒಪ್ಪುವುದಕ್ಕಾಗದ ಮಾತಾಗಿದೆ. ಪರದೇಶೀಯರು ನಮ್ಮ ದೇಶದ ಊರುಗಳ ಹೆಸರುಗಳನ್ನು ಹೇಳುವಾಗ ಮೊದಮೊದಲು ಒಂದಿಷ್ಟು ವ್ಯತ್ಯಸ್ತವಾಗುವುದು ಸಹಜವಾದರೂ. 'ಪುದು' ಎಂಬುದು 'ಪಾಂಡಿ' ಎಂಬಷ್ಟು ರೂಪಾಂತರ ಹೊಂದುವುದು ಕೇವಲ ಅಸಂಭವ. ತಮಿಳರ ಬಾಯಿಂದಲೇ ಆ ಶಬ್ದರೂಪವನ್ನು ಪಾಶ್ಚಾತ್ಯರು ತೆಗೆದುಕೊಂಡರೆಂದು ಊಹಿಸಬಹುದಾದ ಆಧಾರವಿದೆ: ಪಾಂಡಿಚೇರಿ ಎಂಬುದನ್ನು ಇಂಗ್ಲಿಷಿನಲ್ಲಿ ಬರೆಯುವಾಗ Pondycherryಎಂದು ಓಸ್ವರಯುಕ್ತವಾಗಿ ಬರೆಯುವರಷ್ಟೆ. ಈ ಓಕಾರವು ಇಲ್ಲಿ ಏಕೆ ಬಂತು? ಹಾಗೆಯೇ 'ಕಾವೇರಿ' ಎಂಬುದನ್ನು Cauvery ಎಂದು (ಓಸ್ವರಸೂಚಕವಾಗಿ) ಬರೆಯುವರಲ್ಲವೇ? ಇದಕ್ಕೆ ಕಾರಣ. ಈ ಓಕಾರಗಳ ಮೂಲವು ತಮಿಳರ ಬಾಯಲ್ಲಿಯೇ ಇರುವುದಾಗಿದೆ. ಅವರು 'ಅ' ಎಂಬ ಸ್ವರವನ್ನು ಗಂಭೀರವಾಗಿ ಉಚ್ಚರಿಸುವ ಸಂದರ್ಭದಲ್ಲಿ ಅದು ಓಕಾರ ಧ್ವನಿಯ ಕಡೆಗೆ ವಾಲುತ್ತದೆಂಬುದು ಅವರ ಸಂಭಾಷಣೆಗಳನ್ನು ಪರೀಕ್ಷಿಸಿದವರಿಗೆ ತಿಳಿಯುವುದು. (ನನ್ನೀ ಮಾತಿನಲ್ಲಿ ಸಂದೇಹವಿರುವವರು ಮದ್ರಾಸು. ತಿರುಚ್ಚಿ ರೇಡಿಯೋ ಪ್ರಸಾರಗಳನ್ನು ದಯಮಾಡಿ ಕೇಳಬೇಕು.) ತಮಿಳಿನ ಪ್ರಭಾವಕ್ಕೆ ಬಹುಕಾಲದಿಂದ ಒಳಗಾಗಿದ್ದ ದಕ್ಷಿಣ ಮೈಸೂರಲ್ಲಿಯೂ 'ಅ'ಕಾರದ ಉಚ್ಚಾರದಲ್ಲಿ ಒಮ್ಮೊಮ್ಮೆ ಓಕಾರದ ಛಾಯೆಯಿರುವುದನ್ನು ಕಾಣಬಹುದಾಗಿದೆ. ಇದಕ್ಕೆ ಲಿಖಿತವಾದ ಆಧಾರವೇ ಬೇಕಾದರೆ, ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ಶಬ್ದಕೋಶವನ್ನು (ಪ್ರಥಮ ಮುದ್ರಣ)

ಪರೀಕ್ಷಿಸಬಹುದು. ಅಲ್ಲಿ ಇಂಗ್ಲಿಷ್ ಶಬ್ದಗಳ ಉಚ್ಚಾರ ಸ್ವರೂಪಗಳನ್ನು ಕನ್ನಡ ಲಿಪಿಯಲ್ಲಿ ಕಾಣಿಸಿದ್ದಾರೆ. ಆದರೆ far ಮತ್ತು for, Cast ಮತ್ತು Cost ಇಂತಹ ಭಿನ್ನೋಚ್ಚಾರಗಳನ್ನು ಫಾರ್, ಕಾಸ್ಟ್ ಇತ್ಯಾದಿಯಾಗಿ ಏಕರೂಪದಲ್ಲಿಯೇ ಕೊಟ್ಟಿದ್ದಾರೆ. cat, fat ಇತ್ಯಾದಿಗಳಲ್ಲಿರುವ ವಿವೃತ ಏಕಾರೋಚ್ಚಾರವನ್ನು ಸೂಚಿಸುವುದಕ್ಕಾಗಿ ಹೊಸ ಚಿಹ್ನೆಯೊಂದನ್ನು ನ್ಯಾಯವಾಗಿಯೇ ಸೃಷ್ಟಿಸಿ ಬಳಸಿದ ಕೋಶಕರ್ತರು–ಕನ್ನಡದಲ್ಲಿಲ್ಲದ, Cause, Cot ಇತ್ಯಾದಿ ಇಂಗ್ಲಿಷ್ ಶಬ್ದಗಳಲ್ಲಿರುವ, ವಿವೃತ ಓಕಾರವನ್ನು ಸೂಚಿಸುವುದಕ್ಕೆ ಹೊಸಲಿಪಿಯನ್ನು ಸೃಷ್ಟಿಸದೆ, ಶುದ್ಧ 'ಆ'ಕಾರವನ್ನು ಸೂಚಿಸುವ ಲಿಪಿರೂಪದಿಂದಲೇ ಏಕೆ ತೃಪ್ತರಾದರು? ಕಾರಣವೇನೆಂದರೆ–ಅವರಿಗೆ ತಾವು ಉಚ್ಚರಿಸುವ 'ಆ'ಕಾರಕ್ಕೂ Cause Cot ಇತ್ಯಾದಿಗಳಲ್ಲಿರುವ ಸ್ವರವಿಶೇಷಕ್ಕೂ ವ್ಯತ್ಯಾಸ ಕಾಣದಿದ್ದುದೇ, ಕಂಡರೂ ಬಹಳ ಸ್ವಲ್ಪವಾಗಿದ್ದುದೇ ಆಗಿದೆ. ತಾತ್ಪರ್ಯವೇನೆಂದರೆ–ತಮಿಳರು ಹಾಗೂ ತಮಿಳಿನ ಪ್ರಭಾವಕ್ಕೆ ವಿಶೇಷವಾಗಿ ಗುರಿಯಾದವರು ಉಚ್ಚರಿಸುವ 'ಆ'ಕಾರವು, ಪ್ರಾಯಃ ವಿವೃತವಾದ ಓಕಾರದಂತೆ ಭಾಸವಾಗುತ್ತದೆ. ಆದುದರಿಂದ ತಮಿಳರ ಬಾಯಿಂದ ಹೊರಟ 'ಕಾವೇರಿ'ಯಲ್ಲಿ ಪಾಶ್ಚಾತ್ಯರಿಗೆ ತಮ್ಮ ಭಾಷೆಯ ವಿವೃತ ಓಕಾರದ ಸಾಮ್ಯವು ಕಂಡುದು ಸಹಜ. ಇದರಿಂದಾಗಿ ಕಾವೇರಿ Cauvery ಯಾಗಿ ಪರಿಣಮಿಸಿತು. ಹಾಗೆಯೇ ತಮಿಳರು ನುಡಿಯುವ 'ಪಾಂಡಿಚೇರಿ'ಯಲ್ಲಿ ಅವರಿಗೆ 'Pondycherry'ಯೇ ಕಂಡು ಬಂತೆಂದು ಹೇಳಬೇಕು. ಸಾರಾಂಶವೇನೆಂದರೆ–'ಪಾಂಡಿಚೇರಿ' ಎಂಬುದು 'ಪುದುಚೇರಿ' ಎಂಬ ಶಬ್ದದ ರೂಪಾಂತರವಲ್ಲ. ಪಾಶ್ಚಾತ್ಯರು ಅಲ್ಲಿ ಕಾಲಿಡುವುದಕ್ಕೆ ಮೊದಲೇ ಆ ಸ್ಥಳಕ್ಕೆ ಪಾಂಡಿಚೇರಿ ಎಂಬ ಅಚ್ಚ ತಮಿಳು ಹೆಸರಿದ್ದುದರಲ್ಲಿ ಸಂದೇಹವಿಲ್ಲ. ಹೊಸತೋದು 'ಚೇರಿ' ಅಥವಾ 'ಊರು' ಅಥವಾ 'ಪಾಳಯ' ಆದೊಡನೆ ಅಲ್ಲಿಗೆ ಪುದುಚೇರಿ. ಪುದೂರು, ಪುದುಪಾಳಯ ಇತ್ಯಾದಿ ಹೆಸರುಗಳಾಗುವುದು ತಮಿಳುನಾಡಿನಲ್ಲಿ ಸರ್ವಸಾಧಾರಣ ಸಂಗತಿ. ಮದ್ರಾಸು ನಗರದೊಳಗೇ ಇಂತಹ ಹೆಸರುಗಳಿವೆ. ತಮಿಳಿನ 'ಚೇರಿ'ಯೂ ಕನ್ನಡದ 'ಕೇರಿ'ಯೂ ಮೂಲತಃ ಒಂದೇ ಶಬ್ದವಾದರೂ, ಕನ್ನಡದ 'ಕೇರಿ'ಗೆ ಇರುವುದಕ್ಕಿಂತ ಹೆಚ್ಚು ಅರ್ಥಗಳು ತಮಿಳಿನ 'ಚೇರಿ'ಗೆ ಇವೆ. ಚೇರಿ ಎಂಬುದಕ್ಕೆ ಬೀದಿ, ಮನೆಗಳ ಗುಂಪು, ಹಳ್ಳಿ ಇತ್ಯಾದಿ ಅರ್ಥಗಳು ತಮಿಳು ಕೋಶಗಳಲ್ಲಿವೆ. (ಮಲಯಾಳ ಭಾಷೆಯ 'ಚೇರಿ'ಗೂ ತಮಿಳಿನ ಚೇರಿಯಂತೆ ಹಳ್ಳಿ ಎಂಬರ್ಥವಿದ್ದಂತೆ ತೋರುತ್ತದೆ. ಉದಾ: ತಲಚೇರಿ, ಮಟ್ಟಂಚೇರಿ.) ಹಾಗಾದರೆ ಪಾಂಡಿಚೇರಿ ಎಂಬ ಶಬ್ದಕ್ಕೆ ಅರ್ಥವೇನು? ಪಾಂಡಿ ಎಂದರೆ ನೌಕೆ, 'ನೌಕೆಯ ಅಥವಾ ನೌಕೆಗಳ ಹಳ್ಳಿ' ಎಂಬ ಮಾತಿಗೆ ಔಚಿತ್ಯವೆಲ್ಲಿದೆ? ಅದು ಅರ್ಥಹೀನವಲ್ಲವೆ? ಎಂಬ ಆಕ್ಷೇಪ ಹುಟ್ಟಬಹುದು. ಆದರೆ ಈ ಆಕ್ಷೇಪದಲ್ಲಿ ಹುರುಳಿಲ್ಲ. ಎಲ್ಲಾ ಭಾಷೆಗಳಲ್ಲಿಯೂ ಇಂತಹ ಪ್ರಯೋಗಗಳಿವೆ. ಉದಾ: ಮಂಗಳೂರಿನಲ್ಲಿ ಪ್ರಸಿದ್ಧವಾದ 'ಅವಲಕ್ಕಿಕೇರಿ'. ಕೇರಿ ಎಂದರೆ ಕನ್ನಡದಲ್ಲಿ 'ಮನೆಗಳ ಸಾಲು ಗಳಿರುವ ಬೀದಿ' ಎಂದರ್ಥ. 'ಅವಲಕ್ಕಿಕೇರಿ' ಎಂದರೆ 'ಅವಲಕ್ಕಿಗೆ ಸಂಬಂಧಿಸಿದವರ ಕೇರಿ', ಎಂದರೆ ಅದು "ಅವಲಕ್ಕಿ ಕುಟ್ಟುವವರ ಕೇರಿ": ಹಾಗೆಯೇ ಪಾಂಡಿಚೇರಿ ಎಂದರೆ. ಪಾಂಡಿಗೆ ಸಂಬಂಧಿಸಿದವರ ಚೇರಿ, ಎಂದರೆ 'ಪಾಂಡಿಗಳನ್ನು ನಡೆಯಿಸುವವರ ಚೇರಿ' (=ನಾವಿಕರ ಹಳ್ಳಿ) ಎಂಬರ್ಥವು ಸಂಪೂರ್ಣ ಸಮಂಜಸ.

ಈ ಮೇಲಿನ ನಿದರ್ಶನಗಳಿಂದ, ಒಂದಾನೊಂದು ಕಾಲದಲ್ಲಿ ಪಾಂಡಿ ಎಂಬ ಶಬ್ದವು ಹಡಗು ಎಂಬರ್ಥದಲ್ಲಿ ದಕ್ಷಿಣ ಭಾರತದಲ್ಲೆಲ್ಲ ರೂಢವಾಗಿತ್ತೆಂದು ನಂಬಬೇಕಾಗುತ್ತದೆ. ಆದುದರಿಂದ ತಮಿಳು ನಾಡಿನ ಪುರಾತನ ರಾಜ್ಯಗಳಲ್ಲೊಂದರ ಹೆಸರಾಗಿದ್ದ 'ಪಾಂಡ್ಯ' ಎಂಬುದಕ್ಕೂ 'ಪಾಂಡಿ' ಎಂಬ ನೌಕಾರ್ಥದ ಶಬ್ದಕ್ಕೂ ಏನಾದರೂ ಸಂಬಂಧವಿತ್ತೋ ಎಂಬುದನ್ನೀಗ ಪರಾಮರ್ಶಿಸೋಣ.

ಪಾಂಡ್ಯದೇಶವು ಅತಿಪುರಾತನ ಕಾಲದಿಂದಲೂ ಅಖಿಲ ಭಾರತದಲ್ಲಿ ಪ್ರಸಿದ್ಧವಾಗಿತ್ತು. ಸಂಸ್ಕೃತ ಗ್ರಂಥಗಳಲ್ಲಿ ಈ ಶಬ್ದದ ನಿಷ್ಪತ್ತಿಯನ್ನು ಹೀಗೆ ಹೇಳಲಾಗಿದೆ:

> "ಪಾಂಡೋರ್ಜನಪದಶಬ್ದಾತ್ ಕ್ಷತ್ರಿಯಾತ್ ಡ್ಯಣ್ ವಕ್ತವ್ಯಃ" (ವಾರ್ತಿಕ).
> 'ಪಾಂಡೂನಾಂ ಜನಪದಾನಾಂ ರಾಜಾನಃ ಪಾಂಡ್ಯಾಃ' (ಮಲ್ಲಿನಾಥನ ರಘುವಂಶ ವ್ಯಾಖ್ಯಾನ. 4–49.)

ಈ ವಾಕ್ಯಗಳ ತಾತ್ಪರ್ಯ ಹೀಗೆ: 'ಪಾಂಡ್ಯರು ಎಂದರೆ ಪಾಂಡುದೇಶದ ಅಥವಾ ಪಾಂಡುಗಳೆಂಬ ಜನರ ರಾಜರೆಂದರ್ಥ'. ಆದರೆ ಆ ದೇಶವನ್ನು 'ಪಾಂಡುದೇಶ' ಎಂದು ಅಥವಾ ಆ ದೇಶದ ಜನರನ್ನು ಪಾಂಡುಗಳೆಂದು ಬೇರೆಲ್ಲಿಯೂ ಕರೆದುದು ಕಂಡು ಬಂದಿಲ್ಲ. ಅಶೋಕನ ಶಾಸನಗಳಲ್ಲಿ 'ಪಂಡಿಯ' ಮತ್ತು 'ಪಂಡಿಯಾ' ಎಂಬ ಶಬ್ದ ರೂಪಗಳಿರುವಂತೆ ತಿಳಿದು ಬರುತ್ತದೆ. ಆ ಶಬ್ದಗಳಿಗೆ ಆ 'ದೇಶ'ವೆಂಬ ಅರ್ಥವೂ ಆಗಬಹುದು, ಆ 'ದೇಶದವರು' ಎಂಬರ್ಥವೂ ಆಗಬಹುದು. ಏಕೆಂದರೆ, ಸಂಸ್ಕೃತದಲ್ಲಿ ಅತ ಏವ ಪ್ರಾಕೃತಗಳಲ್ಲಿಯೂ, ದೇಶವನ್ನು ಹೆಚ್ಚಾಗಿ ಬಹುವಚನದಲ್ಲಿ ಕರೆಯುವುದು ರೂಢಿ. ಇದು ಆ ದೇಶಕ್ಕೂ ಅಲ್ಲಿಯ ಜನರಿಗೂ ನಿರ್ವಿಶೇಷವಾಗಿ ಅನ್ವಯಿಸುತ್ತದೆ. ಮುಖ್ಯವಾಗಿ ಅಲ್ಲಿಯ ಕ್ಷತ್ರಿಯರಿಗೆ ಎಂದರೆ ಆಳುವವರಿಗೆ ಆ ಹೆಸರು ಸಲ್ಲುತ್ತದೆ. (ಜನಪದವಚನಾಃ ಕ್ಷತ್ರಿಯವಾಚಕಾಃ—ಮಲ್ಲಿನಾಥ. ರಘು. 4–35). ಸಂಸ್ಕೃತ ವೈಯಾಕರಣರು ನಿರೂಪಿಸಿದ ನಿಷ್ಪತ್ತಿಯಿಂದ ಪಾಂಡ್ಯ ಶಬ್ದದ ಮೂಲಾರ್ಥವನ್ನು ತಿಳಿಯಲು ಹೆಚ್ಚೇನೂ ಸಹಾಯ ದೊರೆಯುವುದಿಲ್ಲ. ಏಕೆಂದರೆ, ಪಾಂಡು ಎಂಬ ಶಬ್ದಕ್ಕೆ ಸಂಸ್ಕೃತಕೋಶಗಳಲ್ಲಿರುವ ಯಾವ ಅರ್ಥವನ್ನೂ ಆ ಭೂಭಾಗಕ್ಕೆ ಅಥವಾ ಆ ಜನಕ್ಕೆ ಹೊಂದಿಸಲಾಗುವುದಿಲ್ಲ. ಆದರೆ ಅವರ ನಿರೂಪಣೆಯಿಂದ ಒಂದು ವಿಷಯ ಹೊಳೆಯುತ್ತದೆ. ಅದೇನೆಂದರೆ, ಅವರ ಅಭಿಪ್ರಾಯದಲ್ಲಿ ಪಾಂಡ್ಯ ಎಂಬ ಶಬ್ದವು ಸಾಧಿತ ಶಬ್ದ. ಎಂದರೆ ಅದುವೇ ಮೂಲಶಬ್ದವಲ್ಲ; ಬೇರೊಂದು ನಾಮಶಬ್ದದಿಂದ ಜನಿಸಿದ ಶಬ್ದವದು ಎಂದಾಗಿದೆ.

ಸಂಸ್ಕೃತ ಹಾಗೂ ಕನ್ನಡ ಗ್ರಂಥಗಳಲ್ಲಿ ಮತ್ತು ಶಾಸನಗಳಲ್ಲಿ ಆ ಶಬ್ದವು 'ಪಾಂಡ್ಯ' ಎಂಬ ರೂಪದಲ್ಲಿರುವುದಾದರೂ ತಮಿಳಿನಲ್ಲಿ ಅದರ ರೂಪ 'ಪಾಂಡಿಯ' ಎಂದಾಗಿದೆ. ಒಂದು ವೇಳೆ ಆ ಶಬ್ದವು ಸಂಸ್ಕೃತದ್ದೇ ಆಗಿದ್ದರೂ ತಮಿಳಿನಲ್ಲಿ ಅದನ್ನು ಬರೆಯುವಾಗ ಅದು 'ಪಾಂಡಿಯ' ಎಂದೇ ಆಗಿಬಿಡುತ್ತದೆ. ಏಕೆಂದರೆ ತಮಿಳಿನಲ್ಲಿ 'ಡ್ಯ' ಎಂಬ ಸಂಯೋಗವು ಇಲ್ಲ. (ಅದರಂತೆ ಹುಟ್ಟುಕನ್ನಡದಲ್ಲಿಯೂ 'ಡ್ಯ' ಎಂಬ ಸಂಯುಕ್ತವ್ಯಂಜನವಿಲ್ಲ.) ಆದುದರಿಂದ ಮೂಲತಃ ಆ ಶಬ್ದವು 'ಪಾಂಡ್ಯ'ವೋ 'ಪಾಂಡಿಯ'ವೋ ಎಂಬುದೂ ಒಂದು ಸಮಸ್ಯೆ. ಅಶೋಕನ ಶಾಸನಗಳಲ್ಲಿ ಅದನ್ನು 'ಪಂಡಿಯ' ಎಂದು ಹೆಚ್ಚು ಕಡಮೆ ತಮಿಳಿನ ರೂಪದಂತೆ ಬರೆದಿರುವುದರಿಂದ, 'ಪಾಂಡಿಯ'ವೇ ಪೂರ್ವರೂಪವೆಂದು ತೋರಬಹುದಾದರೂ, ಸಂಸ್ಕೃತದಲ್ಲಿ 'ಪಾಂಡ್ಯ' ಎಂದಿದ್ದರೆ ಪಾಲಿ ಮೊದಲಾದ ಪ್ರಾಕೃತಗಳಲ್ಲಿ ಅದು ಪಂಡಿಯವೋ ಪಾಂಡಿಯವೋ ಆಗದೆ ಉಳಿಯುವುದಿಲ್ಲ. ಆದುದರಿಂದ ಆ ಶಾಸನಗಳ ಆಧಾರವನ್ನು ಮಾತ್ರ ಅವಲಂಬಿಸಿ ಅದು ಮೂಲತಃ 'ಪಾಂಡಿಯ' ಎಂದಿತ್ತೆಂದು ನಿರ್ಧರಿಸುವುದಕ್ಕಾಗುವುದಿಲ್ಲ, ಆದರೆ ಪಾಂಡ್ಯ ಎಂಬ ಶಬ್ದಕ್ಕೆ–ಪ್ರಪಂಚದ ಇನ್ನಾವ ಭಾಷೆಯಲ್ಲಿಯೂ ಈ ವರೆಗೆ ಆಗದಿದ್ದಷ್ಟು ಶಬ್ದಮೂಲಗಳ ಶೋಧನೆ ನಡೆದಿರುವ ಸಂಸ್ಕೃತದಲ್ಲಿ, ಸಾಧು ಎನ್ನಬಹುದಾದ ನಿಷ್ಪತ್ತಿ ದೊರಕುವುದಿಲ್ಲವಾದುದರಿಂದ, ಅದು ಸಂಸ್ಕೃತ ಶಬ್ದವಲ್ಲವೆಂದೇ ತೋರುತ್ತದೆ. ಇದರಿಂದ ಅದು 'ಪಾಂಡಿಯ' ಎಂದೇ ಇರುವ ದೇಶ್ಯಶಬ್ದರೂಪವೆಂದಿಟ್ಟುಕೊಂಡರೆ, ಅದರ ನಿಷ್ಪತ್ತಿಯು ಹೊಲಬೇನಾದರೂ ಆಗುವುದೋ ನೋಡೋಣ.

ಅತಿ ಹಳೆಯ ತಮಿಳು ಗ್ರಂಥವಾದ 'ಶಿಲಪ್ಪದಿಕಾರ'ದಲ್ಲಿ 'ಪಾಂಡಿಯನ್' ಎಂಬ ಶಬ್ದದಿಂದ ಆ ಪ್ರದೇಶದ ರಾಜರನ್ನು ಕರೆದುದು ಹೊರತು, ಆ ಪ್ರದೇಶವನ್ನು 'ಪಾಂಡಿಯಮ್' ಎಂಬ ಹೆಸರಿಂದ ಕರೆದುದು ತೋರುವುದಿಲ್ಲವೆಂದು ಆ ಗ್ರಂಥವನ್ನೋದಿದ ವಿದ್ವಾಂಸರು ಹೇಳುತ್ತಾರೆ. ಆದರೆ ಕಾಲಾಂತರದಲ್ಲಿ 'ಪಾಂಡಿಯಮ್' ಎಂದು ಆ ಪ್ರದೇಶಕ್ಕೆ ಹೆಸರು ಬಂದಿರುವುದು ತಮಿಳುಕೋಶಗಳಿಂದ ತಿಳಿದು ಬರುತ್ತದೆ. ಹಾಗಾದರೆ ಮೂಲತಃ 'ಪಾಂಡಿಯ' ಎಂಬುದು ದೇಶವಾಚಕವಾದ ಹೆಸರಾಗಿರದೆ, ಅದನ್ನಾಳಿದವರ ಹೆಸರಾಗಿದ್ದು, ಮತ್ತೆ ಅವರ ಹೆಸರಿಂದ ಆ ಪ್ರದೇಶಕ್ಕೆ 'ಪಾಂಡಿಯ' ಎಂಬ ಹೆಸರಾಯಿತೆಂದು ಊಹಿಸಬೇಕಾಗುತ್ತದೆ. ಒಂದು ದೇಶಕ್ಕೆ ಇದ್ದ ಹೆಸರಿಂದ ಕಾಲಾಂತರದಲ್ಲಿ ಆ ದೇಶವಾಸಿಗಳ ಹೆಸರೂ, ಒಂದು ಪ್ರದೇಶದಲ್ಲಿ ವಾಸಿಸುತ್ತಿದ್ದ ಅಥವಾ ಆಳುತ್ತಿದ್ದ ಜನರ ಹೆಸರಿಂದ ಕಾಲಾಂತರದಲ್ಲಿ ಆ ದೇಶದ ಹೆಸರೂ ಉಂಟಾಗುವುದು ಲೋಕವಿಶ್ರುತ. ಉದಾ: ಇಂಗ್ಲೆಂಡ್, ಇಸ್ರೇಲ್, ನಾಗಾಲೇಂಡ್ ಇತ್ಯಾದಿಗಳು ಜನತೆಯಿಂದಾಗಿ ದೇಶಕ್ಕೆ ಬಂದ ಹೆಸರುಗಳು: ಗಂಗಮಂಡಲ, ರಾಜಪುತಾನ.

ಮೊಗಲಾಯಿ ಇತ್ಯಾದಿಗಳು ಆಳಿದವರಿಂದ ದೇಶಕ್ಕೆ ಬಂದ ಹೆಸರುಗಳು: ಮರಾಠ, ತುಳುವ. ಪಂಜಾಬಿ ಇತ್ಯಾದಿಗಳು ದೇಶದಿಂದ ಜನತೆಗೆ ಬಂದ ಹೆಸರುಗಳು.

ತಮಿಳಿನಲ್ಲಿ 'ಪಾಂಡಿಯುವ್' ಎಂದೂ ಅಥವಾ ಕೇವಲ 'ಪಾಂಡಿ' ಎಂದೂ ತದ್ದೇಶವಾಚಕವಾಗಿ ಪ್ರಯೋಗಿಸಿದೆಯೆಂದು ಆಧುನಿಕ ತಮಿಳುಕೋಶಗಳಿಂದ ತಿಳಿದು ಬರುತ್ತದೆ. ಶಿಲಪ್ಪದಿಕಾರವಲ್ಲಾದರೆ, ಆ ಪ್ರದೇಶದ ಹೆಸರನ್ನು ಹೇಳುವ ಸಂದರ್ಭಗಳಲ್ಲಿ 'ಪಾಂಡಿನಾಟ್ಟ್' ಅಥವಾ 'ಪಾಂಡಿದೇಯುವ್' (ನಾಟ್ಟ್ = ನಾಡು ದೇಯು = ದೇಶ) ಎಂದೇ ಇರುವುದೆಂದೂ. ಕೇವಲ 'ಪಾಂಡಿ' ಎಂದು ಆ ದೇಶಕ್ಕೆ ಅಲ್ಲಿ ಹೆಸರಿಲ್ಲವೆಂದೂ ತಿಳಿದು ಬರುತ್ತದೆ. ಪಾಂಡಿನಾಟ್ಟ್, ಪಾಂಡಿದೇಯುವ್ ಎಂಬ ಸಮಾಸಪದಗಳು ಭಾಷಾಸೃಷ್ಟಿಯಲ್ಲಿ ಪಾಂಡಿಚೇರಿ ಎಂಬ ಸಮಾಸರೂಪವನ್ನು ಸಂಪೂರ್ಣವಾಗಿ ಹೋಲುವುದರಿಂದ ಇದನ್ನೂ ಅವನ್ನೂ ಒಂದೇ ರೀತಿಯಲ್ಲಿ ವಿಗ್ರಹಿಸಿ ಅರ್ಥ ಮಾಡುವುದು ವಿಹಿತವಾಗಿದೆ. 'ಪಾಂಡಿಚೇರಿ' ಎಂಬ ಶಬ್ದದಲ್ಲಿ 'ಪಾಂಡಿ' ಮತ್ತು 'ಚೇರಿ' ಸಮಾನಾಧಿಕರಣ ಶಬ್ದಗಳಲ್ಲ; ಎಂದರೆ ಅಲ್ಲಿ 'ಪಾಂಡಿ'ಯೇ 'ಚೇರಿ' ಅಲ್ಲ; ಎಂದರೆ ಅದು ಪಾಂಡಿ ಎಂಬ ಚೇರಿ ಅಲ್ಲ. ಅದು ಪಾಂಡಿಗೆ ಸಂಬಂಧಿಸಿದ್ದವರ ಚೇರಿ. ಹಾಗೆಯೇ ಪಾಂಡಿನಾಟ್ಟ್ ಎಂಬಲ್ಲಿಯೂ 'ಪಾಂಡಿ'ಯೇ 'ನಾಟ್ಟ್' ಅಲ್ಲ; ಅದು 'ಪಾಂಡಿಗೆ ಸಂಬಂಧಿಸಿದವರ ನಾಟ್ಟ್' ಎನ್ನಬೇಕಾಗುತ್ತದೆ. ಇದರಿಂದ ಶಿಲಪ್ಪದಿಕಾರದ ಕಾಲದಲ್ಲಿ ಕೇವಲ 'ಪಾಂಡಿ' ಎಂಬ ಶಬ್ದಕ್ಕೆ 'ಪಾಂಡ್ಯದೇಶ' ಎಂಬಷ್ಟು ಅರ್ಥವಿದ್ದಿಲ್ಲವೆಂದು ಸಿದ್ಧವಾಗುತ್ತದೆ. ಆದರೆ ಪಾಂಡಿ ಎಂಬ ಶಬ್ದದ ಮೂಲಾರ್ಥ ಮರೆಯಾದ ಮೇಲೆ 'ಪಾಂಡಿನಾಟ್ಟ್' ಎಂಬುದು ಸಮಾನಾಧಿಕರಣಸಮಾಸವೆಂಬ ಭ್ರಾಂತಿಯನ್ನು ಹುಟ್ಟಿಸಲು ಸಮರ್ಥವಾದುದರಿಂದ, (ಪಾಂಡಿಚೇರಿಯನ್ನು ಇಂದು ಕೆಲವರು Pondy ಎಂದು ಹ್ರಸ್ವೀಕರಿಸಿ ಹೇಳುತ್ತಿರುವ ಹಾಗೆ) ಕಾಲಾಂತರದಲ್ಲಿ 'ಕೇವಲ 'ಪಾಂಡಿ' ಎಂಬುದೇ ದೇಶದ ಹೆಸರಾಗಿ ಬಳಕೆಗೆ ಬಂದಿರಬೇಕು. ಆದರೆ 'ಪಾಂಡಿಯುವ್' ಎಂಬ ಇನ್ನೊಂದು ಶಬ್ದವೂ ಅದೇ ಅರ್ಥದಲ್ಲಿ ರೂಢಿಗ ಬಂದುದನ್ನು ಪರಿಭಾವಿಸಿದರೆ, ಆ ದೇಶದ ಹೆಸರು 'ಪಾಂಡಿ' ಎಂದಿಷ್ಟೇ ಅಲ್ಲವೆಂದೂ ಅದು, 'ಪಾಂಡಿನಾಟ್ಟ್' ಎಂಬುದರ ಹ್ರಸ್ವೀಕರಣವೆಂದೂ ಅಂದಿನ ತಮಿಳರು ತಿಳಿದಿದ್ದರೆಂಬುದು ಸ್ಪಷ್ಟ.

ಈ ಮೇಲಿನ ವಿವೇಚನೆಯಿಂದ ತಿಳಿದು ಬಂದ ವಿಷಯ ಇಷ್ಟು: 'ಪಾಂಡ್ಯ' ಎಂಬುದಾಗಲಿ 'ಪಾಂಡಿಯ' ಎಂಬುದಾಗಲಿ ಆ ಶಬ್ದದ ಮೂಲರೂಪವಲ್ಲ; ಅವು ಸಾಧಿತರೂಪಗಳೆಂಬುದು ಸಂಸ್ಕೃತ ಹಾಗೂ ತಮಿಳು ಗ್ರಂಥಗಳಿಂದ ತಿಳಿದು ಬರುವುದಾದರೂ. ಆ ಮೂಲಶಬ್ದದ ಸಹಜವಾದ ಅರ್ಥವೇನೆಂದು ಆ ಗ್ರಂಥಗಳಿಂದ ಗೊತ್ತಾಗುವುದಿಲ್ಲ; ಆ ಗ್ರಂಥಗಳ ಕಾಲಕ್ಕಿಂತ ಮೊದಲೇ ಆ ಮೂಲಶಬ್ದದ ಅರ್ಥವು ಕಣ್ಮರೆಯಾಗಿದ್ದಿರಬೇಕು; 'ಪಾಂಡ್ಯ'ವಾಗಲಿ 'ಪಾಂಡಿಯ'ವಾಗಲಿ ಮೂಲತಃ ದೇಶವಾಚಕವಾಗಿರದೆ, ಆ ದೇಶವನ್ನಾಳಿದವರ ಹೆಸರಾಗಿತ್ತು: ಅದು ಮತ್ತೆ ಕಾಲಾಂತರದಲ್ಲಿ ಆ ದೇಶದ ಹೆಸರಾಗಿಯೂ ಬಳಕೆಗೆ ಬಂತು.

ನಿರ್ವಿವಾದವಾಗಿ ಪಾಂಡ್ಯರಾಜಕುಲದವರಿಗೆ ತಮಿಳಿನಲ್ಲಿ ಸಲ್ಲುತ್ತಿದ್ದ 'ಪಾಂಡಿಯನ್' ಎಂಬ ಶಬ್ದದ ನಿಜಾರ್ಥವನ್ನು ನಿಸ್ಸಂಶಯವಾಗಿ ನೌಕಾವಾಚಕವೆಂದು ನಾವೀಗ ಕಂಡುಕೊಂಡಿರುವ 'ಪಾಂಡಿ' ಎಂಬ ಶಬ್ದವು ಸುಸ್ಪಷ್ಟವಾಗಿ ತಿಳಿಸಬಲ್ಲುದಾಗಿದೆ. ಪಾಂಡಿ = ನೌಕೆ, ಪಾಂಡಿಯನ್ = ನೌಕೆಯವನು, ಎಂದರೆ 'ನೌಕೆಗೆ ಸಂಬಂಧಿಸಿದವನು' ಎಂಬುದು ಪಾಂಡಿಯನ್ ಎಂಬುದರ ಸರಳವೂ ದ್ರಾವಿಡಭಾಷಾನಿಯಮಸಂಮತವೂ ಆದ ನಿಷ್ಪತ್ತಿ. ಆದರೆ ರಾಜರಿಗೂ ನೌಕೆಗೂ ಏನು ಸಂಬಂಧ? ಚಂದ್ರವಂಶದವರೆಂದು ಖ್ಯಾತರಾಗಿದ್ದ ಪಾಂಡ್ಯರಾಜ ಕುಲದವರಿಗೆ ನಾವಿಕ ಎಂಬರ್ಥದ ಹೆಸರು ಗೌರವಾಸ್ಪದವಾಗಬಲ್ಲುದೇ?—ಎಂಬ ಪ್ರಶ್ನೆಗಳು ಹುಟ್ಟುವುದು ಸ್ವಾಭಾವಿಕ. ಈ ಮುಂದಿನ ವಿಷ್ಯದಿಂದ ಆ ಶಂಕೆಗಳು ಪರಿಹಾರವಾಗುವವೆಂದು ನಂಬುತ್ತೇನೆ.

ಅತಿ ಪುರಾತನಕಾಲದಿಂದಲೂ ನಮ್ಮ ದೇಶದ ಪೂರ್ವತೀರದಲ್ಲಿ ಸಮುದ್ರವ್ಯಾಪಾರವು ವಿಪುಲವಾಗಿ ನಡೆಯುತ್ತಿತ್ತೆಂಬುದು ಇತಿಹಾಸ ಪ್ರಸಿದ್ಧವಾದ ಸಂಗತಿ. ಸಂಸ್ಕೃತ ಹಾಗೂ ತಮಿಳು ಸಾಹಿತ್ಯದಲ್ಲಿ ಇದರ ಉಲ್ಲೇಖವು ಸಾಕಷ್ಟು ಇದೆ. ಈ ಪೂರ್ವತೀರದಿಂದಲೇ ಸಮುದ್ರಮಾರ್ಗವಾಗಿ ಭಾರತೀಯ ಸಂಸ್ಕೃತಿ ಆಗ್ನೇಯಾಸ್ಯದಲ್ಲೆಲ್ಲ ಪಸರಿಸಿದುದಾಗಿದೆ. ಪೂರ್ವತೀರದಲ್ಲಿ ದ್ವೀಪಾಂತರ ವ್ಯಾಪಾರದ ಮುಖ್ಯಕೇಂದ್ರಗಳಾಗಿದ್ದ ಪ್ರದೇಶಗಳೆಂದರೆ ಒಂದು ಕಳಿಂಗ, ಇನ್ನೊಂದು ಪಾಂಡ್ಯ.

ತಮಿಳುನಾಡಿನ ತೀರಪ್ರದೇಶಗಳಲ್ಲಿ ರೋಮನ್ ನಾಣ್ಯಗಳೇ ಮೊದಲಾದ ದ್ವೀಪಾಂತರದ ವಸ್ತುಗಳು ಉತ್ಖನನದಿಂದ ದೊರಕಿರುವುದು ಸರ್ವವಿಶ್ರುತ. ಅನಾದಿಕಾಲದಿಂದಲೂ ಪಾಂಡ್ಯದೇಶದ ಸಮುದ್ರ ತೀರವು ಮುತ್ತುಗಳ ಆಗರವೆಂಬುದೂ ಸುಪ್ರಸಿದ್ಧ. (ಸ್ವಾತಿಯಲ್ಲಿ ಬೀಳುವ ಮಳೆಯಹನಿಗಳಿಂದ ಮುತ್ತು ಹುಟ್ಟುವುದೆಂಬ ಕವಿಸಮಯಕ್ಕೆ ಕಾರಣಭೂತವಾದುದೂ ಈ ಪ್ರದೇಶವೇ. 'ಸ್ವಾತಿ'ಯ ಕಾಲದಲ್ಲಿ ಭಾರತದ ಬೇರಾವ ಕಡೆಯಲ್ಲಿಯೂ ಬಾರದಿರುವಷ್ಟು ಮಳೆ ಈ ಭೂಭಾಗಕ್ಕೆ ಬೀಳುತ್ತದೆ. ಇದರಿಂದಾಗಿಯೇ-ಭಾರತದಲ್ಲಿ ಬೇರೆಡೆ ಎಲ್ಲಿಯೂ ಬೆಳೆಯದೆ-ಇಲ್ಲಿ ಮುತ್ತು ಬೆಳೆಯುವುದೆಂದು ಜನರು ಭಾವಿಸುವಂತಾಯಿತು.) ಬಹಳ ಧೀರರಾದ ಅಂಬಿಗರು ಮಾತ್ರ ಸಮುದ್ರತಳದಿಂದ ಮುತ್ತುಗಳನ್ನು ಮೇಲೆ ತರಬಲ್ಲರು. ಈ ಕಾರಣಗಳಿಂದ, ಪುರಾತನಕಾಲದಲ್ಲಿ ಪಾಂಡ್ಯದೇಶದ ಸಮುದ್ರತೀರವು ಅಂಬಿಗರ, ನೌಕಾಜೀವಿಗಳ ಹಾಗೂ ನೌಕಾಧಿಪತಿಗಳ ನೆಲೆಯಾಗಿದ್ದಿರಲೇಬೇಕೆಂಬುದರಲ್ಲಿ ಸಂದೇಹವಿಲ್ಲ. 'ದೊಡ್ಡದೋಣಿ'ಗೆ ಪಾಂಡಿ ಎಂಬ ಹೆಸರು ಇಂದೂ ಪ್ರಚಲಿತವಾಗಿರುವುದರಿಂದ, 'ಸರಕಿನ ಹಡಗುಗಳು ತಂಗುವ ದೊಡ್ಡ ಬಂದರು' ಎಂಬರ್ಥದಲ್ಲಿ 'ಪಾಂಡ್ಯಾಲ' (=ಪಾಂಡಿಯಾಲ) ಎಂಬ ಶಬ್ದವು ಇಂದೂ ಬಳಕೆಯಲ್ಲಿರುವುದರಿಂದ, 'ಕೋಟಿಯೋ ಪಾಂಡಿಯೋ' ಎಂಬ ಮಾತಿನ ನುಡಿಗಟ್ಟಿನಿಂದ ತಿಳಿದು ಬರುವಂತೆ 'ಪಾಂಡಿ' ಎಂಬುದು 'ಕೋಟಿ'ಗಿಂತ ಸಣ್ಣ ಹಡಗಾಗಿರದೆ ಬಹುಶಃ ಅದಕ್ಕಿಂತಲೂ ದೊಡ್ಡದೇ ಆದ ಹಡಗೆಂದು ತೋರುವುದರಿಂದ, ದೂರದ ತೀರಕ್ಕೆ ಅಥವಾ ದ್ವೀಪಾಂತರಕ್ಕೆ ಸಮುದ್ರ ಮಾರ್ಗವಾಗಿ ಸರಕು ಸಾಗಿಸುವ ನೌಕಾಧಿಪತಿಗೆ 'ಪಾಂಡಿಯನ್' ಎಂಬ ಅನ್ವರ್ಥವಾದ ಹೆಸರಿಂದ ಯಾವ ಅಗೌರವವೂ ಆಗಲಾರದು. ಅಂತಹ 'ಪಾಂಡಿಯನ್' ಬಲ್ಲಿದನು ಪ್ರಬಲನಾಗಿ ಒಂದು ರಾಜ್ಯವನ್ನು ಕಟ್ಟುವುದೂ ಅಸ್ವಾಭಾವಿಕವಲ್ಲ. ಅಂಥವನು ಮೂಲತಃ ಯಾವ ವೃತ್ತಿಯವನಾಗಿದ್ದರೂ ಯಾವ ಜಾತಿಯವನಾಗಿದ್ದರೂ ಅರಸನಾದ ಮೇಲೆ ಕ್ಷತ್ರಿಯನೇ ಆಗುತ್ತಾನೆ. ಇದು ಪುರಾತನಕಾಲದಲ್ಲಿ ರೂಢವಾಗಿದ್ದ ನಮ್ಮ ವರ್ಣವ್ಯವಸ್ಥೆಗೆ ಅನುಗುಣವಾದುದೇ ಸೈ. ನಮ್ಮ ದೇಶದ ಪುರಾತನಗ್ರಂಥಗಳನ್ನು ಕಣ್ಣುತೆರೆದು ಪರಿಶೀಲಿಸಿದರೆ-ಬಣ್ಣವಾಗಲಿ, ಕೆಲವು ವೇಳೆ ಜಾತಿಯಾಗಲಿ ಬ್ರಾಹ್ಮಣ ಕ್ಷತ್ರಿಯಾದಿ 'ವರ್ಣ'ಗಳಿಗೆ ಹೇತುವಾಗಿಲ್ಲವೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ವರ್ಣದಿಂದ ಎಂದರೆ ಮೈಯ ಬಣ್ಣದಿಂದ. ವರ್ಣಗಳು ಎಂದರೆ ಬ್ರಾಹ್ಮಣ ಕ್ಷತ್ರಿಯಾದಿ ಚತುರ್ವರ್ಣಗಳು ಉಂಟಾದುವೆಂಬುದು ಭ್ರಮಜನಿತವಾದ ಒಂದು ಅಭಿಪ್ರಾಯವಾಗಿದೆ. ಮೈಬಣ್ಣದಿಂದ ಚತುರ್ವರ್ಣಗಳು ಉತ್ಪನ್ನವಾದವೆಂದು ಭಾವಿಸುವುದಾದರೆ, ಪುರಾತನ ಕಾಲದಲ್ಲಿ ನಮ್ಮ ದೇಶದಲ್ಲಿ ನಾಲ್ಕು ಬಗೆಯ ಮೈಯ್ ಬಣ್ಣದವರು ಇದ್ದಿರಬೇಕಲ್ಲವೆ? ಹಾಗೆ ಇದ್ದುದಕ್ಕೆ ಏನಾದರೂ ಪ್ರಮಾಣವಿದೆಯೇ? ಪ್ರಮಾಣದ ಲೇಶವೂ ಇಲ್ಲದಿರುವುದು ಮಾತ್ರವಲ್ಲ, ತದ್ವಿರುದ್ಧವಾದ ಪ್ರಮಾಣಗಳು ವಿಪುಲವಾಗಿವೆ. ವರ್ಣ ಎಂಬ ಶಬ್ದದ ಅರ್ಥವಿಚಾರವನ್ನು ಸವಿಸ್ತರವಾಗಿ ಮಾಡುವುದಕ್ಕೆ ಇದು ಸ್ಥಳವಲ್ಲವಾದುದರಿಂದ, ಒಂದೆರಡು ದೃಷ್ಟಾಂತಗಳ ದಿಗ್ದರ್ಶನವನ್ನು ಮಾತ್ರ ಇಲ್ಲಿ ಮಾಡುತ್ತೇನೆ. ಕ್ಷತ್ರಿಯಚೂಡಾಮಣಿಯಾದ ಶ್ರೀರಾಮನ ಮೈಬಣ್ಣ (ದೇಹಚ್ಛಾಯೆ) ಕರಿದಾಗಿತ್ತೆಂದು ರಾಮಾಯಣದಲ್ಲಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ಬ್ರಾಹ್ಮಣಮಯೂರವರ್ಮನೂ ಶೂದ್ರಚಂದ್ರಗುಪ್ತನೂ ರಾಜರಾದ ಮೇಲೆ ಕ್ಷತ್ರಿಯರೇ ಆದರು. ಶ್ರೀಕೃಷ್ಣನಂತೂ ಬಲು ಕರಿಯನೇ. ಕುಲೀನಕ್ಷತ್ರಿಯಾಣಿಯಾಗಿದ್ದ ದ್ರೌಪದಿ ಕರಿಯಳಾಗಿದ್ದಳು! ಕಾಳಿದಾಸನು ರಘುವಂಶಮಹಾಕಾವ್ಯದಲ್ಲಿ ಶ್ರೀರಾಮನನ್ನು ಮಾತ್ರವಲ್ಲ, ಅವನ ಮಗ ಕುಶನನ್ನೂ ಕರಿಯನೆಂದಿದ್ದಾನೆ. ಆ ಕಾವ್ಯದಲ್ಲಿ ಪಾಂಡ್ಯರಾಜನ ವರ್ಣನೆಯೂ ಬಂದಿದೆ. ಪಾಂಡ್ಯರಾಜನನ್ನು 'ಇಂದೀವರಶ್ಯಾಮ'ನೆಂದೂ 'ದೇವಸರೂಪ' (ದೇವತೆಗಳಿಗೆ ಸಮಾನವಾದ ರೂಪವುಳ್ಳವ)ನೆಂದೂ 'ಮಹಾಕುಲೀನ'ನೆಂದೂ ಯಜ್ಞಗಳನ್ನು ಆಚರಿಸಿದವನೆಂದೂ ಅಲ್ಲಿ ವರ್ಣಿಸಲಾಗಿದೆ. ಇರಲಿ. ಪ್ರಕೃತಕ್ಕೆ ಬರೋಣ. ಪಾಂಡ್ಯರಾಜರ ಧ್ವಜವು 'ಮೀನು'. ಇದು ಬಹಳ ಅರ್ಥದ್ಯೋತಕವಾಗಿದೆ. ಅವರ ರಾಜ್ಯದ ದೈವ 'ಮೀನಾಕ್ಷಿ' ಎಂಬುದೂ ಗಮನೀಯ. ಶಿಲಪ್ಪದಿಕಾರದಲ್ಲಿ ಪಾಂಡ್ಯರನ್ನು 'ಮೀನವರ್' ಎಂದೂ ಕರೆಯಲಾಗಿದೆ. ಒಂದು ವೇಳೆ ಅವರ ಪೂರ್ವಜರು ಬೆಸ್ತರೇ ಆಗಿದ್ದರೋ ಏನೋ! (ನಾವಿಕ ವೃತ್ತಿಯ ಮೂಲವು ಪ್ರಾಯಃ ಮೀನುಗಾರಿಕೆ ಎಂದೇ ಹೇಳಬಹುದೇನೋ.) ಅವರ ಬೆಸ್ತರ ಕುಲದವರಲ್ಲದಿದ್ದರೂ ಅವರಿಗೂ, ಪಾಂಡಿ ಎಂಬರೆ ನೌಕೆಗೂ, ಮತ್ತು ಸಮುದ್ರಕ್ಕೂ ಇದ್ದ ಅನ್ಯೋನ್ಯ

ಸಂಬಂಧವನ್ನು ಅವರ ಧ್ವಜವೂ ಅವರ ದೈವವೂ ಅವರ ಹೆಸರೂ ಸಾರಿ ಹೇಳುತ್ತವೆ. ಇತಿಹಾಸಕಾಲದ ನಮ್ಮ ದೇಶದ ಕ್ಷತ್ರಿಯರೆಲ್ಲರು ಎಂದರೆ ಅರಸರೆಲ್ಲರು, ತಾವು ಒಂದೋ ಸೂರ್ಯವಂಶದವರು ಇಲ್ಲವೆ ಚಂದ್ರವಂಶದವರು ಎಂದು ಹೊಗಳಿಸಿಕೊಳ್ಳುತ್ತಿದ್ದುದು ಸುವಿದಿತ. ಮೈಸೂರೊಡೆಯರೂ ಯದುವಂಶದವರು, ಅರ್ಥಾತ್ ಚಂದ್ರವಂಶದವರೇ. ಶಿವಾಜಿ ಮಹಾರಾಜನು ಸೂರ್ಯವಂಶೀಯನೆಂದೇ ಪಟ್ಟಾಭಿಷಿಕ್ತನಾದನು. ನಮ್ಮ ತುಳುನಾಡಿನ ಭೈರರಸರೂ ಪುಂಜಳಿಕೆ (ಪುಂಜಾಲಕಟ್ಟೆ?)ಯ ಅರಸರೂ ಚಂದ್ರವಂಶದವರೇ ಆಗಿದ್ದರು. (ತುಳುನಾಡು) ಅತಿ ಪುರಾತನ ಕಾಲದಿಂದಲೂ ಹೀಗೆಯೇ ನಡೆದು ಬಂದಿದೆ. ಚಂದ್ರವಂಶದ ಶಂತನುವಿನ ರಕ್ತಸಂಬಂಧವುಳ್ಳವರಾಗಿರದೆ, ಮತ್ಸ್ಯಗಂಧಿಯ ಸಂತತಿಯವರೇ ಆದರೂ ಕೌರವಪಾಂಡವರು ಶುದ್ಧ ಚಂದ್ರವಂಶೀಯರಾಗಿಯೇ ಉಳಿದರು! ಇದರಂತೆ 'ಪಾಂಡಿಯನ್' ಕೂಡ ಚಂದ್ರವಂಶೀಯನೆನಿಸಿ ಪಟ್ಟಾಭಿಷಿಕ್ತನಾಗಿರಬಹುದು. ಇದರಲ್ಲಿ ಯಾವ ಅಪೂರ್ವತೆಯೂ ಇಲ್ಲ. ವೃತ್ತಿಯ ಕಾರಣದಿಂದ ಉಂಟಾದ ನಮ್ಮ ಪುರಾತನ ವರ್ಣವ್ಯವಸ್ಥೆಗೆ ಇದರಿಂದಾಗಿ ಯಾವ ಕಳಂಕವೂ ಬರುವಂತಿರಲಿಲ್ಲ. ವರ್ಣ–ಜಾತಿಗಳು ಪುರಾತನ ಕಾಲದಲ್ಲಿ ಅಷ್ಟೊಂದು ಘನೀಭೂತವಾಗಿದ್ದಂತೆ ತೋರುವುದಿಲ್ಲ. ಅವುಗಳ ಕಟ್ಟುನಿಟ್ಟು ಬಿಗಿಯಾಗಿ ಜಿಡ್ಡಲಾದಂತಾದುದು ಮತ್ತೆ. ಕ್ಷತ್ರಿಯರ ಮಟ್ಟಿಗೆ ಹೇಳುವುದಾದರೆ, ಈಗ ಕೆಲವೇ ಶತಮಾನಗಳ ಹಿಂದಿನ ವರೆಗೂ, ಕ್ಷಾತ್ರ ವೃತ್ತಿಯವರೆಲ್ಲ ಕ್ಷತ್ರಿಯವರ್ಣದವರೆನಿಸಿಕೊಳ್ಳುತ್ತಿದ್ದರೆಂದು ಹೇಳಬಹುದು. 16ನೆಯ ಶತಮಾನದಲ್ಲಿ ಕ್ಷಾತ್ರವೃತ್ತಿಯನ್ನವಲಂಬಿಸಿದ್ದ ಬೇಡರು (ಬೇಡ=ಬಿಲ್ಲವ: ತುಳುವಿನಲ್ಲಿ–'ಬಿರುವೆ', ಬಿರು=ಬಿಲ್ಲು. ವ್ಯಾಧ=ಬೈದೆ. ಬಿರುವೆ, ಬೈದ್ಯ ಎಂಬ ಶಬ್ದಗಳ ಕೊನೆಯ ಎಕಾರವು ಪ್ರಥಮಾ ವಿಭಕ್ತಿ.) ವಿಜಯನಗರದ ರಾಮರಾಜನ ಸಮ್ಮತಿಯಿಂದ ಕ್ಷತ್ರಿಯರೆನಿಸಿಕೊಂಡರೆಂದು ಹಳೆಮೈಸೂರಿನ ಚರಿತ್ರೆಯ ಪತ್ರಪುಸ್ತಕದಲ್ಲಿ ಬರೆದ ನೆನಪಿದೆ. ದೊಂಬ ಹೆಗ್ಗಡೆಯೂ ಅರಸನಾದ ಮೇಲೆ ಕ್ಷತ್ರಿಯನೇ ಆದನು. ಆ ವಂಶದವರು ಅಳಿಯಕಟ್ಟನ್ನೇ ಅನುಸರಿಸುತ್ತಿರುವವರಾದರೂ ಕ್ಷತ್ರಿಯೋಚಿತವಾದ ಉಪನಯನಾದಿ ಸಂಸ್ಕಾರಗಳು ಅವರಿಗೆ ಇಂದೂ ನಡೆಯುತ್ತಿವೆ. ಇಷ್ಟೆಲ್ಲ ಪರಿಭಾವಿಸಿದರೆ, ನೌಕಾಧಿಪತಿಗಳಾಗಿದ್ದ 'ಪಾಂಡಿಯ'ರು ಎಂದರೆ ಪಾಂಡ್ಯರು (ಶೀಘ್ರೋಚ್ಚಾರದಲ್ಲಿ 'ಪಾಂಡಿಯ' ಎಂಬುದು 'ಪಾಂಡ್ಯ'ವೆಂದಾಗುತ್ತದೆ.) ಪುರಾತನ ಕಾಲದಲ್ಲಿ ದಕ್ಷಿಣಭಾರತದಲ್ಲೊಂದು ಪ್ರಬಲವಾದ ರಾಜ್ಯವನ್ನು ಕಟ್ಟಿ, ಚಂದ್ರವಂಶದ ಕ್ಷತ್ರಿಯರೆಂದು ಗೌರವಿಸಲ್ಪಟ್ಟುದರಲ್ಲಿ ಆಶ್ಚರ್ಯವಾಗಲಿ ಅನೌಚಿತ್ಯವಾಗಲಿ ಕಂಡುಬರಲಾರದು.

ತಮಿಳುನಾಡಿನ ಒಂದು ಪ್ರದೇಶದ ಅರಸರಿಗೆ ಮಾತ್ರ 'ಪಾಂಡ್ಯ' ಎಂಬ ಹೆಸರಿದ್ದುದಲ್ಲ. ನಮ್ಮ ಜಿಲ್ಲೆಯಲ್ಲಿ ಆಳಿದವರಲ್ಲಿ ಅತಿ ಪುರಾತನರಾದ 'ಆಲುಪ' ರಾಜರಿಗೂ ಕಾರ್ಕಳದಲ್ಲಾಳಿದ ಭೈರರಸರಿಗೂ ಪುಂಜಳಿಕೆಯ ಅರಸರಿಗೂ 'ಪಾಂಡ್ಯ' ಎಂಬ ಹೆಸರಿದ್ದುದು ಶಾಸನಾದಿಗಳಿಂದ ತಿಳಿಯುತ್ತದೆ. ಅಲ್ಲದೆ ತುಳುನಾಡಿನಲ್ಲಿ ಇಂದಿಗೂ ಕೆಲವರಿಗೆ ಈ ಉಪನಾಮವಿದೆ. 'ಅಳಿಯ ಕಟ್ಟು' ಎಂಬ ಹೆಸರಿನಿಂದ ರೂಢವಾಗಿರುವ ಸಂತತಿಪರಂಪರೆಯ ಗಣನೆಗೆ ಮೂಲಕರ್ತನೆಂದು ನಂಬಲಾಗಿರುವ ಭೂತಾಳ ಪಾಂಡ್ಯನ ಹೆಸರಂತೂ ಸರ್ವವಿದಿತ. ಈ ವರೆಗೆ ಆ ವಿಚಾರ ಮಾಡಿದ ಮಹನೀಯರೆಲ್ಲರೂ ಭೂತಾಳಪಾಂಡ್ಯನಿಗೆ ಮಾತ್ರವಲ್ಲ, ಪಾಂಡ್ಯ ಎಂಬ ಹೆಸರುಳ್ಳ ತುಳುನಾಡಿನ ರಾಜರಿಗೆಲ್ಲ ತಮಿಳುನಾಡಿನ ಪಾಂಡ್ಯರಾಜರ ಸಂಬಂಧವನ್ನು ಸಂಭಾವಿಸಿದ್ದಾರೆ. ದಿ. ಗೋವಿಂದ ಪೈಗಳು–ತಮಿಳುನಾಡಿನ ಪಾಂಡ್ಯರಾಜರಿಗೂ ತುಳುನಾಡಿನ ರಾಜರಿಗೂ ಶರೀರಸಂಬಂಧವಿದ್ದಿರಬಹುದು; ಅಥವಾ ತುಳುನಾಡಿನ ರಾಜರು ತಮಿಳುನಾಡಿನ ಪಾಂಡ್ಯಚಕ್ರವರ್ತಿಗಳ ಸಾಮಂತರಾಗಿದ್ದಿರಬಹುದು; ಆದುದರಿಂದ ಅಧಿರಾಜರ ಗೌರವಾರ್ಥವಾಗಿ ಅವರ ಹೆಸರನ್ನೇ ತಮಗಿಟ್ಟುಕೊಂಡಿರಬಹುದು ಎಂಬಿತ್ಯಾದಿ ಊಹೆಗಳನ್ನು ಮಾಡಿದ್ದಾರೆ. (ತುಳುನಾಡು ನೋಡಿರಿ) ಆದರೆ ಅವರೊಳಗೆ ಶರೀರ ಸಂಬಂಧವಿದ್ದುದಕ್ಕೆ ಯಾವೊಂದು ಸಾಕ್ಷ್ಯವೂ ಇಲ್ಲ. ತುಳುರಾಜರು ಎಂದಾದರೂ ತಮಿಳುಪಾಂಡ್ಯರ ಸಾಮಂತರಾಗಿದ್ದರೆಂಬುದಕ್ಕೂ ಆಧಾರವಿಲ್ಲ. ಎಂಟನೆಯ ಶತಮಾನದಲ್ಲಿ 'ಮಧುರಕರುನಾಟಕನ್' ಎಂಬ ಬಿರುದಿದ್ದ 'ಜಟಿಲವರ್ಮನ್' ಎಂಬ ಪಾಂಡ್ಯರಾಜನು ಬಂದು 'ಮಂಗಲಪುರ'ವೆಂಬ ಮಹಾನಗರದಲ್ಲಿ ಬಹುಶಃ ಆಲುಪರನ್ನು ಚಾಲುಕ್ಯರನ್ನು ಸೋಲಿಸಿದನೆಂದು ಒಂದು ತಾಮ್ರಶಾಸನದಲ್ಲಿದೆಯೆಂದು ಅವರು ಹೇಳುತ್ತಾರೆ. ಆ ಮಂಗಲಪುರವೆಂಬುದು

ಮಂಗಳೂರೇ ಆಗಿರಬೇಕೆಂದೂ ಅವರ ಹೇಳಿಕೆ. ಅವರೆ ಜಟಿಯ್ಯನ್ ಎಂಬ ಪಾಂಡ್ಯರಾಜನಿಗೆ ತುಳುನಾಡು ಅಧೀನವಾಯಿತೋ, ಒಂದು ವೇಳೆ ಅಧೀನವಾಗಿದ್ದರೂ ಎಷ್ಟುಕಾಲ ಈ ನಾಡು ಆ ಪಾಂಡ್ಯರಾಜರ ಅಧೀನತೆಯಲ್ಲಿತ್ತು ಎಂಬುದಕ್ಕೆ ಯಾವ ಆಧಾರವೂ ಇಲ್ಲ. ಕ್ರಿಸ್ತಶಕ ಎರಡನೆಯ ಶತಮಾನದಲ್ಲಿ ತುಳುನಾಡು ಶಾತವಾಹನಚಕ್ರವರ್ತಿಗಳ ಆಧಿಪತ್ಯದಲ್ಲಿದ್ದುದಕ್ಕೆ ಆಧಾರವಿದೆ. ಶಾತವಾಹನರ ಅನಂತರ ಈ ನಾಡಿಗೆ ಕದಂಬರೂ ಮತ್ತೆ ಬಾದಾಮಿಯ ಚಾಲುಕ್ಯರೂ ಅಧಿರಾಜರಾಗಿದ್ದರು. ಅವರ ಕಾಲದಲ್ಲಿ ತುಳುನಾಡಿನಲ್ಲಿ ಆಳುತ್ತಿದ್ದವರು 'ಆಳುಪ' ಅಥವಾ 'ಆಳುವ' ರಾಜರು. (ಏಳನೆಯ ಶತಮಾನದ ಚಾಲುಕ್ಯರ ಒಂದು ಶಾಸನದಲ್ಲಿ "ಶ್ರೀಮದಾಳುವರಾಜವಿಜ್ಞಾಪನಯಾ" ಎಂಬಿತ್ಯಾದಿ ವಾಕ್ಯ ಇದೆ. "ಕನ್ನಡ ಲಿಪಿಯ ಉಗಮ ಮತ್ತು ವಿಕಾಸ"ವೆಂಬ ಪುಸ್ತಕದಲ್ಲಿ ಈ ತಾಮ್ರಶಾಸನದ ಚಿತ್ರವೂ ಇದೆ.) ಈ ಆಳುವರಾಜರೂ ತಾವು ಚಾಲುಕ್ಯರ ಸಾಮಂತರೆಂದು ತೋರಿಸುವುದಕ್ಕಾಗಿ ಚಾಲುಕ್ಯರ ಹೆಸರನ್ನು ತಮ್ಮ ಹೆಸರಿಗೆ ಅಂಟಿಸಿದ್ದು ಕಂಡು ಬರುವುದಿಲ್ಲ. ಮುಂದೆ ಬಂದ ತುಳುರಾಜರು ವಿಜಯನಗರದ ಅರಸರಿಗೆ ಸಾಮಂತರಾಗಿದ್ದಾಗಲೂ ತಮ್ಮ ಅಧಿರಾಜರ ಬಿರುದುಗಳನ್ನಾಗಲಿ ಹೆಸರನ್ನಾಗಲಿ ತಮಗಿಟ್ಟುಕೊಂಡಿಲ್ಲ. ಹೀಗಿರುವಾಗ ತಮಿಳುನಾಡಿನ ಪಾಂಡ್ಯಚಕ್ರವರ್ತಿಗಳ ಸಾಮಂತರಾಗಿದ್ದಿರಬಹುದಾದ ನಿರಾಧಾರವಾದ ಊಹೆಯನ್ನವಲಂಬಿಸಿ, ಆ ಕಾರಣದಿಂದ ಆಳುಪರು ತುಳುರಾಜರು ತಮಗೂ ಪಾಂಡ್ಯ ಎಂಬ ಹೆಸರನ್ನಿಟ್ಟುಕೊಂಡರೆಂದು ಹೇಳುವುದು ಸರ್ವಥಾ ಯುಕ್ತಿಯುಕ್ತವಾಗಲಾರದು. ಒಟ್ಟಿನ ಮೇಲೆ ಹೇಳುವುದಾದರೆ, ತುಳುನಾಡಿನ ಅರಸರಿಗೂ ತಮಿಳುನಾಡಿನ ಪಾಂಡ್ಯರಾಜರಿಗೂ ಸಂಪರ್ಕವಿತ್ತೆಂದು ಹೇಳುವುದಕ್ಕೆ 'ಪಾಂಡ್ಯ' ಎಂಬ ಹೆಸರೊಂದನ್ನು ಬಿಟ್ಟರೆ ಬೇರೆಯಾವ ಆಧಾರವೂ ಕಂಡುಬರುವುದಿಲ್ಲ. ಪಾಂಡಿಯ ಎಂಬ ಶಬ್ದವು ಎಷ್ಟರ ಮಟ್ಟಿಗೆ ತಮಿಳು ಶಬ್ದವೋ ಅಷ್ಟರ ಮಟ್ಟಿಗೆ ಅದು ತುಳು ಶಬ್ದವೂ ಹೌದು. ತಮಿಳಿನಲ್ಲಿ ಅದು 'ಪಾಂಡಿಯನ್' ಎಂದಿದ್ದರೆ ತುಳುವಿನಲ್ಲಿ ಅದು 'ಪಾಂಡಿಯೆ' ಎಂದಾಗುತ್ತದೆ. (ಅರ್ಥ — ಬಿ. ಪ್ರಧಾನಸೇನಾಪತಿ) ಭೂತಾಳ ಪಾಂಡ್ಯನಿಗೆ ಹೆಸರನ್ನು ತುಳುವರು 'ಭೂತಾಳಪಾಂಡಿಯೆ'-ಪಾಂಡ್ಯ ಎಂದೇ ಹೇಳುತ್ತಾರೆ. ತುಳುನಾಡಿನ ಬರವಣಿಗೆಯ ಭಾಷೆಯು ಮೊದಲಿಂದಲೂ ಕನ್ನಡವೇ ಆಗಿದ್ದುದರಿಂದ. ಸಂಸ್ಕೃತಪ್ರಿಯವಾದ ಕನ್ನಡದ ಅದರ ರೂಪವು 'ಪಾಂಡ'ವೆಂದಿರುವುದರಿಂದ, ನಮ್ಮ ಶಾಸನಗಳಲ್ಲೆಲ್ಲ ಆ ಶಬ್ದವು 'ಪಾಂಡ್ಯ' ಎಂಬ ರೂಪವನ್ನೇ ಪಡೆದಿರುತ್ತದೆ. ('ಪಾಂಡಿಯ' ಎಂಬುದು ಲಿಖಿತೋಚ್ಚಾರದಲ್ಲಿ 'ಪಾಂಡ್ಯ' ಎಂಬ ರೂಪವನ್ನು ಎಲ್ಲಾ ದ್ರಾವಿಡ ಭಾಷೆಗಳಲ್ಲಿಯೂ ಪಡೆಯುವುದರಿಂದ, ಹಾಗೆ ಉಚ್ಚರಿಸಲ್ಪಟ್ಟ ರೂಪವೇ ಸಂಸ್ಕೃತದಲ್ಲಿ ಸ್ವೀಕರಿಸಲ್ಪಟ್ಟು ಹಾಗೆಯೇ ಲಿಖಿತವಾಗಿ 'ಪಾಂಡ್ಯ' ಎಂದೇ ರೂಢವಾಗುವಂತಾಯಿತು.)

ಭೂತಾಳ ಪಾಂಡ್ಯನ ಕುರಿತು ಬಿ. ಪೈಗಳ ಊಹೆಗಳು ಹೀಗಿವೆ: ಅವನು ಪಾಂಡ್ಯದೇಶದ ರಾಜಪುತ್ರನಾಗಿದ್ದಿರಬೇಕು; ಕೇರಳದ 'ಭೂತಪ್ಪಾಂಡಿ' ಎಂಬ ಊರಲ್ಲಿ ಅವನು ಮೊದಲು ಇದ್ದಿರಬೇಕು; ಅವನ ತಾಯಿ 'ತುಳುನಾಡಿನ 'ಆಳುಪ' ರಾಜಪುತ್ರಿಯಾಗಿದ್ದಿರಬೇಕು; ಅವನ ಸೋದರಮಾವನಾಗಿದ್ದಿರಬಹುದಾದ ಆಳುಪರಾಜನಿಗೆ 'ಅವನು ಉತ್ತರಾಧಿಕಾರಿಯಾಗಿ ಪಟ್ಟವೇರಿರಬೇಕು; ಅಥವಾ ಆ ಪಾಂಡ್ಯರಾಜಪುತ್ರನು ತುಳುನಾಡನ್ನು ಗೆದ್ದು ಪಟ್ಟವೇರಿರಬೇಕು.—ಈ ಊಹೆಗಳಿಗೆಲ್ಲ ಅವರು ಕೊಡುವ ಆಧಾರವೇನೆಂದರೆ, —'ಭೂತಾಳಪಾಂಡ್ಯ' ಎಂಬುದು ಆ ಹೆಸರಿನ ಪೂರ್ಣರೂಪವಲ್ಲ; ಸವೆದು ಆದ ಸಂಕುಚಿತ ರೂಪ ಅದು; ಅದರ ಪೂರ್ಣರೂಪ 'ಭೂತಾಳುಪಪಾಂಡ್ಯ' (ಭೂತ + ಆಳುಪ + ಪಾಂಡ್ಯ.) ಎಂದು ಇದ್ದಿರಬೇಕು. 'ಭೂತಪ್ಪಾಂಡಿಯನ್ ಎಂಬೊಬ್ಬ ಪಾಂಡ್ಯರಾಜನು ತಿತಿಯನ್ ಎಂಬುವನನ್ನು ಸೋಲಿಸಿ, ಒಲ್ಲೈಯೂರ್ ಎಂಬ ಸ್ಥಳವನ್ನು ಸ್ವಾಧೀನಪಡಿಸಿಕೊಂಡನೆಂದು (ಅಗನಾನೂರು-ಪುರನಾನೂರು) ಹಳೆಯ ತಮಿಳು ಗ್ರಂಥಗಳಲ್ಲಿ ಉಕ್ತವಾಗಿದೆಯೆಂದೂ, ಅವನಿಂದಲೇ ಹೆಸರುಪಡೆದಿರಬಹುದಾದ ಭೂತಪ್ಪಾಂಡಿ ಎಂಬ ಊರು ಅವನ ಹುಟ್ಟೂರೆಂದು ತಮಿಳರ ಐತಿಹ್ಯದಲ್ಲಿದೆಯೆಂದೂ (ತೆಂಕನಾಡು—ಪುಟ 30-31) ಮತ್ತು ತುಳುನಾಡಿನ ಐತಿಹ್ಯದಲ್ಲಿಯೂ ಭೂತಾಳಪಾಂಡ್ಯನು ಪಾಂಡ್ಯದೇಶದಿಂದ ಬಂದವನೆಂದಿದೆ ಎಂದೂ ಅವರು ಹೇಳುತ್ತಾರೆ.

ನಾನು ಬಾಲ್ಯದಲ್ಲಿ ಕೇಳಿದ ಭೂತಾಳ ಪಾಂಡ್ಯನ ಕುರಿತಾದ ಐತಿಹ್ಯ ಹೀಗಿದೆ: ಒಂದಾನೊಂದು ಕಾಲದಲ್ಲಿ ನಮ್ಮ ನಾಡಿನ ಧನಿಕ ವ್ಯಾಪಾರಿಯೊಬ್ಬನು ಹೊಸತೊಂದು ದೊಡ್ಡ ಹಡಗನ್ನು ಕಟ್ಟಿಸಿದನು.

ಅದನ್ನು ನೀರಿಗೆ ಬಿಡುವ ಸಮಯದಲ್ಲಿ, ಹಡಗು ಕಟ್ಟಿದ ಮರದೊಳಗೆ ನೆಲಸಿದ್ದ ಒಂದು ಭೂತವು ನರಬಲಿಯನ್ನು ಬೇಡಿತು. ಇತರರನ್ನು ಬಲಿಕೊಡುವುದಕ್ಕಿಂತ ತನ್ನ ಮಕ್ಕಳಲ್ಲಿ ಒಬ್ಬನನ್ನು ಕೊಡುವುದೇ ಲೇಸೆಂದು ಬಗೆದು ಆ ವರ್ತಕನು ತನ್ನ ದಂಪತಿಯ ಒಪ್ಪಿಗೆಯನ್ನು ಕೇಳಲಾಗಿ, ಅವಳು ನಿರಾಕರಿಸಿದಾಗ ಅವನ ತಂಗಿ ತನ್ನ ಮಗನನ್ನು ಬಲಿಕೊಡುವುದಕ್ಕಾಗಿ ಅಣ್ಣನಿಗೆ ಒಪ್ಪಿಸಿದಳು. ಧೀರನಾದ ಆ ಹುಡುಗನೂ ಬಲಿಗಾಗಿ ಸಿದ್ಧನಾದನು. ಆದರೆ ಬಲಿಕೊಡುವಷ್ಟರಲ್ಲಿ ಭೂತವು ಆ ಹುಡುಗನನ್ನು ಬಲಿತೆಗೆದುಕೊಳ್ಳದೆ ವರವನ್ನು ಕರುಣಿಸಿ ಬಿಟ್ಟುಕೊಟ್ಟಿತು. ತಂಗಿಯ ಪ್ರೀತಿಗೂ ತ್ಯಾಗಕ್ಕೂ ಅಳಿಯನ ಧೈರ್ಯಕ್ಕೂ ಮೆಚ್ಚಿದ ವರ್ತಕನು, ಅಳಿಯನನ್ನೇ ತನ್ನ ಉತ್ತರಾಧಿಕಾರಿಯಾಗಿ ಮಾಡಿದನು. ಆ ಹುಡುಗನು ಭೂತದ ಅನುಗ್ರಹದಿಂದ ಅರಸನಾಗಿ, ಅಳಿಯಕಟ್ಟನ್ನು ಸ್ಥಾಪಿಸಿ, ಭೂತಾಳ ಪಾಂಡ್ಯನೆಂದು ಪ್ರಖ್ಯಾತನಾದನು.–ಈ ಐತಿಹ್ಯದಲ್ಲಿ, ಆ ಹುಡುಗನು ಪಾಂಡ್ಯದೇಶದಿಂದ ಬಂದವನೆಂದೇನೂ ಇಲ್ಲ; ಅವನು ಈ ನಾಡಿನವನೇ.

ದಿವಂಗತ ಪೊಳಲಿ ಶೀನಪ್ಪ ಹೆಗ್ಗಡೆಯವರು ಈ ಶತಮಾನದ ಎರಡನೆಯ ದಶಕದಲ್ಲಿ ಬರೆದು ಪ್ರಕಟಿಸಿದ ಭೂತಾಳ ಪಾಂಡ್ಯರಾಜನ ಅಳಿಯ ಕಟ್ಟಿನ ಕಥೆಯಲ್ಲಿ, ಐತಿಹ್ಯವು ಹೆಚ್ಚು ಕಡಮೆ ನಾನು ಬಾಲ್ಯದಲ್ಲಿ ಕೇಳಿದ ಕಥೆಯಂತೆಯೇ ಇರುವುದಾದರೂ, ಭೂತಾನುಗ್ರಹವಾದುದು ಪಾಂಡ್ಯದೇಶದಲ್ಲೆಂಬಂತೆ ವರ್ಣಿತವಾಗಿ, ಮತ್ತೆ ಯಾವ ಕಾರಣವೂ ಇಲ್ಲದೆ ಥಟ್ಟನೆ ನಮ್ಮ ಬಾರಕೂರಿನ ಕಥೆ ಬೆಳೆಯುತ್ತದೆ! ಆ ಮೇಲೆ ಅವನ ಮಾವ ದೇವಪಾಂಡ್ಯನ ಹಡಗುಗಳು ಸಮುದ್ರಯಾನ ಮಾಡಿ ಬಂದಿಳಿಯುವುದು ಬಾರಕೂರಿನ ಬಳಿಯ ಮಂಗಾರಕಟ್ಟೆ ಬಂದರಕ್ಕೇ. ಇದಲ್ಲದೆ, ಕದಂಬ ಮಯೂರವರ್ಮನು ಅವರ ಕಥೆಯಲ್ಲಿ ಜೈನನು, ಮಾತ್ರವಲ್ಲ, ಅವನ ರಾಜಧಾನಿ ಬಾರಕೂರು! ಹೀಗೆ ನಾನಾ ಅಸಂಗತಗಳು ಅದರಲ್ಲಿ ತುಂಬಿವೆಯಾದರೂ, ಭೂತಾಳಪಾಂಡ್ಯನ ಮಾವನ ಹೆಸರು ದೇವಪಾಂಡ್ಯ; ಅವನ ಗೆಳೆಯನಾದ ಇನ್ನೊಬ್ಬ ಸಮುದ್ರವ್ಯಾಪಾರಿಯ ಹೆಸರು ನಾರಾಯಣಪಾಂಡ್ಯ; ಅವರೆಲ್ಲ ಪಾಂಡ್ಯರೇ ಆದರೂ ರಾಜರಾಗದೆ ಕೇವಲ ಸಮುದ್ರವ್ಯಾಪಾರಿಗಳಾದ ವರ್ತಕರು ಎಂಬ ವಿಷಯಗಳು ಉದ್ಬೋಧಕವಾಗಿವೆ. ದಿ. ಗೋವಿಂದಪೈಗಳು (1947–ತಂಕನಾಡು) ನಿರ್ದೇಶಿಸುವ ತುಳುನಾಡಿನ ಐತಿಹ್ಯವೆಂದರೆ, ದಿ. ಶೀನಪ್ಪಹೆಗ್ಗಡೆಯವರ ಪುಸ್ತಕದಲ್ಲಿ (1915) ನಿರೂಪಿತವಾದ ಕಥೆಯೇ ಏನೋ! ಅದು ಹೇಗೂ ಇರಲಿ, ಭೂತಾಳ ಪಾಂಡ್ಯನ ಕಥೆಯಲ್ಲಿ ಹೀಗೆ ಪಾಂಡ್ಯದೇಶದ ಸಂಬಂಧವು ಕಂಡುಬರುವುದಕ್ಕೆ ಕಾರಣವೇನೆಂದರೆ.–ತಮಿಳುನಾಡಿನ ಒಂದು ರಾಜವಂಶ, ಮತ್ತು ಅವರು ಆಳುತ್ತಿದ್ದ ಪ್ರದೇಶ ಎಂದೆರಡಲ್ಲದೆ ಬೇರಾವ ಅರ್ಥವೂ ಇಲ್ಲದ ಶಬ್ದವೆಂದು ಇಂದಿನವರೆಗೂ ಭಾವಿಸಲ್ಪಟ್ಟಿರುವ 'ಪಾಂಡ್ಯ' ಎಂಬ ಶಬ್ದವು ಭೂತಾಳ ಪಾಂಡ್ಯನ ಹೆಸರಲ್ಲಿ ಸೇರಿಕೊಂಡಿರುವುದಕ್ಕೆ ಔಚಿತ್ಯವನ್ನು ತೋರಿಸುವುದಕ್ಕಾಗಿ ಮಾಡಿದ ಪ್ರಯತ್ನದ ಫಲವೇ ಆಗಿದೆ ಎಂದರೆ ತಪ್ಪಾಗಲಾರದು.

ಹಳೆಯ ತಮಿಳು ಗ್ರಂಥದಲ್ಲಿ 'ಭೂತಪ್ಪಾಂಡಿಯನ್' ಎಂಬ ಹೆಸರೊಂದು ಇದ್ದ ಮಾತ್ರದಿಂದ, 'ಭೂತಪ್ಪಾಂಡಿ' ಎಂಬ ಸ್ಥಳವೊಂದು ದಕ್ಷಿಣಕೇರಳದಲ್ಲಿ–ದಕ್ಷಿಣಕನ್ನಡದಲ್ಲಲ್ಲ,–ಇದ್ದ ಮಾತ್ರದಿಂದ, ತುಳುನಾಡಿನ ಭೂತಾಳಪಾಂಡ್ಯನೇ ಆ ಭೂತಪ್ಪಾಂಡಿಯನ್' ಎಂದು ನಿರ್ಧರಿಸುವುದು ಸರಿಯೆಂದು ನನ್ನ ಅಲ್ಪಮತಿಗೆ ತೋರುವುದಿಲ್ಲ. ನನಗೆ ತೋರುವಂತೆ ಹೇಳುವುದಾದರೆ, ಭೂತಪ್ಪಾಂಡಿಯನ್ ಎಂಬುದು ಒಂದು ನಿಜನಾಮಧೇಯವಂತಿಲ್ಲ. ಈ ಹಿಂದೆ ವಿವರಿಸಿದಂತೆ 'ಪಾಂಡಿಯನ್' ಎಂದರೆ ಮೂಲತಃ ಸರಕು ಸಾಗಿಸುವ ನೌಕೆಯವನು ಎಂದರ್ಥ; ಮತ್ತೆ ಕಾಲಾಂತರದಲ್ಲಿ ಅದು ತಮಿಳುನಾಡಿನ ಒಂದು ಭಾಗದ ರಾಜವಂಶದ ಹೆಸರಾಗಿ ಪರಿಣಮಿಸಿತು. 'ಭೂತ' ಎಂಬ ಶಬ್ದವನ್ನು 'ಅತಿದೊಡ್ಡ, ಭಯಂಕರ' ಅಥವಾ ಅದ್ಭುತಕಾರ್ಯಸಮರ್ಥ' ಇತ್ಯಾದಿ ಅರ್ಥಗಳಲ್ಲಿ ಗುಣನಾಮವಾಗಿ ಪ್ರಯೋಗಿಸುವ ರೂಢಿ ಸರ್ವತ್ರ ಇದೆ. ತುಳುನಾಡಿನಲ್ಲಂತೂ ಇದು ಸರ್ವಸಾಮಾನ್ಯ. ಇದಕ್ಕೆ ಸಮಾನವಾದ ಪ್ರಯೋಗ ಇಂಗ್ಲಿಷಿನಲ್ಲಿಯೂ ಇದೆ: ಹೆಚ್ಚು ಕಡಮೆ ಭೂತ ಎಂಬರ್ಥದ giant ಎಂಬ ಶಬ್ದವನ್ನು ಅಸಾಮಾನ್ಯ ವ್ಯಕ್ತಿಗೆ ಬಳಸುವುದು ಇಂಗ್ಲಿಷರ ರೂಢಿ. ನಮ್ಮ ಗಂಗರಾಜರಲ್ಲೊಬ್ಬನಿಗೆ 'ರಕ್ಕಸಗಂಗ' ಎಂಬ ಹೆಸರು ಪ್ರಸಿದ್ಧವಾಗಿತ್ತು. ಆ ಕಾಲದ 'ರಕ್ಕಸ' ಎಂಬುದು ಬಿರುದಾಗಿಯೂ [illegible]ದಲ್ಲಿ: ಮಗನಿಗೆ 'ರಕ್ಕಸ' ಎಂಬ ಹೆಸರನ್ನು ಯಾವ ತಂದೆಯೂ ಇಡಲಾರ ಅದು ಅವನ ಕರ್ತೃ[illegible]

ಕ್ರಮಕ್ಕಾಗಿ ಬಂದ ಗುಣನಾಮವೇ ಸ್ಪ. ಹೀಗೆಯೇ 'ಭೂತಪ್ಪಾಂಡಿಯನ್' ಎಂಬ ಹೆಸರು ಆ ಪಾಂಡ್ಯ ರಾಜನಿಗೆ, ಅವನ ಆಳಂಗಕ್ಕೋ ಶೌರ್ಯಕ್ಕೋ ಅದ್ಭುತಸಾಮರ್ಥ್ಯಕ್ಕೋ ಬಂದ ಹೆಸರಾಗಿರಬಹುದು. ಅವನು ಟಿಟಿಯನ್ ಎಂಬವನನ್ನು ಗೆದ್ದನೆಂದು ಕೀರ್ತಿಸಲ್ಪಟ್ಟಿರುವುದರಿಂದ ಮಹಾಪರಾಕ್ರಮಶಾಲಿಯೆಂಬುದು ಸ್ಪಷ್ಟ. ಆದರೆ ತುಳುನಾಡಿನಲ್ಲಿ ಖ್ಯಾತನಾದ 'ಭೂತಾಳಪಾಂಡ್ಯ'ನೆಂಬವನು ಅವನೇ ಆಗಿದ್ದಿದ್ದರೆ, ಟಿಟಿಯನ್ನನ್ನು ಪರಾಭವಗೊಳಿಸಿದ ಅವನ ಮಹಾವಿಜಯದ ವೃತ್ತಾಂತವು ಭೂತಾಳ ಪಾಂಡ್ಯನ ಐತಿಹ್ಯದಲ್ಲಿ ಬಿಂಬಿತವಾಗಿಯೇ ಇರಬೇಕಾಗಿತ್ತು. ಹಾಗಿಲ್ಲದಿರುವುದರಿಂದಲೂ 'ಭೂತ' ಎಂಬ ಗುಣನಾಮವು ಯಾರೊಬ್ಬರಿಗೇ ಮೀಸಲಾಗಿರಬೇಕಾಗಿಲ್ಲವಾದುದರಿಂದಲೂ ಅವರಿಬ್ಬರು ಬೇರೆ ಬೇರೆ ವ್ಯಕ್ತಿಗಳೆಂದೇ ತಿಳಿಯಬೇಕಾಗುತ್ತದೆ. ದಿವಂಗತ ಪೈಗಳ ಮತದಂತೆ ಭೂತ ಎಂಬುದು ಒಂದು ವೇಳೆ ನಿಜನಾಮವೇ ಆಗಿದ್ದರೂ, ಆ ಹೆಸರು ಬೇರೊಬ್ಬನಿಗೂ ಏಕೆ ಇರಬಾರದು? ರಾಮ, ಭೀಮ, ಇತ್ಯಾದಿಗಳಂತೆ ಅದೂ ಅನೇಕರಿಗೆ ಇರಬಹುದಾಗುತ್ತದೆ. ದಿ. ಪೈಗಳಿಗೆ ಭೂತಪ್ಪಾಂಡಿಯನೇ ಭೂತಾಳ ಪಾಂಡ್ಯನೆಂಬ ಅಭಿಪ್ರಾಯ ಹುಟ್ಟುವಂತೆ ಮಾಡಿದುದು ಯಾವುದೆಂದರೆ—ನಿಜಾರ್ಥವು ಮರೆಯಾಗಿ ಹೋದ 'ಪಾಂಡ್ಯ' ಎಂಬ ಶಬ್ದಕ್ಕೆ ಇಂದಿನ ವರೆಗೂ ರೂಢವಾಗಿರುವ 'ತಮಿಳುನಾಡಿನ ರಾಜವಂಶ' ಎಂಬ ಸಂಕುಚಿತವಾದ ಅರ್ಥವೇ ಆಗಿದೆ. ಅಲ್ಲವಾದರೆ ಅವರು ಐತಿಹ್ಯಗಳಲ್ಲಿ ಏನೂ ಸಾಮ್ಯವಿಲ್ಲದಿರುವ ಆ ಇಬ್ಬರನ್ನು ಒಂದೇ ವ್ಯಕ್ತಿ ಎಂದು ಸರ್ವಥಾ ಹೇಳುತ್ತಿರಲಿಲ್ಲ.

ಭೂತಾಳಪಾಂಡ್ಯನ ಯಾವ ಐತಿಹ್ಯದಲ್ಲಾಗಲಿ ಇದ್ದೇ ಇರುವಂತೆ, ಅವನಿಗೂ ಭೂತದ ಹಾಗೂ ಇರುವ ಸಂಬಂಧವು ಮುಖ್ಯವಾಗಿ ಲಕ್ಷಿಸತಕ್ಕದಾಗಿದೆ. ಅವನು ಸಮುದ್ರಗಾಮಿ ನೌಕೆಗಳ ಒಡೆಯನೊಬ್ಬನ ಉತ್ತರಾಧಿಕಾರಿ. ಅವನು ಭೂತದ ಅನುಗ್ರಹಕ್ಕೆ ಪಾತ್ರನಾಗಿ ಭೂತಾಳ ಪಾಂಡ್ಯನೆನ್ನಿಸಿಕೊಂಡನೆಂಬುದು ಐತಿಹ್ಯ. ಭೂತಗಳ ರಾಜ್ಯವಾದ ನಮ್ಮ ಜಿಲ್ಲೆಯ ಎಲ್ಲಾ ಭೂತಗಳಿಗೂ ಬೇರೆ ಬೇರೆ ಒಂದೊಂದು ನಿಜನಾಮವಿರುತ್ತದೆ. ಆಯಾ ನಿಜನಾಮಗಳನ್ನೇ ಬಳಸುವುದು ವಾಡಿಕೆ. ಉದಾ: ಮಲ್ಲರಾಯಿ, ಕೊಡಮಣಿತ್ತಾಯಿ, ಪಂಜುರ್ಲಿ ಇತ್ಯಾದಿ. ಗೌರವಾತಿಶಯದಿಂದ ಹೆಸರು ಹೇಳದಿರುವ ಸಂದರ್ಭಗಳಲ್ಲಿ ಕೇವಲವಾಗಿ 'ದೈವ' ಎಂದೋ 'ಧರ್ಮದೈವ' ಎಂದೋ 'ದೈವೊಂಕುಳು' ಅಥವಾ 'ದೈಯೊಂಕುಳು' ಇತ್ಯಾದಿಯಾಗಿಯೋ ಹೇಳುವುದು ತುಳುವರ ಸಂಪ್ರದಾಯ. ಹೀಗಲ್ಲದೆ ಬರೇ 'ಭೂತ' (ತುಳು—ಬೂತೊ) ಎನ್ನುವುದು ಗೌರವವಿಲ್ಲದೆ ಮಾತಾಡುವ ಸಂದರ್ಭಗಳಲ್ಲಿ ಮಾತ್ರ. ಭೂತಾಳ ಪಾಂಡ್ಯನ ಕಥೆಯಲ್ಲಿ ಅವನೊಂದು ಮಹಾಮಹಿಮ, ಭೂತದ ಅನುಗ್ರಹಕ್ಕೆ ಪಾತ್ರನಾಗಿ ಅರಸನಾದನೆಂದು ಹೇಳಲಾಗಿದೆಯಾದರೂ 'ಭೂತಾಳಪಾಂಡ್ಯ' ಎಂಬ ವಾಚಕದಲ್ಲಿ ಆ ಭೂತದ ಹೆಸರೂ ಇಲ್ಲದೆ, 'ದೈವ' ವೆಂದೂ ಅಲ್ಲದೆ, 'ಗೌರವ ರಹಿತವಾದ ಬರಿಯ 'ಭೂತ'ವಿರುವುದು ಸ್ವಲ್ಪ ವಿಚಿತ್ರವಾಗಿ ತೋರುತ್ತದೆ. ಆದುದರಿಂದ ಅಲ್ಲಿ ಕಾಣುವ ಭೂತವೆಂಬ ಶಬ್ದವು ಮೂಲತಃ ದೈವವಾಚಕವಾಗಿದ್ದಿರುವ ಸಂಭವ ಕಡಮೆ. ನಾವಿಕರ ಅಥವಾ ವರ್ತಕರ ಮಗನೊಬ್ಬನು ಒಂದು ರಾಜ್ಯವನ್ನು ಕಟ್ಟಬೇಕಾದರೆ, ಅವನೊಬ್ಬ ಅದ್ಭುತ ಸಾಹಸಿಯಾಗಿರಲೇಬೇಕು. ಆದುದರಿಂದ 'ಅದ್ಭುತ ಶಕ್ತಿಸಂಪನ್ನ' ಅಥವಾ 'ಮಹಾಭಯಂಕರ' ಎಂಬರ್ಥವನ್ನು ಆ ಹೆಸರಿನಲ್ಲಿರುವ 'ಭೂತ' ಎಂಬುದು ಸೂಚಿಸುವುದಾಗಿದ್ದಿರಬಹುದು. ಕಾಲಾಂತರದಲ್ಲಿ ತುಳುವರ ಭೂತಪ್ರಿಯತೆಯಿಂದ ಭೂತಾಳ ಪಾಂಡ್ಯನ ಕಥೆಗೆ ಭೂತದ ಮಹಿಮೆ ಸೇರಿರಲೂಬಹುದು.

'ಭೂತಾಳ ಪಾಂಡ್ಯ' ಎಂಬುದು ಹ್ರಸ್ವೀಕೃತವಾದ ರೂಪವೆಂಬ, ಮತ್ತು ಅದರ ಪೂರ್ಣರೂಪವು 'ಭೂತ + ಆಳುಪ + ಪಾಂಡ್ಯ' ಎಂಬ ದಿ. ಪೈಗಳ ಊಹೆಯಿಂದ ನನ್ನ ಈ ಮೇಲಿನ ಪ್ರತಿಪಾದನೆಗೆ ಏನೂ ಭಂಗವಿಲ್ಲ; ಬದಲಾಗಿ ಅದಕ್ಕೆ ಮತ್ತಷ್ಟು ಪುಷ್ಟಿಯೇ ಲಭಿಸುತ್ತದೆ. ಆಗ ಇದರ ಅರ್ಥವು 'ಅದ್ಭುತ ಅಥವಾ ಭಯಂಕರನಾದ ಆಳುಪ ಪಾಂಡ್ಯ' ಎಂದಾಗುತ್ತದೆ. (ಆಳುಪ ಎಂಬುದು ಮೂಲತಃ ದೇಶವಾಚಕ ಶಬ್ದವೆಂದೂ, 'ತುಳು' ಎಂಬರ್ಥವುಳ್ಳದ್ದೆಂದೂ ನಾನು 'ತುಳು ಶಬ್ದಾರ್ಥ' ಎಂಬ ನನ್ನೊಂದು ಲೇಖನದಲ್ಲಿ ಈ ಮೊದಲೇ ಸಾಧಾರವಾಗಿ ಪ್ರತಿಪಾದಿಸಿದ್ದೇನೆ.) ಆಳುಪ ಪಾಂಡ್ಯ ಎಂದರೆ 'ತುಳು ಪಾಂಡ್ಯ' ಎಂಬರ್ಥ: ಎಂದರೆ ಅವನು ತಮಿಳು ಪಾಂಡ್ಯನಲ್ಲವೆಂದೇ ಹೇಳಿದಂತಾಗುತ್ತದೆ! ಮಥಿತಾರ್ಥ ಹೇಳಬೇಕೆಂದರೆ—ಭೂತಾಳ ಪಾಂಡ್ಯನಿಗಾಗಲಿ 'ಪಾಂಡ್ಯ' ಎಂಬ ಹೆಸರಿನ್ನು ತುಳುನಾಡಿನ ಯಾವ ರಾಜವಂಶ

ದವರಿಗಾಗಲಿ, ತಮಿಳುನಾಡಿನ ಪಾಂಡ್ಯರಾಜರ ಸಂಬಂಧವಿರಲಿಲ್ಲ. ಅವರ ಹಿರಿಯರೂ ಇವರ ಹಿರಿಯರಂತೆಯೇ 'ಪಾಂಡಿಯರು', ಎಂದರೆ ಸಮುದ್ರಗಾಮಿಗಳಾದ ನೌಕೆಗಳ ಒಡೆಯರು. ತಮಿಳುನಾಡಿನ ಸಮುದ್ರತೀರದಂತೆಯೇ ನಮ್ಮ ಜಿಲ್ಲೆಯ ಸಮುದ್ರತೀರವೂ ಅತಿಪುರಾತನ ಕಾಲದಿಂದ ಸಮುದ್ರಸಂಚಾರಿಗಳ ನೆಲೆಯಾಗಿತ್ತು. ಪಿ. ಗೋವಿಂದ ಪೈಗಳು 'ಹರಿವಂಶ'ದಿಂದ (ತೆಂಕನಾಡು, ಪುಟ-4).) ಉದ್ಧರಿಸಿದ ಶ್ಲೋಕ ಹೀಗಿದೆ:

'ತಸ್ಯ ದಾಶಾ ಜಲೇ ಮಗ್ನಾ: ಮುದ್ಗರಾ ನಾಮ ವಿಶ್ರುತಾಃ
ಯೇ ಹರಂತಿ ಸದಾ ಶಂಖಾನ್ ಸಮುದ್ರೋದರಚಾರಿಣಃ'

ಇದರ ತಾತ್ಪರ್ಯ: "ಮುದ್ಗರರೆಂದು ಪ್ರಖ್ಯಾತರಾದ (ಮುದ್ಗರರೆಂದರೆ 'ಮೊಗೇರ'ರೆಂದು ಪಿ. ಪೈಗಳ ಅಭಿಪ್ರಾಯ.) ಅಲ್ಲಿಯ ಬೆಸ್ತರು ನೀರಲ್ಲಿ ಮುಳುಗಿ ಶಂಖಗಳನ್ನು ತರುತ್ತಾರೆ; ಅವರು ಸಮುದ್ರಗರ್ಭದೊಳಗೆ ಸಂಚರಿಸ ಬಲ್ಲವರು". ಇದರಿಂದ, ಪೂರ್ವಕಾಲದಲ್ಲಿ ನಮ್ಮ ತುಳುನಾಡಿನ ತೀರವೂ ಪೂರ್ವಸಮುದ್ರತೀರದಂತೆ ಶಂಖಾದಿ ಬಹುಮೂಲ್ಯ ವಸ್ತುಗಳ ವ್ಯಾಪಾರಸ್ಥಳವಾಗಿತ್ತೆಂದೂ ಇಲ್ಲಿಯ ಅಂಬಿಗರು ಬಹಳ ಸಮರ್ಥರಾಗಿದ್ದರೆಂದೂ ನಮಗೆ ಗೊತ್ತಾಗುತ್ತದೆ. ಸರಕು ಸಾಗಿಸುವ ದೊಡ್ಡ ಹಡಗಿಗೆ ಪುರಾತನಕಾಲದಲ್ಲಿ ರೂಢವಾಗಿದ್ದ 'ಪಾಂಡಿ' ಎಂಬ ಹೆಸರು ಬೇರೆ ಕಡೆಗಳಲ್ಲಿ ಲುಪ್ತವಾಗಿದ್ದರೂ ನಮ್ಮ ಜಿಲ್ಲೆಯ ಕಡಲ ತೀರದಲ್ಲಿ ಇಂದೂ ಉಳಿದಿರುವುದನ್ನು ಪರಿಭಾವಿಸಿದರೆ, ಇಲ್ಲಿಯ ನಾವಿಕವೃತ್ತಿಯ ಪರಂಪರೆಯ ಘನತೆ ವ್ಯಕ್ತವಾಗದಿರದು. ಪುರಾತನಕಾಲದಲ್ಲಿ ತಮಿಳುನಾಡಿನಲ್ಲಿ ಹೇಗೋ ಹಾಗೆ ಇಲ್ಲಿಯೂ ಪಾಂಡಿಯರು ಎಂದರೆ ನೌಕಾಧೀಶರು ಪ್ರಬಲರಾಗಿದ್ದರು. ಹಲವು ತುಳು ರಾಜವಂಶಗಳಿಗಿದ್ದ 'ಪಾಂಡ್ಯ' ಎಂಬ ಕುಲನಾಮವು ಆ ವಂಶದ ಮೂಲಪುರುಷರಿಗೂ ಸಮುದ್ರಕ್ಕೂ ಇದ್ದ ಸಂಬಂಧವನ್ನೇ ಸೂಚಿಸುತ್ತದೆ. ಏಳನೆಯ ಶತಮಾನಕ್ಕಿಂತ ಹಿಂದಣ ಆಳುಪರಾಜರ ಕೆಲವು ಹೆಸರುಗಳೂ (ತೆಂಕನಾಡು.) ಇದಕ್ಕೆ ಸಾಕ್ಷಿ ಎಂಬಂತಿವೆ. ಗುಣಸಾಗರ, ರಣಸಾಗರ, ಪೃಥ್ವೀಸಾಗರ ಇತ್ಯಾದಿಗಳಲ್ಲಿ 'ಸಾಗರ' ಎಂದಿರುವುದರ ಔಚಿತ್ಯವೇನು? 'ಗುಣಸಾಗರ' ಎಂಬುದರಲ್ಲಿ ವೈಚಿತ್ರ್ಯವು ತೋರಲಾರದಾದರೂ, 'ರಣಸಾಗರ' ಎನ್ನುವಾಗ ಸ್ವಲ್ಪ ವೈಚಿತ್ರ್ಯ ತೋರುತ್ತದೆ. 'ಪೃಥೀಸಾಗರ' ಎಂಬ ಹೆಸರು ಅರ್ಥವೇ ಹೊಳೆಯದಷ್ಟು ವಿಚಿತ್ರವಾಗಿ ಕಾಣುತ್ತದೆ. ಆದರೆ ಅವರಿಗೂ ಸಮುದ್ರಕ್ಕೂ ಇದ್ದ ಬಾಂಧವ್ಯವನ್ನು 'ಸಾಗರ' ಎಂಬ ಶಬ್ದವು ಸೂಚಿಸುವುದಾಗಿದೆಯೆಂದು ಭಾವಿಸಿದೊಡನೆ ಆ ಎಲ್ಲ ಹೆಸರುಗಳಲ್ಲಿ ಔಚಿತ್ಯವು ಕಂಡುಬರುತ್ತದೆ. ಸಾರಾಂಶವೇನೆಂದರೆ–ತಮಿಳುನಾಡಿನ 'ಪಾಂಡ್ಯ'ರೇ ಬೇರೆ; ತುಳುನಾಡಿನ 'ಪಾಂಡ್ಯ'ರೇ ಬೇರೆ. ತಮಿಳುನಾಡಿನ ಪಾಂಡ್ಯರಿಗೂ, ಪಾಂಡ್ಯ ಎಂಬ ಕುಲನಾಮವಿದ್ದ ತುಳುರಾಜರಿಗೂ ಏನಾದರೂ ಸಂಬಂಧವಿದ್ದುದಕ್ಕೆ ಯಾವ ಆಧಾರವೂ ಇಲ್ಲ. ಇಬ್ಬರ ಹೆಸರುಗಳೂ 'ಪಾಂಡ್ಯ' ಎಂದು ಸಮಾನವಾಗಿರುವುದಕ್ಕೆ ಅವರವರ ಹಿರಿಯರ ವೃತ್ತಿ ಒಂದೇ ಆಗಿದ್ದುದು ಕಾರಣ. ತಮಿಳುನಾಡಿನ 'ಪಾಂಡಿಯರು' ಅಲ್ಲಿ ರಾಜ್ಯಕಟ್ಟಿದರು. ತುಳುನಾಡಿನ 'ಪಾಂಡಿಯರು' ಇಲ್ಲಿ ರಾಜ್ಯ ಕಟ್ಟಿದರು. ತಮಿಳು ಪಾಂಡಿಯರು ವಿಶಾಲವೂ ಸಂಪತ್ಸಮೃದ್ಧವೂ ತುಲನಾತ್ಮಕವಾಗಿ ಅಧಿಕ ಸುಸಂಸ್ಕೃತವೂ ಆದ ಸ್ವತಂತ್ರರಾಜ್ಯಸ್ಥಾಪನೆ ಮಾಡಿ ವೈಭವದಲ್ಲಿ ಆಳುತ್ತಿದ್ದುದರಿಂದ ಅವರ ದೇಶಕ್ಕೆ ಅವರ ಹೆಸರೇ ಬಂತು. ತುಳು ಪಾಂಡಿಯರು ಸಣ್ಣ ಪ್ರದೇಶದ ಒಡೆಯರಾಗಿದ್ದು, ಹೆಚ್ಚಾಗಿ ಸಾಮಂತರೇ ಆಗಿದ್ದರು. 'ಆಳುಪಪಾಂಡ್ಯರು' (ತುಳುಪಾಂಡ್ಯರು) ಒಮ್ಮೊಮ್ಮೆ ಚಕ್ರವರ್ತಿ ಎಂಬ ಬಿರುದನ್ನು ಮೆರೆಯಿಸಿದುದು ಶಾಸನಗಳಲ್ಲಿ ಕಂಡುಬರುತ್ತದೆ. ಪ್ರಾಯಃ ಆ ಕಾಲಭಾಗದಲ್ಲಿ ಅವರು ಸ್ವತಂತ್ರರೇ ಆಗಿದ್ದರೋ ಏನೋ. ಅಧಿರಾಜರು ದುರ್ಬಲರಾದಾಗ ಅಥವಾ ಒಂದು ಅಧಿರಾಜವಂಶವು ನಾಶಹೊಂದಿ ಮತ್ತೊಂದು ಅಧಿರಾಜವಂಶವು ಸುಸ್ಥಿರವಾಗುವ ವರೆಗಿನ ಮಧ್ಯಕಾಲದಲ್ಲಿ, ಸಾಮಂತರರಾಜರು ತಾವು ಸ್ವತಂತ್ರರೆಂದು ಘೋಷಿಸಿಕೊಳ್ಳುವುದು ಅಪೂರ್ವವೇನೂ ಅಲ್ಲ. ಕೆಲವು ವೇಳೆ, ನಮ್ಮ ದೇಶದ ರಾಜವಂಶಗಳ ಬಿರುದಿಗೆ ಸಂಪೂರ್ಣವಾಗಿ ಯಥಾರ್ಥತೆ ಇರುವುದಿಲ್ಲವೆಂಬುದು ನಮ್ಮ ರಾಜವಂಶಗಳ ಬಿರುದಾವಳಿಗಳನ್ನು ಲಕ್ಷಿಸಿ, ಅಂದಿನ ಅವರ ಚರಿತ್ರೆಯನ್ನು ಓದುವವರಿಗೆ ತಿಳಿಯದೆ ಬಾರದಿರದು.

ಎಷ್ಟೋ ಸಲ, ರಾಜ್ಯವು ಸಂಪೂರ್ಣವಾಗಿ ಇತರರ ಅಧೀನವಾಗಿ ಹೋದ ಮೇಲೂ, ಆ ವಂಶೀಯರು ಬಿರುದುಗಳು ಅಚ್ಚಳಿಯದೆ ಇರುವುದುಂಟು! ಇನ್ನು, ನಮ್ಮ ದೇಶದ ಬೇರೆ ಬೇರೆ ರಾಜರ ಬಿರುದುಗಳಲ್ಲಿಯೂ ಹೆಸರುಗಳಲ್ಲಿಯೂ ಸಾಮ್ಯವು ಅಲ್ಲಲ್ಲಿ ಕಂಡುಬರುವುದು ಅಪೂರ್ವವಲ್ಲ. 'ವಿಕ್ರಮಾದಿತ್ಯ' ಎಂಬ ಪರಾಕ್ರಮದ್ಯೋತಕವಾದ ಬಿರುದಿನ ಹೆಸರು ಗುಪ್ತರು, ಚಾಲುಕ್ಯರು ಇತ್ಯಾದಿ ಬೇರೆ ಬೇರೆ ವಂಶಗಳ ರಾಜರಿಗಿರಲಿಲ್ಲವೇ? ಅವರೊಳಗೆ ಯಾವ ಸಂಬಂಧವಿತ್ತು? ಹಾಗೆಯೇ 'ಕುಲಶೇಖರ' ಎಂಬ ಹೆಸರಾಗಲಿ, 'ಪಾಂಡ್ಯಚಕ್ರವರ್ತಿ' ಎಂಬ ಬಿರುದಾಗಲಿ ನಮ್ಮ 'ಆಳುಪಪಾಂಡ್ಯ' ರಾಜರಿಗೆ ಇದ್ದ ಮಾತ್ರದಿಂದ, ಅವರು ಮಧುರೆಪಾಂಡ್ಯರ ಸಂತತಿಯವರಾಗಲಿ ಸಾಮಂತರಾಗಲಿ–ಬೇರೆ ಯಾವ ವಿಧವಾದ ಸಂಬಂಧ–ಉಳ್ಳವರೆಂದೂ ತರ್ಕಿಸಲಾರೆವು. ಆದರೆ ಈ ನಿರಾಧಾರವಾದ ವಾದಗಳಲ್ಲಿ ಹುಟ್ಟಲು ಕಾರಣ ಒಂದೇ,–ಪಾಂಡ್ಯ ಎಂಬ ಶಬ್ದದ ಮೂಲಾರ್ಥವು ಕಣ್ಮರೆಯಾಗಿದ್ದುದು: ಬೇರೇನೂ ಅಲ್ಲ.

ತುಳುವಿನಲ್ಲಿ ವಂಶ ಎಂಬರ್ಥದ 'ಬರಿ' ಎಂಬ ಶಬ್ದವೊಂದಿದೆ. (ಹಳಗನ್ನಡದಲ್ಲಿ ಈ ಶಬ್ದವು 'ಬಳಿ'ಯೆಂಬ ರೂಪದಲ್ಲಿದ್ದು, ವಂಶ ಎಂದು ಅದರ ಅರ್ಥವೂ ಇದೆ) ಬ್ರಾಹ್ಮಣಾದಿಗಳಿಗೆ ಗೋತ್ರ ಇರುವಂತೆ ಅಳಿಯಕಟ್ಟಿನವರೆಲ್ಲರಿಗೂ ಒಂದೊಂದು 'ಬರಿ' ಇದೆ. ಈ 'ಬರಿ'ಯನ್ನು ಅನುಲಕ್ಷಿಸಿಯೇ ಅವರೊಳಗೆ ವಿವಾಹ ಸಂಬಂಧವು ಅನಾದಿಯಿಂದ ಇಂದಿನ ವರೆಗೂ ನಡೆಯುತ್ತ ಬಂದಿದೆ. ಆದರೆ 'ಬರಿ'ಗೆ ತಂದೆಯ ಮೂಲ ಪುರುಷನ ಹೆಸರಿದೆ. ಅಳಿಯ ಕಟ್ಟಿನ ವಂಶಪರಂಪರೆ ಮಾತೃಪರಂಪರೆ. 'ಬರಿ'ಯೂ ಮಾತೃಮೂಲವಾಗಿ ಬಾಲಿಯರ ಮಕ್ಕಳಿಗೆ ಬರುವುದಾಗಿದೆ. ವಂಶಗಾರರೂ ಈ ಕ್ರಮಕ್ಕೆ ಅನುಸಾರವಾಗಿ ಹೇಳುತ್ತಾರೆ. ತಂದೆಯ ಮೂಲವು ಒಂದು ಹೆಸರೇ ಆಗಬೇಕಾಗುತ್ತದೆ. ಆದರೆ ಅನಾದಿ ಕಾಲದ ಈ ಬರಿಗಳ ಹೆಸರುಗಳೆಲ್ಲವೂ ಪುರುಷವಾಚಕವಾಗಿವೆ! ಉದಾ: ಬಂಗರಣ್ಣಾಯ, ಸಾಲಿಯಾನ ಇತ್ಯಾದಿ. ಈ ಅಂಶಗಳನ್ನು ಪರಿಭಾವಿಸುವಾಗ, ಅಳಿಯಕಟ್ಟು ಅನಾದಿ ಪದ್ಧತಿಯಾಗಿರದೆ, ಯಾವುದೋ ಒಂದು ಕಾಲದಿಂದ ಮತ್ತೆ ಹುಟ್ಟಿರಬೇಕೆಂದು ಅನುಮಾನಿಸಬೇಕಾಗುತ್ತದೆ. ಐತಿಹ್ಯವಾದರೋ, ಈ ಮಾತಿಗೆ ಅನ್ವಯಿಸುವಂತೆಯೂ ಮತ್ತೆ ಕಾಲಾಂತರದಲ್ಲಿ ಭೂತಾಳಪಾಂಡ್ಯ ರಾಜನಿಂದ ಸ್ಥಾಪಿತವಾಯಿತೆಂದೂ ಹೇಳುತ್ತದೆ. ಈ ಪದ್ಧತಿ ಕೇವಲ ತುಳುವರದಾಗಿದೆ. ನಮ್ಮ ಜಿಲ್ಲೆಯ ಶುದ್ಧ ಕನ್ನಡ ಪ್ರದೇಶವಾದ ಕುಂದಾಪುರ ತಾಲೂಕಿನ ಹುಟ್ಟುಗನ್ನಡಿಗರಲ್ಲಿ ಕೆಲವು ವರ್ಗದವರಿಂದಲೂ ಅನುಸರಿಸಲ್ಪಡುವ ಕಾರಣದಿಂದಲೂ ಮಾವನ ಸಂಪತ್ತಿಗೆ ಸೋದರಳಿಯನು ಉತ್ತರಾಧಿಕಾರಿಯಾಗುವ ಕಟ್ಟಳೆ ಕನ್ನಡಿಗರಲ್ಲಿ ಬೇರೆಲ್ಲಿಯೂ ಇದ್ದಂತೆ ತೋರುವುದಿಲ್ಲವಾದುದರಿಂದಲೂ, ನಮ್ಮ ಜಿಲ್ಲೆಯ ಅಳಿಯಕಟ್ಟು ತುಳುಜನರ ಅನಾದಿಪದ್ಧತಿಯಾಗಿರದೆ ಮತ್ತೆ ಹುಟ್ಟಿದುದೆಂಬ ಮಾತಿಗೆ ಪುಷ್ಟಿಯೊದಗುತ್ತದೆ. ಆದರೆ ಒಬ್ಬ ರಾಜನ ಶಾಸನಮಾತ್ರದಿಂದ, ಪರಂಪರಾಗತವಾದ ರೀತಿನೀತಿಗಳಲ್ಲಿ ಆಸಕ್ತವಾಗಿದ್ದ ಸಂಪ್ರದಾಯಸಂಗೋಪನಶೀಲವಾದ (Conservation) ತುಳುಜನಸಮಾಜವು ತನ್ನ ಕುಟುಂಬಪರಂಪರೆಯ ಸ್ವರೂಪವನ್ನೂ ಸಂಪತ್ತಿನ ಉತ್ತರಾಧಿಕಾರದ ಪಾತ್ರತೆಯನ್ನೂ ಒಂದೇ ಏಟಿಗೆ ಬದಲಾಯಿಸಿತೆನ್ನುವುದು ಕಲ್ಪನಾತೀತವಾಗಿದೆ. ಹಾಗೆ ಬದಲಾದುದಕ್ಕೆ ಬೇರೆ ಪ್ರಬಲಕಾರಣಗಳಿರಲೇಬೇಕು. ನನ್ನ ಅಲ್ಪಮತಿಗೆ ತೋರುವುದೇನೆಂದರೆ–ಅಂದಿನ ತೀರವಾಸಿಗಳಲ್ಲಿ ನೌಕಾಜೀವಿಗಳು ಬಹುಸಂಖ್ಯಕರಾಗಿದ್ದು, ಅವರೊಳಗೆ ಪುರುಷರು ತಿಂಗಳುಗಟ್ಟಳೆ ಮಾತ್ರವಲ್ಲ, ದ್ವೀಪಾಂತರಗಳಿಗೆ ಹೋಗುವವರು ವರ್ಷಗಟ್ಟಳೆಯೂ ಪ್ರವಾಸದಲ್ಲಿರಬೇಕಾಗಿದ್ದುದರಿಂದ, ಅವರ ದಾಂಪತ್ಯಜೀವನವೂ ಪೈತೃಕಸಂಬಂಧವೂ ಶಿಥಿಲವಾಗುತ್ತಾ ಬಂದು, ವಿವಾಹಿತರಾದ ಹೆಣ್ಣು ಮಕ್ಕಳನ್ನು ಸಂರಕ್ಷಿಸುವ ಭಾರವು ತವರುಮನೆಗೇ ಬಿದ್ದು ಉಂಟಾದ ಕೌಟುಂಬಿಕ ಹಾಗೂ ಸಾಮಾಜಿಕ ಪರಿಸ್ಥಿತಿಯಲ್ಲಿ ಅನಿವಾರ್ಯವಾಗಿ ಬೆಳೆದು ಬರುತ್ತಿದ್ದ ಅದೊಂದು ಉತ್ತರಾಧಿಕಾರ ಪದ್ಧತಿಗೆ, ತಾನೂ ಒಬ್ಬ 'ಪಾಂಡಿಯ' ಎಂದರೆ ನಾವಿಕವರ್ಗದವನೇ ಆಗಿದ್ದ ಭೂತಾಳಪಾಂಡ್ಯರಾಜನು ರಾಜಮಾನ್ಯತೆಯನ್ನು ನೀಡಿದುದಾಗಿರಬೇಕು: ಈ ಕಾರಣದಿಂದ ಅವನು ಅಳಿಯ ಕಟ್ಟಿನ ಸಂಸ್ಥಾಪಕನೆನ್ನಿಸಿರಬೇಕು: ರಾಜಮಾನ್ಯವಾದ ಮೇಲೆ ಈ ಪದ್ಧತಿಯನ್ನು ಉಳಿದವರೂ ಅನುಸರಿಸತೊಡಗಿರಬೇಕು. ಭೂತಾಳಪಾಂಡ್ಯರಾಜನು 'ಬರಿ'ಗಳನ್ನು ನಿಯಮಿಸಗೊಳಿಸಿ, ಜಾತಿಕಟ್ಟಳೆಗಳನ್ನು ವಿಧಿಸಿದನೆಂದೂ ಅಳಿಯಕಟ್ಟಿನ ಐತಿಹ್ಯವು ಹೇಳುತ್ತದೆ.

ಹಾಗಾದರೆ, ಮೊದಲು ಪೈತೃಕವಾಗಿದ್ದುದೆಂದೇ ತೋರುವ ಆ ಹಳೆಯ 'ಬರಿ'ಗಳೆಲ್ಲ ಮಾತೃಕ ಸ್ವರೂಪವನ್ನು ಅಂದಿನಿಂದ ಪಡೆದುದಾಗಿರಬೇಕು. ಇದರಿಂದ. ಭೂತಾಳ ಪಾಂಡ್ಯನು ಅದ್ಭುತ ಸಾಹಸಿಯಾದೊಬ್ಬ ರಾಜನು ಮಾತ್ರವಾಗಿರದೆ ಒಳ್ಳೆಯ ನೀತಿನಿಪುಣನೆಂದೂ, ತನ್ನ ರಾಜ್ಯದ ಸಾಮಾಜಿಕ ಪರಿಸ್ಥಿತಿಯನ್ನು ವ್ಯವಸ್ಥೆಗೆ ತಂದು ಜನತೆಯ ಕ್ಷೇಮಾಭ್ಯುದಯಗಳನ್ನು ಸಾಧಿಸಿದ ಮೇಧಾವಿಯಾದ ಸಮಾಜಸುಧಾರಕನೆಂದೂ ಹೇಳಬೇಕಾಗುತ್ತದೆ. ತುಳುನಾಡಿನಲ್ಲಿ 'ಅಳಿಯಕಟ್ಟು' ಹುಟ್ಟಿದಂತೆಯೇ, ಹೆಚ್ಚುಕಡಮೆ ತುಲ್ಯವಾದ ಕಾರಣಗಳಿಂದ ಕೇರಳದಲ್ಲಿ 'ಮರುಮಕ್ಕತ್ತಾಯ' ಕಟ್ಟಳೆ ಹುಟ್ಟಿರಬಹುದೆಂದು ನನ್ನ ಭಾವನೆ. ಅಳಿಯಕಟ್ಟಾಗಲಿ 'ಮರುಮಕ್ಕತ್ತಾಯ'ವಾಗಲೀ,–ಆದಿಯಲ್ಲಿ ಸಕಲಮಾನವಸಾಮಾನ್ಯವಾಗಿದ್ದುದೆಂದು ಆಧುನಿಕಸಮಾಜವಿಜ್ಞಾನಿಗಳು ನಂಬುವ 'ಮಾತೃಪ್ರಧಾನಕುಟುಂಬಪದ್ಧತಿ'ಯ ಅವಶೇಷವೆಂದು ಹೇಳುವುದು ಯುಕ್ತಾಯುಕ್ತವಾಗಿಲ್ಲವೆಂದು ನನಗೆ ತೋರುತ್ತದೆ. ಏಕೆಂದರೆ ಅಳಿಯಕಟ್ಟಿನಲ್ಲಾಗಲಿ ಮರುಮಕ್ಕತ್ತಾಯದಲ್ಲಾಗಲಿ, ಕುಟುಂಬದ ಯಜಮಾನಿಕೆ ಹೆಣ್ಣಿಗಿರುವುದಿಲ್ಲ. ಕುಟುಂಬದ ಹಿರಿಯ ಪುರುಷನು ಕುಟುಂಬಕ್ಕೆ ಏಕಮಾತ್ರಪ್ರಭು. ಧಾರ್ಮಿಕಕಾರ್ಯಗಳೆಲ್ಲ ಪುರುಷನಿಗೇ ಮೀಸಲು. ಸಮಾಜದ 'ಗುರಿಕಾರಿಕೆ'ಯೂ ಪುರುಷನಿಗೇ. ಸಂಪತ್ತಿನ ಉತ್ತರಾಧಿಕಾರವು ತಾತ್ವಿಕವಾಗಿ ಹೆಣ್ಣಿಂದ ಹೆಣ್ಣಿಗೆ ಹೋಗುವುದಾದರೂ, ಅಧಿಕಾರ ನಡೆಯಿಸುವವನು ಹೆಣ್ಣಿನ ಮಗನೇ ಸೈ; ಮಗಳಲ್ಲ. ದಾಂಪತ್ಯವಿಚ್ಛೇದನಸ್ವಾತಂತ್ರ್ಯ ಮತ್ತು ಇಚ್ಛೆಯಂತೆ ತವರು ಮನೆಯಲ್ಲಿರುವ ಸ್ವಾತಂತ್ರ್ಯ–ಇಷ್ಟನ್ನು ಬಿಟ್ಟರೆ ಪೈತೃಕ ಸಂತಾನಪರಂಪರೆಯ ಇತರ ಹಿಂದೂ ಸಮಾಜದ ಹೆಣ್ಣಿಗಿಂತ ಅಳಿಯಕಟ್ಟಿನ ಹೆಣ್ಣಿಗೆ ಯಾವ ಹೆಚ್ಚಿನ ಸ್ವಾತಂತ್ರ್ಯವಾಗಲಿ ಅಧಿಕಾರವಾಗಲಿ ಪ್ರಾಧಾನ್ಯವಾಗಲಿ ಕಂಡುಬರುವುದಿಲ್ಲ.(ಅಲ್ಲದೆ ಇತರ ಹಿಂದು ಹೆಣ್ಣಿನಂತೆ ಧಾರ್ಮಿಕವಿಧಿಗಳಲ್ಲಿ ಗಂಡನೊಡನೆ ಸಮಭಾಗಿನಿಯಾಗುವ ಅವಕಾಶವೂ ಅವಳಿಗಿಲ್ಲ.) ಆದುದರಿಂದ ಅಳಿಯಕಟ್ಟು, ಹಾಗೆಯೇ ಮರುಮಕ್ಕತ್ತಾಯ ಪದ್ಧತಿಯೂ, ಈ ಸಮುದ್ರ ತೀರದ ಜನರ ಅನಾದಿಪದ್ಧತಿಯಲ್ಲವೆಂದೂ ಸಾಮಾಜಿಕಪರಿಸ್ಥಿತಿವಿಶೇಷದಿಂದ ಕಾಲಾಂತರದಲ್ಲಿ ಉದ್ಭವಿಸಿ ಮತ್ತೆ ಅನಿವಾರ್ಯವಾಗಿ ಮಾನ್ಯತೆಯನ್ನು ಪಡೆದ ಕಟ್ಟಳೆ ಎಂದೂ ಹೇಳಬೇಕಾಗುತ್ತದೆ. ಅದು 'ಅಳಿಯಕಟ್ಟು' ಹೊರತು, ಮಗಳಕಟ್ಟಲ್ಲ! ಇರಲಿ, ಸ್ವಲ್ಪ ವಿಷಯಾಂತರವಾಯಿತೋ ಏನೋ; ಪ್ರಕೃತಕ್ಕೆ ಬರೋಣ.

ಪಾಂಡ್ಯವೆಂಬ ಶಬ್ದಕ್ಕೆ ನಾವೀಗ ಕಂಡುಕೊಂಡ ಅರ್ಥಕ್ಕೆ ಉತ್ತರ ಭಾರತದಿಂದಲೂ ಪುಷ್ಟಿ ದೊರೆಯುವಂತೆ ಕಾಣುತ್ತದೆ. ಗುಜರಾತಿನ ಕರಾವಳಿಯ ಒಂದು ವರ್ಗದ ನಾವಿಕರನ್ನು ಪಾಂಡ್ಯರೆಂದು ಹೆಸರಿಸುತ್ತಾರೆಂದು, ಬೊಂಬಾಯಿಯಲ್ಲಿದ್ದು ಬಂದ ನನ್ನ ಮಿತ್ರರೊಬ್ಬರು ಹೇಳುತ್ತಾರೆ. ಇದು ನಿಜವಾದಪಕ್ಷದಲ್ಲಿ, 'ಪಾಂಡ್ಯ' ಶಬ್ದಕ್ಕೂ ನೌಕೆಗೂ ಉತ್ತರ ಭಾರತದಲ್ಲಿಯೂ ಸಂಬಂಧವಿತ್ತೆಂದು ಹೇಳಬೇಕಾಗುತ್ತದೆ. (ಉತ್ತರಭಾರತದಲ್ಲಿ ಕೆಲವರಿಗೆ 'ಪಾಂಡೇಯ' ಹಾಗೂ ಅದರ ಹ್ರಸ್ವೀಕೃತ ರೂಪವಾದ 'ಪಾಂಡೆ' ಎಂಬ ಉಪನಾಮವಿರುತ್ತದೆ. ಆದರೆ ಈ ಶಬ್ದಕ್ಕೂ 'ಪಾಂಡಿಗೂ ಸಂಬಂಧವಿದ್ದಂತೆ ಕಾಣುವುದಿಲ್ಲ. ಏಕೆಂದರೆ, 'ಪಾಂಡೇಯ' ಎಂಬ ಶಬ್ದರೂಪವನ್ನು ವಿಮರ್ಶಿಸುವಾಗ, ಅದು ಸಂಸ್ಕೃತವೇ ಎಂದೂ, ಯಾವುದೊಂದು ಸಂಸ್ಕೃತಸ್ತ್ರೀಲಿಂಗಶಬ್ದದಿಂದ ಸಾಧಿತವಾದ ರೂಪವೆಂದೂ ತೋರಿಬರುತ್ತದೆ. ಸಂಸ್ಕೃತಕೋಶಗಳಲ್ಲಿ ಜ್ಞಾನ, ವಿದ್ಯೆ ಎಂಬರ್ಥಗಳನ್ನು ಕೊಡುವ 'ಪಂಡಾ' ಎಂಬ ಸ್ತ್ರೀಲಿಂಗ ಶಬ್ದವಿದೆ. ಶಿಲಾ ಎಂಬುದರಿಂದ 'ಶೈಲೇಯ', ರಾಧಾ ಎಂಬುದರಿಂದ 'ರಾಧೇಯ' ಇತ್ಯಾದಿಗಳಂತೆಯೇ 'ಪಂಡಾ' ಎಂಬುದರಿಂದ 'ಪಾಂಡೇಯ' ಎಂಬುದು ಸಿದ್ಧವಾಗುತ್ತದೆ. ಪಂಡಿತ, ಪಾಂಡಿತ್ಯ ಮೊದಲಾದ ಶಬ್ದಗಳೂ 'ಪಂಡಾ' ಎಂಬುದರಿಂದ ಜನಿತವಾದವುಗಳೆಂದು ಸಂಸ್ಕೃತಕೋಶಗಳಲ್ಲಿ ಕಂಡುಬರುತ್ತದೆ. ಆದುದರಿಂದ 'ಪಾಂಡೇಯ' ಎಂಬ ಶಬ್ದಕ್ಕೆ 'ಪಂಡಿತ' ಎಂಬುದೇ ಮೂಲಾರ್ಥವಾಗಿರಬೇಕೆಂದು ಹೇಳಬಹುದು. 'ಪಾಂಡೇಯ' ಎಂಬ ಉಪನಾಮವು ನನಗೆ ತಿಳಿದಿರುವ ಮಟ್ಟಿಗೆ ಬ್ರಾಹ್ಮಣರಿಗೆ ಮೀಸಲಾಗಿರುವುದರಿಂದ, ಅದರ ನಿಷ್ಪತ್ತಿ ಈ ಮೇಲೆ ನಿರೂಪಿಸಿದಂತೆಯೇ ಇರಬೇಕೆನ್ನುವುದಕ್ಕೆ ಸಮರ್ಥನೆ ದೊರೆಯುತ್ತದೆ. ಆ ಕಾರಣ ನಾವು ಹಿಂದೆ ವಿಮರ್ಶಿಸಿದ ಪಾಂಡಿ–ಪಾಂಡಿಯ–ಪಾಂಡ್ಯಗಳಿಗೆ ಈ 'ಪಾಂಡೇಯ' ಎಂಬ ಶಬ್ದವು ಸಂಬಂಧಿಯಲ್ಲವೆಂದು ತಿಳಿಯಬೇಕು.)

ಈ ವರೆಗೆ ನಾವು ಮಾಡಿದ ವಿಚಾರದ ಫಲಿತಾಂಶವನ್ನು ಹೀಗೆ ಸಂಕ್ಷೇಪಿಸಬಹುದು: ಸರಕು ಸಾಗಿಸುವ ನೌಕೆಗೆ ಪುರಾತನಕಾಲದಲ್ಲಿ 'ಪಾಂಡಿ' ಎಂಬ ಹೆಸರು ಭಾರತದ ಕಡಲ ತೀರದ ಪ್ರದೇಶಗಳಲ್ಲಿ ಪ್ರಚಲಿತವಾಗಿತ್ತು. 'ಪಾಂಡಿಯನ್' ಅಥವಾ 'ಪಾಂಡ್ಯ' ಎಂದರೆ ಸರಕು ಸಾಗಿಸುವ ನಾವಿಕ ಅಥವಾ ವರ್ತಕ; ಮತ್ತೆ ಕಾಲಾಂತರದಲ್ಲಿ ಆ ವಂಶಜ. ತಮಿಳುನಾಡಿನ ಪಾಂಡ್ಯರಾಜರ ಮೂಲಪುರುಷರು ನಾವಿಕರು. 'ಭೂತಾಳಪಾಂಡ'ನು ತಮಿಳು ಪಾಂಡ್ಯನಲ್ಲ ತುಳುನಾಡಿನ ಒಬ್ಬ 'ಪಾಂಡ್ಯ'ನು, ಎಂದರೆ ನೌಕಾಧಿಪತಿ.

(ಪಾಂಡಿಚೇರಿ ಎಂಬುದರ ನಿಜಾರ್ಥವನ್ನು ನಾವು ಈ ಮೊದಲೇ ತಿಳಿದೆವಾದರೂ, 'ಪಾಂಡಿ ಬಜಾರ್' ಎಂದರೇನೆಂಬುದನ್ನು ವಿಚಾರಿಸಿಲ್ಲ. 'ಪಾಂಡಿ ಬಜಾರ್' ಎಂಬುದು ಆಧುನಿಕ ಶಬ್ದವೆಂಬುದು ಸ್ಪಷ್ಟ. ಏಕೆಂದರೆ ಅದರೊಳಗಿರುವ 'ಬಜಾರ್' ಹಿಂದುಸ್ತಾನಿ; ಮೂಲತಃ ಅದು ಪಾರಸಿ ಶಬ್ದ. ಆ ಭಾಷೆ ದಕ್ಷಿಣ ಭಾರತಕ್ಕೆ ಬಂದುದು ಕೆಲವೇ ಶತಮಾನಗಳ ಮೊದಲು. 'ಪಾಂಡಿ'ಯದ ಮೂಲಾರ್ಥವು ತಮಿಳುನಾಡಿನಲ್ಲಿ ಕಣ್ಮರೆಯಾಗಿ ಬಹುಶಃ ಎರಡು ಸಹಸ್ರಮಾನಗಳಿಗಿಂತಲೂ ಹೆಚ್ಚು ಕಾಲ ಕಳೆದಿದೆ. ಪಾಂಡಿ ಎಂಬ ಶಬ್ದಕ್ಕೆ ತಮಿಳಿನಲ್ಲಿ ಕಾಲಾನುಕಾಲದಲ್ಲಿ ಹಲವು ಅರ್ಥಗಳು ರೂಢಿಗೆ ಬಂದಿವೆ. ಆಧುನಿಕ ತಮಿಳುಕೋಶಗಳಲ್ಲಿ ಅದಕ್ಕೆ-ಪಾಂಡ್ಯದೇಶ. ಒಂದು ಬಗೆಯ ಬಂಡಿ. ಎತ್ತು ಇತ್ಯಾದಿ ಅರ್ಥಗಳು ಕಾಣುತ್ತವೆ. ಪಾಂಡಿಬಜಾರ್ ಎಂಬುದು ಆಧುನಿಕ ನಗರವಾದ ಮದ್ರಾಸಿನ ಒಂದು ಪೇಟೆಯಾಗಿರುವುದರಿಂದ. 'ಪಾಂಡ್ಯದೇಶದ ವರ್ತಕರ ಪೇಟೆ' ಎಂಬರ್ಥದಲ್ಲಿ ಆ ಹೆಸರು ಉಂಟಾಗಿರಬಹುದೆಂದು ನನಗೆ ತೋರುತ್ತದೆ. ಅತಿ ಪುರಾತನ ಕಾಲದಿಂದಲೂ ಪಾಂಡ್ಯದೇಶವು ವರ್ತಕರನಾಡು. ಇಂದು ಕೂಡ. ವ್ಯಾಪಾರಕ್ಕಾಗಿ ಪರದೇಶಗಳಲ್ಲಿ ನೆಲಸಿರುವ ತಮಿಳರಲ್ಲಿ ಹೆಚ್ಚಿನವರು ಪಾಂಡ್ಯದೇಶದವರು. ಆದುದರಿಂದ 'ಪಾಂಡಿಬಜಾರ್' ಎಂಬುದು ಆ ವರ್ತಕರಿಂದಾಗಿ ಬಂದ ಹೆಸರಾಗಿರಬಹುದು. ಇದು ಹೀಗಿದ್ದರೂ ಇದರ ಮೂಲಶೋಧನೆಯಿಂದ ನಮಗೇನೂ ಇಲ್ಲಿ ಸಾಧಿಸಬೇಕಾದ ಪ್ರಮೇಯವಿಲ್ಲ.)

ಪಾಂಡಿಯನ್ ಹಾಗೂ ಪಾಂಡ್ಯ ಎಂಬ ಶಬ್ದಗಳ ಅಡಿಗಟ್ಟಾದ 'ಪಾಂಡಿ' ಎಂಬ ಶಬ್ದದ ಸ್ವರೂಪವನ್ನು ಲಕ್ಷಿಸಿ ನೋಡುವ ಶಾಬ್ದಿಕರ ಕಣ್ಣಿಗೆ. ಅದೂ ಒಂದು ನಿಷ್ಪನ್ನವೆಂದೇ ತೋರದಿರದು. ಅಲ್ಲದೆ. ಕಲ್ಲು ನೀರು ಮರ ಇತ್ಯಾದಿಗಳಂತೆ ಅದೊಂದು ಪ್ರಕೃತಿಸಿದ್ಧವಾದ ವಸ್ತುವಿನ ಹೆಸರಾಗಿರದೆ. ಮನುಷ್ಯನು ನಿರ್ಮಿಸಿದ ಒಂದು ವಿಶಿಷ್ಟ ಉಪಕರಣದ ಹೆಸರಾಗಿರುವುದರಿಂದ. ಅದೊಂದು ಮೂಲನಾಮವಲ್ಲವೆಂಬುದು ಖಂಡಿತ. ಆದರೆ ಅದರ ನಿಷ್ಪತ್ತಿಯನ್ನು ತಿಳಿಯುವುದಕ್ಕೆ ನಮಗೆ ಸಾಧನಸಂಪತ್ತಿ ಏನೂ ಇಲ್ಲವೆಂಬುದೂ ಸರಿ. ಹೀಗಿದ್ದರೂ ಬೇರೆ ಬೇರೆ ಶಬ್ದಾರ್ಥಸಂತುಲನದಿಂದ ಏನಾದರೂ ಲಭಿಸುವುದೋ ನೋಡೋಣ.

ಪುರಾತನ ಕಾಲದಲ್ಲಿ ಪಾಂಡಿ ಎಂಬುದಕ್ಕೆ ಸರಕು ಸಾಗಿಸುವ ನೌಕೆ ಎಂಬರ್ಥವಿದ್ದು. ಮತ್ತೆ ಸರಕು ಸಾಗಿಸುವ ಬೇರೆ ಬೇರೆ ಸಾಧನಗಳಿಗೂ ಆ ಹೆಸರು ಸಂಕ್ರಮಿಸಿದಂತೆ ತೋರುತ್ತದೆ. ತಮಿಳು ಕೋಶಗಳಲ್ಲಿ 'ಪಾಂಡಿ' ಎಂಬುದಕ್ಕೆ ಒಂದು ಬಗೆಯ 'ಗಾಡಿ' ಎಂದೂ (ಗಾಡಿಯೆಳೆಯುವ ಅಥವಾ ಹೇರಿನ) 'ಎತ್ತು' ಎಂದೂ ಅರ್ಥಗಳಿವೆ. ಹಾಗಾದರೆ ದಕ್ಷಿಣ ಭಾರತದ ಎಲ್ಲಾ ಭಾಷೆಗಳಲ್ಲಿ ಪ್ರಚಾರದಲ್ಲಿರುವ 'ಬಂಡಿ' ಎಂಬ ಶಬ್ದಕ್ಕೂ 'ಪಾಂಡಿ'ಗೂ ಏನಾದರೂ ಸಂಬಂಧವಿರಬಹುದೇ? ಬಂಡಿ ಎಂಬುದರ ಮೂಲವೆಲ್ಲಿ?

ವ್ಯಾಪಾರದ ಸರಕು ಎಂಬರ್ಥದಲ್ಲಿ 'ಭಂಡ' ಎಂಬ ಶಬ್ದವು ಕನ್ನಡದಲ್ಲಿ ರೂಢವಾಗಿದೆ. (ಉದಾ: 'ಚೈತ್ರದೊಳಿರ್ಕುವ ಭಂಡ'ಎಂದರೆ ನೌಕೆಯಲ್ಲಿ ಹಾಕುವ ಸರಕು-ಕಿಟ್ಟೆಲ್.) ಈ ಶಬ್ದವು 'ಭಾಂಡ' ಎಂಬ ಸಂಸ್ಕೃತಶಬ್ದದ ತದ್ಭವವೆಂಬುದು ಸರ್ವಾನುಮತ. 'ಬಂಡಿ' ಎಂಬುದು ಕನ್ನಡದ ಹಳೆಯ ಬರವಣಿಗೆಗಳಲ್ಲಿ ಹೆಚ್ಚಾಗಿ 'ಭಂಡಿ' ಎಂದೇ ಇರುತ್ತದೆ. ಅಲ್ಲದೆ. ಕನ್ನಡನಾಡಿನ ಕೆಲವು ಭಾಗಗಳಲ್ಲಿ ಇಂದು ಕೂಡ ಆ ಶಬ್ದವನ್ನು 'ಭಂಡಿ' ಎಂದೇ ಉಚ್ಚರಿಸುತ್ತಾರೆ. ಇದರಿಂದ. ಭಂಡವನ್ನು ಎಂದರೆ ಸರಕನ್ನು ಸಾಗಿಸುವ ಸಾಧನ ಎಂಬ ಕಾರಣದಿಂದ 'ಭಂಡಿ' ಎಂಬ ಶಬ್ದವು ನಿಷ್ಪನ್ನವಾಗಿ. ಮತ್ತೆ ಅದು ಜನರ ಬಾಯಲ್ಲಿ 'ಬಂಡಿ' ಎಂಬ ರೂಪವನ್ನು ಪಡೆಯಿತೆಂದು ನಿಸ್ಸಂಶಯವಾಗಿ ಹೇಳಬಹುದು. (ಕಿಟ್ಟೆಲ್ ಸಾಹೇಬರು 'ಬಂಡಿ' ಎಂಬ ಶಬ್ದಕ್ಕೆ 'ಚಕ್ರ'ವೆಂಬುದು ಮೂಲಾರ್ಥವೆಂದು ಭಾವಿಸಿದ್ದಾರೆ.

ಆದರೆ ಅದಕ್ಕೆ ಪರ್ಯಾಪ್ತವಾದ ನಿದರ್ಶನಗಳಿಲ್ಲ. ಹಳೆಯ ಕನ್ನಡಸಾಹಿತ್ಯದಲ್ಲಿ ಕಾಣುವ ಪ್ರಯೋಗಗಳೆಲ್ಲ ಅದಕ್ಕೆ 'ಗಾಡಿ' ಎಂಬರ್ಥವೇ ನಿರಪವಾದವಾಗಿ ಕಂಡುಬರುತ್ತದೆ. ನೀರು ಸೇದುವ ರಾಟೆಯನ್ನು ಕನ್ನಡನಾಡಿನ ಯಾವುದೋ ಮೂಲೆಯಲ್ಲಿ ಬಂಡಿಯೆನ್ನುತ್ತಾರಂತೆ. ಇಷ್ಟರಿಂದ ಅದು ಮೂಲತಃ ಚಕ್ರವೆಂಬರ್ಥವಿದ್ದ ಶಬ್ದವೆಂದು ತೀರ್ಮಾನಿಸುವುದು ಅಯುಕ್ತ. ಜನರ ಮಾತಿನಲ್ಲಿ ಎಷ್ಟೋ ವೇಳೆ ಅವಯವ-ಅವಯವಿಗಳ ನಿತ್ಯೋಪಯೋಗದ ಹೆಸರುಗಳೂ ಅದಲು ಬದಲಾಗಿ ರೂಢವಾಗುವುದು ಅಪೂರ್ವವಲ್ಲ. ಉದಾ: 'ಕೊಡಂಕೆ' ಎಂದರೆ ಕನ್ನಡದಲ್ಲಿ 'ಕಿವಿ' ಎಂದರ್ಥವಷ್ಟೆ? ಅದೇ ಶಬ್ದವು 'ಕೊಡಂಗೆ' ಎಂಬ ರೂಪದಲ್ಲಿ ತುಳುವಿನಲ್ಲಿದೆ. ಆದರೆ ಅದರ ಅರ್ಥ ಕಿವಿ ಎಂದಲ್ಲ; ಕಿವಿಗೆ ಹಾಕುವ ಕುಂಡಲ! ಹೀಗೆಯೇ ವಸ್ತುತಃ ಗಾಡಿ = cart ಎಂಬರ್ಥದ 'ಬಂಡಿ'ಗೆ ಕ್ವಚಿತ್ ಚಕ್ರವೆಂಬರ್ಥ ಬಂದಿರಬಹುದು; ಇದರಲ್ಲಿ ಆಶ್ಚರ್ಯವಿಲ್ಲ.)

ಭಂಡ ಎಂಬ ಶಬ್ದದ ಮೂಲರೂಪವಾದ 'ಭಾಂಡ' ಎಂಬ ಶಬ್ದವು 'ವ್ಯಾಪಾರದ ಸರಕು' ಎಂಬರ್ಥದಲ್ಲಿ, ಸಂಸ್ಕೃತ ಸಾಹಿತ್ಯದಲ್ಲಿ ವಿಪುಲವಾಗಿ ಪ್ರಯುಕ್ತವಾಗಿದೆ. ಆ ಶಬ್ದದ ಖಚಿತವಾದ ನಿಷ್ಪತ್ತಿ ದುರ್ಲಭವಾಗಿರುವುದಾದರೂ, ಭಾಂಡ ಹಾಗೂ ಭಂಡ ಎಂಬ ಶಬ್ದಗಳಿಂದ ಸಂಸ್ಕೃತದಲ್ಲಿ ಹಾಗೂ ಕನ್ನಡದಲ್ಲಿ ಬೆಳೆದು ಬಂದ ಭಾಂಡಾಗಾರ–ಭಾಂಡಾರ–ಭಂಡಾರ, ಭಾಂಡಕ, ಭಾಂಡವಲ,–ಭಂಡವಾಳ–ಬಂಡವಾಳ, ಭಾಂಡಾರಿ–ಭಂಡಾರಿ, ಭಂಡಸಾಲೆ–ಬಂಡಸಾಲೆ(ಮಂಡಿ?) ಇತ್ಯಾದಿ ನಾನಾ ಶಬ್ದಗಳಲ್ಲಿ ಅಡಕವಾಗಿರುವ ಬೀಜರೂಪವಾದ ಅರ್ಥವು ಸರಕು, ವ್ಯಾಪಾರದ ಸರಕು, ಸಾಮಾನು ಅಥವಾ ಸೊತ್ತು ಎಂದಾಗಿದೆಯೆಂಬುದು ಅವುಗಳ ಅರ್ಥವಿಚಾರವನ್ನು ಯತ್ಕಿಂಚಿತ್ ಮಾಡಿದರೂ ಗೊತ್ತಾಗದಿರದು.

ಸಂಸ್ಕೃತದಲ್ಲಿ ಭಾಂಡ ಎಂಬ ಶಬ್ದಕ್ಕೆ (ಸಾಮಾನನ್ನು ಅಥವಾ ಸೊತ್ತನ್ನು ತುಂಬಿಸಿಡುವ) ಪಾತ್ರೆ ಎಂಬರ್ಥವೂ ಇದೆ. ಉದಾ: ನೀಲೀಭಾಂಡ, ಸುರಾಭಾಂಡ, ಕ್ಷೀರಭಾಂಡ ಇತ್ಯಾದಿ. ಧಾನ್ಯಾದಿಗಳನ್ನು ಕೂಡಿಸಿಡುವುದಕ್ಕೆ ಮಾನವನಿಗೆ ಆದಿಕಾಲದಲ್ಲಿ ಮುಖ್ಯ ಸಾಧನವಾಗಿದ್ದುದು ಪ್ರಾಯಃ ಮಣ್ಣಿನಿಂದ ಮಾಡಿದ ದೊಡ್ಡ ಪಾತ್ರೆ. ಆದರಿಂದದು 'ಭಾಂಡ' ಎಂಬುದು ಮೊದಲು ಪಾತ್ರೆಯ ಹೆಸರಾಗಿದ್ದು, ಅದರಲ್ಲಿ ಕೂಡಿಡುವ ಕಾರಣ ಸರಕಿಗೆ ಸಂಕ್ರಮಿಸಿತೋ, ಅಥವಾ ಅದು ಮೂಲತಃ ಸರಕು ಎಂಬರ್ಥವನ್ನೇ ಹೊಂದಿದ್ದು, ಮತ್ತೆ ತನ್ನ ಆಶ್ರಯವಾದ ಪಾತ್ರೆಗೆ ಸಂಕ್ರಮಿಸಿತೋ ಎಂಬುದನ್ನು ನಿರ್ಧರಿಸುವುದು ಕಷ್ಟ. ಆದರೆ ಪಾತ್ರೆ ಎಂಬರ್ಥದಲ್ಲಿ ಉತ್ತರ ಕರ್ನಾಟಕದಲ್ಲಿಯೂ ಮಹಾರಾಷ್ಟ್ರದಲ್ಲಿಯೂ ಪ್ರಚಲಿತವಾಗಿರುವ 'ಭಾಂಡಿ' ಎಂಬುದನ್ನೂ, ವಿಶಿಷ್ಟವಾದೊಂದು ಉಪಕರಣಸಮುದಾಯವನ್ನು ತುಂಬಿಸಿಡುವ ಚೀಲಕ್ಕೆ ಸಂಸ್ಕೃತದಲ್ಲಿ ರೂಢವಾದ 'ಭಾಂಡಿ' ಎಂಬ ಶಬ್ದರೂಪವನ್ನೂ ವಿಮರ್ಶಿಸುವಾಗ,-ಸರಕು, ಸಾಮಾನು ಎಂಬರ್ಥದಲ್ಲಿಯೇ ಮೊದಲು ಪ್ರಯುಕ್ತವಾಗುತ್ತಿದ್ದ 'ಭಾಂಡ'ವೆಂಬ ಶಬ್ದವು ಮತ್ತೆ ತನ್ನ ಆಶ್ರಯದ ಹೆಸರೂ ಆಗಿ ಪರಿಣಮಿಸಿತೆಂದು ತೋರುವುದು. ಕುಕ್ಕೆ (basket) ಎಂಬರ್ಥದ 'ಭಾಂಡಿನೀ' ಎಂಬ ಸಂಸ್ಕೃತ ಶಬ್ದವೂ ಇದೇ ಅಭಿಪ್ರಾಯವನ್ನು ಪುಷ್ಟೀಕರಿಸುತ್ತದೆ. ಅದರ ಮೂಲಾರ್ಥ ಹೇಗಿದ್ದರೂ, 'ಭಾಂಡ' ಎಂಬ ಶಬ್ದವು ಸರಕು, ಸೊತ್ತು ಎಂಬಿತ್ಯಾದಿ ಅರ್ಥದಲ್ಲಿ ಉತ್ತರ ಹಾಗೂ ದಕ್ಷಿಣಭಾರತದಲ್ಲೆಲ್ಲ ಅತಿಪುರಾತನಕಾಲದಿಂದಲೂ ರೂಢವಾಗಿರುವ ಶಬ್ದವೆಂಬುದರಲ್ಲಿ ಯಾವ ಮತಭೇದವೂ ಇರಲಾರದು; ಮತ್ತು 'ಭಾಂಡಿ', 'ಭಾಂಡಿನೀ' ಎಂಬ ಶಬ್ದಗಳು, 'ಭಾಂಡಕ್ಕೆ (ಸರಕು ಸಾಮಾನುಗಳಿಗೆ) ಆಶ್ರಯಭೂತವಾದುದರಿಂದಲೇ ಆ ರೂಪಗಳನ್ನು ಪಡೆದವೆಂಬುದರಲ್ಲಿಯೂ ಭಿನ್ನಾಭಿಪ್ರಾಯವಿರಲಾರದು.

'ಭಾಂಡ'ದ ತದ್ಭವವಾದ 'ಭಂಡ'ದಿಂದ 'ಬಂಡಿ' ಹುಟ್ಟಿದಂತೆ 'ಭಾಂಡ' ಎಂಬುದರಿಂದಲೇ ನೇರಾಗಿ 'ಪಾಂಡಿ' ಹುಟ್ಟಿರಬಹುದೇ? ಇದು ಭಾಷಾನಿಯಮದಂತೆ ಸಂಭಾವ್ಯವೇ? ಎಂದು ಕೇಳಿದರೆ ಹೌದು ಎನ್ನಬೇಕಾಗುತ್ತದೆ. ಸಂಸ್ಕೃತ ಶಬ್ದಗಳ ಆದಿಯ ಭಕಾರವು ದ್ರಾವಿಡೋಚ್ಚಾರದಲ್ಲಿ ಪಕಾರವಾಗುವುದು ಸ್ವಾಭಾವಿಕ. ಉದಾ: ಭಟ್ಟ–ಪಟ್ಟ. (ತಮಿಳು ಹಾಗೂ ಮಲಯಾಳ.) ಆದುದರಿಂದ 'ಪಾಂಡಿ'ಯ ನಿಷ್ಪತ್ತಿ ಹೀಗೆ: 'ಭಂಡ'ವನ್ನು ಎಂದರೆ ಸರಕನ್ನು (ನೆಲದ ಮೇಲೆ) ಸಾಗಿಸುವ ಸಾಧನ. ಭಂಡಿ = ಬಂಡಿ; 'ಭಾಂಡ'ವನ್ನು ಎಂದರೆ ಸರಕನ್ನು (ನೀರಮೇಲೆ) ಸಾಗಿಸುವ ಸಾಧನ. ಭಾಂಡಿ = ಪಾಂಡಿ. ಇಂದು ಕೂಡ 'ಭಾಂಡಿ' ಎಂಬ ಶಬ್ದವನ್ನು ತಮಿಳಿನಲ್ಲಿ ಬರೆದರೆ ಅದು 'ಪಾಂಡಿ' ಎಂದೇ ಆಗುತ್ತದೆ

ಬೇರೆ ರೂಪ ಬರುವುದಿಲ್ಲ. ಇದನ್ನು ಪರಿಭಾವಿಸಿದರೆ ನನ್ನ ಊಹೆಯ ಸಾಧುತ್ವವು ಸುಸ್ಪಷ್ಟವಾಗಿ ಗೋಚರಿಸದಿರಲಾರದೆಂದು ನಮ್ರತೆಯಿಂದ ನಿವೇದಿಸುತ್ತೇನೆ.

ಈ ವರೆಗೆ ಸವಿಸ್ತರವಾಗಿ ನಿರೂಪಿಸಿದ 'ಪಾಂಡಿ'ಯ ಕಥೆಯನ್ನು ಹೀಗೆ ಸಂಕ್ಷೇಪಿಸಬಹುದು: ಅತಿಪುರಾತನಕಾಲದಲ್ಲಿಯೇ ಅಖಿಲಭಾರತದಲ್ಲಿ ವ್ಯಾಪಿಸಿದ್ದ ಸಂಸ್ಕೃತಭಾಷೆಯಲ್ಲಿ 'ವ್ಯಾಪಾರದ ಸರಕು' (merchandise) ಎಂಬರ್ಥದಲ್ಲಿ ರೂಢವಾಗಿದ್ದ 'ಭಾಂಡ' ಎಂಬ ಶಬ್ದದಿಂದ 'ಭಾಂಡಿ' ಎಂಬುದು ದಕ್ಷಿಣಭಾರತದಲ್ಲಿ ನಿಷ್ಪನ್ನವಾಗುವಾಗಲೇ 'ಪಾಂಡಿ' ಎಂದು ಉಚ್ಚರಿಸಲ್ಪಟ್ಟು ನೌಕಾರ್ಥದಲ್ಲಿ ಬಳಕೆಗೆ ಬಂದು, ಮತ್ತೆ ಅದರಿಂದ ಹುಟ್ಟಿ ಬಂದ 'ಪಾಂಡಿಯ' ಎಂಬ ಶಬ್ದವು (ತಮಿಳು ಪಾಂಡಿಯನ್, ತುಳು–ಪಾಂಡಿಯೆ) ಶಿಷ್ಟೋಚ್ಚಾರದಲ್ಲಿ 'ಪಾಂಡ್ಯ' ಎಂದಾಗಿ, ಆ ರೂಪದಲ್ಲಿಯೇ ಅದು ಸಂಸ್ಕೃತವನ್ನು ಪ್ರವೇಶಿಸಿತು; ಮತ್ತು ಆ ಶಬ್ದವು ಒಂದು ದೊಡ್ಡ ರಾಜವಂಶದ ಹೆಸರಾಗಿ ಪರಿಣಮಿಸಿದುದರಿಂದಲೂ, ಅದು ಶುದ್ಧ ಸಂಸ್ಕೃತಶಬ್ದವೆಂದೇ ಭಾವಿಸಲ್ಪಟ್ಟುದರಿಂದಲೂ ಅದರ ಮೂಲಾರ್ಥವು ಕಣ್ಮರೆಯಾಯಿತು.

ವಸ್ತುಕೋಶ

ಪ್ರೊ|| ಹಿರಿಯಣ್ಣ ಜನ್ಮ ಶತಾಬ್ದಿ ಸಮಾರಂಭ

1871ರ ಮೇ 7ರಂದು ಮೈಸೂರಿನಲ್ಲಿ ಜನ್ಮತಾಳಿದ ಪ್ರೊ. ಹಿರಿಯಣ್ಣನವರು 1912ರಲ್ಲಿ ಸಂಸ್ಕೃತ ಅಧ್ಯಾಪಕರಾಗಿ ಮಹಾರಾಜ ಕಾಲೇಜನ್ನು ಸೇರಿದರು. 1918ರಲ್ಲಿ ಪ್ರಾಧ್ಯಾಪಕರಾಗಿ ನೇಮಿಸಲ್ಪಟ್ಟು 1927ರಲ್ಲಿ ನಿವೃತ್ತರಾದರು. 1917ರಿಂದ ತತ್ತ್ವಶಾಸ್ತ್ರ ಇಲಾಖೆಯಲ್ಲಿ ಭಾರತೀಯ ತತ್ತ್ವಶಾಸ್ತ್ರ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದರು. ಯಾವ ಆಡಂಬರ, ಗೌರವ ಪ್ರಚಾರಗಳನ್ನೂ ಒಲ್ಲದ ಈ ಪ್ರಾಧ್ಯಾಪಕರು "ಎಲೆಯ ಹಿಂತಿರ್ದು" ಕಂಪನ್ನು ಬೀರಿದ ಹೂವಾಗಿ 1950ರ ಸೆಪ್ಟೆಂಬರ್ 16ರಂದು ಇಹಲೋಕವನ್ನು ತ್ಯಜಿಸಿದರು.

ಪ್ರೊ. ಹಿರಿಯಣ್ಣ ವಿದ್ಯಾರ್ಥಿ ಹಿತೈಷಿಗಳಾಗಿದ್ದರು. ಅವರಿಂದ ವಿದ್ಯೆಯೊಂದೇ ಅಲ್ಲ ಇನ್ನೂ ಹಲವು ರೀತಿಯಲ್ಲಿ ಸಹಾಯ ಪಡೆದವರನೇಕ ಮಂದಿ ವಿದ್ಯಾರ್ಥಿಗಳಿದ್ದಾರೆ. ಸಹೋದ್ಯೋಗಿಗಳೂ ಅವರಿಂದ ಪಾಠ ಕಲಿತರು. ಅವರ ವರ್ತನೆ ಅನುಕರಣೀಯವಾಗಿತ್ತು. ಅಂತಹ ಮಹಾನುಭಾವರ ಹೆಸರಿನಲ್ಲಿ ದರ್ಶನಗಳನ್ನು ಕುರಿತು ವಿದ್ವಾಂಸರಿಂದ ಉಪನ್ಯಾಸ ಮಾಲೆಯನ್ನು 1953–55ರಲ್ಲಿ ಪ್ರತಿವರ್ಷ ಮಹಾರಾಜ ಕಾಲೇಜಿನ ಸಂಸ್ಕೃತ ವಿಭಾಗ ಏರ್ಪಡಿಸಿತ್ತು. 1969ರಲ್ಲಿ ಸಂಸ್ಕೃತ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿಗಳು ಪ್ರಾಧ್ಯಾಪಕರ ಭಾವಚಿತ್ರವೊಂದನ್ನು ಬರೆಸಿ ವಿಭಾಗಕ್ಕೆ ಕೊಟ್ಟರು. ಅದನ್ನು ಅನಾವರಣ ಮಾಡಿದ ಸಂದರ್ಭದಲ್ಲಿ ಆ ಪ್ರಾಧ್ಯಾಪಕರ ಜನ್ಮಶತಾಬ್ದಿಯ ಪ್ರಸಂಗ ಬಂತು. ಅವರ ಹೆಸರಿನಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಗಳು, ಪಾರಿತೋಷಕಗಳು ಮೊದಲಾದುವನ್ನು ಏರ್ಪಡಿಸುವ ಯೋಜನೆ ಮತ್ತು ಜನ್ಮಶತಾಬ್ದಿಯ ಸ್ಮರಣ ಸಂಪುಟದ ಪ್ರಕಾಶನ ಇವುಗಳೂ ಸೇರಿದುವು. ಅದಕ್ಕಾಗಿ ನಿಧಿಸಂಗ್ರಹ, ಸಂಪುಟದ ಮುದ್ರಣ ಇತ್ಯಾದಿ ಕಾರಣಗಳಿಂದ 1972ರ ಡಿಸೆಂಬರಿನಲ್ಲಿ ಸಮಾರಂಭವನ್ನು ನಡೆಸಲಾಯಿತು.

1972ರ ಡಿಸೆಂಬರ್ 15ರಂದು ಶನಿವಾರ ಬೆಳಗ್ಗೆ 9.30 ಗಂಟೆಗೆ ಜನ್ಮ ಶತಾಬ್ದಿ ಸಮಾರಂಭಗಳ ಪ್ರಾರಂಭೋತ್ಸವ ಏರ್ಪಾಡಾಗಿತ್ತು. ವೇದಘೋಷ ಹಾಗೂ ಪ್ರಾರ್ಥನೆಯಾದ ನಂತರ, ಸಂಸ್ಕೃತ ಪ್ರೊಫೆಸರ್ ಡಾ. ಟಿ. ಜಿ. ಸಿದ್ದಪ್ಪಾರಾಧ್ಯರು ಸಂಸ್ಕೃತದಲ್ಲಿ ತಾವು ರಚಿಸಿದ ಸ್ವಾಗತ ಪದ್ಯ ಮಾಲಿಕೆ ಓದಿದರು. ಗಣ್ಯರು ಹಾಗೂ ಮಠಾಧಿಪತಿಗಳು ಕಳುಹಿಸಿದ ಸಂದೇಶಗಳನ್ನು ಶ್ರೀ ಎಸ್. ವಿ. ಶ್ರೀನಿವಾಸ ರಾಘವಾಚಾರ್ಯರು (ಸಂಸ್ಕೃತ ರೀಡರ್) ಓದಿದರು. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಹಾಗೂ ಶತಾಬ್ದಿ ಸಮಾರಂಭ ಸಮಿತಿಯ ಅಧ್ಯಕ್ಷರಾದ ಪ್ರೊ. ದೇ. ಜವರೇಗೌಡ ಅವರು ಸ್ವಾಗತ ಬಯಸಿದರು. ಸಂಸ್ಕೃತ ಪ್ರೊಫೆಸರ್ ಮತ್ತು ಸಮಿತಿಯ ಕಾರ್ಯದರ್ಶಿಗಳಾದ ಡಾ. ಜಿ. ಮರುಳಸಿದ್ಧಯ್ಯನವರು ಸಮಾರಂಭದ ಹಿನ್ನೆಲೆಯ ವರದಿಯನ್ನು ಒಪ್ಪಿಸಿದರು. ಈ ಸಮಾರಂಭಕ್ಕಾಗಿಯೇ ಶ್ರೀ ಎಚ್. ಎಸ್. [illegible] ಅವರು ರಚಿಸಿದ ಪ್ರೊ. ಹಿರಿಯಣ್ಣನವರ ತೈಲಚಿತ್ರವನ್ನು ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮೈಸೂರು ರಾಜ್ಯದ ಮಾನ್ಯ ವಿದ್ಯಾಮಂತ್ರಿಗಳಾದ ಶ್ರೀ ಎ. ಆರ್. ಬದರೀನಾರಾಯಣ್ ಅವರು ಅನಾವರಣ ಮಾಡಿದರು. ಕಾವ್ಯಾಲಯದವರು ಪ್ರಕಟಿಸಿರುವ ಪ್ರೊ. ಹಿರಿಯಣ್ಣನವರ ಎರಡು ಗ್ರಂಥಗಳನ್ನು ಈ ಉತ್ಸವದ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು. ಪ್ರೊ. ಹಿರಿಯಣ್ಣನವರ ಲೇಖನಗಳನ್ನು (ಸುಮಾರು 90) ಕಾವ್ಯಾಲಯದವರು ಸಂಗ್ರಹಿಸಿ ಏಳು ಸಂಪುಟಗಳಲ್ಲಿ ಪ್ರಕಟಿಸಿ ಉಪಕರಿಸಿದ್ದಾರೆ. ಆಗ ಬಿಡುಗಡೆಯಾದ 'ಇಂಡಿಯನ್ ಫಿಲಾಸಫಿಕಲ್ ಸ್ಟಡೀಸ್–2' ಏಳನೆಯದು. (ಹಿರಿಯಣ್ಣನವರ ಪುಸ್ತಕ ವಿಮರ್ಶೆಗಳ ಸಂಗ್ರಹ 'ರಿವ್ಯೂಸ್' ಸೇರಿ ಎಂಟನೆಯದು). ಇದರಲ್ಲಿ ದರ್ಶನಶಾಸ್ತ್ರದ

ವಿಚಾರಣೀಯವಾದ ಬಹಳ ಮುಖ್ಯ ಅಂಶಗಳನ್ನು ಚರ್ಚಿಸಿದ ಲೇಖನಗಳಿವೆ; ಅಲ್ಲದೆ ಇವುಗಳಲ್ಲಿ ಅನೇಕ ಲೇಖನಗಳು ಹಿಂದೆ ಪ್ರಕಟವಾಗಿರಲಿಲ್ಲ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತತ್ತ್ವಶಾಸ್ತ್ರ ನಿವೃತ್ತ ಪ್ರಾಧ್ಯಾಪಕರೂ ಹಿಂದಿನ ಕುಲಪತಿಗಳೂ ಆದ ಪ್ರೊ. ಎನ್. ಎ. ನಿಕಂ ಅವರು ಈ ಗ್ರಂಥವನ್ನು ಬಿಡುಗಡೆಮಾಡಿದರು. ಪ್ರೊ. ಹಿರಿಯಣ್ಣನವರು ನಾಲ್ಕು ಉಪನಿಷತ್ತುಗಳನ್ನು (3 ಸಮಗ್ರ: ಈಶ. ಕೇನ. ಕಠ; 1 ಭಾಗಶಃ–ಬೃಹದಾರಣ್ಯಕ) ಶಾಂಕರ ಭಾಷ್ಯ ಸಮೇತ ಇಂಗ್ಲಿಷಿಗೆ ಭಾಷಾಂತರಿಸಿದ್ದಾರೆ. ಅನುವಾದವನ್ನು ಮಾತ್ರ ಶ್ರೀರಂಗದ ವಾಣೀವಿಲಾಸ ಪ್ರೆಸ್ಸಿನವರು ಪ್ರಕಟಿಸಿದ್ದರು. ಇವು ಬಹಳ ಹಿಂದೆಯೇ ಅಪ್ರಾಪ್ಯವಾಗಿದ್ದವು. ಈಗ ಕಾವ್ಯಾಲಯದವರು ಈಶಾವಾಸ್ಯೋಪನಿಷತ್ತನ್ನು ಪುನಃ ಪ್ರಕಟಿಸಿದ್ದಾರೆ. ಜೊತೆಗೆ ಮೂಲವನ್ನು ಸೇರಿಸಿರುವುದರಿಂದ ಪುಸ್ತಕದ ಪ್ರಯೋಜನ ಇಮ್ಮಡಿಯಾಗಿದೆ. ಹೀಗೆಯೇ ಇತರ ಉಪನಿಷತ್ತುಗಳನ್ನು ಅವರು ಒದಗಿಸುತ್ತಾರೆಂದು ಆಶಿಸಬಹುದು. ಈ ಗ್ರಂಥವನ್ನು ಜೈನಾಲಜಿ ಪ್ರಾಧ್ಯಾಪಕ ಡಾ. ಎ. ಎನ್. ಉಪಾಧ್ಯೇ ಅವರು ಬಿಡುಗಡೆ ಮಾಡಿದರು. ಅನಂತರ ಮೈಸೂರಿನ ರಾಜ್ಯಪಾಲರಾದ ಶ್ರೀ ಮೋಹನಲಾಲ್ ಸುಖಾಡಿಯಾ ಅವರು ಆರಂಭ ಭಾಷಣ ಮಾಡಿದರು. ಪ್ರೊ. ಹಿರಿಯಣ್ಣನವರ ವ್ಯಕ್ತಿತ್ವದ ಹಿರಿಮೆಯನ್ನು ಕೊಂಡಾಡಿದರು. ಉತ್ಸವದ ನೆನಪಿಗಾಗಿ ಸಿದ್ಧಪಡಿಸಿದ್ದ ಗ್ರಂಥವನ್ನು (ಪ್ರೊ. ಎಂ. ಹಿರಿಯಣ್ಣ ಬರ್ತ್ ಸೆಂಟಿನರಿ ಕಮೆಮೊರೇಷನ್ ವಾಲ್ಯೂಂ) ಮಾನ್ಯ ರಾಜ್ಯಪಾಲರು ತರುವಾಯ ಬಿಡುಗಡೆ ಮಾಡಿದರು. ಮದ್ರಾಸಿನ ಡಾ. ವಿ. ರಾಘವನ್ ಮತ್ತು ಡಾ. ಜಿ. ಮರುಳಸಿದ್ಧಯ್ಯ ಅವರ ಸಂಪಾದಕತ್ವದಲ್ಲಿ ಹೊರಬಂದ ಈ ಗ್ರಂಥದಲ್ಲಿ ದೇಶವಿದೇಶಗಳ ವಿದ್ವಾಂಸರು ಬರೆದಿರುವ 25ಕ್ಕೂ ಹೆಚ್ಚು ವಿದ್ವತ್ಪೂರ್ಣ ಲೇಖನಗಳಿವೆ. ಮದ್ರಾಸ್ ವಿಶ್ವವಿದ್ಯಾನಿಲಯದ ನಿವೃತ್ತ ಸಂಸ್ಕೃತ ಪ್ರೊಫೆಸರ್ ಮತ್ತು ಜವಾಹರಲಾಲ್ ನೆಹರು ಫೆಲೋ ಆಗಿರುವ ಡಾ. ವಿ. ರಾಘವನ್ ಅವರು 'ಪ್ರೊ. ಹಿರಿಯಣ್ಣ–ಜೀವನ ಮತ್ತು ಕೃತಿ' ವಿಚಾರಗೋಷ್ಠಿಯನ್ನು ಉದ್ಘಾಟನೆ ಮಾಡಿದರು. ಪ್ರೊ. ಹಿರಿಯಣ್ಣನವರ ವ್ಯಕ್ತಿತ್ವದ ಮೇಲೆ ಬೆಳಕು ಚೆಲ್ಲಿದರು ಮತ್ತು ಅವರ ಜೀವನದ ಸರಳತೆಯನ್ನೂ ಕೃತಿಗಳ ಮಹತ್ತ್ವವನ್ನೂ ಬಣ್ಣಿಸಿದರು. ಅಧ್ಯಕ್ಷತೆ ವಹಿಸಿದ್ದ ಮೈಸೂರು ರಾಜ್ಯದ ವಿದ್ಯಾಮಂತ್ರಿ ಶ್ರೀ ಎ. ಆರ್. ಬದರೀನಾರಾಯಣ್ ಅವರು ಮಾತನಾಡುತ್ತಾ ತಾವು ಪ್ರೊ. ಹಿರಿಯಣ್ಣನವರ ವಿದ್ಯಾರ್ಥಿಗಳಾಗಿದ್ದುದನ್ನು ನೆನೆಸಿಕೊಂಡರು. ಅವರ ಸೌಜನ್ಯ ಮತ್ತು ತತ್ತ್ವಶಾಸ್ತ್ರ ಜ್ಞಾನವನ್ನು ಆಚರಣೆಯಲ್ಲಿ ತಂದುಕೊಂಡಿದ್ದುದನ್ನೂ ತಾವು ಅನುಭವಿಸಿದ ಕೆಲವು ಘಟನೆಗಳನ್ನೂ ವಿವರಿಸಿದರು. ಶ್ರೀ ಎಸ್. ಎ. ಶ್ರೀನಿವಾಸರಾಘವಾಚಾರ್ಯರು ವಂದನಾರ್ಪಣೆ ಮಾಡಿದರು. ಸಭೆ ಮುಕ್ತಾಯವಾಯಿತು.

ಇವಾದ ನಂತರವೇ ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿ ಏರ್ಪಡಿಸಿದ್ದ ಪುಸ್ತಕ ಪ್ರದರ್ಶನವನ್ನು ಮುಂಬಯಿ ವಿಶ್ವವಿದ್ಯಾನಿಲಯದ ಸಂಸ್ಕೃತ ಪ್ರೊಫೆಸರ್ ಡಾ. ಟಿ. ಜಿ. ಮಾಯಿಂಕರ್ ಉದ್ಘಾಟಿಸಿದರು. ಪ್ರೊ. ಹಿರಿಯಣ್ಣನವರ ಪ್ರಕಾಶಿತ ಗ್ರಂಥಗಳ ಅವರ ಹಸ್ತಪ್ರತಿಗಳ ಪ್ರದರ್ಶನವನ್ನು ಕಾವ್ಯಾಲಯದ ಶ್ರೀ ಕೂಡಲಿ ಚಿದಂಬರಂ ಅವರ ನೆರವಿನಿಂದ ಏರ್ಪಡಿಸಲಾಗಿತ್ತು. ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿರುವ ಅಪರೂಪವಾದ ಹಸ್ತಪ್ರತಿಗಳನ್ನೂ ಪ್ರದರ್ಶಿಸಲಾಗಿತ್ತು.

ಅಂದು ಸಂಜೆ ಮನೋರಂಜನೆ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಶ್ರೀ ಎಸ್. ರಾಘವೇಂದ್ರ ರಾವ್ ಅವರು ಪ್ರೊ. ಹಿರಿಯಣ್ಣನವರೂ ಸೇರಿದಂತೆ ಕೆಲವು ಜಗತ್ಪ್ರಸಿದ್ಧ ವ್ಯಕ್ತಿಗಳ ಮುಖಗಳನ್ನು ಭಾವಪೂರ್ಣವಾಗಿ ಅನುಕರಣ ಮಾಡಿದರು. ಅನಂತರ ಸಂಸ್ಕೃತ ವಿಭಾಗದ ವಿದ್ಯಾರ್ಥಿಗಳು ಭಾಸನ 'ಪಂಚರಾತ್ರ' ನಾಟಕವನ್ನು ಮನೋಹರವಾಗಿ ಅಭಿನಯಿಸಿದರು.

ಪ್ರೊ. ಹಿರಿಯಣ್ಣ–ಜೀವನ ಮತ್ತು ಕೃತಿಗಳು (ಹಿಸ್ ಲೈಫ್ ಎಂಡ್ ವರ್ಕ್ಸ್)–ವಿಚಾರಗೋಷ್ಠಿಯು ಆದಿನ ಮಧ್ಯಾಹ್ನ ಮತ್ತು ತಾ. 16ನೇ ಬೆಳಿಗ್ಗೆ ನಡೆಯಿತು. ಅದರಲ್ಲಿ ದೇಶದ ನಾನಾ ಕಡೆಗಳಿಂದ ಸುಮಾರು ನಲವತ್ತು ಮಂದಿ ಖ್ಯಾತ ವಿದ್ವಾಂಸರು ಭಾಗವಹಿಸಿ ಪ್ರೊ. ಹಿರಿಯಣ್ಣನವರ ಬಗ್ಗೆ ಹಲವಾರು ಅಂಶಗಳ ಬಗ್ಗೆ ವಿಚಾರಪೂರ್ಣ ಲೇಖನಗಳನ್ನು ಓದಿದರು.

ಭಾಗವಹಿಸಿದ ವಿದ್ವಾಂಸರು: ಪ್ರೊ. ವಿ. ಸೀತಾರಾಮಯ್ಯ, ಡಾ. ಎ.ಎನ್. ಉಪಾಧ್ಯೇ. ಡಾ. ಪಿ.ಬಿ. ವಿದ್ಯಾರ್ಥಿ. ಪ್ರೊ. ಜಿ. ಹನುಮಂತರಾವ್, ಶ್ರೀ ಎಂ. ಆರ್ ವರದಾಚಾರ್ಯ. ಪ್ರೊ. ಆರ್.ರಾಮಾನುಜಾಚಾರಿ

ಶ್ರೀ ಅಕ್ಷರಕೃಪಾ ಶ್ರೀಕಂಠಯ್ಯ, ಪ್ರೊ. ಸಿ. ವಿ. ಶ್ರೀನಿವಾಸಮೂರ್ತಿ, ಶ್ರೀ ಎ. ಎನ್. ಸುಬ್ಬರಾವ್, ಡಾ. ಟಿ. ಜಿ. ಮೈಂಕರ್. ಪ್ರೊ. ಎಸ್. ರಾಮಸ್ವಾಮಿ, ಡಾ. ಜಿ. ಮರುಳಸಿದ್ದಯ್ಯ, ಪ್ರೊ. ಆರ್. ಆರ್. ಅಂಬರ್‌ಡೇಕರ್, ಡಾ. ಆರ್. ಎಸ್. ಶಿವಗಣೇಶಮೂರ್ತಿ, ಡಾ. ಕೆ. ಕುಂಜುಣ್ಣಿ ರಾಜಾ. ಡಾ. ಎ. ಎಸ್. ನಾರಾಯಣ ಪಿಳ್ಳೈ, ಡಾ. ಆರ್. ಸಿ. ದ್ವಿವೇದಿ, ಡಾ. ಟಿ. ಜಿ. ಕಲ್ಘಟಗಿ, ಡಾ. ಎ. ಜವಡೇಕರ್. ಪ್ರೊ. ವಿ. ಸೀತಾರಾಮಯ್ಯ, ಡಾ. ಪಿ. ನಾಗರಾಜರಾವ್, ಪ್ರೊ. ಕೆ. ಶೇಷಾದ್ರಿ, ಡಾ. ಪಿ. ಶ್ರೀರಾಮಮೂರ್ತಿ. ಡಾ. ಇ. ಆರ್. ಶ್ರೀಕೃಷ್ಣಶರ್ಮ. ಡಾ. ಎ. ಎಲ್. ಹಿರೇಮಠ, ಶ್ರೀ ಎಂ. ಕೆ. ಸೂರ್ಯನಾರಾಯಣರಾವ್. ಶ್ರೀ ಬಿ. ಕೆ. ಶಿವರಾಮಯ್ಯ, ಶ್ರೀ ಹರಿದಾಸ ಉಪಾಧ್ಯಾಯ, ಶ್ರೀ ಕೆ.ಟಿ. ಪಾಂಡುರಂಗಿ. ಡಾ. ಜಿ. ವಿ. ದೇವಸ್ಥಲಿ, ಡಾ. ಕೆ. ಬಿ. ರಾಮಕೃಷ್ಣರಾವ್, ಡಾ. ಎಚ್.ಪಿ. ಮಲ್ಲೇದೇವರು, ಡಾ. ಇ. ಆರ್. ಶ್ರೀಕೃಷ್ಣಶರ್ಮ, ಪ್ರೊ. ಎಸ್. ರಾಮಚಂದ್ರರಾವ್, ಡಾ. ಎಸ್. ವೆಂಕಟಸುಬ್ರಮೋಣೀಯ ಅಯ್ಯರ್. ಡಾ.ಎ. ಜವಡೇಕರ್. ಶ್ರೀ ಜಿ. ಎ. ಜಾಲಿವಾಳ, ಶ್ರೀ ಸಿ. ರಾಮನಾಥನ್. ಡಾ. ಕೆ. ಎಸ್. ನಾಗರಾಜನ್. ಪ್ರೊ. ಎಸ್. ಎಸ್. ರಾಘವಾಚಾರ್, ಡಾ. ಆರ್. ಎನ್. ಸಂಪತ್. ಶ್ರೀ ಎಸ್. ಜಿ. ಮಹೇಶ್ವರಯ್ಯ. ಶ್ರೀ ಕೆ. ರಾಜೀವಲೋಚನ. ಶ್ರೀ ಎಂ. ಪಿ. ಎಲ್. ಶಾಸ್ತ್ರಿ, ಡಾ. ಪ್ರೀತಿಭೂಷಣ ಚಟರ್ಜಿ, ಪ್ರೊ. ವಿ. ವೆಂಕಟಾಚಲಂ, ಡಾ. ಬಿ. ಆರ್. ಶಾಸ್ತ್ರಿ, ಡಾ. ವಿ. ಸುಬ್ಬರಾವ್, ಪ್ರೊ. ಎಸ್. ಕೆ. ರಾಮಚಂದ್ರರಾವ್.

ದಿನಾಂಕ 16–12–73ರಂದು ಮಧ್ಯಾಹ್ನ 2.30 ಘಂಟೆಗೆ ಶತಾಬ್ದಿ ಸಮಾರಂಭದ ಅಂಗವಾಗಿ ಸಂಸ್ಕೃತ ದಿನವನ್ನು ಡಾ. ಎ. ಎನ್. ಉಪಾಧ್ಯೆ ಅವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು.

ದಿನಾಂಕ 17–12–72 ಭಾನುವಾರ ಬೆಳಿಗ್ಗೆ 9.30 ಘಂಟೆಗೆ ಜನ್ಮ ಶತಾಬ್ದಿ ಸಮಾರಂಭಗಳ ಮುಕ್ತಾಯ ಭಾಷಣ ಏರ್ಪಾಡಾಗಿತ್ತು. ಮೈಸೂರು ಹೈಕೋರ್ಟಿನ ನ್ಯಾಯಾಧೀಶ ಶ್ರೀ ಇ. ಎಸ್. ವೆಂಕಟರಾಮಯ್ಯನವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಅಧ್ಯಕ್ಷತೆ ವಹಿಸಿದ್ದ ಪ್ರೊ. ಎನ್. ಎ. ನಿಕಂ ಅವರು ತಾವು ಕಂಡಂತೆ ಪ್ರೊ. ಹಿರಿಯಣ್ಣನವರ ವ್ಯಕ್ತಿತ್ವವನ್ನು ಪರಿಚಯ ಮಾಡಿಕೊಟ್ಟರು. ಪ್ರೊಫೆಸರವರು ವಿಚಾರ ದೀಪ್ತಿಯಿಂದ ಕೂಡಿದ್ದರು. ವಿದ್ವತ್ತಿಗೆ ಅನುಗುಣವಾಗಿ ಅವರಲ್ಲಿ ವಿಶಾಲ ಮನೋಭಾವವಿತ್ತು. ದಾರ್ಶನಿಕ ವಿಚಾರಗಳಲ್ಲಿ ಸ್ವತಃ ಶಾಂಕರ ಸಿದ್ಧಾಂತ ಅನುಸರಿಸಿದರೂ ಅವರು ಛಲವಾದಿಗಳಾಗದೆ ಇತರ ಎಲ್ಲ ಅಭಿಪ್ರಾಯಗಳನ್ನು ಸ್ವಾಗತಿಸುತ್ತಿದ್ದರು ಎಂದು ಹೇಳಿ ತಾವು ಹಿರಿಯಣ್ಣನವರನ್ನು ಕಂಡ ಸನ್ನಿವೇಶಗಳನ್ನು ಸ್ಮರಿಸಿಕೊಂಡರು. ಅವರ ವಿದ್ವತ್ತಿನ ಆಳವನ್ನೂ ಅದಕ್ಕನುಗುಣವಾದ ನಮ್ರತೆಯನ್ನು ಎತ್ತಿ ಹೇಳಿದರು. ಡಾ. ವಿ. ರಾಘವನ್ ಅವರು ಮಾತಾಡುತ್ತಾ ವಿಚಾರ ಗೋಷ್ಠಿಯು ಯಶಸ್ವಿಯಾಗಿ ನಡೆಯಿತೆಂದು ಹೇಳಿದರು. ಪ್ರೊ. ಹಿರಿಯಣ್ಣನವರ ಸ್ಮರಣೆಯೊಡನೆ ವಿಚಾರ ಪ್ರಚೋದಕವಾದ ಇಂತಹ ಗೋಷ್ಠಿಯನ್ನು ಏರ್ಪಡಿಸಿದ್ದಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೂ ವಿಶ್ವವಿದ್ಯಾನಿಲಯ ಧನ ಆಯೋಗಕ್ಕೂ ಧನ್ಯವಾದಗಳನ್ನು ಅರ್ಪಿಸಿದರು. ಮೊದಲು ಗೋಷ್ಠಿಯಲ್ಲಿ ಭಾಗವಹಿಸಿದ ಪ್ರಾಧ್ಯಾಪಕರ ಪರವಾಗಿ ಡಾ. ಪಿ. ನಾಗರಾಜರಾವ್ ಮತ್ತು ಉದಯಪುರದ ಡಾ. ಆರ್. ಸಿ. ದ್ವಿವೇದಿ ಮಾತನಾಡಿದರು. ಸಮಿತಿಯ ಪರವಾಗಿ ಶ್ರೀ ಕೂಡಲಿ ಚಿದಂಬರಂ ಮಾತನಾಡಿದರು. ವಯೋವೃದ್ಧರೂ ಪ್ರೊ. ಹಿರಿಯಣ್ಣನವರ ಸಹೋದ್ಯೋಗಿಗಳೂ ಆಗಿದ್ದ ಅಕ್ಷರಕೃಪಾ ಶ್ರೀಕಂಠಯ್ಯನವರಿಗೆ ಪುಷ್ಪಹಾರವನ್ನರ್ಪಿಸಲಾಯಿತು. ವಿಶ್ವವಿದ್ಯಾನಿಲಯದ ಲಲಿತಕಲೆಗಳ ಕಾಲೇಜಿನ ಶ್ರೀಮತಿ ಗೌರಿ ಕುಪ್ಪುಸ್ವಾಮಿಯವರ ಸಂಗೀತವನ್ನು ಅದೇ ಕಾಲೇಜಿನ ಪಿಟೀಲ್ ವಿದ್ವಾನ್ ಎಸ್. ಮಹದೇವಪ್ಪ, ಮೃದಂಗ ವಿದ್ವಾನ್ ಶ್ರೀ ವಿ. ನಾಗಭೂಷಣಾಚಾರ್, ಘಟಂ ವಿದ್ವಾನ್ ಶ್ರೀ ಕೃಷ್ಣಮೂರ್ತಿ ಇವರೊಡನೆ ಏರ್ಪಡಿಸಲಾಗಿತ್ತು. ಕೊನೆಯಲ್ಲಿ ಡಾ. ಆರ್. ಎಸ್. ಶಿವಗಣೇಶಮೂರ್ತಿ ವಂದನಾರ್ಪಣೆ ಮಾಡಿದರು. ಗೋಷ್ಠಿಯಲ್ಲಿ ಭಾಗವಹಿಸಿದ್ದ ಜ್ಞಾಪಕಾರ್ಥವಾಗಿ ಭಾಗವಹಿಸಿದ ವಿದ್ವಾಂಸರಿಗೆಲ್ಲ ಸಮಿತಿಯ ಪರವಾಗಿ ಪ್ರೊ. ಹಿರಿಯಣ್ಣನವರ 'ಕ್ವೆಸ್ಟ್ ಆಫ್ಟರ್ ಪರ್‌ಫೆಕ್ಷನ್' ಹೊತ್ತಗೆಯ ಪ್ರತಿಗಳನ್ನು ಪ್ರಕಾಶಕರಾದ ಕಾವ್ಯಾಲಯದ ಶ್ರೀ ಕೂಡಲಿ ಚಿದಂಬರಂ ಅವರು ಹಂಚಿದರು.

ಈ ಎಲ್ಲ ಸಮಾರಂಭಗಳೂ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಏರ್ಪಾಡಾಗಿತ್ತು.

ಆರ್. ಎಸ್. ಶಿವಗಣೇಶ ಮೂರ್ತಿ

ಡಾ. ಎಸ್. ಶ್ರೀಕಂಠಶಾಸ್ತ್ರಿಗಳಿಗೆ ಅಭಿವಂದನೆ

ಜನವರಿ 15, 1973ರ ಸೋಮವಾರ ಸಂಜೆ 5 ಗಂಟೆ. ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ ಮಾನಸಗಂಗೋತ್ರಿಯಲ್ಲಿ ಹಬ್ಬದ ವಾತಾವರಣ. ಮಾನವಿಕ ವಿಭಾಗದ ಸಭಾಂಗಣದ ಬಾಗಿಲುಗಳಿಗೆ ಮಾವಿನ ತೋರಣ. ನಾಲ್ಕೂ ಕಡೆಯಿಂದ ಸಡಗರದಿಂದ ಬರುತ್ತಿರುವ ಅಭಿಮಾನಿಗಳ ಗುಂಪು. ಕಾರಣ: ಕರ್ನಾಟಕದ ಖ್ಯಾತ ಇತಿಹಾಸಜ್ಞರೂ ಪ್ರಸಿದ್ಧ ಬರಹಗಾರರೂ ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಾಪಕರೂ ಆದ ಡಾಕ್ಟರ್ ಎಸ್. ಶ್ರೀಕಂಠಶಾಸ್ತ್ರಿ ಅವರಿಗೆ ಅಂದು ಅಭಿನಂದನೆ: 'ಶ್ರೀಕಂಠಿಕಾ' ಅಭಿನಂದನ ಗ್ರಂಥದ ಸಮರ್ಪಣೆ. ಏರ್ಪಡಿಸಿದ್ದವರು ಡಾ. ಎಸ್. ಶ್ರೀಕಂಠಶಾಸ್ತ್ರಿ ಅಭಿನಂದನ ಸಮಿತಿಯವರು. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ದೇ. ಜವರೇಗೌಡ ಅವರು ಸಮಿತಿಯ ಅಧ್ಯಕ್ಷರು; ಶ್ರೀಕಂಠ ಶಾಸ್ತ್ರಿಗಳ ಶಿಷ್ಯರು, ಪ್ರಶಿಷ್ಯರು, ಸ್ನೇಹಿತರು ಮತ್ತು ಅಭಿಮಾನಿಗಳು ಈ ಸಮಿತಿಯ ಕಾರ್ಯನಿರ್ವಾಹಕರು.

* * * *

ಪ್ರೊಫೆಸರ್ ಎಸ್. ಶ್ರೀಕಂಠಶಾಸ್ತ್ರಿ ಅವರು ಕರ್ನಾಟಕದ ಪ್ರಸಿದ್ಧ ಇತಿಹಾಸಜ್ಞರು. ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದಲ್ಲಿ ಶ್ರೇಷ್ಠ ದರ್ಜೆಯ ಬೋಧಕರಾಗಿ, ಸುಮಾರು ಮೂವತ್ತೈದು ವರ್ಷಗಳಷ್ಟು ದೀರ್ಘಕಾಲ ಸಹಸ್ರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿದ್ದಾರೆ. ಇತಿಹಾಸ ಶಾಖೆಯ ವಿವಿಧ ಕ್ಷೇತ್ರಗಳಲ್ಲಿ ಸ್ವತಂತ್ರವಾಗಿ ಸಂಶೋಧನೆ ಮಾಡಿ, ಸ್ಮರಣೀಯವಾದ ಗ್ರಂಥಗಳನ್ನು ರಚಿಸಿದ್ದಾರೆ. ತಮ್ಮ ಉತ್ತಮ ಮಟ್ಟದ ಬೋಧನೆ ಮತ್ತು ಸಂಶೋಧನೆಗಳಿಂದ ಸಹಸ್ರಾರು ವಿದ್ಯಾರ್ಥಿಗಳ ಸ್ಮರಣೆಗೆ ಪಾತ್ರರಾಗಿದ್ದಾರೆ. ಅವರ ಮುಂದಾಳಿಕೆಯಲ್ಲಿ ಮುನ್ನಡೆದ ನೂರಾರು ವಿದ್ಯಾರ್ಥಿಗಳು ಭಾರತೀಯ ಇತಿಹಾಸ ಮತ್ತು ಸಂಸ್ಕೃತಿ ಕ್ಷೇತ್ರದಲ್ಲಿ ಇಂದು ಹೆಸರಾಗಿದ್ದಾರೆ.

ಡಾ. ಎಸ್ ಶ್ರೀಕಂಠಶಾಸ್ತ್ರಿ ಅವರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಖ್ಯಾತಿಯನ್ನು ಪಡೆದಿರುವ ವಿದ್ವಾಂಸರು. ಕನ್ನಡ, ಇಂಗ್ಲಿಷ್, ತೆಲುಗು, ಸಂಸ್ಕೃತ, ಜರ್ಮನ್ ಮೊದಲಾದ ಭಾಷೆಗಳಲ್ಲಿ ಪ್ರಾವೀಣ್ಯವನ್ನು ಪಡೆದಿರುವ ಬಹುಭಾಷಾ ಸಾಹಿತ್ಯಜ್ಞರು. ಭಾರತದ ಪ್ರಾಚೀನ ಇತಿಹಾಸ ಮತ್ತು ಸಂಸ್ಕೃತಿಗಳ ಕ್ಷೇತ್ರದಲ್ಲಿ ಮುಖ್ಯವಾಗಿ ಕರ್ನಾಟಕದ ಇತಿಹಾಸ ಹಾಗೂ ಸಂಸ್ಕೃತಿಗಳ ವಿಷಯದಲ್ಲಿ ಆಳವಾದ ಅಧ್ಯಯನ ಮತ್ತು ಸಂಶೋಧನೆಗಳನ್ನು ನಡೆಸಿ, ಆ ಬಗ್ಗೆ ಅಧಿಕಾರವಾಣಿಯಿಂದ ಮಾತನಾಡಬಲ್ಲ ಕೆಲವೇ ವಿದ್ವಾಂಸರಲ್ಲಿ ಗಣ್ಯರಾಗಿದ್ದಾರೆ. ಅವರ ಬಹುಮುಖವಾದ ಅಧ್ಯಯನ ಸಂಶೋಧನೆಗಳು ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳ ಅಭಿನಂದನ ಸ್ಮಾರಕ ಸಂಪುಟಗಳಲ್ಲಿ, ವಿದ್ವತ್ ಪತ್ರಿಕೆಗಳಲ್ಲಿಯೂ ಪ್ರಕಟವಾಗಿರುವ ಅವರ ನೂರಾರು ಸಂಶೋಧನ ಲೇಖನಗಳಲ್ಲಿ ಮತ್ತು ಅವರು ಪ್ರಕಟಿಸಿರುವ ಶ್ರೇಷ್ಠವಾದ ಗ್ರಂಥಗಳಲ್ಲಿ ಸಮರ್ಥ ರೀತಿಯಲ್ಲಿ ಪ್ರಕಟಗೊಂಡಿದ್ದು, ಆಯಾ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕವರಿಗೆ ಮಾರ್ಗದರ್ಶನ ಮಾಡತಕ್ಕವಾಗಿವೆ. ಭಾರತೀಯ ಸಂಸ್ಕೃತಿ; ಹೊಯ್ಸಳ ವಾಸ್ತುಶಿಲ್ಪ; ಕರ್ನಾಟಕ ಇತಿಹಾಸ ಆಧಾರಗಳು (ಭಾಗ-1)ಮೊದಲಾದ ಅವರ ಗ್ರಂಥಗಳು ನಾಡಿನ ವಿದ್ವಾಂಸರ ಮನ್ನಣೆ ಗಳಿಸಿವೆ. ಇತಿಹಾಸ ಸಂಸ್ಕೃತಿಗಳಿಗೆ ಸಂಬಂಧಿಸಿದ ವಿಷಯಗಳನ್ನು ಕನ್ನಡದಲ್ಲಿ ಸುಲಲಿತವಾಗಿ ಬರೆಯುವುದು ಮತ್ತು ಬೋಧಿಸುವುದು ಸಾಧ್ಯ ಎಂಬುದನ್ನು ಬಹು ಹಿಂದೆಯೇ ತೋರಿಸಿಕೊಟ್ಟ ವಿದ್ವಾಂಸರಲ್ಲಿ ಶ್ರೀಕಂಠಶಾಸ್ತ್ರಿ ಅವರನ್ನು ಹೆಸರಿಸಬೇಕು.

ನಾಡಿನ ಇತಿಹಾಸ ಮತ್ತು ಸಂಸ್ಕೃತಿಗಳ ವಿಸ್ತಾರವಾದ ಕ್ಷೇತ್ರದಲ್ಲಿ ಸದ್ದುಗದ್ದಲವಿಲ್ಲದೆ, ಶ್ರಮಪೂರ್ಣವಾದ ಅಮೂಲ್ಯ ಸೇವೆಯನ್ನು ಸಲ್ಲಿಸುತ್ತಿರುವ ಈ ಮಹಾವಿದ್ವಾಂಸರನ್ನು ಅಭಿನಂದಿಸುವ ಒಂದು ಯೋಜನೆಯನ್ನು ರೂಪಿಸಿದ ಡಾ. ಶ್ರೀಕಂಠಶಾಸ್ತ್ರಿಗಳ ಅಭಿಮಾನಿಗಳು ಮತ್ತು ಶಿಷ್ಯರು ಅದನ್ನು ಯಶಸ್ವಿಯಾಗಿ ನಿರ್ವಹಿಸಿ, ಎಲ್ಲರ ಮೆಚ್ಚುಗೆಗೆ ಪಾತ್ರರಾದರು. 'ಶ್ರೀಕಂಠಿಕಾ' ಅಭಿನಂದನ ಗ್ರಂಥವನ್ನು ಒಪ್ಪಿಸಿ, 'ಆದರ್ಶ ಗುರುವಿಗೆ ನಮಿಸಿದರು'.

ಅಂದು ಸಂಜೆ 5-30 ಗಂಟೆಗೆ ಸಮಾರಂಭ ಪ್ರಾರಂಭವಾಯಿತು. ಪತ್ನೀಸಮೇತ ಆಗಮಿಸಿದ ಡಾ. ಶ್ರೀಕಂಠಶಾಸ್ತ್ರೀ ಅವರನ್ನು, ಮಂಗಳವಾದ್ಯಗಳೊಡನೆ ಪೂರ್ಣಕುಂಭ ನೀಡಿ ಸಂಭ್ರಮದಿಂದ

ಸ್ವಾಗತಿಸಿ, ವೇದಿಕೆಗೆ ಕರೆದೊಯ್ಯಲಾಯಿತು. ಸಭಾಂಗಣ ಶಾಸ್ತ್ರಿಗಳ ಶಿಷ್ಯರು, ಸ್ನೇಹಿತರು ಮತ್ತು ಅಭಿಮಾನಿಗಳಿಂದ ತುಂಬಿತ್ತು.

ಪ್ರಾರ್ಥನೆಯಾದ ಮೇಲೆ, ಸ್ವಾಗತ ಭಾಷಣ ಮಾಡಿದ ಇತಿಹಾಸ ವಿಭಾಗದ ಪ್ರಾಧ್ಯಾಪಕರೂ, ಅಭಿನಂದನ ಸಮಿತಿಯ ಸದಸ್ಯರೂ ಆದ ಡಾ. ಬಿ. ಷೇಕ್ ಅಲಿ ಅವರು, ಡಾ. ಶ್ರೀಕಂಠಶಾಸ್ತ್ರಿಗಳ ಪಾಂಡಿತ್ಯ ಪ್ರತಿಭೆಗಳನ್ನು ಕೊಂಡಾಡಿ, ಅವರು ಹಾಕಿಕೊಟ್ಟ ದಾರಿಯಲ್ಲಿಯೇ ಇತಿಹಾಸ ವಿಭಾಗ ಕೆಲಸ ಮಾಡುತ್ತಿದೆ ಎಂದರು.

ಸಮಾರಂಭಕ್ಕೆ ಶುಭಕೋರಿ ಬಂದಿದ್ದ ಸಂದೇಶಗಳನ್ನು ಡಾ. ಬಿ. ಕೆ. ಗುರುರಾಜರಾವ್ ಓದಿದರು.

ಅಭಿನಂದನ ಸಮಿತಿಯ ಕಾರ್ಯದರ್ಶಿಗಳಲ್ಲೊಬ್ಬರೂ, ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಾಪಕರೂ ಆದ ಡಾ. ಜಿ. ವಿ. ವೆಂಕಟಾಚಲಶಾಸ್ತ್ರೀ ಅವರು ವಿವರವಾದ ವರದಿ ಓದಿ, ಅಭಿನಂದನ ಸಮಿತಿ, ನಡೆಸಿದ ಚಟುವಟಿಕೆಗಳನ್ನು ಪರಿಚಯಿಸಿದರು. ಅಭಿನಂದನ ಸಮಿತಿಯ ಕೋರಿಕೆಯನ್ನು ಮನ್ನಿಸಿ ನಾಡಿನಾದ್ಯಂತ ಹಾಗೂ ಹೊರಗಡೆಯೂ ಇರುವ ಶಾಸ್ತ್ರಿಗಳ ಶಿಷ್ಯರು ಮತ್ತು ಅಭಿಮಾನಿಗಳು ಮಾಡಿದ ಉದಾರ ಧನಸಹಾಯವನ್ನು ಸ್ಮರಿಸಿದರು. ಮೈಸೂರು ವಿಶ್ವವಿದ್ಯಾನಿಲಯ ಒಂದು ಸಹಸ್ರ ರೂಪಾಯಿಗಳ ಕಾಣಿಕೆ ನೀಡಿದ್ದನ್ನು ಕೃತಜ್ಞತೆಯಿಂದ ನೆನೆದ ಅವರು ಇದರ ಫಲವಾಗಿ ಸುಮಾರು ಒಂಬತ್ತು ಸಹಸ್ರ ರೂಪಾಯಿಗಳನ್ನು ಸಂಗ್ರಹಿಸಲು ಸಮಿತಿಗೆ ಸಾಧ್ಯವಾಯಿತೆಂದರು. ಸಮಿತಿಗೆ ವಿಶ್ವವಿದ್ಯಾನಿಲಯದ ನೆರವನ್ನು ದೊರಕಿಸಿಕೊಟ್ಟದ್ದು ಮಾತ್ರವಲ್ಲದೇ, ಕಾರ್ಯಕಲಾಪಗಳಲ್ಲಿಯೂ ಬಹಳ ಆಸಕ್ತಿ ತೋರಿದ ಕುಲಪತಿ ಪ್ರೊ. ದೇಜಗೌ. ಅವರನ್ನು ವಂದಿಸಿದರು. ಅಭಿನಂದನ ಗ್ರಂಥಕ್ಕೆ ಅಚ್ಚಿನ ಮನೆಯನ್ನು ಗೊತ್ತು ಮಾಡುವುದರಿಂದ ಹಿಡಿದು, ಗ್ರಂಥದ ಆಕಾರ, ಗಾತ್ರ, ಅಂದ ಚೆಂದ ಮೊದಲಾದ ರೂಪರೇಷೆಯ ಅಂಶಗಳನ್ನು ರೂಪಿಸುವವರೆಗೆ ಸಹಕರಿಸಿ, ಸಮಿತಿಗೆ ದೊಡ್ಡ ಒತ್ತಾಸೆಯಾಗಿ ನಿಂತ, ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಡಾ. ಹಾ. ಮಾ. ನಾಯಕ ಅವರ ನೆರವನ್ನು ಕೃತಜ್ಞತೆಯಿಂದ ನೆನೆದರು.

ಇತಿಹಾಸ, ಸಂಸ್ಕೃತ, ಪ್ರಾಕ್ತನ ಮೊದಲಾದ ವಿಷಯಗಳ ಮೇಲೆ ನಾಡಿನ ಖ್ಯಾತ ವಿದ್ವಾಂಸರು ಬರೆದಿರುವ 58 ಲೇಖನಗಳ ಸಂಗ್ರಹ 'ಶ್ರೀಕಂಠಿಕಾ' ಅಭಿನಂದನ ಗ್ರಂಥವನ್ನು ಸಂತೋಷದಿಂದ ಬಿಡುಗಡೆ ಮಾಡಿ, ಸಮಾರಂಭದಲ್ಲಿ ಮಾತನಾಡಿದ, ಮದರಾಸು ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಚೀನ ಇತಿಹಾಸ ಪ್ರಾಧ್ಯಾಪಕರಾದ ಡಾ. ಟಿ. ವಿ. ಮಹಾಲಿಂಗಂ ಅವರು—ಪ್ರೊ. ಶ್ರೀಕಂಠಶಾಸ್ತ್ರಿಗಳ ಖಚಿತವಾದ ಜ್ಞಾನ; ಅವರ ಸಂಶೋಧನೆಯ ವೈಖರಿ ಅದಕ್ಕಿಂತ ಹೆಚ್ಚಾಗಿ, ಪ್ರಾಚೀನ ಕಾಲದಿಂದ ಇಲ್ಲಿಯವರೆಗೆ ಎಲ್ಲ ಕಾಲದ ಬಗ್ಗೆ ಆಳವಾದ ಅಧ್ಯಯನ ನಡೆಸಿ ಅನೇಕ ಗ್ರಂಥಗಳನ್ನು ಮತ್ತು ರಾಶಿ ರಾಶಿ ಲೇಖನಗಳನ್ನು ಬರೆದಿರುವುದನ್ನು ಪ್ರಶಂಸಿಸಿದರು. ವಯಸ್ಸು, ವಿದ್ವತ್ತು, ಸಾಧನೆ ಎಲ್ಲದರಲ್ಲಿಯೂ ತಮಗಿಂತ ಹಿರಿಯರಾದ ಡಾ. ಶಾಸ್ತ್ರಿಗಳಿಗೆ ಅವರು ತಲೆಬಾಗಿ ಗೌರವ ಸಲ್ಲಿಸಿದರು.

ಔರಂಗಾಬಾದ್ ವಿಭಾಗದ ಪುರಾತತ್ವ ಇಲಾಖೆಯ ಸೂಪರಿಂಟೆಂಡೆಂಟ್ ಹಾಗೂ ಶ್ರೀಕಂಠ ಶಾಸ್ತ್ರಿಗಳ ಶಿಷ್ಯರಲ್ಲಿ ಒಬ್ಬರು ಆದ ಡಾ. ಎಸ್. ಆರ್. ರಾವ್ ಅವರು ಅಭಿನಂದನ ಭಾಷಣ ಮಾಡಿ ಭಾರತದ ಕೆಲವೇ ಹಿರಿಯ ವಿದ್ವಾಂಸರಲ್ಲಿ ಒಬ್ಬರಾದ ಶ್ರೀಕಂಠಶಾಸ್ತ್ರಿಗಳು ಭಾರತ ಮತ್ತು ಕರ್ನಾಟಕ ಇತಿಹಾಸ ಹಾಗೂ ಪುರಾತತ್ವಗಳಿಗೆ ನೀಡಿರುವ ವಿಶೇಷ ಕೊಡುಗೆಯನ್ನು ಸ್ಮರಿಸಿ, ತಮ್ಮ 'ಗುರುದೇವ'ರಿಗೆ ನಮಿಸಿದರು.

ಕರ್ನಾಟಕದ ಖ್ಯಾತ ಪತ್ರಿಕೋದ್ಯಮಿಗಳೂ ಪ್ರಸಿದ್ಧ ಸಾಹಿತಿಗಳೂ ಆದ ಶ್ರೀ ತಿರುಮಲೆ ತಾತಾಚಾರ್ಯ ಶರ್ಮ ಅವರು ಮಾತನಾಡಿ; "ಇತಿಹಾಸ, ಸಂಶೋಧನೆಯ ಕ್ಷೇತ್ರದಲ್ಲಿ ನಿರ್ಭಯ ಪ್ರಾಮಾಣಿಕ ವಿಚಾರ ಮಂಡನೆ, ವಿದೇಶೀಯರಿಗೂ ಜನಸಾಮಾನ್ಯರಿಗೂ ಶ್ರೀಕಂಠಶಾಸ್ತ್ರಿಗಳಿಂದ ಸಂದ ವಿಶಿಷ್ಟ ಸೇವೆಗಾಗಿ ಕನ್ನಡ ಜನತೆಯ ಪರವಾಗಿ ಅವರನ್ನು ವಂದಿಸಿದರು. "ಶ್ರೀಕಂಠಶಾಸ್ತ್ರಿಗಳಿಂದಲೇ ಒಂದು ಪರಂಪರೆ ಪ್ರಾರಂಭವಾಯಿತು" ಎಂದು ತಿಳಿಸಿದ ಶ್ರೀ ಶರ್ಮರು "ಸಂಶೋಧನೆ ಶ್ರೀಕಂಠಶಾಸ್ತ್ರಿಗಳಿಗೆ ಸತ್ಯಾನ್ವೇಷಣೆಯ ಕೆಲಸವಾಗಿತ್ತು" ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ಕೀರ್ತಿ ಪತಾಕೆಯನ್ನು ವಿಶ್ವದಲ್ಲಿ ಬೆಳಗಿಸಿದ ಡಾ. ಶ್ರೀಕಂಠ ಶಾಸ್ತ್ರಿಗಳಿಗೆ ವಿಶ್ವವಿದ್ಯಾನಿಲಯದ ಪರವಾಗಿ ವಂದಿಸಿದ ಕುಲಪತಿ ದೇಜಗೌ ಅವರು; "ಡಾ. ಶಾಸ್ತ್ರಿ

ಗಳು ಅಲ್ಲಲ್ಲಿ ಬರೆದಿರುವ ಬಿಡಿಲೇಖನಗಳನ್ನು ಯಾರಾದರೂ ಸಂಗ್ರಹಿಸಿ ಕೊಟ್ಟರೆ. ವಿಶ್ವವಿದ್ಯಾನಿಲಯ ಅವನ್ನು ಸಂತೋಷದಿಂದ ಪ್ರಕಟಿಸುವುದೆಂದರು. ವಿಶ್ವವಿದ್ಯಾನಿಲಯದ ಚರಿತ್ರೆ ವಿಭಾಗ ಕರ್ನಾಟಕ ಇತಿಹಾಸವನ್ನು ಸಿದ್ಧಪಡಿಸುತ್ತಿದೆ ಎಂದು ತಿಳಿಸಿದ ಕುಲಪತಿಗಳು. ಆ ಮಾಲೆಯ ಪ್ರಥಮ ಸಂಪುಟ ಬೇಗನೇ ಪ್ರಕಟವಾಗಲಿದೆ ಎಂದರು.

ಡಾ. ಶ್ರೀಕಂಠಶಾಸ್ತ್ರಿಗಳು ಕರ್ನಾಟಕ ಸಾಂಸ್ಕೃತಿಕ ಇತಿಹಾಸದ ಪಾಠ ಹೇಳುತ್ತಿದ್ದ ರೀತಿಯನ್ನು ಸ್ಮರಿಸಿದ ದೇಜಗೌ ಅವರು "ಅವರ ವಿದ್ವತ್ತಿನ ಮಹಾಸಾಗರದಲ್ಲಿ ತಾವು ಒಂದು ತೊಟ್ಟು ಕುಡಿಯಲು ಸಾಧ್ಯವಾಗಿರಬಹುದು" ಎಂದು ಹೇಳಿ. ತಮ್ಮ ಕೃತಜ್ಞತೆಯನ್ನು ಸಲ್ಲಿಸಿದರು.

ಡಾ. ಶ್ರೀಕಂಠಶಾಸ್ತ್ರಿಗಳಿಗೆ ಶಾಲು ಹೊದಿಸಿ. ಫಲತಾಂಬೂಲವನ್ನು ಅರ್ಪಿಸಿದ ಕುಲಪತಿಗಳು. ಅಭಿನಂದನ ಸಮಿತಿಯ ಪರವಾಗಿ 2001 ರೂಪಾಯಿಗಳ ನಿಧಿಯನ್ನು ಒಪ್ಪಿಸಿದರು.

ಅಭಿನಂದನ ಸಮಿತಿಯ ಕೋಶಾಧಿಕಾರಿಗಳೂ ಕನ್ನಡ ವಿಶ್ವಕೋಶದ ಕಾರ್ಯನಿರ್ವಾಹಕ ಸಂಪಾದಕರೂ ಆದ ಶ್ರೀ ಕೆ. ಟಿ. ವೀರಪ್ಪ ಅವರು; ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀಕಂಠಶಾಸ್ತ್ರಿಗಳ ಹೆಸರಿನಲ್ಲಿ ದತ್ತಿ ನಿರ್ಮಾಣಕ್ಕಾಗಿ ಕುಲಪತಿಗಳಿಗೆ 3000 ರೂಪಾಯಿಗಳನ್ನು ಸಮಿತಿಯ ಪರವಾಗಿ ಅರ್ಪಿಸಿದರು. ಕರ್ನಾಟಕ ಸಾಂಸ್ಕೃತಿಕ ಇತಿಹಾಸದಲ್ಲಿ ಅತ್ಯಂತ ಅಧಿಕ ಅಂಕ ಗಳಿಸುವ ವಿದ್ಯಾರ್ಥಿಗೆ ಪ್ರತಿ ವರ್ಷ ಸುವರ್ಣ ಪದಕವನ್ನು ನೀಡಲು ಈ ದತ್ತಿಯನ್ನು ಸ್ಥಾಪಿಸಿದೆ.

ತಮ್ಮ ಬಗ್ಗೆ ಅಭಿಮಾನದ ಮಳೆಗರೆದದ್ದಕ್ಕೆ ಕೃತಜ್ಞತಾಭಾವದಿಂದ ಎಲ್ಲರನ್ನೂ ವಂದಿಸಿದ ಡಾ. ಶ್ರೀಕಂಠಶಾಸ್ತ್ರಿಗಳು ಕರ್ನಾಟಕ ಚರಿತ್ರೆ ಮೂಲಾಧಾರಗಳ ಸಂಗ್ರಹ ಕಾರ್ಯದಲ್ಲಿ ಬಹಳ ಕೆಲಸ ಮಾಡಿರುವ ಲೂಯಿ ರೈಸ್; ಆರ್. ನರಸಿಂಹಾಚಾರ್; ಶಾಮಾಶಾಸ್ತ್ರಿ; ಎಂ. ಎಚ್. ಕೃಷ್ಣ ಮೊದಲಾದವರನ್ನು ಸ್ಮರಿಸಿ." ಆ ಪರಂಪರೆಯಲ್ಲಿ ನಾನು ಬಹಳ ಸಣ್ಣವನು" ಎಂದು ವಿನಯದಿಂದ ನುಡಿದರು. ಸಂಶೋಧನೆಯಲ್ಲಿ ಆಸಕ್ತಿಯನ್ನು ಪ್ರೀತಿಯನ್ನು ಬೆಳೆಸಿಕೊಳ್ಳಬೇಕೆಂದು ಅವರು ಯುವಕರಿಗೆ ಕರೆ ನೀಡಿದರು.

ತಾವು ಮಾಡಿದ ಸಣ್ಣ ಕೆಲಸಕ್ಕೆ ಇಷ್ಟೊಂದು ಗೌರವ. ಪ್ರೀತಿ. ವಿಶ್ವಾಸಗಳನ್ನು ತೋರಿದ್ದಕ್ಕೆ ಅವರು ಸಮಿತಿಯವರನ್ನು ವಂದಿಸಿದರು

—ಎಸ್. ಚನ್ನಪ್ಪ

ಜನಪದ ಕಲಾಮೇಳ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನಸಂಸ್ಥೆಯ ಆಶ್ರಯದಲ್ಲಿ ಜನವರಿ 26. 1973ರಂದು ಕರ್ನಾಟಕದ ವಿವಿಧ ಭಾಗಗಳ ಜಾನಪದ ಕಲಾವಿದರಿಂದ ಜನಪದ ಕಲಾಮೇಳವೊಂದು ಜರುಗಿತು. ಈ ಮಾದರಿಯಲ್ಲಿ ನಡೆದ ಕಲಾಮೇಳದಲ್ಲಿ ಇದು ಎರಡನೆಯದು. ಮಾನಸಗಂಗೋತ್ರಿಯ ಬಯಲು ರಂಗ ಮಂದಿರದಲ್ಲಿ ನಡೆದ ಈ ಅಪೂರ್ವ ಕಲಾಮೇಳವನ್ನು ಹತ್ತುಸಾವಿರಕ್ಕೂ ಹೆಚ್ಚು ಜನ ವೀಕ್ಷಿಸಿದರು.

ಪ್ರಾರಂಭದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಡಾ. ಹಾ. ಮಾ. ನಾಯಕ ಅವರು ಸ್ವಾಗತಿಸುತ್ತ ನಶಿಸಿಹೋಗುತ್ತಿರುವ ನಮ್ಮ ಅಪೂರ್ವ ಜನಪದ ಕಲೆಗಳಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಪ್ರತಿವರ್ಷವೂ ಇಂಥ ಕಲಾಮೇಳವನ್ನು ಏರ್ಪಡಿಸುವುದಾಗಿ ಹೇಳಿದರು. ಇಂಥ ಒಂದು ಮೇಳ ನಡೆಯಲು ಅಹರ್ನಿಶಿ ದುಡಿದ ಡಾ. ಜೀಶಂಪ ಮತ್ತು ಪಿ. ಆರ್. ತಿಪ್ಪೇಸ್ವಾಮಿಯವರನ್ನು ಅವರು ವಿಶೇಷತಃ ಸ್ಮರಿಸಿದರು. ಡಾ. ಜೀಶಂಪ ಅವರು ಎಲ್ಲ ನೃತ್ಯಗಳ ಮತ್ತು ಕಲಾವಿದರ ಕಿರು ಪರಿಚಯವನ್ನು ಆಯಾ ಕಾರ್ಯಕ್ರಮಕ್ಕೆ ಮೊದಲು ಮಾಡಿಕೊಟ್ಟರು. ಎಲ್ಲ ನೃತ್ಯಗಳನ್ನೂ ಶ್ರೀ ಪಿ. ಆರ್. ತಿಪ್ಪೇಸ್ವಾಮಿಯವರು ನಿರ್ದೇಶಿಸಿದ್ದರು. ಕರ್ನಾಟಕದ ವಿವಿಧ ಪ್ರದೇಶಗಳಿಂದ ಕಲಾವಿದರನ್ನು ಬರ ಮಾಡಿಕೊಳ್ಳಲಾಗಿತ್ತು. ಇದುವರೆಗೂ ಅಜ್ಞಾತವಾಗಿ ಉಳಿದಿದ್ದ ದಕ್ಷಿಣ ಕನ್ನಡ ಜಿಲ್ಲೆಯ ಕಾಂಗ್ಲಾ



ಭೂತನೃತ್ಯ (ಬಂಟವಾಳ, ದಕ್ಷಿಣ ಕನ್ನಡ)
ಮಂಜುಪಂಬದ ಮತ್ತು ಸಂಗಡಿಗರಿಂದ



ವೀರಗಾಸೆ ನೃತ್ಯ (ಗಿರಿಯಾಪುರ, ಕಡೂರು ತಾಲ್ಲೂಕು)

ನೃತ್ಯವನ್ನು ಪ್ರಥಮಬಾರಿ ರಂಗದ ಮೇಲೆ ತಂದ ಶ್ರೇಯಸ್ಸು ಕನ್ನಡ ಅಧ್ಯಯನ ಸಂಸ್ಥೆಯದು. ನಮ್ಮ ಜನಪದ ಹಿರಿಮೆಯನ್ನು ಉಳಿಸಿಕೊಂಡು ಬರುತ್ತಿರುವ ಕಲಾವಿದರು ತಮ್ಮ ನೃತ್ಯ–ಕುಣಿತಗಳಿಂದ ಜನರನ್ನು ರಂಜಿಸಿದರು. ಬೆಂಗಳೂರು ಜಿಲ್ಲೆಯ ಕರಗ ನೃತ್ಯ, ದಕ್ಷಿಣ ಕನ್ನಡ ಜಿಲ್ಲೆಯ ಭೂತನೃತ್ಯ, ಉತ್ತರ ಕನ್ನಡ ಜಿಲ್ಲೆಯ ಪ್ರೇತ ನೃತ್ಯ, ತುಮಕೂರು ಜಿಲ್ಲೆಯ ಚೌಡಿಕೆ ಮೇಳ, ಮಂಡ್ಯ ಜಿಲ್ಲೆಯ ಪಂಜಿನ ಕುಣಿತ, ಸೋಮನ ಕುಣಿತ, ಮೈಸೂರು ಜಿಲ್ಲೆಯ ನಂದಿಕೋಲು ಕುಣಿತ ಜಡೆ ಕೋಲಾಟ ಇವು ಕಾರ್ಯಕ್ರಮದ ಮುಖ್ಯ ಆಕರ್ಷಣೆಗಳಾಗಿದ್ದವು. ಪ್ರತಿವರ್ಷವೂ ಗಣರಾಜ್ಯದಿನದಂದು ಇಂಥ ಕಲಾಮೇಳವನ್ನು ನಡೆಸಲು ನಿರ್ಧರಿಸಿರುವುದು ಶ್ಲಾಘನೀಯ.

—ಜಿ. ಎಸ್. ಭಟ್ಟ

ಮೈಸೂರು ರಾಜ್ಯದ ಯೋಜನಾ ಮಂಡಲಿ

ಮೈಸೂರು ರಾಜ್ಯ ಸರ್ಕಾರ ಮೊಟ್ಟಮೊದಲನೆಯ ಬಾರಿಗೆ 1968ರ ಮೇ 8ರಂದು ಯೋಜನಾ ಮಂಡಲಿಯನ್ನು ಸ್ಥಾಪಿಸಿತು. ಇದಕ್ಕಿಂತ ಮುಂಚೆ ಯೋಜನೆಗಳನ್ನು ತಯಾರಿಸುವ ಮತ್ತು ಯೋಜನೆಗಳ ಪ್ರಗತಿ ಮತ್ತು ಸಮಸ್ಯೆಗಳನ್ನು ಕುರಿತು ವಿಮರ್ಶಿಸುವ ಕೆಲಸ ರಾಜ್ಯದ ಯೋಜನಾ ಇಲಾಖೆಯ ಕರ್ತವ್ಯವಾಗಿತ್ತು. ರಾಜ್ಯದ ಯೋಜನಾ ಮಂಡಲಿಯನ್ನು 1968ರಿಂದೀಚೆಗೆ ಅನೇಕ ಸಾರಿ ಪುನರ್‌ರಚಿಸಲಾಗಿದೆ. 1972ರ ಮೇ 13ರಂದು ರಾಜ್ಯ ಸರ್ಕಾರದವರು ಈ ಯೋಜನಾ ಸಮಿತಿಯನ್ನು ಮತ್ತೊಮ್ಮೆ ಪುನರ್‌ರಚಿಸಿದರು. ಈಗಿರುವ ಯೋಜನಾ ಮಂಡಲಿಯ ಅವಧಿ ಎರಡು ವರ್ಷಗಳು. ಈ ಮಂಡಲಿಗೆ ಮುಖ್ಯಮಂತ್ರಿಗಳು ಅಧ್ಯಕ್ಷರು; ಹಣಕಾಸಿನ ಸಚಿವರು ಉಪಾಧ್ಯಕ್ಷರು; ರಾಜ್ಯದ ಯೋಜನಾ ಸಚಿವರು, ಇಬ್ಬರು ಅರ್ಥಶಾಸ್ತ್ರಜ್ಞರು, ವಿಧಾನಸಭೆಯ ಇಬ್ಬರು ಸದಸ್ಯರು ಒಬ್ಬ ಪರಮೋಚ್ಚ ನ್ಯಾಯಾಲಯದ ಅಡ್ವೊಕೇಟರು, ಒಬ್ಬ ಕೈಗಾರಿಕೋದ್ಯಮಿ–ಇವರು ಸದಸ್ಯರು; ಯೋಜನಾ ಇಲಾಖೆಯ ಕಾರ್ಯದರ್ಶಿಗಳು ಇದರ ಸದಸ್ಯ ಕಾರ್ಯದರ್ಶಿಗಳು.

ರಾಜ್ಯದ ಯೋಜನಾ ಮಂಡಲಿಯ ಕಾರ್ಯಭಾರ ಈ ರೀತಿ ಇದೆ:

(1 ರಾಜ್ಯದಲ್ಲಿ ಎಷ್ಟು ಮತ್ತು ಎಲ್ಲೆಲ್ಲಿ ನೈಸರ್ಗಿಕ ಸಂಪತ್ತು ಇದೆ ಎಂಬುದನ್ನು ನಿರ್ಧರಿಸಲು ತಕ್ಕ ಅಧ್ಯಯನಗಳನ್ನು ಪ್ರಾರಂಭಿಸುವುದರ ಜೊತೆಗೆ ಈಗಾಗಲೆ ನಡೆದಿರುವ ಮತ್ತು ನಡೆಯುತ್ತಿರುವ ಅಧ್ಯಯನಗಳನ್ನು ಕ್ರೋಢೀಕರಿಸುವುದು.

(2) ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಬೇಕಾಗುವ ಒಂದು ಯಥಾದೃಷ್ಟಿಯ, (ಪರ್ಸ್ಪೆಕ್ಟಿವ್) ಯೋಜನೆಯನ್ನು ರೂಪಿಸುವುದು ಮತ್ತು ಈ ಯಥಾದೃಷ್ಟಿಯ ಯೋಜನೆಯನ್ನು ಗಮನದಲ್ಲಿಟ್ಟುಕೊಂಡು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಏನಾದರೂ ಮಾರ್ಪಾಡು ಆಗಬೇಕಾದರೆ ಅವುಗಳಿಗೆ ತಕ್ಕ ಸಲಹೆ ನೀಡುವುದು.

(3) ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಬೇಕಾದ ಹಣಕಾಸನ್ನು ಶೇಖರಿಸಲು ಬೇಕಾಗುವ ಸೂಕ್ತ ಸಲಹೆಗಳನ್ನು ನೀಡುವುದು.

(4) ಅಭಿವೃದ್ಧಿಯ ಅನೇಕ ಕ್ಷೇತ್ರಗಳಲ್ಲಿ ಪ್ರಾಂತೀಯ ಏರುಪೇರುಗಳಿದ್ದರೆ ಅವುಗಳನ್ನು ಗುರುತಿಸುವುದು ಮತ್ತು ಅಂಥ ಏರುಪೇರುಗಳನ್ನು ಕ್ರಮೇಣ ಕಡಿಮೆ ಮಾಡಲು ಸರಿಯಾದ ಕ್ರಮಗಳನ್ನು ಸೂಚಿಸುವುದು.

(5) ಜಿಲ್ಲೆಯ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವಾಗ ಜಿಲ್ಲಾಧಿಕಾರಿಗಳಿಗೆ ತಕ್ಕ ಸಹಾಯವನ್ನು ನೀಡುವುದು ಮತ್ತು ರಾಜ್ಯದ ಹಾಗೂ ಜಿಲ್ಲೆಗಳ ಯೋಜನೆಗಳನ್ನು ಪರಸ್ಪರ ಹೊಂದಿಸುವುದು.

(6) ಯೋಜನಾ ಕ್ರಮಗಳ ಪ್ರಗತಿಯ ವಿವರವಾಗಿ ಆಗಾಗ ವಿಮರ್ಶೆ ನಡೆದು ಯೋಜನೆಯ ಧ್ಯೇಯೋದ್ದೇಶಗಳನ್ನು ನಿಲುಕಲು ಸಹಾಯಕವಾಗುವುದು.

(7) ದೇಶದಲ್ಲಿ ತ್ವರಿತ ಆರ್ಥಿಕ ಅಭಿವೃದ್ಧಿಯನ್ನು ತರುವುದಕ್ಕೆ ಅವಶ್ಯಕವಾಗಿರುವ ಇತರ ಯಾವ ಕ್ರಮಗಳಿದ್ದರೂ ಅವುಗಳನ್ನು ಪ್ರಾರಂಭಿಸುವುದು.

ಯೋಜನಾ ಮಂಡಲಿಯ ಸದಸ್ಯರಲ್ಲಿ ಪೂರ್ಣವೇಳೆಯ ಸದಸ್ಯರಾಗಲಿ, ಕೊನೆಯ ಪಕ್ಷ ಅರೆವೇಳೆಯ ಸದಸ್ಯರೇ ಆಗಲಿ ಯಾರೂ ಇಲ್ಲ. ಯೋಜನಾ ಮಂಡಲಿ ಒಂದು ಸಲಹಾ ಸಮಿತಿಯಂತೆ ಕಾಣುತ್ತದೆ. ಈ ಮಂಡಲಿ ತನಗೆ ವಹಿಸಿದ ಕಾರ್ಯಭಾರವನ್ನು ನಿರ್ವಹಿಸಲು ಸಾಧ್ಯವೇ ಎಂಬುದು ಸಂದೇಹಾಸ್ಪದ. ಆದ್ದರಿಂದ ರಾಜ್ಯದ ಮಟ್ಟದಲ್ಲಿ ಕೆಲವು ಪೂರ್ಣ ವೇಳೆಯ ಮತ್ತು ಕೆಲವು ಅರೆವೇಳೆಯ ಸದಸ್ಯರನ್ನೊಳಗೊಂಡ ಒಂದು ಯೋಜನಾ ಆಯೋಗವನ್ನು ನೇಮಿಸುವುದು ಅತ್ಯವಶ್ಯಕ. ಅಲ್ಲದೆ, ಕೇಂದ್ರದಲ್ಲಿರುವಂತೆ ರಾಜ್ಯದಲ್ಲಿ ಒಂದು ಆರ್ಥಿಕ ಸಲಹೆಗಾರರ ಸಮಿತಿಯನ್ನು ನೇಮಿಸಬೇಕು. ಈ ಸಮಿತಿಯಲ್ಲಿ ಗಣ್ಯ ಅರ್ಥಶಾಸ್ತ್ರಜ್ಞರಿರಬೇಕು. ಇವರು ರಾಜ್ಯದ ಯೋಜನಾ ಆಯೋಗದ ಸದಸ್ಯರಾಗಿಯೂ ಇರಬೇಕು. ಇದಲ್ಲದೆ, ಜಿಲ್ಲಾ ಮತ್ತು ಬ್ಲಾಕ್ ಮಟ್ಟದಲ್ಲಿ ಸರಿಯಾದ ತಜ್ಞರನ್ನೊಳಗೊಂಡ ಯೋಜನಾ ವಿಭಾಗಗಳನ್ನು ಸ್ಥಾಪಿಸುವುದು ಬಹಳ ಅಗತ್ಯ. ರಾಜ್ಯದಲ್ಲಿ ಯೋಜನಾ ನಿರ್ವಹಣಾ ಸಂಸ್ಥೆಗಳು ಬಲವಾಗಿ ಇಲ್ಲದಿದ್ದರೆ ಸಮರ್ಪಕವಾದ ಯೋಜನೆಗಳನ್ನು ನಿರೂಪಿಸಲು ಸಾಧ್ಯವಾಗುವುದಿಲ್ಲ ಮತ್ತು ಅವುಗಳನ್ನು ಸರಿಯಾಗಿ ಕಾರ್ಯರೂಪಕ್ಕೆ ತರುವುದೂ ಕಷ್ಟಕರವಾಗುತ್ತದೆ.

ಅರುಮುಗಂ ವರದಿ

1972ರ ಡಿಸೆಂಬರ್ 4ರಂದು ಮೈಸೂರು ವಿಧಾನಸಭೆ ವಿಧಾನಸಭಾ ಸದಸ್ಯರಾದ ಶ್ರೀ ಆರ್.ಎಂ. ಅರುಮುಗಂ ಅವರನ್ನು ರಾಜ್ಯದ ಕ್ಷಾಮಪೀಡಿತ ಜಿಲ್ಲೆಗಳಾದ ಬೀದರ್, ಗುಲ್ಬರ್ಗ, ಬಿಜಾಪುರ ಮತ್ತು ಬೆಳಗಾಂವಿಗಳಲ್ಲಿರುವ ಸ್ಥಿತಿಯನ್ನು ಅಧ್ಯಯನ ಮಾಡಿ ವರದಿ ಮಾಡಲು ನೇಮಿಸಿತ್ತು. ಇವರದು ಏಕಸದಸ್ಯ ಸಮಿತಿ. ಶ್ರೀ ಅರುಮುಗಂ ಅವರು ಡಿಸೆಂಬರ್ 7ರಿಂದ ಒಂದು ವಾರ ಕಾಲ ಈ ನಾಲ್ಕು ಜಿಲ್ಲೆಗಳಲ್ಲಿ ಪ್ರವಾಸ ಮಾಡಿದರು. ಅನೇಕ ಕ್ಷಾಮಪೀಡಿತ ಹಳ್ಳಿಗಳಿಗೂ ಪಟ್ಟಣಗಳಿಗೂ ಭೇಟಿ ನೀಡಿದರು. ಒಂದು ವಾರದ ಅವಧಿಯಲ್ಲಿ ಇವರು ಸುಮಾರು 2,516 ಕಿಮೀ. ದೂರದ ಸಂಚಾರ ಮಾಡಿ ಅಧ್ಯಯನ ನಡೆಸಿ ತಮ್ಮ ವರದಿಯನ್ನು ವಿಧಾನಸಭೆಗೆ ಡಿಸೆಂಬರ್ 19ರಂದು ಸಲ್ಲಿಸಿದರು. ಈ ವರದಿ ಸುಮಾರು 132 ಪುಟಗಳಷ್ಟಿದೆ. ಈ ವರದಿಯ ಮುಖ್ಯ ಅಂಶಗಳು ಈ ರೀತಿ ಇವೆ:

1. ಗುಲ್ಬರ್ಗ, ಬೀದರ್, ಬಿಜಾಪುರ ಮತ್ತು ಬೆಳಗಾಂವಿ ಜಿಲ್ಲೆಗಳಲ್ಲಿ ಅಭಾವ ಪರಿಸ್ಥಿತಿಯು ತುಂಬಾ ಚಿಂತಾಜನಕವಾಗಿದೆ ಮತ್ತು ಬಡವರ ಕಷ್ಟನೋವುಗಳನ್ನು ನಿವಾರಿಸಲು ಸರ್ಕಾರ ಕೂಡಲೇ ಸೂಕ್ತ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು.

2. ಈ ಅನಾವೃಷ್ಟಿ ಪ್ರದೇಶಗಳಲ್ಲಿ ಜನಸಾಮಾನ್ಯರಿಗೆ ಬೇಕಾದ ನೀರು ಮತ್ತು ಆಹಾರ, ಜಾನುವಾರುಗಳಿಗೆ ಬೇಕಾದ ನೀರು ಮತ್ತು ಮೇವು, ಕೆಲಸಮಾಡಲು ಶಕ್ತರಿರುವ ಎಲ್ಲರಿಗೂ ಉದ್ಯೋಗ ಒದಗಿಸುವುದು—ಇವು ಪರಿಹಾರ ಕ್ರಮಗಳ ಮುಖ್ಯ ಗುರಿಯಾಗಿರಬೇಕು.

3. ಕ್ಷಾಮಪೀಡಿತ ಜಿಲ್ಲೆಗಳಲ್ಲಿ ಜನರು ಜೀವಚ್ಛವಗಳಂತೆ ಕಂಡು ತಮ್ಮ ದೇಹ ಮತ್ತು ಆತ್ಮಗಳನ್ನು ಒಟ್ಟುಗೂಡಿಸಿಕೊಳ್ಳಲು ಪ್ರತಿಕ್ಷಣವೂ ಹೋರಾಡುತ್ತಿದ್ದಾರೆ. ಜೀವನೋಪಾಯಕ್ಕೆ ಏನೂ ಮಾರ್ಗವಿಲ್ಲದ ಅನೇಕರು ತಮ್ಮ ಜಾನುವಾರುಗಳನ್ನು, ಆಭರಣಗಳನ್ನು, ಪಾತ್ರೆಗಳನ್ನು, ತಮ್ಮ ಪತ್ನಿಯರ ಮಾಂಗಲ್ಯಗಳನ್ನೂ ಮಾರಲು ಪ್ರಾರಂಭಿಸಿದ್ದಾರೆ.

4. ಸಾಕಷ್ಟು ಜಮೀನಿರುವ ರೈತರು ಕೂಡ ದಿನಗೂಲಿಗಾಗಿ ಕೆಲಸ ಮಾಡುವ ಸ್ಥಿತಿ ಬಂದಿದೆ. ಕೆಲವು ಕಡೆ 60 ಎಕರೆ ಜಮೀನಿರುವವರು ಕೂಡ ಅನಾವೃಷ್ಟಿಯ ಪರಿಸ್ಥಿತಿಯಿಂದ ಕೂಲಿಗಾರರಾಗಿ ಕೆಲಸ ಮಾಡಿ ತಮ್ಮ ಜೀವ ಉಳಿಸಿಕೊಳ್ಳಬೇಕಾಗಿದೆ. ಇನ್ನು ಕೆಲವು ಕಡೆ ಅನಾವೃಷ್ಟಿಯ ಪರಿಸ್ಥಿತಿ

ಯಿಂದ ಕೆಲವು ಸಾವುಗಳೂ ಸಂಭವಿಸಿವೆ. ಈ ಪ್ರದೇಶಗಳಿಂದ ಅನೇಕರು ತಮ್ಮ ಮನೆಗಳನ್ನು ಬಿಟ್ಟು ಬೇರೆ ಜಿಲ್ಲೆಗಳಿಗೂ ಕೆಲವರು ಬೇರೆ ರಾಜ್ಯಗಳಿಗೂ ಹೋಗಿ ನೆಲಸಿರುವುದೂ ಉಂಟು.

5. ರಾಜ್ಯದ ಸಚಿವರು ಆಹಾರ ಅಭಾವ ಪ್ರದೇಶಗಳಲ್ಲಿ ಮಾಡಿರುವ ವಾಗ್ದಾನಗಳಿಗೂ ನಿಜವಾಗಿಯೂ ನಡೆಯುತ್ತಿರುವ ಕ್ಷಾಮನಿವಾರಣಾ ಕಾರ್ಯಕ್ರಮಗಳಿಗೂ ಬಹಳ ಅಂತರವಿದೆ. ಮಂತ್ರಿಗಳು ವಾಗ್ದಾನ ಮಾಡಿದಂತೆ ಕೆಲಸ ಮಾಡುತ್ತಿಲ್ಲ. ಕ್ಷಾಮಪೀಡಿತ ಪ್ರದೇಶಗಳಲ್ಲಿ ಜನರಿಗೆ ಸಾಕಷ್ಟು ಉದ್ಯೋಗವನ್ನು ಸರ್ಕಾರದವರು ಒದಗಿಸಿಲ್ಲ. ಇನ್ನು ಕೆಲವು ಕಡೆ ಜನರು ಉದ್ಯೋಗಕ್ಕಾಗಿ ಹಗಲಿರುಳು ಬೇಡುತ್ತಿರುತ್ತಾರೆ. ಈ ಪ್ರದೇಶಗಳಿಗೆ ಆಹಾರ ಧಾನ್ಯಗಳು ಸರಿಯಾಗಿ ಸಕಾಲಕ್ಕೆ ಸರಬರಾಜಾಗುತ್ತಿಲ್ಲ ಮತ್ತು ಬಂದ ಆಹಾರಸಾಮಗ್ರಿಗಳನ್ನು ಹಂಚುವ ವ್ಯವಸ್ಥೆ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಈ ಕ್ಷಾಮಪೀಡಿತ ಪ್ರದೇಶಗಳಿಗೆ ಎಷ್ಟು ಆಹಾರಸಾಮಗ್ರಿ ಬೇಕು ಎಂಬುದನ್ನೂ ಸರಿಯಾಗಿ ನಿರ್ಧರಿಸಿಲ್ಲ ಮತ್ತು ಈಗ ಒದಗಿಸುತ್ತಿರುವ ಆಹಾರ ಸಾಮಗ್ರಿಗಳು ಕೊರತೆಯ 25% ದಷ್ಟು ಮಾತ್ರವಾಗಿರುತ್ತದೆ.

6. ಕ್ಷಾಮ ಪರಿಹಾರಕ್ಕಾಗಿ ಸರ್ಕಾರದವರು ಕೂಡಲೇ 50 ಕೋಟಿ ರೂಪಾಯಿಗಳನ್ನು ಮೀಸಲಾಗಿಡಬೇಕು. ಈಗ ಸರ್ಕಾರದವರು ಕೈಗೊಂಡಿರುವ ಹದಿನಾರೂವರೆ ಕೋಟಿ ರೂಪಾಯಿಗಳ ಕ್ಷಾಮ ಪರಿಹಾರ ಯೋಜನೆ ಅಭಾವಕ್ಕೊಳಗಾಗಿರುವ ಜನಸಂಖ್ಯೆಯ ಶೇಕಡ ಐದರಷ್ಟನ್ನೂ ಮುಟ್ಟುವುದಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳನ್ನು ಕಲ್ಪಿಸುವುದು, ಈಗಿರುವ ನೀರಿನ ಭಾವಿಗಳನ್ನು ಮತ್ತಷ್ಟು ಆಳಗೊಳಿಸಿ ನೀರಿನ ಸರಬರಾಜಿಗೆ ಅನುಕೂಲಮಾಡುವುದು, ಟ್ಯಾಂಕರ್‌ಗಳ ಮೂಲಕ ನೀರನ್ನು ಒಂದು ಪ್ರದೇಶ ದಿಂದ ಇನ್ನೊಂದು ಪ್ರದೇಶಕ್ಕೆ ಸಾಗಿಸುವುದು, ದನಕರುಗಳಿಗೆ ಬೇಕಾದ ಮೇವನ್ನು ಕೊಂಡು ಸರಬರಾಜು ಮಾಡುವುದು ಮುಂತಾದ ಅನೇಕ ಕ್ಷಾಮ ಪರಿಹಾರ ಕ್ರಮಗಳನ್ನು ಸರ್ಕಾರ ಕೂಡಲೇ ಕೈಗೊಳ್ಳಬೇಕು. ಮುಂದಿನ ಬೆಳೆಗೆ ಅನುಕೂಲವಾಗುವ ಎಲ್ಲಾ ಬಿತ್ತನೆಬೀಜಗಳನ್ನೂ ಇತರೇ ವಸ್ತುಗಳನ್ನು ಸರ್ಕಾರದವರು ಒದಗಿಸಬೇಕು.

ಶ್ರೀ ಅರುಮುಗಂ ಅವರು ತಮಗಿದ್ದ ಒಂದು ವಾರದ ವೇಳೆಯಲ್ಲಿ ಕ್ಷಾಮಪೀಡಿತ ಪ್ರದೇಶಗಳ ಪರಿಸ್ಥಿತಿಯನ್ನು ಚೆನ್ನಾಗಿ ಅಧ್ಯಯನ ಮಾಡಿ ಬಹಳ ಉಪಯುಕ್ತವಾದ ವರದಿಯನ್ನು ಸಲ್ಲಿಸಿರುತ್ತಾರೆ. ಅನಾವೃಷ್ಟಿ ಕ್ಯಾನ್ಸರ್ ರೋಗವಿದ್ದಂತೆ. ಒಂದು ಕಡೆಯಿಂದ ಇನ್ನೊಂದು ಕಡೆಗೆ ಹಬ್ಬಿಕೊಂಡು ಹೋಗುತ್ತಿರುತ್ತದೆ. ಆದ್ದರಿಂದ ರಾಜ್ಯ ಸರ್ಕಾರದವರು ಕ್ಷಾಮ ನಿವಾರಣೋಪಾಯಗಳ ಜೊತೆಗೆ ಕ್ಷಾಮಸ್ಥಿತಿಯು ಇನ್ನೆಲ್ಲೂ ಹರಡದಂತೆ ಕಾರ್ಯಕ್ರಮಗಳನ್ನು ರೂಪಿಸುವುದು ಅಭಾವ ಪರಿಸ್ಥಿತಿ ತಲೆದೋರದಂತೆ ರಾಜ್ಯದ ಜಲಸಂಪನ್ಮೂಲಗಳನ್ನು ಗರಿಷ್ಠವಾಗಿ ರೂಢಿಸಿಕೊಳ್ಳುವುದು ಅತ್ಯಾವಶ್ಯಕ.

ಡಾ. ರಾಜ್ ಸಮಿತಿಯ ವರದಿ

ಭಾರತ ಸರ್ಕಾರದವರು 1972ರ ಫೆಬ್ರವರಿ 24ರಂದು ಖ್ಯಾತ ಅರ್ಥಶಾಸ್ತ್ರಜ್ಞ ಡಾಕ್ಟರ್ ಕೆ. ಎನ್. ರಾಜ್ ಅವರ ಅಧ್ಯಕ್ಷತೆಯಲ್ಲಿ 'ಕೃಷಿ ಸಂಪತ್ತು ಮತ್ತು ವರಮಾನದ' ತೆರಿಗೆಯ ವಿಷಯಗಳನ್ನು ಕುರಿತು ಅಧ್ಯಯನ ಮಾಡಲು ನೇಮಿಸಿದರು. ಈ ಸಮಿತಿಯಲ್ಲಿ ಪ್ರೊ. ದಾಂಡೇಕರ್, ಶ್ರೀ ಜಿ. ಎಸ್. ಕಾಲ್‌ಕಟ್, ಅನ್ವಾರ್‌ಕರೀಂ, ಶ್ರೀ ಎಂ. ಬಿ. ಪಾಲೇಕರ್, ಶ್ರೀ ಎ. ವೈದ್ಯನಾಥನ್ ಮತ್ತು ಶ್ರೀ ಬಿ. ಪಿ. ಆರ್. ವಿಠಲ್ ಅವರು ಸದಸ್ಯರಾಗಿದ್ದರು. ರಾಜ್‌ಸಮಿತಿ ಅಕ್ಟೋಬರ್ 31ರಂದು ತನ್ನ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸಿತು. ಇದು ಸರ್ವಾನುಮತ ವರದಿ; ಸುಮಾರು 101 ಪುಟಗಳಷ್ಟಿದೆ.

ಈ ವರದಿಯ ಅತ್ಯಂತ ಮುಖ್ಯ ಶಿಫಾರಸುಗಳೆಂದರೆ, ಈಗಿರುವ ಭೂ ಕಂದಾಯಕ್ಕೆ ಬದಲಾಗಿ ಕೃಷಿ ಭೂಹಿಡುವಳಿ ತೆರಿಗೆ ವಿಧಿಸುವುದು. ಕೃಷಿ ಭೂಹಿಡುವಳಿ ತೆರಿಗೆಯನ್ನು ಜಾರಿಗೆ ತರಲು ಮತ್ತು ಅದರ ಆಡಳಿತ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ನಡೆಸಲು ಸರ್ಕಾರದವರು ಒಂದು ವ್ಯವಸಾಯ ತೆರಿಗೆಯನ್ನು ಕುರಿತ ಸ್ಥಾಯೀ ಸಮಿತಿಯೊಂದನ್ನು ರಚಿಸಬೇಕು. ಈ ಸಮಿತಿ ಒಬ್ಬ ಅರ್ಥಶಾಸ್ತ್ರಜ್ಞನನ್ನೂ ರೆವಿನ್ಯೂ ಆಡಳಿತದಲ್ಲಿ ಚೆನ್ನಾಗಿ ಅನುಭವವಿರುವ ಒಬ್ಬ ಅಧಿಕಾರಿಯನ್ನೂ, ಒಬ್ಬ ವ್ಯವಸಾಯ ನಿರ್ದೇಶಕ

ರನ್ನೂ ಒಳಗೊಂಡಿರಬೇಕು. ಈ ತೆರಿಗೆಯನ್ನು ನಿಜವಾಗಿಯೂ ಬೇಸಾಯ ನಡೆಯುತ್ತಿರುವ ಭೂ ಹಿಡುವಳಿಯ ಮೇಲೆ ಮತ್ತು ಗಂಡ ಹೆಂಡತಿ ಮತ್ತು ಅಪ್ರಾಪ್ತ ವಯಸ್ಕ ಮಕ್ಕಳಿರುವ ರೈತ ಕುಟುಂಬದ ಮೇಲೆ ಮಾತ್ರ ವಿಧಿಸಬೇಕು. ಭೂಹಿಡುವಳಿಯ ಮಿತಿ ಜಾರಿಗೆ ಬಂದ ಮೇಲೆ ಬೇಸಾಯಗಾರರಲ್ಲಿ ಸಂಪತ್ ತೆರಿಗೆಯನ್ನು ಕೊಡಬೇಕಾಗುವವರು ಬಹಳ ಕಡಿಮೆಯಾಗುತ್ತಾರೆ.

ರಾಜ್ ಸಮಿತಿಯ ವರದಿಯ ಪ್ರಕಾರ ಈ ನೂತನ ತೆರಿಗೆಯಿಂದ ಸರ್ಕಾರಕ್ಕೆ ಒಟ್ಟು 200 ಕೋಟಿ ರೂಪಾಯಿಗಳಷ್ಟು ಆದಾಯಬರುತ್ತದೆ. ಈ ಮೊತ್ತ ಭೂಕಂದಾಯ ಮತ್ತು ಇತರ ವ್ಯವಸಾಯ ಮೂಲಗಳಿಂದ ಬರುವ ತೆರಿಗೆಗಳ ಆದಾಯಕ್ಕಿಂತ 150 ಕೋಟಿ ರೂಪಾಯಿಗಳಷ್ಟು ಹೆಚ್ಚಾಗಿರುತ್ತದೆ. ಭೂಕಂದಾಯಕ್ಕೆ ಬದಲು ಭೂ ಹಿಡುವಳಿ ತೆರಿಗೆಯನ್ನು ಜಾರಿಗೆ ತರುವ ಮುಂಚೆ ರಾಜ್ಯ ಸರ್ಕಾರದವರು ಅನೇಕ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಬೇಕೆಂದೂ ವರದಿಯಲ್ಲಿ ತಿಳಿಸಿದೆ. ಸಮಿತಿಯವರು ನೂತನ ತೆರಿಗೆಯನ್ನು ವಿಧಿಸುವಾಗ ಇರುವ ಒಂದೆರಡು ಸಮಸ್ಯೆಗಳನ್ನು ಸಹ ಎತ್ತಿ ತೋರಿಸಿದ್ದಾರೆ. ಮೊದಲನೆಯದಾಗಿ, ಈ ತೆರಿಗೆಯನ್ನು ಜಾರಿಗೆ ತಂದರೆ ತಿಂಗಳಿಗೆ 400 ರೂಗಳ ಆದಾಯಕ್ಕಿಂತಲೂ ಕಡಿಮೆ ಇರುವ ರೈತ ಸಂಸಾರಗಳು ತೆರಿಗೆಕೊಡಬೇಕಾಗುತ್ತದೆ. ಈ ಆದಾಯ ಉಳ್ಳವರು ನಿಜವಾಗಿ ಯಾವ ಮಟ್ಟದಿಂದ ಅಳೆದರೂ ಐಶ್ವರ್ಯವಂತರೆಂದು ಹೇಳುವುದು ಕಷ್ಟ. ಸಮಿತಿಯವರು ರಾಜ್ಯಕ್ಕೆ ಹೆಚ್ಚಿನ ಆದಾಯ ತರಲು ಮೇಲ್ಕಂಡ ಆದಾಯದ ಕುಟುಂಬಗಳನ್ನೂ ಸೇರಿಸಿಕೊಳ್ಳಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಎರಡನೆಯದಾಗಿ ರಾಜ್ಯಗಳಲ್ಲಿ ಜಾರಿಗೆ ತರಬೇಕೆಂದಿರುವ ಭೂ ಹಿಡುವಳಿ ಮಿತಿಯಿಂದಾಗಿ ವ್ಯವಸಾಯ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚಾಗಿ ತೆರಿಗೆ ವಿಧಿಸುವುದನ್ನು ಕಡಿಮೆ ಮಾಡುತ್ತದೆ.

ಸರ್ಕಾರದವರು ಈ ನೂತನ ತೆರಿಗೆಯನ್ನು ಜಾರಿಗೆ ತರುವ ಮುನ್ನ ಕೆಳಗೆ ಹೇಳಲಾದ ನಿಯಮಗಳನ್ನು ಅನುಸರಿಸಬೇಕೆಂದು ಸಮಿತಿಯ ವರದಿಯು ತಿಳಿಸುತ್ತದೆ. (1) ಸಾಕಷ್ಟು ಹೆಚ್ಚು ಸಂಖ್ಯೆಯ ಸಮಾನಗುಣ ಕ್ಷೇತ್ರಗಳಾಗಿ ದೇಶದ ವಿಭಜನೆ, (2) ವಿವಿಧ ಕ್ಷೇತ್ರಗಳಿಗೆ ಉತ್ಪತ್ತಿಯ ಪ್ರಮಾಣಗಳ ನಿಷ್ಕರ್ಷೆ, (3) ಸರ್ಕಾರಿ ಮೂಲದಿಂದ ಇಲ್ಲವೇ ಖಾಸಗಿ ಮೂಲದಿಂದ ಒದಗಿದ ನೀರಾವರಿ ಖರ್ಚುಗಳಿಗಾಗಿ ಕಳೆಯಬೇಕಾದ ಮೊಬಲಗಿನ ಲೆಕ್ಕಾಚಾರ, (4) ತೆರಿಗೆ ವಿಧಿಸಬಹುದಾದ ಉತ್ಪತ್ತಿಯ ಮೌಲ್ಯ ನಿರ್ಧಾರ, (5) ಫಸಲು ಬರದೆ ಹೋದಾಗ ಪರಿಹಾರ ಒದಗಿಸಲು ಅವಕಾಶ, (5) ಬೆಳೆಗಳ ವರ್ಗೀಕರಣ.

ರಾಜ್ ಸಮಿತಿಯ ವರದಿಯನ್ನು ಓದಿದ ಮೇಲೆ, ಅವರು ವ್ಯವಸಾಯ ಹಿಡುವಳಿ ತೆರಿಗೆ ಜಾರಿಗೆ ತರುವ ಮುನ್ನ ಅನುಸರಿಸಬೇಕಾದ ನಿಯಮಗಳು ಬಹಳ ಕಠಿಣವಾದುವೆಂಬುದು ಸ್ಪಷ್ಟವಾಗುತ್ತದೆ. ಶ್ರಮ ತೆಗೆದುಕೊಂಡು ನಿಯಮಗಳನ್ನು ಪಾಲಿಸಿದರೂ ಈ ತೆರಿಗೆಯಿಂದ ಬರುವ ಹೆಚ್ಚು ಹಣ ಕೇವಲ 150 ಕೊಟಿ ರೂಪಾಯಿ ಮಾತ್ರ.

—ಡಾ. ಎಂ. ಮಾದಯ್ಯ

ಮಾನವ ಮತ್ತು ಸಮಾಜ*

ಬೆಂಗಳೂರು ವಿಶ್ವವಿದ್ಯಾನಿಲಯ ಸ್ಥಾಪಿಸಿರುವ ಶ್ರೀ ಸಿದ್ದವ್ವನಹಳ್ಳಿ ನಿಜಲಿಂಗಪ್ಪನವರ ದತ್ತಿಯ ಆಶ್ರಯದಲ್ಲಿ, ಭಾರತದ ಉಚ್ಚನ್ಯಾಯಾಲಯದ ಶ್ರೇಷ್ಠನ್ಯಾಯಾಧೀಶರಾಗಿದ್ದ ಶ್ರೀ ಕೆ. ಸುಬ್ಬರಾಯರು ನೀಡಿದ ಮೂರು ಉಪನ್ಯಾಸಗಳ ಸಂಕಲನವಾದ ಈ ಪುಸ್ತಕವನ್ನು ಬೆಂಗಳೂರು ವಿಶ್ವವಿದ್ಯಾನಿಲಯ ಪ್ರಕಟಿಸಿದೆ.

ಮಾನವ ಇತರರ ಸಂಗಡ ಬಾಳುವುದು ಅನಿವಾರ್ಯ. ಆತ ಏಕಾಂಗಿಯಾಗಿ ಬಾಳಲಾರ. ಆದರೆ ಇತರರ ಸಂಗಡ ತನ್ನ ಬದುಕನ್ನು ಸಾಗಿಸುವಾಗ, ಇತರರೊಂದಿಗೆ ಹೊಂದಿಕೊಂಡು ಹೋಗಲು ನಿರಂತರವಾಗಿ ಪ್ರಯತ್ನಿಸುತ್ತಾನೆ. ಈ ಹೊಂದಿಕೆ ಆತನ ಪ್ರಗತಿಯ ಚಿಹ್ನೆ. ಸಮಾಜ ನಿತ್ಯ ಪರಿವರ್ತನಶೀಲವಾದುದು ಈ ಪರಿವರ್ತನೆ ಆದರ್ಶಪೂರಿತವಾಗಿರದಿದ್ದರೆ, ಸಮಾಜ ಛಿದ್ರವಾಗುವ ಸಂಭವಗಳುಂಟು. ಆದ್ದರಿಂದ ನಮ್ಮ ಸಂವಿಧಾನ ನಿರ್ದೇಶಿಸಿರುವ ಮೂಲಭೂತ ತತ್ತ್ವಗಳ ಆಧಾರದ ಮೇಲೆ ಶಾಸಕಾಂಗದ ಬದಲಾವಣೆಗಳನ್ನು ರೂಪಿಸುವ ಅಗತ್ಯವನ್ನು ಲೇಖಕರು ಒತ್ತಿ ಹೇಳಿದ್ದಾರೆ. ಇದಕ್ಕೆ ಕಾನೂನಿನ ಆಡಳಿತ ಅತ್ಯಗತ್ಯ. ಭಾರತದ ಸಂವಿಧಾನದ ಗುರಿ ಸುಖೀರಾಜ್ಯ ಸ್ಥಾಪನೆ. ಸಂವಿಧಾನದತ್ತವಾದ ವಿವಿಧ ಸ್ವಾತಂತ್ರಗಳನ್ನು ಉಲ್ಲೇಖಿಸಿ, ಅವುಗಳನ್ನು ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಂಗಳು ಗೌರವಿಸಬೇಕಾದು ಅತ್ಯಗತ್ಯವೆಂದು ಅವರು ಹೇಳಿದ್ದಾರೆ. ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಪ್ರಗತಿಯನ್ನು ಸಾಧಿಸಲು ಕಾನೂನಿನ ಆಡಳಿತ (ರೂಲ್ ಆಫ್ ಲಾ) ತತ್ತ್ವವನ್ನು ಸರ್ವರೂ ಅಂಗೀಕರಿಸಬೇಕಾದ್ದು ಅಗತ್ಯ. ಇದನ್ನು ಪ್ರಗತಿಪರ ರಾಷ್ಟ್ರಗಳೆಲ್ಲವೂ ಒಪ್ಪಿರುವುದು ಕಂಡು ಬರುತ್ತದೆ.

ಶ್ರೀ ಸುಬ್ಬರಾಯರು ಮೊದಲನೆಯ ಉಪನ್ಯಾಸದಲ್ಲಿ ಮಾನವ ಹಕ್ಕುಗಳು ಮತ್ತು ಸಮಾಜ ಎಂಬ ವಿಚಾರವನ್ನು ನಿರೂಪಿಸಿದ್ದಾರೆ. ಎರಡನೆಯ ಉಪನ್ಯಾಸದಲ್ಲಿ ಕಾನೂನು ಮತ್ತು ಹಕ್ಕುಗಳು ಎಂಬ ವಿಚಾರವನ್ನು ವಿಶ್ಲೇಷಿಸಿ, ಮೂರನೆಯ ಉಪನ್ಯಾಸದಲ್ಲಿ ಪ್ರಗತಿದಾಯಕ ಸಾಮಾಜಿಕ ಬದಲಾವಣೆಗಳಲ್ಲಿ ಕಾನೂನಿನ ಪಾತ್ರವನ್ನು ವಿಶದಪಡಿಸಿದ್ದಾರೆ.

ಸಮಾಜದಲ್ಲಿರುವ ಘರ್ಷಣೆಗಳು ಪ್ರಮುಖವಾಗಿ ಮೂರು. ಮೊದಲನೆಯದು ಮಾನವನಿಗೂ ಪ್ರಕೃತಿಗೂ ನಡುವಣ ಘರ್ಷಣೆ. ಎರಡನೆಯದು ಮನುಷ್ಯರಲ್ಲಿ ಪರಸ್ಪರವಾದ ಘರ್ಷಣೆ ಮತ್ತು ಕೊನೆಯದಾಗಿ ಮಾನವನಲ್ಲಿ ಅಂತರ್ಗತವಾಗಿರುವ ಘರ್ಷಣೆ. ಮೊದಲನೆಯ ಘರ್ಷಣೆಗೆ ಪರಿಹಾರ ವಿಜ್ಞಾನ, ಎರಡನೆಯದಕ್ಕೆ ರಾಜ್ಯಶಾಸ್ತ್ರ, ಮೂರನೆಯದಕ್ಕೆ ಪರಿಹಾರ ಧರ್ಮ. ಆದರೆ ಇವು ಮೂರು ಸಾಧನಗಳು ವಿವೇಚನಾಶೂನ್ಯವಾಗಿದ್ದರೆ ಘರ್ಷಣೆಗಳು ಉಲ್ಬಣಗೊಳ್ಳಬಹುದು. ಮಾನವನ ಲೌಕಿಕ ಜೀವನವನ್ನು ಉತ್ತಮಪಡಿಸಲು ವಿಜ್ಞಾನ ಮತ್ತು ತಾಂತ್ರಿಕ ಜ್ಞಾನ ಅಗತ್ಯ. ಆದರೆ ವಿಜ್ಞಾನ ಸರಿಯಾದ ಮಾರ್ಗದಲ್ಲಿ ಹೋಗದಿದ್ದರೆ, ಅದು ಮಾನವನಿಗೆ ವರವಾಗದೆ ಶಾಪವಾಗಬಹುದು. ಹಾಗೆಯೇ ರಾಜ್ಯಶಾಸ್ತ್ರ ಮಾನವನಿಗೆ ಒಳ್ಳೆಯ ಆಡಳಿತವನ್ನು ದೊರಕಿಸುವ ಉದ್ದೇಶ ಹೊಂದಿದೆ. ಅಧಿಕಾರವನ್ನು ಹೊಂದಿರುವವರು ಅದನ್ನು ಸರಿಯಾದ ರೀತಿಯಲ್ಲಿ ಎಲ್ಲರ ಹಿತಸಾಧನೆಗೆ ಉಪಯೋಗಿಸಬೇಕು. ವಿವಿಧ ರೀತಿಯ ಸರ್ಕಾರಗಳು ಈ ಸಮಸ್ಯೆಗೆ ಪರಿಹಾರವನ್ನು ದೊರಕಿಸಿಕೊಡುವ ಪ್ರಯತ್ನಗಳು ನಡೆಸಿರುವುದು ಮಾನವ ಚರಿತ್ರೆಯನ್ನು ಅವಲೋಕಿಸಿದರೆ ತಿಳಿದು ಬರುತ್ತದೆ. ಪ್ರತಿಯೊಂದು ಬಗೆಯ ಸರ್ಕಾರದಲ್ಲೂ ಅಧಿಕಾರದ ದುರುಪಯೋಗ ಕಂಡು ಬಂದಿದೆ. ಅಧಿಕಾರದ ದುರುಪಯೋಗವು ಯಾವುದೇ

---

* *Man and Society*; ಲೇ: ಕೆ. ಸುಬ್ಬರಾವ್; ಪ್ರ: ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, (1971); 89 ಪುಟಗಳು, ಬೆಲೆ ರೂ 4 (ಸಾಮಾನ್ಯ), ರೂ. 6 (ಉತ್ತಮ).

ಒಂದು ಬಗೆಯ ಸರ್ಕಾರಕ್ಕೆ ಸೀಮಿತವಾಗಿಲ್ಲ. ಅಧಿಕಾರದ ದುರುಪಯೋಗದ ದುರಂತ ಪರಿಣಾಮವನ್ನು ಅದು ವಿಜ್ಞಾನದ ಮೇಲೆ ಹೊಂದಿರುವ ಹತೋಟಿಯಿಂದ ತಿಳಿಯಬಹುದು. ವಿಜ್ಞಾನವನ್ನು ದುರುಪಯೋಗಪಡಿಸಿಕೊಂಡು, ತನ್ನ ಅಧಿಕಾರವನ್ನು ಶಾಶ್ವತವಾಗಿಟ್ಟುಕೊಳ್ಳುವ ಉದ್ದೇಶದಿಂದ, ಸಮಾಜವನ್ನು ಅದು ಘರ್ಷಣೆಗಳಿಗೆ ಈಡುಮಾಡಬಹುದು. ಉನ್ನತವಾದ ಆದರ್ಶಗಳನ್ನು ನಿರೂಪಿಸಿ, ಧರ್ಮ ಮಾನವನ ಆತ್ಮಸಾಕ್ಷಾತ್ಕಾರಕ್ಕೆ ದಾರಿಯಾಗುತ್ತದೆ. ಅದು ಮಾನವನ ಜೀವನಕ್ಕೆ ಸಂಪೂರ್ಣ ದೃಷ್ಟಿಯನ್ನು ಕೊಡಬಲ್ಲ ಶಿಕ್ಷಣ. ಆದರೆ ಅದು ಸಂಕುಚಿತ ಭಾವನೆ ಹೊಂದಿ, ಪಂಗಡ ಮನೋಭಾವನೆಯನ್ನು ಪೋಷಿಸಿ ಮತಾಂಧತೆಯಾಗಿ ಪರಿವರ್ತನೆಯಾಗಬಹುದು. ಆಗ ಅದು ರಾಜಕಾರಣಿಯ ಕೈಯಲ್ಲಿ ಶೋಷಕ ಯಂತ್ರವಾಗುತ್ತದೆ.

ಸಮುದಾಯವನ್ನು ಉಪಯೋಗಿಸಿಕೊಂಡು ವ್ಯಕ್ತಿ ತನ್ನ ಶ್ರೇಷ್ಠತೆಯನ್ನು ಸಾಧಿಸಬೇಕು. ಮಾನವ ತನ್ನ ವ್ಯಕ್ತಿತ್ವವನ್ನು ಅಭಿವೃದ್ಧಿ ಪಡಿಸಿಕೊಂಡು ಸಮಾಜ ಸೇವೆಯ ಮೂಲಕ ತನ್ನ ವ್ಯಕ್ತಿತ್ವದ ಪರಿಪೂರ್ಣತೆಯನ್ನು ಸಾಧಿಸುತ್ತಾನೆ. ಅವನು ಇಂದಿನ ರಾಶಿ ಸಮಾಜದ ಯಾಂತ್ರಿಕ ಭಾಗವಲ್ಲ. ಅತನಿಗೆ ಹಕ್ಕುಗಳಿವೆ. ಪ್ರತಿಯೊಂದು ಸರ್ಕಾರವೂ ವ್ಯಕ್ತಿಗೆ ಮೂಲಭೂತವಾದ ಹಕ್ಕುಗಳನ್ನು ಒದಗಿಸಿಕೊಟ್ಟಿದೆ. ಆದರೆ ಆತನ ಹಕ್ಕುಗಳು ಸಾಮಾಜಿಕ ಮರ್ಯಾದೆಯಿಂದ ಬಂಧಿತವಾಗಿವೆ. ಆತ್ಮಸಾಕ್ಷಾತ್ಕಾರವನ್ನು ಸಾಧಿಸುವ ವ್ಯಕ್ತಿ ಸಮಾಜದ ಮೇಲ್ಮೆಗೆ ದುಡಿಯಬೇಕು. ತಾನು ಸಮಾಜದ ಭಾಗವೆಂಬುದನ್ನು ಮರೆಯಬಾರದು. ಇತರರ ಹಿತ ಸಾಧನೆಯಲ್ಲಿ ತನ್ನ ಹಿತಸಾಧನೆ ಹೆಣೆದುಕೊಂಡಿರುವ ವಿಚಾರ ವ್ಯಕ್ತಿಗೆ ಅರಿವಾಗಬೇಕು. ತನಗೆ ದೊರೆತಿರುವ ಹಕ್ಕುಗಳು, ಕರ್ತವ್ಯಗಳ ಪಾಲನೆಯಿಂದ ಸಾರ್ಥಕವಾಗುವುವೆಂಬುದನ್ನು ಅರಿಯಬೇಕು. ಇದೇ ಸಾಮಾಜಿಕ ಪ್ರಜ್ಞೆ. ಪ್ರತಿಯೊಂದು ಹಕ್ಕಿಗೂ ಪೂರಕವಾದ ಕರ್ತವ್ಯವಿದೆ. ಕರ್ತವ್ಯ ನಿರ್ವಹಣೆ ಸುಲಭವಲ್ಲ. ಅದಕ್ಕೆ ನೈತಿಕ ಬೆಂಬಲ ಅಗತ್ಯ. ಅಂಥ ವ್ಯಕ್ತಿಗೆ ನೈತಿಕಶಕ್ತಿಯನ್ನು ಕೊಡುವುದು ಧರ್ಮ. ಆದ್ದರಿಂದ, ಧಾರ್ಮಿಕ ದೃಷ್ಟಿಯನ್ನು ಬೆಳೆಸಿಕೊಂಡು ಹೋಗುವ ಅಗತ್ಯವನ್ನು ನಮ್ಮ ಸಮಾಜ ಅರಿಯಬೇಕೆಂಬುದು ಶ್ರೀ ಸುಬ್ಬರಾವ್ ಅವರ ಅಭಿಪ್ರಾಯ.

ನಮ್ಮ ಸಂವಿಧಾನ ಮೂಲಭೂತ ಹಕ್ಕುಗಳನ್ನು ನಿರೂಪಿಸಿದೆ. ಮೂಲಭೂತ ಹಕ್ಕುಗಳು ಸಾಮಾಜಿಕ ನಿಯಂತ್ರಣಕ್ಕೆ ಒಳಪಟ್ಟಿರುವುದರಿಂದ, ಅಗತ್ಯವಾದಾಗ ಅವುಗಳನ್ನು ಬದಲಾವಣೆ ಮಾಡಬೇಕಾಗುತ್ತದೆ. ಆದರೆ ಈ ವಿಚಾರದಲ್ಲಿ ಬಹಳ ಹೆಚ್ಚಿನ ರೀತಿಯ ಎಚ್ಚರಿಕೆಯ ಅಗತ್ಯವನ್ನು ಲೇಖಕರು ಸೂಚಿಸಿದ್ದಾರೆ.

ಖಾಸಗಿ ಆಸ್ತಿಯ ವಿಚಾರವಾಗಿ ಇಲ್ಲಿ ವಿಶದವಾದ ಚರ್ಚೆಯಿದೆ. ಖಾಸಗಿ ಆಸ್ತಿಯನ್ನು ಹೇಗೆ ಮೂಲಭೂತ ಹಕ್ಕಾಗಿ ಅಳವಡಿಸಿಕೊಳ್ಳಬೇಕೆಂಬ ವಿಷಯವಾಗಿ, ಪಾಶ್ಚಾತ್ಯ ಪ್ರಜಾಸತ್ತಾತ್ಮಕ ಸಮಾಜಗಳ ವಿಚಾರಧಾರೆಯನ್ನು ಮತ್ತು ಸಮಾಜವಾದಿ ಸಮಾಜಗಳ ವಿಚಾರಧಾರೆಯನ್ನು ವಿಮರ್ಶಿಸಿದ್ದಾರೆ. ಖಾಸಗಿ ಆಸ್ತಿಯ ಹಕ್ಕು ಮಾನವನ ವ್ಯಕ್ತಿತ್ವದ ಸಮನ್ವಯ ಬೆಳವಣಿಗೆಗೆ ಅಗತ್ಯವೆಂದೂ, ಅದು ಸರ್ವವಿಧದಲ್ಲಿ ಕಟ್ಟುಬಿದ್ದಿರುವ ಅಂಶವನ್ನು ಜ್ಞಾಪಕದಲ್ಲಿಡುವ ಅಗತ್ಯವನ್ನೂ ತಿಳಿಸಿದ್ದಾರೆ. ಇತರರ ಆಸ್ತಿಯ ಹಕ್ಕನ್ನು ಗೌರವಿಸುವುದು, ತನ್ನ ಆಸ್ತಿಯನ್ನು ನೋಡಿಕೊಳ್ಳುವವರ ಮತ್ತು ಗುತ್ತಿಗೆದಾರರ ಕ್ಷೇಮವನ್ನು ಪರಿಗಣಿಸುವ ಕರ್ತವ್ಯಗಳನ್ನು ಜ್ಞಾಪಕದಲ್ಲಿಡುವ ಅಗತ್ಯವನ್ನು ನಿರೂಪಿಸಿದ್ದಾರೆ.

ಮೂಲಭೂತ ಹಕ್ಕುಗಳು ವ್ಯಕ್ತಿಗೆ ಅರ್ಥಪೂರ್ಣವಾಗಬೇಕಾದರೆ, ಸಾಮಾಜಿಕ, ಆರ್ಥಿಕ ಹಕ್ಕುಗಳು ವ್ಯಕ್ತಿಗೆ ಒದಗಬೇಕು. ಸಾಮಾಜಿಕ ರಚನೆಯ ವಿವಿಧ ಅಂಶಗಳ ಬದಲಾವಣೆಯಾಗಬೇಕು. ಸಂವಿಧಾನದಲ್ಲಿ ನಿರ್ದೇಶಾತ್ಮಕ ತತ್ವಗಳು ರಾಜ್ಯದ ಮೇಲೆ ಜವಾಬ್ದಾರಿಯನ್ನು ಗೊತ್ತುಪಡಿಸಿವೆ. ಇದಕ್ಕೆ ಅನುಗುಣವಾಗಿ ರಾಜ್ಯ ಅಗತ್ಯವಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.

ಮಾನವ ಹಕ್ಕುಗಳನ್ನು (ಮೂಲಭೂತ ಹಕ್ಕುಗಳು) ಪಾಲಿಸುವ ಉದ್ದೇಶವೇ ಸಮಾಜದ ವಿವಿಧ ಸಂಸ್ಥೆಗಳ ಅಸ್ತಿತ್ವಕ್ಕೆ ಕಾರಣ. ಆದ್ದರಿಂದ ಮಾನವ ಹಕ್ಕುಗಳು ಇರುವವರೆಗೆ ಸಮಾಜ ಅಸ್ತಿತ್ವದಲ್ಲಿರುತ್ತದೆ. ಕರ್ತವ್ಯ ಪ್ರಜ್ಞೆ ಇಲ್ಲವಾದರೆ ಹಕ್ಕುಗಳಲ್ಲಿ ಘರ್ಷಣೆಗಳು ಸಂಭವಿಸುತ್ತವೆ. ಕರ್ತವ್ಯ ನಿರ್ವಹಣೆಗೆ ಆಧ್ಯಾತ್ಮಿಕ ಹಿನ್ನೆಲೆ ಅಗತ್ಯ. ಧರ್ಮದ ತತ್ವಗಳ ಅಂಗೀಕಾರ ಆಧ್ಯಾತ್ಮಿಕ ಪ್ರವೃತ್ತಿಯ ಪೋಷಣೆಗೆ ಆವಶ್ಯಕ. ಸಮಾಜದಲ್ಲಿ ಸಂಸಕ್ತಿ ಇರಬೇಕಾದರೆ, ಮಾನವನ ಹಕ್ಕುಗಳಿಗೂ ಸಾಮಾಜಿಕ ನಿಯಂತ್ರಣಕ್ಕೂ

ನ್ಯಾಯವಾದ ಸಮತೋಲನ ಇರಬೇಕು. ಇಲ್ಲವಾದರೆ ಸಮಾಜದಲ್ಲಿ ಅನಾಯಕತ್ವ ಅಥವಾ ನಿರಂಕುಶ ಪ್ರಭುತ್ವ ತಲೆದೋರುತ್ತದೆ.

ಎರಡನೆಯ ಉಪನ್ಯಾಸದಲ್ಲಿ ಕಾನೂನಿಗೂ ಹಕ್ಕುಗಳಿಗೂ ಇರುವ ಸಂಬಂಧವನ್ನು ಅವರು ವಿಶ್ಲೇಷಿಸಿದ್ದಾರೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕಾನೂನುಗಳನ್ನು ಪರಿಗಣಿಸಿ, ಆ ಎರಡೂ ಹಕ್ಕುಗಳ ರಕ್ಷಣೆಯಲ್ಲಿ ವಹಿಸಬೇಕಾದ ಪಾತ್ರವನ್ನು ಸಾಕಷ್ಟು ವಿವರವಾಗಿ ಚರ್ಚಿಸಲಾಗಿದೆ. ಕಾನೂನಿನ ಸ್ವಾಮ್ಯ ಅಗತ್ಯವೆಂಬುದು ನಿರ್ವಿವಾದವಾದ ವಿಷಯ. ವಿಶ್ವಸಂಸ್ಥೆ ಘೋಷಿಸಿರುವ ಮಾನವ ಹಕ್ಕುಗಳು ವಿಶ್ವದ ಬಹುತೇಕ ರಾಜ್ಯಗಳ ಸಂವಿಧಾನಗಳಲ್ಲಿ ಕಂಡುಬರುತ್ತದೆ. ಪ್ರತಿಯೊಂದು ರಾಷ್ಟ್ರವೂ ಈ ಹಕ್ಕುಗಳನ್ನು ಪ್ರಜೆಗೆ ಕೊಡಬೇಕೆಂಬ ಆಶಯವನ್ನು ವಿಶ್ವಸಂಸ್ಥೆ ಪದೇ ಪದೇ ತಿಳಿಸುತ್ತ ಬಂದಿದೆ. ಅದಕ್ಕೆ ವಿರೋಧವಾಗಿ ಹೋದ ರಾಜ್ಯಗಳನ್ನು ವಿಶ್ವಸಂಸ್ಥೆ ಖಂಡಿಸಿದೆ. ದಕ್ಷಿಣ ಆಫ್ರಿಕದ ವರ್ಣನೀತಿಯ ಖಂಡನೆಯೇ ಇದಕ್ಕೆ ಸಾಕ್ಷಿ.

ಇಂದು ಸಂಕುಚಿತವಾಗುತ್ತಿರುವ ವಿಶ್ವದಲ್ಲಿ ವಿವಿಧ ರಾಷ್ಟ್ರಗಳ ಪರಸ್ಪರಾವಲಂಬನೆ ಅಗತ್ಯ. ಆದ್ದರಿಂದ ಮಾನವ ಹಕ್ಕುಗಳ ರಕ್ಷಣೆ ಅಂತರರಾಷ್ಟ್ರೀಯ ಕಾನೂನಿಗೊಳಪಡಬೇಕೆಂದು ಲೇಖಕರು ತಿಳಿಸಿದ್ದಾರೆ. ಆಗ ಮಾನವ ಹಕ್ಕುಗಳು ಸುರಕ್ಷಿತವಾಗಿರುತ್ತದೆ. ಮಾನವ ಹಕ್ಕುಗಳನ್ನು ರಾಜ್ಯ ಅಲಕ್ಷಿಸಿದರೆ ಆಗ ವ್ಯಕ್ತಿಗೆ ಅಂತರರಾಷ್ಟ್ರೀಯ ನ್ಯಾಯಾಲಯಕ್ಕೆ ಹೋಗುವ ಅನುಕೂಲ ಲಭ್ಯವಾಗಬೇಕು. ಇದು ಸೂಕ್ತವಾದ ಮಾರ್ಗ. ಇಲ್ಲವಾದರೆ ರಾಜ್ಯ ವ್ಯಕ್ತಿಯ ಸ್ವಾತಂತ್ರ್ಯವನ್ನು ಕಡೆಗಣಿಸಿ ಮೂಲಭೂತ ಹಕ್ಕುಗಳಿಗೆ ತೊಂದರೆಯನ್ನುಂಟು ಮಾಡಬಹುದು. ಮೂಲಭೂತ ಹಕ್ಕುಗಳು ಅಂತರರಾಷ್ಟ್ರೀಯ ಕಾನೂನಿನ ಭಾಗವಾದರೆ, ಆಗ ರಾಷ್ಟ್ರ ತನ್ನ ಸ್ವಾಮ್ಯದಲ್ಲಿ ಸ್ವಲ್ಪ ಭಾಗವನ್ನು ತ್ಯಾಗಮಾಡಬೇಕು. ಈ ಸಂದರ್ಭದಲ್ಲಿ ಡಾ. ಇ. ಸಿ. ಯೂಯಿಂಗರು ಹೇಳಿರುವ ಮಾತುಗಳನ್ನು ಸ್ಮರಿಸುವುದು ಯುಕ್ತ. ಯಾವ ರಾಜ್ಯ ಸಮಸ್ಥಿತಿ ಮತ್ತು ಸುರಕ್ಷತೆ ಇವುಗಳ ಹೆಸರಿನಲ್ಲಿ, ವ್ಯಕ್ತಿಯ ಸ್ವಾತಂತ್ರ್ಯ ಮತ್ತು ಅಧಿಕಾರಗಳಲ್ಲಿ ತ್ಯಾಗವನ್ನು ಅಪೇಕ್ಷಿಸುತ್ತದೆಯೋ, ಅದೇ ರಾಜ್ಯ ಅಂತರರಾಷ್ಟ್ರೀಯ ಶಾಂತಿ ಸುರಕ್ಷತೆಗಳ ರಕ್ಷಣೆಗಳಿಗೆ ಅನುಕೂಲವಾಗಲು ತನ್ನ ಸ್ವಾಮ್ಯದಲ್ಲಿ ಸ್ವಲ್ಪ ತ್ಯಾಗಕ್ಕೂ ಸಿದ್ಧವಾಗಿಲ್ಲ. ಇದು ತರ್ಕ ಬದ್ಧವಲ್ಲ. ಮಾನವ ಹಕ್ಕುಗಳ ಸಂರಕ್ಷಣೆ ಅರ್ಥಪೂರ್ಣವಾಗಬೇಕಾದರೆ, ಇವು ಅಂತರರಾಷ್ಟ್ರೀಯ ನ್ಯಾಯಾಲಯದ ಅಧಿಕಾರಕ್ಕೆ ಒಳಪಡಬೇಕೆಂಬುದು ಲೇಖಕರ ಖಚಿತ ಅಭಿಪ್ರಾಯ.

ಭಾರತದ ಸಂವಿಧಾನದಲ್ಲಿ ನಿರೂಪಿತವಾಗಿರುವ ನಿರ್ದೇಶಾತ್ಮಕ ತತ್ವಗಳನ್ನು ಪರಿಗಣಿಸಿ ಭಾರತವು ತಂದಿರುವ ಅನೇಕ ಕ್ರಾಂತಿಕಾರಕ ಬದಲಾವಣೆಗಳನ್ನು ತಮ್ಮ ಮೂರನೆಯ ಉಪನ್ಯಾಸದಲ್ಲಿ ನಿರೂಪಿಸಿರುವರು. ಈ ಬದಲಾವಣೆಗಳಿಗೂ ಕಾನೂನಿಗೂ ಇರುವ ಸಂಬಂಧಗಳನ್ನು, ನ್ಯಾಯಾಲಯಗಳ ಕಾರ್ಯಗಳ ಹಿನ್ನೆಲೆಯಲ್ಲಿ ಕೆಲವು ಅಭಿಪ್ರಾಯಗಳನ್ನು ಸೂಚಿಸಿರುವರು. ಸಮಾಜ ನಿರ್ಮಿಸಿಕೊಂಡಿರುವ ಶಿಸ್ತೇ ಕಾನೂನು. ಅದು ಸಮಾಜದ ಆತ್ಮ ಸಂಯಮದ ಕುರುಹು. ಆದ್ದರಿಂದ ಕಾನೂನು ಸಮಾಜದ ಉದ್ದೇಶ ಮತ್ತು ಆದರ್ಶಗಳಿಗೆ ಅನುಗುಣವಾಗಿರುತ್ತದೆ. ಹಿಂದೂ ಕಾನೂನಿನಲ್ಲಿ ವಿವಾಹ, ದತ್ತು ಸ್ವೀಕಾರ, ಉತ್ತರಾಧಿಕಾರ, ಜೀವನಾಂಶ, ಪಾಲನೆ ಮೊದಲಾದುವುಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡಲಾಗಿದೆ. ಭೂಮಿಗೆ ಸಂಬಂಧಿಸಿದಂತೆ ಉಳುವವನ ಹಿತರಕ್ಷಣೆಗಾಗಿ ಜಾರಿಗೆ ಬಂದಿರುವ ಕಾನೂನುಗಳನ್ನು ತಿಳಿಸಿ, ಈ ಕಾನೂನುಗಳು ತಮ್ಮ ನಿರೀಕ್ಷಿತ ಮಟ್ಟದಲ್ಲಿ ಉದ್ದೇಶ ಸಾಧನೆಯಲ್ಲಿ ಸಫಲವಾಗದಿರುವುದಕ್ಕೆ ಕಾರಣಗಳನ್ನು ವಿಶದಪಡಿಸಿರುವರು. ಇದಕ್ಕೆ ಕೆಲವು ಪರಿಹಾರಗಳನ್ನು ಸೂಚಿಸಿರುವರು.

ಬ್ಯಾಂಕುಗಳ ರಾಷ್ಟ್ರೀಕರಣದ ಸದುಪಯೋಗ ರಾಜ್ಯದ ಪ್ರಗತಿಗೆ ಅನುಕೂಲವೆಂಬ ಭಾವನೆಯನ್ನು ಲೇಖಕರು ತಿಳಿಸಿರುತ್ತಾರೆ. ಲೇಖಕರು ಭೂ ಕಂದಾಯದ ವಿಚಾರವನ್ನು ಪರಿಶೀಲಿಸಿದ್ದಾರೆ. ವ್ಯವಸಾಯದ ಉತ್ಪತ್ತಿಯ ಮೇಲೆ ಆದಾಯ ತೆರಿಗೆಯನ್ನು ವಿಧಿಸುವುದು ಅಗತ್ಯ. ಇಂದು ವ್ಯವಸಾಯಗಳಿಸಿರುವ ಪ್ರಗತಿಯನ್ನು ನೆನಪಿನಲ್ಲಿಟ್ಟುಕೊಂಡು, ಅನೇಕ ಹಣ ಬೆಳೆಗಳನ್ನು ಪರಿಗಣಿಸಿ, ಭೂಮಿಯ ಉತ್ಪತ್ತಿಯ ಆಧಾರದ ಮೇಲೆ ತೆರಿಗೆಯನ್ನು ವಿಧಿಸುವುದು ಉಚಿತವೆಂದು ಲೇಖಕರು ಸೂಚಿಸುತ್ತಾರೆ. ಕೈಗಾರಿಕಾಕ್ಷೇತ್ರದಲ್ಲಿ ಮಾಲೀಕರಿಗೂ ಕಾರ್ಮಿಕರಿಗೂ ಇರಬೇಕಾದ ಸೌಹಾರ್ದ ಸಂಬಂಧವನ್ನು ತಿಳಿಸಿ,

ಕಾರ್ಮಿಕರ ಹಿತರಕ್ಷಣೆಗೆ ಆಗಿರುವ ಅನೇಕ ಕಾನೂನುಗಳನ್ನು ಪರಿಗಣಿಸಿದ್ದಾರೆ. ಈ ಸಂದರ್ಭದಲ್ಲಿ ನಮ್ಮ ಸಮಾಜದಲ್ಲಿ ಕಾಣಬರುತ್ತಿರುವ ಎರಡು ನ್ಯೂನತೆಗಳ ವಿಚಾರದಲ್ಲಿ ಎಚ್ಚರಿಕೆ ನೀಡಲಾಗಿದೆ. ಮೊದಲನೆಯದು ರಾಜಕೀಯ ಪಕ್ಷಗಳು ಕಾರ್ಮಿಕರನ್ನು ತಮ್ಮ ಕೈಗೊಂಬೆಗಳನ್ನಾಗಿ ಉಪಯೋಗಿಸಿಕೊಳ್ಳುತ್ತಿರುವುದು. ಎರಡನೆಯದು ಕಾರ್ಮಿಕ ಸಂಘಗಳಲ್ಲಿ ಶಿಸ್ತು ಮತ್ತು ನೀತಿಪಾಲನೆಯ ಅಭಾವ. ಅವರ ನಡೆವಳಿಕೆಯನ್ನು ಗೊತ್ತು ಪಡಿಸುವ ಸಂಹಿತೆಯ ಅಗತ್ಯವನ್ನು ಲೇಖಕರು ತಿಳಿಸಿರುವುದು ಸ್ವಾಗತಾರ್ಹ ಸೂಚನೆ.

ಸಾಮಾಜಿಕ ನ್ಯಾಯಸ್ಥಾಪನೆಯಲ್ಲಿ ನ್ಯಾಯಾಂಗ ವಹಿಸಿರುವ ಸಕ್ರಿಯ ಪಾತ್ರವನ್ನು ಉದಾಹರಣೆಗಳ ಮೂಲಕ ವ್ಯಕ್ತಪಡಿಸಿದ್ದಾರೆ. ಒಟ್ಟಿನಲ್ಲಿ ಸಂವಿಧಾನ ಪ್ರಾಸ್ತಾವಿಕವಾಗಿ ಘೋಷಿಸಿರುವ ತತ್ತ್ವಗಳು ಕೇವಲ ವಾಗ್ವೈಖರಿಯ ಆಡಂಬರದ ಮಾತುಗಳಾಗದೆ ಅವನ್ನು ಕಾರ್ಯರೂಪಕ್ಕೆ ತರಬೇಕಾದರೆ ನ್ಯಾಯಪಾರಮ್ಯದ ಅಗತ್ಯವೆಂಬುದನ್ನು ತಿಳಿಸಿ. ಆ ಗುರಿಯ ಸಾಧನೆಗೆ ಸರ್ಕಾರದ ನಿರಂತರ ಪ್ರಯತ್ನ ಅಗತ್ಯವೆಂಬುದನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ.

ಕಾನೂನನ್ನು ಧರ್ಮದಿಂದ ಬೇರ್ಪಡಿಸಿದ ಮೇಲೆ. ಹಿಂದೂ. ಮುಸಲ್ಮಾನ್ ಮತ್ತು ಕ್ರೈಸ್ತರಿಗೆ ಪ್ರತ್ಯೇಕ ಕಾನೂನುಗಳಿಗೆ ಜಾಗವಿಲ್ಲವೆಂಬುದು ಶ್ರೀ ಸುಬ್ಬರಾಯರ ಸ್ಪಷ್ಟ ಅಭಿಪ್ರಾಯ. ದೇಶದ ಒಗ್ಗಟ್ಟಿಗೆ ಮತ್ತು ಪ್ರಗತಿ ಸಾಧನೆಗೆ ಅನುಕೂಲವಾಗುವ ಬದಲಾವಣೆಗಳಿಗೆ ಸಹಾಯಕವಾಗುವಂತೆ ಎಲ್ಲರಿಗೂ ಅನ್ವಯವಾಗುವ ಒಂದು ವೈಯಕ್ತಿಕ ನ್ಯಾಯ ಸಂಹಿತೆಯನ್ನು ಜಾರಿಗೆ ತರುವ ಅಗತ್ಯವನ್ನು ಲೇಖಕರು ಸೂಚಿಸಿದ್ದಾರೆ.

ಈ ಲೇಖನಗಳನ್ನು ಓದುವಾಗ ಇನ್ನೊಂದು ವಿಚಾರ ನಮಗೆ ತಿಳಿದು ಬರುತ್ತದೆ. ಸಮಾಜವಾದಿ ತತ್ತ್ವಗಳು ಮತ್ತು ಕಾರ್ಯಗಳನ್ನು ಕುರಿತು ವಿವೇಚಿಸುವಾಗ ಸಮಾಜವಾದಿ ತತ್ತ್ವಗಳ ವಿಚಾರಧಾರೆಗೆ ಸಲ್ಲಬೇಕಾದ ಮನ್ನಣೆಯಲ್ಲಿ ಸಾಕಷ್ಟು ವಿಶಾಲಮನೋಭಾವವಿಲ್ಲವೆಂದು ಅನಿವಾರ್ಯವಾಗಿ ಹೇಳಬೇಕಾಗುತ್ತದೆ.

ಶ್ರೀ ಸುಬ್ಬರಾಯರು ಹೇಳಿರುವಂತೆ "ಮಾನವ ಹಕ್ಕುಗಳು. ಧರ್ಮ, ಕಾನೂನು ವಿಜ್ಞಾನ ಇವು ಸಮಾಜದ ಆಧಾರಸ್ತಂಭಗಳು. ಸಮಾಜದ ಸುಸ್ಥಿರತೆಗೆ ಮತ್ತು ಪ್ರಗತಿಗೆ ಇವುಗಳ ಸಮತೋಲನ ಅಗತ್ಯ".

ಶ್ರೀ ಸುಬ್ಬರಾಯರು ವಿದ್ವತ್ಪೂರ್ಣವಾದ ಬರವಣಿಗೆಯಲ್ಲಿ ಸೂಚಿಸಿರುವ ಹಲವು ವಿಚಾರಗಳು ಸಂಶೋಧನೆಗೆ ಸಹಾಯಕವಾಗುತ್ತವೆ. ಎರಡನೆಯ ಉಪನ್ಯಾಸದಲ್ಲಿ ಕಾನೂನಿನ ತಜ್ಞರಿಗೆ ಕೆಲವು ವಿಷಯಗಳು ಸಂಶೋಧನೆಗೆ ಸೂಕ್ತವಾಗಿದ್ದರೆ, ಮೂರನೆಯ ಉಪನ್ಯಾಸದಲ್ಲಿರುವ ಅನೇಕ ವಿಚಾರಗಳು ಸಮಾಜಶಾಸ್ತ್ರಜ್ಞರ ಸಂಶೋಧನೆಗೆ ಸೂಚನೆಗಳನ್ನು ಒದಗಿಸುತ್ತವೆ.

—**ಡಾ. ಎಚ್. ಸದಾಶಿವಯ್ಯ**

ಕರ್ನಾಟಕದ ವಾಸ್ತುಶಿಲ್ಪ: ಲೇ: ಎಸ್. ಅನಂತರಂಗಾಚಾರ್: ಪ್ರ: ಪ್ರಸಾರಾಂಗ. ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು. 1972 ಪುಟಗಳು–67 ಬೆಲೆ 25 ಪೈಸೆ.

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕ ಮಾಲೆಯ 193ನೆಯ ಪುಸ್ತಕ ಇದು. ಸುಮಾರು ಹನ್ನೆರಡು ವರ್ಷಗಳ ಹಿಂದೆ ಲೇಖಕರು ಮಾಡಿದ ಭಾಷಣ 1972ರಲ್ಲಿ ಪುಟ್ಟ ಪುಸ್ತಕದ ರೂಪದಲ್ಲಿ ಹೊರಬಂದಿದೆ. ಮೊದಲ ಕೆಲವು ಪುಟಗಳಲ್ಲಿ ಕರ್ನಾಟಕದಲ್ಲಿ ಆಳಿದ ರಾಜಮನೆತನಗಳ ಪರಿಚಯ ಮಾಡಿಕೊಡಲಾಗಿದೆ. ಟಿಪ್ಪಣಿಗಳಿಲ್ಲದೆ ಭಾಷಣ ಮಾಡಬಹುದಾದರೂ. ಅದನ್ನು ಬರವಣಿಗೆಗೆ ಇಳಿಸುವಾಗ ಬಹಳ ಜಾಗರೂಕತೆಯಿಂದಿರುವುದು ಅವಶ್ಯ. ಕದಂಬರು "ಕ್ರಿ.ಶ. ಮೂರನೆಯ ಶತಮಾನದ ಆದಿಭಾಗದಲ್ಲಿ" ಆಳಿದರೆಂದು ಹೇಳಿ. "ಕದಂಬರಾದ ಮೇಲೆ ಆಳಿದವರು ಗಂಗರು" (ಪುಟ 6–7) ಎಂದು ಹೇಳಿರುವ ಲೇಖಕರು ಗಂಗರು ಕ್ರಿ.ಶ. ಸುಮಾರು 250 ರಿಂದ ಆಳುತ್ತಿದ್ದರೆಂದಿದ್ದಾರೆ. ಅಂದರೆ ಕ್ರಿ.ಶ. ಮೂರನೆಯ ಶತಮಾನದಲ್ಲಿ ಆರಂಭವಾದ ಕದಂಬರ

ಆಳಿಕೆ 250ಕ್ಕೆ ಕೊನೆಗೊಂಡಿತೆಂದು ಅರ್ಥವೇ? ಹಾಗಿಲ್ಲದಿದ್ದಲ್ಲಿ 'ಕದಂಬರಾದ ಮೇಲೆ' ಎಂಬ ಮಾತಿನ ಅರ್ಥವೇನು? ಗಂಗರ ನೆಲನದಲ್ಲಿ ಅಮೋಘ ವರ್ಷನೆಂಬ ಹೆಸರಿನ ಅರಸನಿದ್ದನೆ? (ಪುಟ–7) ಪಶ್ಚಿಮ ಚಾಳುಕ್ಯರು ಕ್ರಿ.ಶ. 5ನೆಯ ಶತಮಾನದಿಂದ ಆಳಿದರೆನ್ನುವುದು ಸರಿಯೇ? ಅವರ "ಮೂಲ ಪುರುಷನಾದ ಜಯಸಿಂಹನು ಐಹೊಳೆಯಲ್ಲಿ ಕೊಂತಿಗುಡಿ ದುರ್ಗಾದೇವಾಲಯಗಳನ್ನು ನಿರ್ಮಿಸಿದನು" (ಪುಟ 8) ಎಂಬ ಹೇಳಿಕೆ ಲೇಖಕರ ಧೈರ್ಯವನ್ನು ಪ್ರತಿಧ್ವನಿಸುತ್ತದೆ! ಆರನೆಯ ವಿಕ್ರಮಾದಿತ್ಯನು ಚೋಳ. ಪಾಂಡ್ಯ. ಲಾಟರನ್ನೂ ಜಯಿಸಿ ರಾಜ್ಯವನ್ನು ವಿಸ್ತರಿಸಿದನು. ನೃಪತುಂಗನು ಮಾನ್ಯಖೇಟವನ್ನು ಕಟ್ಟಿಸಿದನು: ಇದೇ ಕಾಲದಲ್ಲಿ (10ನೆಯ ಶತಮಾನ?) ಕಲಚೂರ್ಯರೂ ಯಾದವರೂ ರಾಜ್ಯವಾಳಿದರು. ಬಿಜ್ಜಳನ ಮಂತ್ರಿಯಾಗಿದ್ದ ಕೇಶಿರಾಜನು ಬೆಳ್ಳಗಾವಿಯ ದೇವಾಲಯವನ್ನೂ ಕಟ್ಟಿಸಿದನು–ಇತ್ಯಾದಿಗಳೆಲ್ಲಾ ಸತ್ಯದೂರವಾದ ಹೇಳಿಕೆಗಳು.

ತಾಳಗುಂದದ ಶಾಸನಸ್ತಂಭ ಒಡೆದಾಗಿದ್ದರೂ ಕರ್ಲೆಗುಹೆಯ ಮರದ ಕಂಬದ ಮಾದರಿಯ ಮೇಲೆ ರಚಿತವಾಗಿರುವುದರಿಂದ ಬಹುಮುಖ್ಯವಾಗಿದೆ (ಪುಟ 12) ಎಂಬ ಹೇಳಿಕೆ ವಿಚಿತ್ರವಾಗಿದೆ. ಕರ್ಲೆ ಗುಹೆಯಲ್ಲಿ ಮರದ ಕಂಬವೇ ಇಲ್ಲ. ತಾಳಗುಂದದಲ್ಲಿರುವ ಕಂಬಕ್ಕೆ ಎಂಟು ಮುಖಗಳಿವೆ!

ಹೊಯ್ಸಳರ ಮತ್ತು ಅನಂತರದ ಕಾಲದ ಕರ್ನಾಟಕ ದೇವಾಲಯಗಳ ಸಮೀಕ್ಷೆ ಇದರಲ್ಲಿ ಹೆಚ್ಚು ಭಾಗವನ್ನಾಕ್ರಮಿಸಿದೆ. ಇದು ಹೆಚ್ಚು ವಸ್ತುನಿಷ್ಠವಾಗಿದೆ. ಆರಂಭಕಾಲದಿಂದ ಈಗ ಎರಡು ದಶಕಗಳ ಹಿಂದೆ ಕಟ್ಟಲಾದ ಬೆಂಗಳೂರಿನ ವಿಧಾನಸೌಧದವರೆಗಿನ 'ಕರ್ಣಾಟಕದ ವಾಸ್ತುಶಿಲ್ಪ'ವನ್ನು ಇಂತಹ ಪುಟ್ಟ ಪುಸ್ತಕದಲ್ಲಿ ವಿವೇಚಿಸುವುದು ಸುಲಭವಲ್ಲ. ಆದ್ದರಿಂದ ವಿಷಯವನ್ನು ಸೀಮಿತಗೊಳಿಸಿದ್ದರೆ ಹಿತವಾಗುತ್ತಿತ್ತು. ಮೊದಲನೆಯ ಪುಟದಿಂದ ಕೊನೆಯವರೆಗೂ ಒಂದೇ ಧಾಟಿಯಲ್ಲಿ ವಿವರಗಳನ್ನು ಸಂಗ್ರಹಿಸಿ ಹೇಳುತ್ತಾ ಹೋದ ಕಾರಣ ಸಾಮಾನ್ಯ ಓದುಗನಿಗೆ ಇದರಿಂದ ತೊಂದರೆಯಾಗಿದೆ ಎನ್ನಬೇಕು. ಇದನ್ನೇ 3–4 ಸಣ್ಣ ಸಣ್ಣ ಭಾಗಗಳಾಗಿ, ಅಧ್ಯಾಯಗಳಾಗಿ ವಿಂಗಡಿಸಿ ಹೇಳಿದ್ದರೆ ಹೆಚ್ಚು ಪರಿಣಾಮಕಾರಿಯಾಗಿರುತ್ತಿತ್ತೇನೋ!

ಆದರೂ ಕರ್ನಾಟಕದ ವಾಸ್ತುಶಿಲ್ಪದ ಸೂಕ್ಷ್ಮ ಪರಿಚಯ ಮಾಡಿಕೊಳ್ಳಬಯಸುವ ಜನಸಾಮಾನ್ಯರಿಗೆ ಇದು ಒಮ್ಮೆ ಓದಬಹುದಾದ ಪುಸ್ತಿಕೆಯಾಗಿದೆ.

—ಬಾ. ರಾ. ಗೋ.

ಕೆಳದಿಯ ಅರಸರು ಮತ್ತು ಪೋರ್ತುಗೀಜರು: ಡಾ. ಬಿ. ಎಸ್. ಶಾಸ್ತ್ರೀ: ಪ್ರ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ (1972): ಪು. 183 + 15:ಬೆಲೆ: ಸಾದಾ 3.50. ಉತ್ತಮ ರೂ. 5.50

ಕರ್ನಾಟಕ ವಿಶ್ವವಿದ್ಯಾಲಯದ ಪಠ್ಯಪುಸ್ತಕ ನಿರ್ದೇಶನಾಲಯದವರ ಐದನೆಯ ಪೂರಕ ಪ್ರಕಟಣೆ

16ನೆಯ ಶತಮಾನದ ಬಳಿಕ ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಪೋರ್ತುಗೀಸರು ವಹಿಸಿದ ಪಾತ್ರ ಇತಿಹಾಸ ಪ್ರಸಿದ್ಧವಾದುದು; ಅಮೂಲ್ಯವಾದುದು ಆಗಿದೆ. 15ನೆಯ ಶತಮಾನದ ಕೊನೆಯ ವರ್ಷ–1499ರಲ್ಲಿ–ಕೆಳದಿಯ ಅರಸರ ಆಳಿಕೆ ಆರಂಭವಾಯಿತು. ಮೊದಲು ವಿಜಯನಗರದ ಅರಸರ ಸಾಮಂತರಾಗಿದ್ದರೂ. ತಾಳೀಕೋಟೆಯ ಕದನದ ಬಳಿಕ ಇವರು ಸುತ್ತಲಿನ ಪ್ರದೇಶಗಳನ್ನು ಸ್ವತಂತ್ರರಾಗಿ ಆಳತೊಡಗಿದರು. ಇವರ ಆಳಿಕೆಯ ಆರಂಭದಲ್ಲಿಯೇ, 1498ರಲ್ಲಿ. ಪೋರ್ತುಗೀಸರು ವ್ಯಾಪಾರೋದ್ದೇಶದಿಂದ ಪಶ್ಚಿಮ ಕರಾವಳಿಯನ್ನು ತಲುಪಿ ಕ್ರಮೇಣ ಗೋವೆ ಹಾಗೂ ಸುತ್ತಲಿನ ತೀರ ಪ್ರದೇಶಗಳನ್ನು ತಮ್ಮ ಸ್ವಾಧೀನ ಪಡಿಸಿಕೊಂಡರು. ವಿಜಯನಗರದ ಇತಿಹಾಸದಲ್ಲಿ ಪೋರ್ತುಗೀಸರ ಸ್ಥಾನ ಮಹತ್ವದ್ದಾಗಿದೆ. ವಿಜಯನಗರದ ಅರಸರಿಗೆ ಅತ್ಯಾವಶ್ಯಕವಾಗಿ ಬೇಕಿದ್ದ ಕುದುರೆಗಳನ್ನು ಸರಬರಾಜು ಮಾಡುವ ಹೊಣೆಯನ್ನು ಹೊರುವುದರ ಮೂಲಕ ಆ ರಾಜ್ಯದೊಡನೆ ವಾಣಿಜ್ಯ ಸಂಬಂಧಗಳನ್ನೇರ್ಪಡಿಸಿಕೊಂಡುದಲ್ಲದೆ ತೀರ ಪ್ರದೇಶದ ಮೇಲಿನ ತಮ್ಮ ಹತೋಟಿಯನ್ನು ಬಿಗಿತಪಡಿಸಿಕೊಂಡರು. ವಿಜಯನಗರ ಸಾಮ್ರಾಜ್ಯ ಅಳಿದ ನಂತರ ಸ್ವತಂತ್ರರಾದ ಕೆಳದಿ ಅರಸರು. ಅಲ್ಲದೆ ಸ್ವಾದೀ ಮನೆತನದವರು, ದಕ್ಷಿಣ ಕನ್ನಡದ ಬಂಗರು. ಚೌಟರು, ಭೈರರಸರು ಮುಂತಾದವರು ಸಹಜವಾಗಿಯೇ ಪೋರ್ತುಗೀಸರೊಡನೆ ಸಂಬಂಧಗಳನ್ನು ಮುಂದುವರಿಸಿಕೊಂಡು ಹೋಗಬೇಕಾಯಿತು. ಇವರಲ್ಲಿ ಕೆಳದಿಯ ಅರಸರು ಪ್ರಮುಖರು.

ಬಿಜಾಪುರದ ಸುಲ್ತಾನರಾದ ಆದಿಲ್‌ಷಾಹಿ ಮನೆತನದವರು ಸಹ ಈ ಕರಾವಳಿ ಪ್ರದೇಶದಲ್ಲಿ ಆಸಕ್ತರಾಗಿದ್ದ ಕಾರಣ ಕೆಳದಿಯ ನಾಯಕರು ಅವರ ವಿರೋಧವನ್ನೆದುರಿಸಬೇಕಾಯಿತು. ಹಿರಿಯ ವೆಂಕಟಪ್ಪನಾಯಕ ತನ್ನ ರಾಜ್ಯವನ್ನು ಉತ್ತರ ಕನ್ನಡದ ಮಿರ್ಜಾನ್‌ದಿಂದ ದಕ್ಷಿಣದಲ್ಲಿ ಕಾಸರಗೋಡಿನ ಚಂದ್ರಗಿರಿಯ ಹೊಳೆಯ ತನಕ ವಿಸ್ತರಿಸಿದ್ದ. ಗೇರಸೊಪ್ಪೆಯ ಭೈರಾದೇವಿಯನ್ನೂ ಸೋಲಿಸಿ, ಆಕೆಯ ರಾಜ್ಯವನ್ನು ವಶಮಾಡಿಕೊಂಡಾಗ ಅವನ ರಾಜ್ಯದ ಗಡಿ ಆದಿಲ್‌ಷಾಹನ ರಾಜ್ಯದ ಗಡಿಗೆ ತಾಗಿತು. ಸಹಜವಾಗಿಯೇ ಇವರ ನಡುವೆ ಕಾದಾಟಗಳುಂಟಾದುವು. ಪೋರ್ತುಗೀಸರು ಈ ರಾಜಕೀಯ ವ್ಯವಹಾರಗಳಲ್ಲಿ ಕಪಟನಾಟಕವನ್ನಾಡಿ ಇಬ್ಬರೊಡನೆಯೂ ಮೈತ್ರಿಯನ್ನು ನಟಿಸಿದರು. ಅವರೆ ಇಬ್ಬರನ್ನೂ ನಾಶಮಾಡಲು ಒಳಗೆ ಒಳಗೇ ತಂತ್ರಗಳನ್ನೂ ಮಾಡಿದರು. ಅಂದಿನಿಂದ ಆರಂಭವಾದ ಇವರ ಸಂಬಂಧಗಳು ಬಿದನೂರಿನಿಂದ ಆಳಿದ ಕೆಳದಿಯ ಮನೆತನದ ವೀರಮ್ಮಾಜಿಯ ಕಾಲದವರೆಗೆ ಮುಂದುವರಿದುವು. ಅಂದಿನ ರಾಜಕೀಯ ಇತಿಹಾಸದಲ್ಲಿ ಈ ಸಂಬಂಧಗಳು ಪ್ರಮುಖವಾದವು. ಇವುಗಳನ್ನು ವಿವರವಾಗಿ ಅರಿಯುವುದರ ಮೂಲಕ ಪೋರ್ತುಗೀಸರ ಕುಟಿಲ ನೀತಿ ಹಾಗೂ ಈ ಪ್ರದೇಶದ ಆಂತರಿಕ ವ್ಯವಹಾರಗಳಲ್ಲಿ ತಲೆ ಇಟ್ಟು ತಮ್ಮ ಪ್ರಾಬಲ್ಯವನ್ನು ಬೆಳೆಸಿಕೊಂಡ ಅವರ ಚಾಣಾಕ್ಷತೆಗಳನ್ನು ತಿಳಿದಂತಾಗುವುದು.

ಪ್ರಸ್ತುತ ಗ್ರಂಥದಲ್ಲಿ ಈ ಯತ್ನವನ್ನೂ ಮಾಡಲಾಗಿದೆ. ಈ ಅಭ್ಯಾಸಕ್ಕೆ ಸಂಬಂಧಿಸಿದಂತೆ ಮೂಲಾಧಾರಗಳು ಬಹುಮಟ್ಟಿಗೆ ಪೋರ್ತುಗೀಸರು ಇಲ್ಲಿಯ ಅರಸರೊಡನೆ, ಸುಲ್ತಾನರೊಡನೆ ನಡೆಸಿದ ಪತ್ರವ್ಯವಹಾರಗಳೇ ಆಗಿವೆ. ಕೆಳದಿನೃಪ ವಿಜಯ, ಚಿಕ್ಕದೇವರಾಯ ವಂಶಾವಳಿ ಮುಂತಾದ ಒಂದೆರಡು ಸಾಹಿತ್ಯಕ ಆಧಾರಗಳಿದ್ದರೂ ಸಮಕಾಲೀನ ಪತ್ರಗಳು, ಬರಹಗಳು, ವರದಿಗಳು ಹೆಚ್ಚು ಆಧಾರಯುಕ್ತವಾಗಿದ್ದು, ಈ ಗ್ರಂಥದ ಲೇಖಕರು ಇವುಗಳನ್ನು ಬಹುಮಟ್ಟಿಗೆ ಉಪಯೋಗಿಸಿಕೊಂಡಿದ್ದಾರೆ. ಪೋರ್ತುಗೀಸ್ ಭಾಷೆಯಲ್ಲಿನ ಇವುಗಳನ್ನು ತಿಳಿಯಲು ಇವರು ಸ್ವತಃ ಆ ಭಾಷೆಯ ಪರಿಜ್ಞಾನವನ್ನು ಪಡೆದರು. ಹಿಂದೆ ಶ್ರೀ ಕೆ. ಡಿ. ಸ್ವಾಮಿನಾಥನ್ ರವರು The Nayakas of Ikkeri ಎಂಬ ಗ್ರಂಥವನ್ನು ಪ್ರಕಟಿಸಿದ್ದರೂ ಕನ್ನಡ ಅಥವಾ ಪೋರ್ತುಗೀಸ್ ಭಾಷೆಗಳ ಪರಿಚಯ ಇಲ್ಲದೆ, ಶಾಸನಗಳ, ದಾಖಲೆ ಪತ್ರಗಳ ಮೂಲವನ್ನು ಪರಿಶೋಧಿಸದೆ ಕೇವಲ ಭಾಷಾಂತರಗಳ ಆಧಾರ ಪಡೆದಿದ್ದರು. ಕೆಲವು ಪತ್ರಗಳನ್ನು ಭಾಷಾಂತರಿಸುವಲ್ಲಿಯಂತೂ ಬಹಳ ತಪ್ಪುಗಳಾಗಿ ಆ ಪುಸ್ತಕದ ಮೌಲ್ಯವೇ ಇಳಿದಿದೆ. ಶ್ರೀ ಶಾಸ್ತ್ರಿಗಳು ಈ ಕುಂದನ್ನು ಬಹುಮಟ್ಟಿಗೆ ಇದರಲ್ಲಿ ನಿವಾರಿಸಿದ್ದಾರೆ. ಇದರ ಪರಿಣಾಮವಾಗಿ ಅಂದಿನ ಘಟನೆಗಳನ್ನು ಕುರಿತ ಅರ್ಥಪೂರ್ಣವೂ ಆಧಾರಬದ್ಧವೂ ಆದ ಹೊಸ ವ್ಯಾಖ್ಯಾನವನ್ನು ಇಲ್ಲಿ ನಾವು ಕಾಣುತ್ತೇವೆ.

ವಿಜಯನಗರದ ಪತನಾನಂತರದ ಕರ್ನಾಟಕದ ಇತಿಹಾಸ ಬಹಳ ಮಟ್ಟಿಗೆ ಇನ್ನೂ ಕತ್ತಲೆಯ ಗರ್ಭದಲ್ಲಿಯೇ ಅಡಗಿದೆ. ಶಿಲಾಶಾಸನಗಳ ಕಾಲ ಮುಗಿದು, ಕಾಗದಪತ್ರಗಳು ಅಸ್ತಿತ್ವಕ್ಕೆ ಬಂದ ಕಾರಣ, ಅಂತಹ ಅನೇಕ ಮೂಲಾಧಾರಗಳು ಲಭ್ಯವಾಗದೆ ಇರುವುದು, ಅವುಗಳು ಪೋರ್ತುಗೀಸ್, ಅರಬ್ಬೀ, ಪಾರ್ಸೀ ಇತ್ಯಾದಿ ಭಾಷೆಗಳಲ್ಲಿದ್ದು ಅವುಗಳನ್ನು ಅರ್ಥೈಸಲು ಯತ್ನಮಾಡದಿರುವುದು ಇದಕ್ಕೊಂದು ಮುಖ್ಯಕಾರಣ. ಇದೊಂದು ಕೊರತೆ. ಈ ಕೊರತೆಯನ್ನು ಹೋಗಲಾಡಿಸುವಲ್ಲಿ ಡಾ. ಶಾಸ್ತ್ರಿಗಳು ಯಶಸ್ವಿಯಾಗಿದ್ದು, ಒಂದು ಸಣ್ಣ ಅರಸು ಮನೆತನದ ಇತಿಹಾಸವನ್ನು ಅರಿಯುವಲ್ಲಿ ಬಹಳ ಸಹಾಯ ಮಾಡಿದ್ದಾರೆ. ಇವರು ಆ ಪುಸ್ತಕದಲ್ಲಿ ವಿಶದೀಕರಿಸಿರುವ ಅನೇಕ ವಿವರಗಳು ನಮಗೆ ಇದುವರೆಗೂ ತಿಳಿದೇ ಇರಲಿಲ್ಲ. ಇದೊಂದು ಸಣ್ಣದಾದರೂ ಉತ್ತಮವಾದ ಸಂಶೋಧನ ಗ್ರಂಥ. ಆದರೆ ಮುದ್ರಣ ಮಾತ್ರ ಚೆನ್ನಾಗಿಲ್ಲ. ಮುದ್ರಾರಾಕ್ಷಸನ ಹಾವಳಿ ಬಹಳವಾಗಿ ಆಗಿವೆ. ಲೇಖಕರ ಹೆಸರನ್ನು ಒಳಪುಟದಲ್ಲಿ ಬಿ. ಎಸ್. ಶಾಸ್ತ್ರಿ ಎಂದೂ, ಹೊರಪುಟದಲ್ಲಿ ಬಿ. ಕೆ. ಶಾಸ್ತ್ರೀ ಎಂದೂ ಮುದ್ರಿಸಿರುವುದು ವಿಚಿತ್ರವಾಗಿ ಕಾಣುತ್ತದೆ. ಬಿ. ಎಸ್. ಶಾಸ್ತ್ರೀ ಎಂಬುದೇ ಸರಿ.

—ಬಾ. ರಾ. ಗೋ.

ಪ್ರಾದೇಶಿಕ ಭೂಗೋಲ–ಭಾರತ: ಲೇ. ಪ್ರೊ. ತಿ. ನಾ. ಅಚ್ಯುತರಾವ್: ಪ್ರ. ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ (1972). ಪು. 283 + 15 ಡೆಮ್ಮಿ ಅಷ್ಟದಳ. ಬೆಲೆ ಸಾದಾ: ರೂ. 7.00, ಉತ್ತಮ ರೂ.9.00.

ಮೈಸೂರು ರಾಜ್ಯದ ಪಿ.ಯು.ಸಿ. ಎರಡನೆಯ ವರ್ಷದ ಭೂಗೋಳಶಾಸ್ತ್ರದ ಪಠ್ಯಕ್ರಮಕ್ಕೆ ಅನುಸಾರವಾಗಿ. ಪಠ್ಯಪುಸ್ತಕವಾಗಿ. ಈ ಪುಸ್ತಕವನ್ನು ರಚಿಸಲಾಗಿದೆ. ಅನೇಕ ಭೌಗೋಳಿಕ ಲೇಖನಗಳನ್ನು ಆಂಗ್ಲಭಾಷೆಯಲ್ಲಿ ಬರೆದು. ಕನ್ನಡಿಗರಿಗೆ ಚಿರಪರಿಚಿತರಾಗಿರುವ ಬೆಳಗಾಂವಿಯ ಲಿಂಗರಾಜ ಕಾಲೇಜಿನ ಭೂಗೋಳಶಾಸ್ತ್ರ ಪ್ರಾಧ್ಯಾಪಕ ಶಿ. ನಾ. ಅಯ್ಯರಾಯರು ಇದನ್ನು ರಚಿಸಿದ್ದಾರೆ. ಇವರಿಗೆ ಸಹಾಯಕರಾಗಿ ಅಥವಾ ನಿರ್ದೇಶಕರಾಗಿ ಭೂಗೋಳಶಾಸ್ತ್ರ ಪರಿಣತರ ಒಂದು ಪಠ್ಯಪುಸ್ತಕ ಸಮಿತಿ ಸದಸ್ಯರೂ ಇದ್ದಾರೆ.

ಇದುವರೆವಿಗೆ ಕನ್ನಡ ಭಾಷೆಯಲ್ಲಿ ಬಂದಿರುವ ಪಿ.ಯು.ಸಿ. ಎರಡನೆಯ ತರಗತಿಯ ಭೂಗೋಳಶಾಸ್ತ್ರದ ನಾಲ್ಕೈದು ಪುಸ್ತಕಗಳಲ್ಲಿ ಈ ಪುಸ್ತಕ ಉಳಿದವುಗಳಿಗಿಂತ ಉತ್ತಮವಾದುದೆಂದು ಹೇಳಬಹುದು. ವಿಷಯ ವೈಪುಲ್ಯ. ಸ್ಪಷ್ಟ ಚಿತ್ರಣದ ವಿವರಗಳು. ಹೇಳಬೇಕಾದುದನ್ನು ನಿಷ್ಠೆಯಿಂದ ತಿಳಿಸುವಿಕೆ. ಕನ್ನಡ ಮಾಧ್ಯಮದ ಉತ್ತಮ ಪ್ರಯೋಜನ–ಇವುಗಳು ಈ ಪುಸ್ತಕದ ಹಿರಿಮೆಯನ್ನು ಹೆಚ್ಚಿಸಿವೆ. ವಿಷಯ ಬಾಹುಳ್ಯ ಹಾಗೂ ನಿರೂಪಣೆಗಳಲ್ಲಿ ಉಳಿದ ಭೌಗೋಳಿಕ ಗ್ರಂಥಗಳಿಗಿಂತ ಬಹುಪಾಲು ಉತ್ತಮ.

ಭಾರತದ ಸಂಪೂರ್ಣ ಭೌಗೋಳಿಕ ವಿವರಗಳನ್ನು ಒಂಬತ್ತು ಅಧ್ಯಾಯಗಳಲ್ಲಿ ವಿವರಿಸಲಾಗಿದೆ– ಭೌಗೋಳಿಕ ಹಿನ್ನೆಲೆ. ನೀರಾವರಿ. ಕೃಷಿ. ಶಕ್ತಿ ಸಂಪನ್ಮೂಲಗಳು. ಖನಿಜ ಸಂಪನ್ಮೂಲಗಳು, ಉದ್ದಿಮೆಗಳು. ಸಾರಿಗೆ. ಜನಸಂಖ್ಯೆ. ಮೈಸೂರು ರಾಜ್ಯದ ಪ್ರಮುಖ ನಗರಗಳು ಮತ್ತು ಪಟ್ಟಣಗಳು. ಭೌಗೋಳಿಕ ಹಿನ್ನೆಲೆಯಲ್ಲಿ ಭಾರತದ ಸನ್ನಿವೇಶ ಮತ್ತು ವಿಸ್ತೀರ್ಣದೊಂದಿಗೆ ಭಾರತದ ಪ್ರಾಕೃತಿಕ ಸ್ವರೂಪಗಳು. ನದಿಗಳು, ವಾಯುಗುಣ. ಮಣ್ಣು. ಸ್ವಾಭಾವಿಕ ಸಸ್ಯವರ್ಗದ ವಿವರಗಳನ್ನು ಚೊಕ್ಕವಾಗಿ ಸ್ಪಷ್ಟ ರೀತಿಯಲ್ಲಿ ವಿವರಿಸಲಾಗಿದೆ. ನೀರಾವರಿ ಅಧ್ಯಾಯದಲ್ಲಿ ಭಾರತದಲ್ಲಿ ಉಪಯೋಗದಲ್ಲಿರುವ ವಿವಿಧ ನೀರಾವರಿ ವಿಧಾನಗಳು ಮತು ವಿವಿಧೋದ್ದೇಶ ನೀರಾವರಿ ಯೋಜನೆಗಳ ಬಗ್ಗೆ ವಿವರಗಳಿವೆ. ಕೃಷಿ ಅಧ್ಯಾಯ ಹೆಚ್ಚಿನ ವಿವರಗಳನ್ನು ಒಳಗೊಂಡಿದ್ದು• ವಿವಿಧ ಬೆಳೆಗಳು ಬೆಳೆಯುವ ರೀತಿ ಮತ್ತವುಗಳ ಭೌಗೋಳಿಕ ಪ್ರಾಮುಖ್ಯವನ್ನು ಸ್ಪಷ್ಟೀಕರಿಸಲಾಗಿದೆ. ಶಕ್ತಿ ಸಂಪನ್ಮೂಲಗಳು, ಖನಿಜ ಸಂಪನ್ಮೂಲಗಳು. ಉದ್ದಿಮೆಗಳು–ಈ ಮೂರು ಅಧ್ಯಾಯಗಳು ಈ ಗ್ರಂಥದಲ್ಲಿ ಅತ್ಯುತ್ತಮ ರೀತಿಯಲ್ಲಿ ವಿವರಿಸಲ್ಪಟ್ಟಿರುವ ಅಧ್ಯಾಯಗಳಾಗಿವೆ. ಸಾರಿಗೆ, ಜನಸಂಖ್ಯೆ, ಮೈಸೂರು ರಾಜ್ಯದ ಪ್ರಮುಖ ನಗರಗಳು ಹಾಗೂ ಪಟ್ಟಣಗಳು– ಈ ಅಧ್ಯಾಯಗಳು ಇನ್ನೂ ಹೆಚ್ಚಿನ ವಿವರಗಳನ್ನು ಹೊಂದಿದ್ದು. ಐತಿಹಾಸಿಕ ಭೂಗೋಳಶಾಸ್ತ್ರದ ಹಿನ್ನೆಲೆಯನ್ನು ಹೊಂದಿರಬೇಕಾಗಿತ್ತು. ಅದಿಲ್ಲದೆ ಈ ಅಧ್ಯಾಯಗಳು ಸಪ್ಪೆಯಾಗಿವೆ.

ಪಿ.ಯು.ಸಿ. ಭೂಗೋಳಶಾಸ್ತ್ರದ ಎರಡನೆಯ ವರ್ಷಕ್ಕಾಗಿರುವ ನಾಲ್ಕೈದು ಪುಸ್ತಕಗಳಲ್ಲಿ ಇಲ್ಲದಿರುವ ಒಂದು ವೈಶಿಷ್ಟ್ಯ ಈ ಪುಸ್ತಕಕ್ಕಿದೆ. ಪರಿಶಿಷ್ಟದಲ್ಲಿ ನಕ್ಷಾಶಾಸ್ತ್ರದ ಅಭ್ಯಾಸಗಳು ಮತ್ತು ಹವಾಮಾನ ನಕ್ಷೆಗಳು ಎಂಬ ಎರಡು ಅಧ್ಯಾಯಗಳನ್ನು ಸೇರಿಸಲಾಗಿದೆ. ಈ ವಿಭಾಗ ಉತ್ತಮ ನಕ್ಷೆಗಳಿಂದ ಕೂಡಿ, ಪ್ರೌಢವಾಗಿದೆ.

ಗ್ರಂಥ ಪೂರ್ಣವಾಗಿ ಉಪಯೋಗವಾಗಲು ಸಹಾಯಕವಾಗುವಂತೆ ಚಿತ್ರಗಳ . ನಕ್ಷೆಗಳು ಮತ್ತು ಸಂಖ್ಯಾಚಿತ್ರಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನೀಡಲಾಗಿದೆ. ಅಲ್ಲದೆ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ಪ್ರತಿ ಅಧ್ಯಾಯದ ಕೊನೆಗೂ ಅಭ್ಯಾಸಗಳನ್ನು ನೀಡಲಾಗಿದೆ. ಪುಸ್ತಕದ ಕಡೆಯಲ್ಲಿ ವರ್ಣ ಚಿತ್ರಗಳ ಹಿನ್ನೆಲೆಯಲ್ಲಿ (ಟಿಂಟ್) ಅದಕ್ಕೆ ಸಂಬಂಧಪಟ್ಟ ರೇಖಾಚಿತ್ರಗಳನ್ನು ನೀಡಿರುವುದು ಭಾವನಾತ್ಮಕವಾಗಿದೆ. ಸಿಮೆಂಟ್. ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಚಿತ್ರಗಳು ಈ ದೃಷ್ಟಿಯಿಂದ ಉತ್ತಮವಾಗಿವೆ. ಇವು ಪುಸ್ತಕದ ಉಪಯೋಗ ಹಾಗೂ ಆಕರ್ಷಕತೆಯನ್ನು ಹೆಚ್ಚಿಸಿವೆ. ಈ ಗ್ರಂಥದ ಮುಖಪುಟ ಅತ್ಯಂತ ಆಕರ್ಷಕವಾಗಿ, ಕಲಾತ್ಮಕವಾಗಿ ರೂಪಗೊಂಡು. ಈ ನಿಟ್ಟಿನಲ್ಲಿ ಲೇಖಕರು ಹಾಗೂ ಮುಖಪುಟ ವಿನ್ಯಾಸಕರ ಜಾಣ್ಮೆಯನ್ನು ಪ್ರಶಂಸಿಸಬಹುದಾಗಿದೆ.

ಆದರೆ ಈ ಗ್ರಂಥದ ಇಷ್ಟೆಲ್ಲ ಉತ್ತಮ ಗುಣಗಳನ್ನು ಕಂಡು. ಅದನ್ನು ಮತ್ತೊಮ್ಮೆ ತಿರುವಿ ನೋಡುವ ಭೂಗೋಳಶಾಸ್ತ್ರಜ್ಞನಿಗೆ ಅದರ ಈಗಿರುವ ಸ್ಥಿತಿಗೆ ಖಂಡಿತವಾಗಿಯೂ ಸಂತೋಷಪಡಲಾರ. ಅತ್ಯುತ್ತಮ ಪಠ್ಯ ಆತುರದಲ್ಲಿ ಸಿದ್ಧಪಡಿಸಿರುವ ಗ್ರಂಥವೆಂದು ಸುಲಭವಾಗಿ ಹೇಳಬಹುದು.

ಪುಸ್ತಕ ವಾಗುವುದರಲ್ಲಿ ಅನೇಕ ಅಂಶಗಳಲ್ಲಿ ಸೋತಿದೆ ಎನ್ನದೆ ವಿಧಿಯಿಲ್ಲ. ಕೇಂದ್ರ ಸರ್ಕಾರದ ಆರ್ಥಿಕ ಸಹಾಯ ಪಡೆದೂ, ಇಷ್ಟೊಂದು ವಿದ್ವಾಂಸರ ನೆರವಿದ್ದೂ ಕನ್ನಡ ಭೌಗೋಳಿಕ ಸಾಹಿತ್ಯಕ್ಕೆ, ಉತ್ತಮ ಕೊಡುಗೆ ನೀಡುವ ಸದವಕಾಶವನ್ನು ಕಳೆದುಕೊಂಡಿತು. ಇಂತಹ ಸಾಮಾನ್ಯ ರೀತಿಯ ಒಂದು ಪುಸ್ತಕವನ್ನು ಕೊಡಬೇಕಾಗಿತ್ತೆ ಎನ್ನಿಸುತ್ತದೆ.

ಪಠ್ಯಕ್ರಮದಲ್ಲಿ With special reference to Mysore State ಎಂದಿದೆ. ಅಂದರೆ ಭಾರತದ ಭೌಗೋಳಿಕ ವಿವರಗಳನ್ನು ನೀಡುತ್ತಾ, ಅವುಗಳಲ್ಲಿ ಮೈಸೂರಿನ ಭೌಗೋಳಿಕ ವಿವರಗಳಿಗೆ ಪ್ರಾಧಾನ್ಯ ಕೊಡಬೇಕಾಗಿದೆ ಎಂದರ್ಥ. ಆದರೆ ಯಾವ ಅಧ್ಯಾಯದಲ್ಲೂ ಈ ಪ್ರಾಧಾನ್ಯ ಕಂಡು ಬರುವುದಿಲ್ಲ. ಅಭ್ಯಾಸದ ಪ್ರಶ್ನೆಗಳಲ್ಲೂ ಇದು ಕಾಣುವುದೇ ಇಲ್ಲ. ಅಂಕಿಸಂಖ್ಯೆಗಳ ಪಟ್ಟಿಯಲ್ಲಿ ಮಾತ್ರ 'ಮೈಸೂರು' ಪದವನ್ನು antic ನಲ್ಲಿ ತೋರಿಸಲಾಗಿದೆ. ಇಷ್ಟು ಪ್ರಾಧಾನ್ಯ ಸಾಕೆ? ಉನ್ನತಮಟ್ಟದ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಈ ಗ್ರಂಥ ರಚಿತವಾಗಿರುವುದರಿಂದ ಐತಿಹಾಸಿಕ ಭೂಗೋಳದ ವಿವರಗಳೂ ಇರಬೇಕಾದುದು ಅವಶ್ಯಕ. ಹಿಮಾಲಯ ಪರ್ವತಗಳ ಹಾಗೂ ಉತ್ತರ ಭಾರತದ ಮೈದಾನದ ಜನನ, ಭಾರತದ ನೀರಾವರಿ ವ್ಯವಸ್ಥೆಯ ಐತಿಹಾಸಿಕ ಹಿನ್ನೆಲೆ ಇವು ಉದಾಹರಣೆಗಳು.

ಕೆಲವು ಕಡೆ ವಾಕ್ಯಗಳ ಜೋಡಣೆ, ಪದಗಳ ಪ್ರಯೋಗ ಸರಿ ಇಲ್ಲವೆನ್ನಿಸುತ್ತದೆ.—"ಮೀನುಗಾರಿಕೆಗೆ ಬೇಕಾದ ಪರಿಸರವನ್ನು ಕಲ್ಪಿಸಿಕೊಡುವಲ್ಲಿ. ಅರಬ್ಬೀ ಸಮುದ್ರ...ಮಹಾಸಾಗರಗಳು ಮಹತ್ವವನ್ನು ಗಳಿಸಿವೆ"(ಪುಟ 5). ಇಲ್ಲಿ 'ಪರಿಸರ' ಎಂದರೇನು ಎಂಬುದು ಅರ್ಥವಾಗುವುದಿಲ್ಲ. ಒಂದೇ ರೀತಿಯ ಭೌಗೋಳಿಕ ವಿಭಾಗಕ್ಕೆ ಒಮ್ಮೆ 'ಸಾಗರ' ಎಂದೂ, 'ಮತ್ತೊಮ್ಮೆ 'ಮಹಾಸಾಗರ'ವೆಂದೂ ಪ್ರಯೋಗಿಸಿರುವುದರ ಔಚಿತ್ಯವೇನು? 'ಪೀಠಭೂಮಿ' 'ಪ್ರಸ್ಥಭೂಮಿ' ಎರಡು ಪದಗಳನ್ನೂ ಪ್ರಯೋಗಿಸಲಾಗಿದೆ. 'ಪೀಠಭೂಮಿ' ಎಂಬ ಪದ ಹೆಚ್ಚಾಗಿ ಬಳಕೆಯಲ್ಲಿದ್ದು, ವೈಜ್ಞಾನಿಕವಾಗಿರುವುದರಿಂದ 'ಪ್ರಸ್ಥಭೂಮಿ' ಎಂಬ ಪ್ರಯೋಗ ಸಾಧುವಲ್ಲ. ಗಂಗಾನದಿಯ ಉಪನದಿ 'ಮಹಾನಂದ' 'ಮಹಾನದಿ' (ಪುಟ 29) ಹೇಗಾಯಿತು? 'ನಕಾಶೆ' ಹಾಗೂ 'ನಕ್ಷೆ' ಎಂಬ ಎರಡೂ ಪದಗಳ ಪ್ರಯೋಗವೇಕೋ ತಿಳಿಯದು.

ಕೆಲವೊಂದು ಅಧ್ಯಾಯಗಳಲ್ಲಿಯ ಶೀರ್ಷಿಕೆ, ಉಪಶೀರ್ಷಿಕೆಗಳನ್ನು ಕ್ರಮಬದ್ಧವಾಗಿ ನೀಡಿಲ್ಲ. 7ನೆಯ ಪುಟದಲ್ಲಿ ಭಾರತದ ಐದು ಪ್ರಾಕೃತಿಕ ವಿಭಾಗಗಳನ್ನು ಸೂಚಿಸಿ, ಅವುಗಳಿಗೆ ಶೀರ್ಷಿಕೆ ಹಾಗೂ ಉಪಶೀರ್ಷಿಕೆಗಳನ್ನು ನೀಡಲಾಗಿದೆ. ಆದರೆ ಕೆಲವೊಂದು ಶೀರ್ಷಿಕೆಗಳ ಪತ್ತೆಯೇ ಇಲ್ಲ. 'ಮಧ್ಯ ಭಾರತ ಉನ್ನತ ಪೀಠಭೂಮಿ' ಎನ್ನುವ 2ನೆಯ ವಿಭಾಗದ ವಿವರವೇ ಇಲ್ಲ. 3ನೆಯ ವಿಭಾಗವಾದ 'ದಕ್ಷಿಣಪಥ'ದಲ್ಲಿ ಐದು ಉಪಶೀರ್ಷಿಕೆಗಳು (ಪುಟ 14) ಇವೆ. ಇವುಗಳಲ್ಲಿ 'ಉತ್ತರ ದಖಿನ್' ಮತ್ತು 'ದಕ್ಷಿಣ ದಖಿನ್' ಎನ್ನುವ ಎರಡು ಉಪಶೀರ್ಷಿಕೆಗಳು ಇಲ್ಲವೇ ಇಲ್ಲ. ಇದೇ ರೀತಿಯಲ್ಲಿ 'ಪೂರ್ವ ಪ್ರಸ್ಥಭೂಮಿ' (ಪುಟ 30)ಯಲ್ಲಿನ ಉಪಶೀರ್ಷಿಕೆಗಳಲ್ಲಿ ಮೂರನೆಯದರ ವಿವರವೇ ಪತ್ತೆ ಇಲ್ಲ. 'ನದಿಗಳು' ಎಂಬ ಶೀರ್ಷಿಕೆಯಲ್ಲಿ 'ದಕ್ಷಿಣದ ನದಿಗಳು' ಎನ್ನುವ ವಿಭಾಗದಲ್ಲಿ ಮೈಸೂರು ರಾಜ್ಯದಲ್ಲಿ ಪಶ್ಚಿಮಕ್ಕೆ ಹರಿಯುವ ನದಿಗಳಾದ ಶರಾವತಿ, ಕಾಳಿ ಇತ್ಯಾದಿಗಳ ವಿವರಗಳಿಲ್ಲ. ಕಾವೇರಿ ಮತ್ತು ತುಂಗಭದ್ರಾ ನದಿಗಳ ಉಪನದಿಗಳ ವಿವರಗಳಿಲ್ಲ. ಆದರೆ ನರ್ಮದಾ ಮತ್ತು ತಪತಿ ನದಿಗಳ ವಿವರಗಳು ಎರಡೆರಡು ಕಡೆ (ಪುಟ 30, 31 ಮತ್ತು 33. 34) ಇವೆ. ಹೀಗೇಕಾಯಿತು?

ವಾಯುಗುಣ ವಿಭಾಗದಲ್ಲಿ ಪ್ರಮುಖ ಸ್ಥಳಗಳ ಉಷ್ಣತೆಗಳ ವಿವರಗಳನ್ನು ಪಟ್ಟಿರೂಪದಲ್ಲಿ ಪರಿಶಿಷ್ಟದಲ್ಲಿಯಾದರೂ ಕೊಡಬಹುದಾಗಿತ್ತು. Tropical airm ss ಅನ್ನುವುದಕ್ಕೆ Hot wind ಎಂಬರ್ಥ ಕೊಡುವ 'ಉಷ್ಣಮಾರುತ' ಎಂಬ ಪ್ರಯೋಗಕ್ಕೆ ಬದಲಾಗಿ 'ಉಷ್ಣವಲಯ ವಾಯು ಪುಂಜ' ಎಂಬ ಪ್ರಯೋಗ ಹೆಚ್ಚು ಸಮಂಜಸ. ಅನೇಕ ಪದಗಳು ಈ ರೀತಿ ತಪ್ಪು ಪ್ರಯೋಗಕ್ಕೆ ಒಳಗಾಗಿವೆ.

ಭೂಗೋಳಶಾಸ್ತ್ರ ಗ್ರಂಥದಲ್ಲಿ ಬರೀ ಚಿತ್ರಗಳಿದ್ದರೆ ಸಾಲದು. ಅದರಲ್ಲಿಯ ವಿಷಯಕ್ಕೆ ಪೂರಕವಾಗಿ ನಕ್ಷೆಗಳು, ರೇಖಾಚಿತ್ರಗಳು ಇರಬೇಕು ಇವು ಭೂಗೋಳಶಾಸ್ತ್ರದ ಜೀವಾಳವಾಗಿರುತ್ತವೆ ಹಾಗೂ ದೃಷ್ಟಿ ಮೌಲ್ಯ ಪ್ರಾಧಾನ್ಯವನ್ನು ಹೊಂದಿರುತ್ತವೆ. ಈ ಗ್ರಂಥಕ್ಕೆ ಹೇರಳ ಆರ್ಥಿಕ ಹಾಗೂ ವಿದ್ವಜ್ಜನರ ಸಹಾಯವಿದ್ದು ಇದರಲ್ಲಿ ರೇಖಾ ನಕ್ಷೆಗಳು ಸಾಕಷ್ಟು ಇಲ್ಲವೆಂದರೆ ಉತ್ತಮ ಭೌಗೋಳಿಕ ಗ್ರಂಥವೆನ್ನಿಸಿಕೊಳ್ಳುವುದು ಹೇಗೆ? ಹಿಮಾಲಯ ಪರ್ವತಗಳ ಮೂರು ವಿಭಾಗಗಳ ಬೇರೆ ಬೇರೆಯಾದ

ರೇಖಾಚಿತ್ರಗಳು ಇರಬೇಕಾಗಿತ್ತು. ಇದೇ ರೀತಿ ನದಿಗಳ, ಕೊಪ್ಪೆನ್, ತ್ರಿವಾರ್ಥರವರು ರೂಪಿಸಿದ ವಾಯುಗುಣ ವಿಭಾಗಗಳ, ಮಣ್ಣುಗಳ, ಸ್ವಾಭಾವಿಕ ಸಸ್ಯವರ್ಗಗಳ ನೀರಾವರಿವಿಭಾಗಗಳ ನಕ್ಷೆಗಳಿಲ್ಲ. ಬೆಳೆಗಳ, ಕೈಗಾರಿಕೆಗಳ, ಖನಿಜಗಳ –ಪ್ರತ್ಯೇಕವಾದ ನಕ್ಷೆಗಳು ಇರಬೇಕಾಗಿತ್ತು. ಯಾವ ಯಾವ ಭಾಗ ಗಳಿಂದ ಕಬ್ಬಿಣದ ಅದಿರು, ಕಲ್ಲಿದ್ದಲು, ಡಾಲಮೈಟ್, ನೀರು ಇತ್ಯಾದಿಗಳು ಕೈಗಾರಿಕೆ ಕೇಂದ್ರಕ್ಕೆ ಒದಗು ತ್ತವೆ, ಅದರ ಸ್ಥಾಪನೆಗೆ ಅನುಕೂಲವಾಗಿವೆ–ಎಂಬುದರ ವಿವರ ನೀಡಬೇಕಾಗಿತ್ತು. ಭದ್ರಾವತಿ, ಟಾಟಾ ನಗರ, ಭಿಲೈ ಇತ್ಯಾದಿ ಸ್ಥಳಗಳಲ್ಲಿನ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳ ರೇಖಾನಕ್ಷೆಗಳನ್ನುನೀಡ ಬೇಕಾಗಿತ್ತು. ಕೆಲವು ಚಿತ್ರಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಉದಾಹರಣೆ (ಪುಟ 225, 227ರಲ್ಲಿರುವ) ವಿಶಾಖಪಟ್ಟಣದ ಮೂರು ಚಿತ್ರಗಳು. ಇಷ್ಟು ಅನವಶ್ಯಕ. ಒಂದು ಸಾಕಾಗಿತ್ತು. ಪ್ರಮುಖ ಭೂ ಸ್ವರೂಪಗಳು (ನಕ್ಷೆಗಳ ಪುಟ 2) ಎಂಬ ನಕ್ಷೆಯಲ್ಲಿ ಸಾಕಷ್ಟು ದೋಷಗಳಿವೆ. ಸಹ್ಯಾದ್ರಿ, ಪಶ್ಚಿಮ ಘಟ್ಟ ಗಳು ಮತ್ತು ದಖಿನ್ ಪ್ರಸ್ಥಭೂಮಿ, ಪರ್ಯಾಯ ಪ್ರಸ್ಥಭೂಮಿ ಎಂಬ ಎರಡೆರಡು ಹೆಸರುಗಳನ್ನು ಸೂಚಿಸಲಾಗಿದೆ. ಕರಾವಳಿಯಲ್ಲಿ ಬೇರೆ ಬೇರೆ ವಿಭಾಗಕ್ಕೆ ಬೇರೆ ಬೇರೆ ಹೆಸರು (ಮಲಬಾರ್ ತೀರ, ಕೊಂಕಣತೀರ, ಕೋರಮಂಡಲ ತೀರ ಇತ್ಯಾದಿ)ಗಳು ಇವೆ. ಅವನ್ನು ಸೂಚಿಸಿಲ್ಲ. ಮಳೆ ವಿತರಣೆ (ಪುಟ 41)ಯಲ್ಲಿ ಮಳೆ ಹಂಚಿಕೆಯನ್ನು ಸೆಂ.ಮಿಾ.ಗಳಲ್ಲಿ ತಿಳಿಸಿ, ಅದಕ್ಕೆ ಸಂಬಂಧಪಟ್ಟ ನಕ್ಷೆ (ನಕ್ಷೆಗಳ ಪುಟ 3)ಯನ್ನು ಅಂಗುಲಗಳಲ್ಲಿ ತೋರಿಸಲಾಗಿದೆ. ನಕ್ಷೆಯ ಅಡಿಯಲ್ಲಿ 1 ಇಂ = 2.54 ಸೆಂ.ಮಿಾ. ಎಂಬ ಸಮೀಕರಣವನ್ನು ಕೊಡಲಾಗಿದ್ದರೂ, ಸಂಪೂರ್ಣ ಸೆಂ.ಮಿಾ. ಪರಿಮಾಣದ ಮಳೆ ಹಂಚಿಕೆ ನಕ್ಷೆ ಯನ್ನೇ ಕೊಡಬಹುದಾಗಿತ್ತು. ಖನಿಜಗಳು (ನಕ್ಷಾಪುಟ 7) ನಕ್ಷೆಯಲ್ಲಿ ಯಾವ ಚಿಹ್ನೆಯು ಯಾವ ಖನಿಜವನ್ನು ಸೂಚಿಸುತ್ತದೆ ಎಂಬುದರ ಬಗ್ಗೆ ಸೂಚೀಪಟವಿಲ್ಲ. ಸಕ್ಕರೆ ಉತ್ಪಾದನೆ (ನಕ್ಷೆ 17), ಕಾಗದದ ಉತ್ಪಾದನೆ (ನಕ್ಷೆ 18), ಜನಸಂಖ್ಯೆ (ನಕ್ಷೆ 20), ಜನಸಂಖ್ಯೆಯ ನಕ್ಷೆ (ನಕ್ಷೆ 23)– ಈ ನಕ್ಷೆಗಳಲ್ಲಿ ನೀಡಿರುವ ಸಂಖ್ಯಾತ್ಮಕ ವಿವರ ಯಾವ ಪರಿಮಾಣದ್ದು, ಯಾವ ಅಂಶದ್ದು ಎಂಬುದರ ವಿವರಗಳಿಲ್ಲ. ಕೆಲವು ನಕ್ಷೆಗಳು ತಪ್ಪು ತಿಳುವಳಿಕೆಗೆ ಎಡೆಗೊಡುತ್ತವೆ.–ನಕ್ಷೆ 14ರಲ್ಲಿ ಕಾಫೀ, ಟೀ, ಬೆಳೆಗಳ ಉತ್ಪತ್ತಿಯನ್ನು ಒಂದೇ ಕಡೆ ತೋರಿಸಲಾಗಿದೆ. ಇದರಲ್ಲಿ ಉತ್ಪಾದನೆ ಹಾಗೂ ವಿಸ್ತೀರ್ಣಗಳೆರಡನ್ನೂ ಗೊಂದಲಮಯ ರೀತಿಯಲ್ಲಿ ತೋರಿಸಲಾಗಿದೆ. ಸಮಾನಾಂತರ ರೇಖೆ ಹಾಗೂ ಲಂಬಪಟ್ಟಿಗಳು ಎರಡೆರಡು ಅಂಶಗಳನ್ನು ತೋರಿಸಲು ಸಾಧ್ಯವೆ? ನಕ್ಷೆ 1ರಲ್ಲಿ ತೋರಿಸಿರುವ ರಾಜಕೀಯ ವಿಭಾಗಗಳಲ್ಲಿ ಅಂತರರಾಷ್ಟ್ರೀಯ ಎಲ್ಲೆಯನ್ನು ಸ್ಪಷ್ಟವಾಗಿ ಗುರ್ತಿಸದೆ ಇರುವುದರಿಂದ ಬಾಂಗ್ಲಾದೇಶದಲ್ಲಿ ಬಂಗಾಳ ಮತ್ತು ತ್ರಿಪುರಗಳು ಎಂಬ ಹೆಸರುಗಳು ಬಂದು ವಿದ್ಯಾರ್ಥಿಗಳಿಗೆ ಬಾಂಗ್ಲಾದೇಶವು ತ್ರಿಪುರವಾಗಿದೆಯೋ ಎಂಬ ಅನುಮಾನ ಬರುತ್ತದೆ. ಪಠ್ಯಕ್ರಮದಲ್ಲಿ ಮೈಸೂರು ರಾಜ್ಯದ ವಿಶೇಷ ಅಧ್ಯಯನವೆಂದು ತಿಳಿಸಿರುವಾಗ, ಮೈಸೂರು ರಾಜ್ಯವನ್ನು ಕುರಿತಾದ (ಸಂಪೂರ್ಣ ಪುಸ್ತಕಕ್ಕೆ) ಒಂದೇ ಒಂದು ನಕ್ಷೆ (ನಕ್ಷಾಪುಟ 24) ಇರುವುದರ ಔಚಿತ್ಯವೇನು? ಮೈಸೂರಿನ ಮೇಲ್ಮೈ ಲಕ್ಷಣಗಳು, ನದಿಗಳು, ಬೆಳೆಗಳು, ಖನಿಜಗಳು, ಕೈಗಾರಿಕೆಗಳ ನಕ್ಷೆಗಳನ್ನು ನೀಡಬೇಕಾಗಿತ್ತಲ್ಲವೆ?

ಚಿತ್ರಗಳು ಕೆಲವು ಅನುಪಯುಕ್ತ. ಅವುಗಳ ಮುದ್ರಣವೂ ಚೆನ್ನಾಗಿಲ್ಲ. ಉದಾ: ಚಿತ್ರಗಳು 15, 16, 18, 19. ಚಿತ್ರಗಳನ್ನು ವಾರ್ತಾ ಸಂಸ್ಥೆಯಿಂದ ಪಡೆದಿದ್ದಾರೆಂದು ಲೇಖಕರು ತಿಳಿಸಿದ್ದಾರೆ. ಹೀಗಾಗಿ ಅವುಗಳಲ್ಲಿ ಭೌಗೋಳಿಕ ದೃಷ್ಟಿ, ಹಿನ್ನೆಲೆ ಕಡಿಮೆಯಾಗಿದೆ. ಕೆಲವು ಕೇವಲ ಚಿತ್ರಗಳಾಗಿವೆಯೋ ಹೊರತು, ವಿವರಿಸಿರುವ ವಿಷಯಕ್ಕೆ ಪೂರಕವಾಗಿಲ್ಲ.

ಇವೆಲ್ಲಕ್ಕಿಂತ ಹೆಚ್ಚಾಗಿ ಈ ಪುಸ್ತಕದಲ್ಲಿ ಮುದ್ರಣದೋಷಗಳು ಹಾಗೂ ರಾಂಗ್ ಫಾಂಟ್‌ಗಳು ಹೇರಳವಾಗಿದ್ದು, ಅದರ ಉಪಯುಕ್ತತೆಯ ಮಟ್ಟವನ್ನು ಇಳಿಸಿದೆ. ಲೇಖಕರಿರುವ ನಗರದಲ್ಲಿ ಗ್ರಂಥ ಮುದ್ರಣವಾಗಿರುವುದರಿಂದ ಲೇಖಕರು ಕರಡನ್ನು ಸರಿಯಾಗಿ ನೋಡಿಲ್ಲವೆಂದು ಅರ್ಥವಾಗುತ್ತದೆ. ಪುಟ ವಿನ್ಯಾಸದ ರೀತಿಯೂ ಚೆನ್ನಾಗಿಲ್ಲ. ಕೊನೆಯಲ್ಲಿ ಒಪ್ಪೋಲೆ ಇದ್ದರೂ, ಒಪ್ಪೋಲೆಯನ್ನು ಮಿಾರಿ ಸಿರುವ ಮುದ್ರಣ ದೋಷಗಳಿವೆ.

ಇಂಥ ವೈಜ್ಞಾನಿಕ ಗ್ರಂಥಗಳಿಗೆ ಅತ್ಯಗತ್ಯವಾದ ಭೌಗೋಳಿಕ ಶಬ್ದಕೋಶವನ್ನು ನೀಡಿಲ್ಲ. ಅಂತೆಯೇ

ಸಹಾಯಕ ಗ್ರಂಥಗಳ ಪಟ್ಟಿಯನ್ನೂ ಕೊಟ್ಟಿಲ್ಲ. ವಿವಾದಾಸ್ಪದ (ಪಾರಿಭಾಷಿಕ) ಶಬ್ದಗಳಿಗೆ ಸೂಕ್ತ ವಿವರಣೆಯನ್ನೂ ನೀಡಿಲ್ಲ.

—**ರಘುಸುತ**

ಕಾಡು ನಾಡು ಬೀಡು–ಸಮನ್ವಯಿತ ಸಿದ್ಧಾಂತ ಮತ್ತು ಇತರ ಪ್ರಬಂಧಗಳು: ಲೇ: ಎನ್. ರಾಜ ಗೋಪಾಲ್‌ರಾವ್, ಪ್ರ: ಎನ್. ಆರ್. ರಾವ್, ಕುಮಟಾ (1971); ಪುಟಗಳು 96+5; ಬೆಲೆ: ರೂ. 1.50

ಅರಣ್ಯಗಳು ರಾಷ್ಟ್ರದ ಸಂಪತ್ತು. ರಾಷ್ಟ್ರದ ವಾರ್ಷಿಕ ವರಮಾನದಲ್ಲಿ ಗಣನೀಯವಾದ ಮೊತ್ತ ಅರಣ್ಯಗಳಿಂದ ಬರುತ್ತದೆ ಎಂಬುದು ನಿರ್ವಿವಾದ. ಅರಣ್ಯಗಳಿಗೆ ಸಂಬಂಧಿಸಿದ ಕೆಲಸಗಳನ್ನೆಲ್ಲ ಒಂದು ವ್ಯವಸ್ಥಿತ ರೀತಿಯಲ್ಲಿ ನಡೆಸಿದರೆ, ಅದರಿಂದ ಇನ್ನೂ ಹೆಚ್ಚಿನ ಪ್ರಯೋಜನ ಉಂಟು. ಆದ್ದರಿಂದಲೇ ಪ್ರತಿಯೊಂದು ರಾಜ್ಯ ಸರ್ಕಾರವೂ ಅರಣ್ಯ ಇಲಾಖೆ ಹೊಂದಿದೆ. ಮೈಸೂರು ರಾಜ್ಯ ಇದಕ್ಕೆ ಹೊರತಲ್ಲ. ಅರಣ್ಯ ಇಲಾಖೆ ಮಾಡಬಹುದಾದ ಕೆಲಸಗಳೇನು? ಯಾವ ಯಾವ ಯೋಜನೆಗಳನ್ನು ಹಾಕಿಕೊಂಡು ಅರಣ್ಯಗಳನ್ನು ಅಭಿವೃದ್ಧಿ ಪಡಿಸಬಹುದು; ಆ ಮೂಲಕ ಹೆಚ್ಚಿನ ವರಮಾನವನ್ನು ಗಳಿಸಬಹುದು ಮೊದಲಾದ ವಿವರಗಳು ಈ ಪುಸ್ತಕದಲ್ಲಿವೆ. ಪುಸ್ತಕದಲ್ಲಿ ಒಟ್ಟು 8 ಅಧ್ಯಾಯಗಳಿವೆ. ಇವುಗಳನ್ನು ಪ್ರಬಂಧಗಳೆಂದು ಲೇಖಕರು ಕರೆದಿದ್ದಾರೆ

ಮೈಸೂರು ರಾಜ್ಯದ ಅರಣ್ಯಗಳ ವಿವರ; ಅರಣ್ಯಗಳ ಧೋರಣೆ; ಅರಣ್ಯೋತ್ಪಾದನೆ; ಪಂಚ ವಾರ್ಷಿಕ ಯೋಜನೆ ಮತ್ತು ಅರಣ್ಯ ಧೋರಣೆ–ಈ ಮೊದಲಾದುವನ್ನು ಕುರಿತು ಅಂಕೆ ಅಂಶಗಳ ಮೂಲಕ ವಿವರಿಸಿದ್ದಾರೆ. ಅರಣ್ಯಗಳು ರಾಷ್ಟ್ರದ ಸಂಪತ್ತು ಎಂಬುದು ಗೊತ್ತಿದ್ದರೂ, ಅವುಗಳ ಅಭಿ ವೃದ್ಧಿ ಬಗ್ಗೆ ರಕ್ಷಣೆಯ ಬಗ್ಗೆ ಸರಕಾರವಾಗಲಿ, ಸಾರ್ವಜನಿಕರಾಗಲಿ ಹೆಚ್ಚಿನ ಆಸಕ್ತಿ ತೋರುತ್ತಿಲ್ಲ. ಈ ಪರಿಸ್ಥಿತಿಯೇ ಮುಂದುವರೆದರೆ ಅರಣ್ಯಗಳೇ ಕಣ್ಮರೆಯಾಗುವ ಸಂಭವ ಉಂಟು. ಆದ್ದರಿಂದ ಸರಕಾರ ಮತ್ತು ಸಾರ್ವಜನಿಕರು ಜಾಗ್ರತರಾಗಿ ಸಂಭವಿಸಲಿರುವ ಹಾನಿಯನ್ನು ತಡೆಗಟ್ಟಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದು ಇಲ್ಲಿನ ಒಟ್ಟು ಅಭಿಪ್ರಾಯ.

ಪುಸ್ತಕದಲ್ಲಿ ಹಲವಾರು ನ್ಯೂನತೆಗಳಿವೆ. ಒಂದೆರಡನ್ನು ಇಲ್ಲಿ ಸೂಚಿಸಲಾಗಿದೆ: ಅರಣ್ಯವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿದ್ದಾರೆ. (1) ವರ್ಷಕಾಲ ಹಚ್ಚಹಸಿರು (2) ತಂಪು ಡೆಸಿಡ್ಯೂಯಸ್ (3) ಒಣ ಡೆಸಿಡ್ಯೂಯಸ್ (4) ಕುರುಚಲು. ಈ ವಿಭಾಗ ಕ್ರಮ ಸರಿ. ಆದರೆ ತಂಪು ಡೆಸಿಡ್ಯೂಯಸ್ ಎಂಬುದನ್ನು ಇನ್ನೊಂದು ಕಡೆ (ಪುಟ 15) ತೇವಿನ ಡೆಸಿಡಿಯಸ್ ಎಂದು ಬಳಸಿದ್ದಾರೆ. ಈ ಪದದ ಬಗ್ಗೆ ಲೇಖಕರಿಗೆ ಖಚಿತತೆ ಇದ್ದಂತೆ ತೋರುವುದಿಲ್ಲ. ಅದೂ ಅಲ್ಲದೆ ತಂಪು ಡೆಸಿಡ್ಯೂಯಸ್ ಎಂದು ಅರ್ಧ ಕನ್ನಡ ಅರ್ಧ ಇಂಗ್ಲಿಷ್‌ನಲ್ಲಿ ಕಷ್ಟಪಟ್ಟು ಹೇಳುವ ಬದಲು; 'ಎಲೆ ಉದುರುವ ತೇವದ ಕಾಡು' ಎಂದು ಸುಲಭವಾಗಿ ಸರಳವಾಗಿ ಹೇಳಬಹುದಿತ್ತು. ಹಾಗೆಯೇ ಒಣ ಡೆಸಿಡ್ಯೂಯಸ್‌ಗೆ ಬದಲ 'ಎಲೆ ಉದುರುವ ಒಣ ಕಾಡು' ಎಂದು ಹೇಳಬಹುದಾಗಿತ್ತು. ಇದರಿಂದ ಸ್ಪಷ್ಟತೆ ಮತ್ತು ಖಚಿತತೆಗಳು ಉಂಟಾ ಗುತ್ತಿತ್ತು. ಹೇಳಬೇಕಾದ ವಿಷಯಗಳನ್ನು ಸ್ಪಷ್ಟವಾಗಿ ಮತ್ತು ಖಚಿತವಾಗಿ ಹೇಳುವುದು ಅಪೇಕ್ಷಣೀಯ.

ಅಂಕಿ ಅಂಶಗಳ ಪಟ್ಟಿಯನ್ನು ಕೊಡುವಾಗ ಸಾಧ್ಯವಾದ ಮಟ್ಟಿಗೂ ಅವುಗಳ ಮೂಲವನ್ನು ಹೆಸರಿಸಿದರೆ ಒಳ್ಳೆಯದು. ಪುಸ್ತಕದ ಕೊನೆಗೆ 'ವಿಕಾಸ ಕ್ರಮದಲ್ಲಿ ಮಾನವನು ಅಂತ್ಯಘಟ್ಟವೇ?' ಎಂಬ ಪ್ರಬಂಧವನ್ನು ಜೋಡಿಸಿದ್ದಾರೆ. ಅರಣ್ಯಕ್ಕೆ ಸಂಬಂಧಿಸಿದ ಈ ಪುಸ್ತಕದಲ್ಲಿ ಇದನ್ನು ಬಿಟ್ಟುಬಿಡಬಹು ದಾಗಿತ್ತು. ಪುಟ ಪುಟದಲ್ಲೂ ಕಣ್ಣೊತ್ತುವ ಅಚ್ಚಿನ ದೋಷಗಳನ್ನು ಸುಲಭವಾಗಿ ನಿವಾರಿಸಬಹುದಾಗಿತ್ತು. ಕರಡಚ್ಚನ್ನು ಎಚ್ಚರಿಕೆಯಿಂದ ತಿದ್ದಿದ್ದರೆ!

ಒಟ್ಟಿನಲ್ಲಿ ನಾಡುಬೀಡುಗಳಿಗೆ ಸಂಬಂಧಿಸಿದ ಈ ಪುಸ್ತಕ ಕನ್ನಡದಲ್ಲಿ ಪ್ರಕಟವಾಗಿರುವುದು ಸ್ವಾಗತಾರ್ಹ.

—**ಎಸ್. ಚನ್ನಪ್ಪ**

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

** ಮಾನವಿಕ ಕರ್ಣಾಟಕ
** ಪ್ರಬುದ್ಧ ಕರ್ಣಾಟಕ
** ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ: ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸ ಗಂಗೋತ್ರಿ, ಮೈಸೂರು–೬